# ಪ್ರಸಾದ
ಮಾಸಿಕ


ಸಂಪುಟ 38 ಸಂಚಿಕೆ 8 ಆಗಸ್ಟ್ 2023

## ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ
## 108ನೆಯ ಜಯಂತಿ ಮಹೋತ್ಸವದ ವಿಶೇಷ ಸಂಚಿಕೆ




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

## ರಾಷ್ಟ್ರಪತಿಗಳೊಡನೆ ಪರಮಪೂಜ್ಯ ಜಗದ್ಗುರುಗಳವರು



ಡಾ. ಬಾಬು ರಾಜೇಂದ್ರ ಪ್ರಸಾದ್‌ರವರು




ಡಾ. ಎಸ್. ರಾಧಾಕೃಷ್ಣನ್‌ರವರು

# ಪ್ರಸಾದ

**ಸಂಪುಟ 38 : ಸಂಚಿಕೆ 8** **ಆಗಸ್ಟ್ 2023**

## ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 108ನೆಯ ಜಯಂತಿ ಮಹೋತ್ಸವದ ವಿಶೇಷ ಸಂಚಿಕೆ



**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

**ದಶ ವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


**ಗುರುವಾಣಿ** 5

**ಸಂಪಾದಕೀಯ** 7

**ಯುಗಪ್ರಜ್ಞೆ** 11
ಜಗದ್ಗುರು ಡಾ. ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು

**ಬಡವರ ಬಂಧು** 14
ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮಿಗಳು

**ತಪಸ್ವಿ** 17
ರೆ. ಫಾ. ಡಿ. ನರ್‍ರೋನಾ

**ಸಮಾಜಸುಧಾರಕರು** 22
ಸಿದ್ದರಾಮಯ್ಯ
ಮುಖ್ಯಮಂತ್ರಿಗಳು

**ಸಮಾಜದ ಆಸ್ತಿ** 26
ಜಗದೀಶ್ ಶೆಟ್ಟರ್
ಮಾಜಿ ಮುಖ್ಯಮಂತ್ರಿಗಳು

**ನನ್ನ ತವರು** 28
ಡಾ. ಹೆಚ್.ಸಿ. ಮಹದೇವಪ್ಪ
ಸಮಾಜಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು

**ಮಾತೃಹೃದಯಿ ಮಹಾತಪಸ್ವಿಗಳು** 29
ಅಡಗೂರು ಹೆಚ್. ವಿಶ್ವನಾಥ್
ಮಾಜಿ ಸಚಿವರು ಹಾಗೂ ಮಾಜಿ ಸಂಸದರು

**ವಾತ್ಸಲ್ಯಮಯಿ** 32
ಡಾ. ಎನ್. ಬಸವಾರಾಧ್ಯ

**ದಲಿತೋದ್ಧಾರದ ಮೆಟ್ಟಿಲು** 35
ಡಾ. ಸಾ.ಶಿ. ಮರುಳಯ್ಯ

**ಯತ್ರೈವ ಯತ್ರೈವ....** 45
ಪ್ರೊ. ಎಸ್. ನಂಜುಂಡಯ್ಯ

**ಸಾಹಿತಿಯ ಭಾವಕೋಶದಲ್ಲಿ....** 50
ಪ್ರೊ. ವೀರಭದ್ರ

**ಭುವನದ ಮಹಾಬೆಳಕು** 79
ಡಾ. ಎಂ. ನಂಜುಂಡಪ್ಪ

**ಧರ್ಮಸೂಕ್ಷ್ಮಜ್ಞರು** 88
ಎಚ್. ಗಂಗಾಧರನ್

**ಅನ್ನದ ಋಣದ ನೆನಪು** 96
ಶಾಂತರಾಮ ನಾಯಕ ಹಿಚಕಡ

**ಶಿಕ್ಷಣರಂಗದ ಕ್ರಾಂತಿಕಾರಿ ಸಂತ** 103
ಜಿ.ಎಸ್. ರಾಘವಿ

**ವಾರ್ತಾವಿಹಾರ** 110
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 116

# ಗುರುವಾಣಿ

ಗುರುವ ನೆನೆದಹೆನೆಂದು ನೆನೆಯುತ್ತಿದ್ದಡೆ
ನೆನೆವ ಮನವು ತಾನು ಗುರುವಾಯಿತು ನೋಡಾ.
ಆಹಾ! ಮಹಾದೇವ,
ಇನ್ನಾವುದರಿಂದ? ಆವುದನು? ಏನೆಂದು ನೆನೆವೆ?
ಮನವೆ ಗುರುವಾದ ಕಾರಣ–
ಮನವೆ ಗುರುವಾಗಿ ನೆನಹನಿಂಬುಗೊಂಡನು
ಗುಹೇಶ್ವರಲಿಂಗ ಚೋದ್ಯಚರಿತ್ರನು!

–ಅಲ್ಲಮಪ್ರಭುದೇವರು

**ಪ್ರ**ಭುದೇವರ ಈ ವಚನದಲ್ಲಿ ಒಂದು ಚೋದ್ಯವಿದೆ. 'ಗುರು' ಎನ್ನುವ ಪದವನ್ನು ಒಂದು ಶ್ಲೇಷಾರ್ಥದಲ್ಲಿ ಬಳಸಲಾಗಿದೆ. ಅದು ಏಕಕಾಲದಲ್ಲಿ ನಾಮಪದವೂ ಹೌದು, ಕ್ರಿಯಾಪದವೂ ಹೌದು. ನಾಮಪದವಾಗಿ ವಿದ್ಯೆಯನ್ನು ಕಲಿಸಿದವನು, ಧರ್ಮವನ್ನು ಬೋಧಿಸಿದವನು, ಶಿಕ್ಷಕ ಎಂಬ ಅರ್ಥವಿದ್ದರೆ, ಕ್ರಿಯಾಪದದ ಅರ್ಥದಲ್ಲಿ 'ಬೆಳಕು'(ಗು) ಎಂಬ ಅರ್ಥದಲ್ಲಿ ಪ್ರತಿಫಲನಗೊಂಡಿದೆ. ಗುರುವನ್ನು ಜ್ಞಾಪಿಸಿಕೊಳ್ಳಬೇಕು ಎಂಬ ಜ್ಞಾಪಕಕ್ಕೆ ಆಧಾರವಾದ ಮನಸ್ಸು ಅದರ ನೆನಪಿನಿಂದ ಅವರನ್ನೇ ಧ್ಯಾನಿಸಿ ಆವರಿಸಿಕೊಳ್ಳುವ ಕಾರಣದಿಂದ ಮನಸ್ಸು ಬೆಳಗಾಗುತ್ತದೆ. ಮನಸ್ಸು ಬೆಳಗಿದ್ದರಿಂದ, ಬೆಳಗನ್ನು ಒಳಗೊಂಡದ್ದರಿಂದ ಗುರು–ಶಿಷ್ಯರೆಂಬ ಭೇದವು ಹರಿದುಹೋಗಿ ಬೆಳಗಿನೊಳಗಣ ಬೆಳಗಾಗುವ ಚೋದ್ಯವನ್ನು ಅಲ್ಲಮಪ್ರಭುದೇವರು ವಿವರಿಸಿದ್ದಾರೆ.

'ಗುರು' ಎಂಬ ಪದದಲ್ಲಿರುವ ಎರಡು ಅಕ್ಷರಗಳು ವ್ಯಂಜಿಸುವ ಅರ್ಥ ಹೀಗಿದೆ. 'ಗು'ಕಾರೋಽಂಧಕಾರತ್ವಾತ್ 'ರು'ಕಾರೋ ತನ್ನಿವಾರಕಃ. 'ಗು' ಎಂದರೆ ಅಂಧಕಾರ, 'ರು' ಎಂದರೆ ಅದನ್ನು ನಾಶ ಮಾಡುವವನು. ಒಟ್ಟರ್ಥ ಅಂಧಕಾರವನ್ನು ನಾಶಪಡಿಸುವವನು. ಈ ಅಂಧಕಾರ ಎಂಬ ಶಬ್ದಕ್ಕೆ ದಟ್ಟವಾದ ಕತ್ತಲೆ ಎಂಬ ಅರ್ಥವಿದೆ. ವಾಸ್ತವದಲ್ಲಿ ಪ್ರಕೃತಿಸಹಜವಾದ ಭೌತಿಕ ಕತ್ತಲೆಗೂ, ಬೌದ್ಧಿಕವಾದ ಕತ್ತಲೆಗೂ ವ್ಯತ್ಯಾಸವಿದೆ. ಮನಸ್ಸಿನ ಕತ್ತಲೆಗೆ 'ಅಂಧಕಾರ' ಎಂಬ ಪದವನ್ನು ಬಳಸುವುದು ಹೆಚ್ಚು ಸೂಕ್ತ. 'ಅಂಧ' ಎಂದರೆ ಕುರುಡ, ಕಣ್ಣಿಲ್ಲದಿರುವವನು. ತಮಂಧ ಎಂದರೆ 'ಕತ್ತಲೆ' ಎಂಬ ಅರ್ಥವಿದೆ. ಭೌತಿಕವಾದ ಶರೀರದ ಕಣ್ಣುಗಳು ಹೊರಗನ್ನು ಮಾತ್ರ ಗ್ರಹಿಸಬಲ್ಲವು.

ಅದೂ ಸಹ ನೋಡುವ ವಸ್ತುವಿನ ಮೇಲೆ ಬೆಳಕಿನ ಪ್ರತಿಫಲನದಿಂದ ಮಾತ್ರ ಅದು ಸಾಧ್ಯವಾಗುತ್ತದೆ. ಆದರೆ ಮನಸ್ಸು ಕಣ್ಣಿಗೆ ಕಾಣುವ ವಸ್ತುವಲ್ಲ. ಅಂದಮೇಲೆ ಅದರ ಮೇಲೆ ಬೇರೆ ಇನ್ನಾವುದೋ ವಸ್ತುವಿನ ಭೌತಿಕ ಬೆಳಕು ಬೀಳುವುದು ಅಸಾಧ್ಯ. ಇಂಥ ಅಸಾಧ್ಯವಾದ ಮನಸ್ಸನ್ನು ನೋಡುವ ಬಗೆ ಹೇಗೆ? ಕಾಣುವ ಕಣ್ಣಾವುದು? ಎಂಬ ಅನೇಕ ಪ್ರಶ್ನೆಗಳು ತಲೆದೋರುತ್ತಲೇ ಇವೆ. ಈ ಪ್ರಶ್ನೆಗಳಿಗೆಲ್ಲ ಉತ್ತರ 'ಗುರು'. ಆತ ನೀಡುವ ಅಂತಶ್ಚಕ್ಷುವಿನಿಂದ (ಒಳಗಣ್ಣು) ಮನಸ್ಸನ್ನು ಅರಿಯಬಹುದೇ ಹೊರತು, ನೋಡಲಾಗುವುದಿಲ್ಲ. 'ಗುರು' ಎಂದರೆ 'ಅರಿವು' ತಾನೆ! ಆ ಅರಿವಿನಿಂದ ನೋಡಿ ಮನಸ್ಸಿನೊಳಗಿರುವ ಕತ್ತಲೆಯನ್ನು ಕಳೆದುಕೊಳ್ಳಬೇಕು.

ಹೊರಗಿನ ಭೌತಿಕ ಪ್ರಕೃತಿಯಲ್ಲಿ ಹಗಲು ರಾತ್ರಿಗಳೆಂಬ ಋತುಚಕ್ರವಿರುತ್ತದೆ. ಆದರೆ ಮನಸ್ಸಿನ ಬೌದ್ಧಿಕ ಪ್ರಕೃತಿಯಲ್ಲಿ ರಾತ್ರಿ ಅಥವಾ ಹಗಲಿಗೆ ಮಾತ್ರ ಜಾಗ. ಸಹಜವಾಗಿಯೇ ಇರುವ ರಾತ್ರಿಯನ್ನು ಗುರು ಕಳೆದು ಹಗಲು ಮಾಡಿದರೆ ಆ ಹಗಲನ್ನು ನಿರಂತರ ಕಾಯ್ದುಕೊಳ್ಳಬೇಕಾದದ್ದು ಶಿಷ್ಯನ ಕರ್ತವ್ಯ.

ಪರಮಪೂಜ್ಯ ರಾಜೇಂದ್ರ ಶ್ರೀಗಳನ್ನು ನೆನೆದಾಗಲೆಲ್ಲ, ಅಂತರಂಗವನ್ನು ಬೆಳಗಿದ ಅವರ ಪರಿ ಮನದುಂಬಿ ಬರುತ್ತದೆ. ಅವರ ಕಾರುಣ್ಯ, ಧೀಶಕ್ತಿ, ಎಷ್ಟೇ ಎತ್ತರಕ್ಕೆ ಏರಿದರೂ ಭೂಮಿಯನ್ನೇ ನೋಡುವ, ಧ್ಯಾನಿಸುವ ಅವರ ಪರಿ ಅಚ್ಚರಿ ಮೂಡಿಸುವಂಥದು. ಸ್ಥಾನಕ್ಕಿಂತಲೂ ಮಾನ ದೊಡ್ಡದು, ಮಾನವತ್ವ ಎಲ್ಲಕ್ಕು ಮಿಗಿಲು ಎಂಬುದನ್ನು ಅಡಿಗಡಿಗೆ ತೋರಿದ ಮಹಾಸಂತರವರು. ಅವರು ಹಾಕಿಕೊಟ್ಟ ಮಹಾಮಾರ್ಗದಲ್ಲಿ ನಡೆಯುವುದೇ ಎಲ್ಲರ ಪಾಲಿಗೆ ಒಂದು ಸಾರ್ಥಕ್ಯದ ದಿವ್ಯಾನುಭೂತಿ. 'ಜಗವೆಲ್ಲ ನಗುತಿರಲಿ, ಜಗದಳುವು ನನಗಿರಲಿ' ಎಂಬ ಅವರ ದೃಷ್ಟಿಕೋನವೇ ಸಾರ್ವಕಾಲಿಕ ದಾರಿದೀಪ. ಅವರ ಜಯಂತಿಯ 108ನೇ ವರ್ಷಾಚರಣೆಯ ಈ ಸಂದರ್ಭದಲ್ಲಿ ಅಂಥ ಮಹಂತರನ್ನು ಮನದುಂಬಿ ನೆನೆವುದೆ ಒಂದು ಚೇತೋಹಾರಿ ತೀರ್ಥಸ್ನಾನದಂತೆ. ಅಲ್ಲಮಪ್ರಭುದೇವರ ಉಲ್ಲೇಖದ ವಚನ ಅಕ್ಷರಶಃ ರೂಪವೆತ್ತಂತಿತ್ತು ಅವರ ನಿಲುವು.

ಪರಮಪೂಜ್ಯ ರಾಜೇಂದ್ರ ಶ್ರೀಗಳನ್ನು ಯಾವುದೇ ಪರಿಯಲ್ಲಿ ನೆನೆದರೂ ಅದು ಈ ಚೋದ್ಯಕ್ಕೆ ಹೊರತಾಗಲಾರದು. ಬಡವನಿರಲಿ, ಬಲ್ಲಿದನಿರಲಿ, ಜ್ಞಾನಿಯಿರಲಿ, ಅಜ್ಞಾನಿಯಿರಲಿ, ಅಧಿಕಾರಿಯಾಗಿರಲಿ, ಸಾಮಾನ್ಯನಾಗಿರಲಿ ಎಲ್ಲರನ್ನೂ ಒಂದೇ ಬಗೆಯಲ್ಲಿ ಕಂಡವರು; ಭುವನದ ಭಾಗ್ಯ. ಅವರ ಸಂಸರ್ಗಕ್ಕೆ ಬಂದ ಎಲ್ಲರೂ ಅವರ ಬೆಳಕನ್ನು ಅನುಭವಿಸಿ ಆನಂದಿಸಿ ಕೃತಾರ್ಥರಾದವರೇ ಆಗಿದ್ದಾರೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**ಜ**ಗತ್ತಿನಲ್ಲಿ "ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರು ಹೆಚ್ಚು" ಎಂಬ ಒಂದು ಮಾತಿದೆ. ಒಂದು ಹೊತ್ತಿನ ಅಥವಾ ಒಂದು ದಿನದ ಆಹಾರವಿಲ್ಲದೆಯೂ ಇರಬಹುದು. ಆದರೆ ಪ್ರೀತಿ ಇಲ್ಲದಿದ್ದರೆ ಅಲ್ಲಿ ಬದುಕುವುದಿರಲಿ, ಉಸಿರಾಡುವುದೂ ಕಷ್ಟ. ಆ ಕಾರಣದಿಂದಲೇ ಕವಿ ಡಾ. ಜಿ.ಎಸ್. ಶಿವರುದ್ರಪ್ಪನವರ ಕವಿತೆಯೊಂದು 'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ಹನಿಯೊಡೆದು ಕೆಳಗಿಳಿದು ನೆಲಕ್ಕೆ ಹಸಿರು ಮೂಡೀತು ಹೇಗೆ?' ಎಂದು ಆರಂಭವಾಗುತ್ತದೆ.

ಜಗತ್ತಿನ ಸೃಷ್ಟಿಯ ಪ್ರಕ್ರಿಯೆಯಲ್ಲಿ ಸಹಜವಾಗಿಯೇ ಇರುವ ಸಹಜವಾದ ಪ್ರೀತಿ, ಅನುಸರಣೆ ಮನುಷ್ಯರ ನಡುವೆ ಒಂದು ಅಸಹಜ ಸಂಗತಿಯಾಗಿರುವುದು ಒಂದು ದುರಂತ. ಮನುಷ್ಯ ಕೂಡ ಪ್ರಕೃತಿಯ ಒಂದು ಭಾಗವೇ. ಆದರೂ ಪ್ರಕೃತಿಯ ಸಹಜ ಸ್ವಭಾವವನ್ನು ಆತ ಗ್ರಹಿಸದೆ ಹೋಗಿದ್ದಾನೆ. ಸ್ವಾರ್ಥ, ಅಸೂಯೆ, ಸಂಶಯಗಳ ಕಂದಕಗಳನ್ನು ಸೃಷ್ಟಿಸಿಕೊಂಡು ದ್ವೀಪವಾಗಿದ್ದಾನೆ. ತನ್ನದೇ ಆದ ಸಂಕುಚಿತ ಜಗತ್ತನ್ನು ಸೃಷ್ಟಿಸಿಕೊಂಡಿದ್ದಾನೆ. ಮನುಷ್ಯನ ಈ ಆಲೋಚನೆಯ ಪ್ರಕ್ರಿಯೆ ಹೇಗಿದೆ ಎಂದರೆ ಸೃಷ್ಟಿಯ ಎಲ್ಲ ವಸ್ತುಗಳೂ ಕೇವಲ ತನ್ನ ಅನುಕೂಲಕ್ಕೆ ಮಾತ್ರ ಇವೆ ಎಂದು ಭಾವಿಸುತ್ತಾನೆ. ಆದರೆ ಸೃಷ್ಟಿಯ ಇತರ ವಸ್ತುಗಳೂ ನನ್ನಂತೆಯೇ ಪ್ರಕೃತಿಯ ಒಂದು ಭಾಗ ಎನ್ನುವುದನ್ನು ಮರೆತಿದ್ದಾನೆ. ಅಷ್ಟೇ ಅಲ್ಲ, ಅವುಗಳ ಸಹಜ ಕ್ರಿಯೆ–ಪ್ರತಿಕ್ರಿಯೆಗಳಿಗೆ ಹೊರತಾಗಿದ್ದಾನೆ. ಈ ಕಾರಣದಿಂದಲೇ ಕವಿತೆಯ ಕೊನೆಯ ಪಂಕ್ತಿ ಹೇಳುವಂತೆ 'ಪ್ರೀತಿ ಇಲ್ಲದ ಮೇಲೆ ಸಂಶಯದ ಗಡಿಗಳುದ್ದಕ್ಕೂ ಸಿಡಿಗುಂಡುಗಳ ಕದನ ನಿಂತೀತು ಹೇಗೆ? ಜಾತಿ–ಮತ–ಭಾಷೆ–ಬಣ್ಣಗಳ ಗೋಡೆಯ ನಡುವೆ ನರಳುವ ಪಾಡು ತಪ್ಪೀತು ಹೇಗೆ? ನಮ್ಮ ನಿಮ್ಮ ಮನಸ್ಸು ಮರುಭೂಮಿಯಾಗದ ಹಾಗೆ ತಡೆಗಟ್ಟುವುದು ಹೇಗೆ?' ಎಂಬ ವಿಷಾದಭಾವ ನಮ್ಮನ್ನು ಆವರಿಸುತ್ತದೆ. ಭಾವನೆಗಳನ್ನು ಬರಡಾಗಿಸಿಕೊಂಡು, ಪ್ರೀತಿಯ ಒರತೆಯನ್ನು ಬತ್ತಿಸಿಕೊಂಡು, ಸಂಶಯಗಳ ಸಮುದ್ರವನ್ನು ಮನುಷ್ಯ ನಿರ್ಮಿಸಿಕೊಂಡಿದ್ದಾನೆ. ಈ ಕಾರಣದಿಂದಲೇ ಮತ–ಪಂಥ–ಜಾತಿ–ಧರ್ಮಗಳ ನಡುವೆ ದ್ವೇಷಾಸೂಯೆಗಳು ಹುಟ್ಟಿಕೊಂಡಿವೆ. ಭಿನ್ನ ಭಿನ್ನ ಮತಗಳಿಗೆ ಸೇರಿದ ಮನುಷ್ಯರು ಪರಸ್ಪರರು ತಮ್ಮನ್ನು ಕಾಣಬೇಕಾದ ಬಗೆಯನ್ನು ಮರೆತು ದಿಙ್ಮೂಢರಾಗಿದ್ದಾರೆ.

ವಾಸ್ತವದಲ್ಲಿ ಮತ–ಪಂಥ–ಜಾತಿ–ಧರ್ಮಗಳ ಅರ್ಥ ಬೇರೆಯೇ ಇದೆ. ಮತ ಎಂಬುದರ ನಿಜವಾದ ಅರ್ಥ ಅಭಿಪ್ರಾಯ ಎಂದು. ಉದಾಹರಣೆ ಗೌತಮ ಮತ, ಮಹಾವೀರ ಮತ ಇತ್ಯಾದಿ... ಹೀಗೆ ಬೆಳೆದು ನಮ್ಮಲ್ಲಿ ಇದು ಗೋತ್ರಸಂಕಲ್ಪವಾಗಿರುವ ಬಗೆಯನ್ನು ಗಮನಿಸಬಹುದು. ಗೌತಮಗೋತ್ರ, ಕಶ್ಯಪಗೋತ್ರ, ವಶಿಷ್ಠಗೋತ್ರ, ರೇಣುಕಗೋತ್ರ, ಶಿವಗೋತ್ರ. ಗೋತ್ರವೆಂದರೆ 'ಗೋಷ್ಠಿ' ಎಂದರ್ಥ. ಒಂದು ನಿರ್ದಿಷ್ಟ ಗುಂಪು ತನ್ನ ಮೂಲಪುರುಷನಾದ ಋಷಿಯ ಮತವನ್ನು, ಮಾತನ್ನು ಅನುಸರಿಸುವುದ ರಿಂದ ಒಂದೊಂದೂ ಪಂಥ ಸೃಷ್ಟಿಯಾಗುತ್ತದೆ. ಪಥವೆಂಬ ಪದದಿಂದ 'ಪಂಥ' ಎಂಬ ಪರಿಕಲ್ಪನೆ ಬಂದಿದೆ. ಒಂದು ನಿರ್ದಿಷ್ಟ ಗುಂಪು ಅನುಸರಿಸುವ ಜೀವನವಿಧಾನಗಳು ಅವು. ಆ ಗುಂಪುಗಳು ತಮ್ಮ ವೃತ್ತಿಗೋಸ್ಕರ ಅನುಸರಿಸಿದ ಕಸುಬುಗಳನ್ನು ಆಧರಿಸಿ ಜಾತಿಗಳು ನಿರ್ಮಾಣಗೊಂಡವು, ಜಾತಿಗಳ ಹೆಸರು ಸೃಷ್ಟಿಗೊಂಡವು. ಆದರೆ 'ಧರ್ಮ' ಹಾಗಲ್ಲ. ಅದು ಎಲ್ಲ ಅಲ್ಪತೆಗಳನ್ನೂ ಮೀರಿದ್ದು, ಭೂಮವಾದದ್ದು. ಎಲ್ಲವನ್ನೂ ಧಾರಣೆ ಮಾಡುವುದರಿಂದ ಅದಕ್ಕೆ 'ಧರ್ಮ'ವೆಂದು ಹೆಸರು.

> ಧರ್ಮಾದರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಮ್।
> ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್॥

ರಾಮಾಯಣದಲ್ಲಿನ ಈ ಮಾತು ಧರ್ಮದ ಅರ್ಥವನ್ನು ಸೂಕ್ತವಾಗಿ ವ್ಯಾಖ್ಯಾನಿಸಿದೆ. "ಧರ್ಮದಿಂದ ಅರ್ಥವು ಹುಟ್ಟುತ್ತದೆ. ಧರ್ಮದಿಂದ ಸುಖವು ಹುಟ್ಟುತ್ತದೆ. ಧರ್ಮದಿಂದ ಎಲ್ಲವೂ ಲಭಿಸುತ್ತದೆ. ಈ ಜಗತ್ತು ಧರ್ಮದ ಸಾರವಾಗಿದೆ".

ಭಗವಂತನಿಂದ ಸೃಷ್ಟಿಯಾದ ಈ ಜಗತ್ತು ಭಗವಂತನಿಂದಲೇ ಧಾರಣೆ ಮಾಡಲ್ಪಟ್ಟಿದೆ. ಅವನೇ ಪೋಷಕ–ಪ್ರೇರಕ–ಕಾರ್ಯಕಾರಣಕರ್ತನಾಗಿರುತ್ತಾನೆ. ಇದನ್ನು ಅರಿತು ನಡೆಯುವುದೇ ಮನುಷ್ಯನ ಆದ್ಯ ಕರ್ತವ್ಯವಾಗಿದೆ. ಆದರೆ ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಇಂದು ಮನುಕುಲದ ಮನಕಲಕುವ ರೀತಿಯಲ್ಲಿ ಮತ–ಪಂಥ–ಜಾತಿಗಳು ವಿಕಾರವಾಗಿ ಬೆಳೆದು ನಿಂತಿವೆ. ಇವುಗಳಿಗೆ ಧರ್ಮದ ಲೇಪನ ನೀಡಿದ ಮಾನವಜನಾಂಗ ವೈಷಮ್ಯದಿಂದ ಕನಲಿ ಕೆಂಡವಾಗಿ ಸ್ವತಃ ಉರಿದು ಬೂದಿಯಾಗುತ್ತಿದೆ. ಇದಕ್ಕೊಂದು ತಾಜಾ ಉದಾಹರಣೆ ಎಂದರೆ, ಮಣಿಪುರದಲ್ಲಿ ಕುಕಿ–ಮೈತೇಯಿ ಬುಡಕಟ್ಟು ಜನಾಂಗಗಳು ಹೊಡೆದಾಡಿ ನಾಶವಾಗುತ್ತಿರುವುದು. ಪಾಕಿಸ್ತಾನದಲ್ಲಿ ದೇವಾಲಯಗಳು, ಚರ್ಚ್‌ಗಳ ಮೇಲೆ ನಡೆಯುತ್ತಿರುವ ನಿರಂತರ ದಾಳಿ. ಯಾವುದೋ ಕಾಲದಲ್ಲಿ ಯಾರೋ ಮಾಡಿದ ತಪ್ಪಿಗೆ ಈಗ ನ್ಯಾಯ ಹುಡುಕುವ ನೆಪದಲ್ಲಿ ಚರ್ಮವನ್ನು ಹರಿದು ರಕ್ತಮಾಂಸಗಳನ್ನು ಪರೀಕ್ಷಿಸಲಾಗುತ್ತಿದೆ. ರಾಜಕೀಯ ಪಕ್ಷಗಳಂತೂ ಇಂಥ ಹುಚ್ಚು ಗುಂಪುಗಾರಿಕೆಗಳ ಪರ–ವಿರೋಧದ ಮುಸುಕು ಹಾಕಿಕೊಂಡು ಇಂತಹ ವೈಷಮ್ಯವನ್ನು

ಮತ್ತಷ್ಟು ಪ್ರೋತ್ಸಾಹಿಸುತ್ತಿವೆ. ಮನುಕುಲವೇ ತಲೆತಗ್ಗಿಸುವಂತೆ ನಮ್ಮ ಅರ್ಥಹೀನ ಬಾಳು ಸಾಗಿದೆ.

ಈ ಮೇಲಿನ ಮಾತುಗಳಿಗೆ ಅಪವಾದವಾಗಿ ಬದುಕಿದವರು ನಮ್ಮ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಸುತ್ತೂರು ಜಗದ್ಗುರು ಮಹಾಸಂಸ್ಥಾನ ಮಠದ 23ನೆಯ ಪೀಠಾಧಿಪತಿಗಳಾಗಿ ಅಚಂದ್ರಾರ್ಕ ಕೀರ್ತಿ ಪಡೆದವರು. ಅವರು ಪರಂಪರಾಗತವಾಗಿ ಒಂದು ಮತಕ್ಕೆ ಸೇರಿದ ಪೀಠಾಧಿಪತಿಗಳಾಗಿದ್ದರೂ ಅವರು ಕ್ರಮಿಸಿದ ವಿಶಾಲವೂ, ವಿಶೇಷವೂ ಆದ ಮಾರ್ಗದಿಂದ ಧರ್ಮಗುರುಗಳೆನಿಸಿಕೊಂಡವರು. ಅವರ ಬದುಕಿನ ಒಂದು ಸಣ್ಣ ಸಂಗತಿ ಇಲ್ಲಿ ಮನನೀಯ. ಅವರು ಬದುಕಿದ್ದ ಕಾಲದಲ್ಲಿ ಮೈಸೂರಿನಲ್ಲಿ ಮೂವರನ್ನು ಧರ್ಮಕ್ಷೇತ್ರದ ತ್ರಿಮೂರ್ತಿಗಳೆಂದು ಜನ ಕರೆಯುತ್ತಿದ್ದರು. ಅದರಲ್ಲಿ ಒಬ್ಬರು ಸ್ವತಃ ರಾಜೇಂದ್ರ ಮಹಾಸ್ವಾಮಿಗಳವರು, ಮತ್ತೊಬ್ಬರು ಕ್ರಿಶ್ಚಿಯನ್ ಧರ್ಮಗುರುಗಳಾದ ಫಾದರ್ ನೊರೋನ್ಹ, ಮಗದೊಬ್ಬರು ಜೈನಕಾಶಿಯೆಂದೇ ಪ್ರಸಿದ್ಧವಾದ ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು. ಅವರುಗಳು ಪರಸ್ಪರರಲ್ಲಿ ಹೊಂದಿದ್ದ ಪ್ರೀತಿ, ಗೌರವ, ಆದರ ಎಂತಹವರನ್ನೂ ನಿಬ್ಬೆರಗುಗೊಳಿಸುವಂತಿತ್ತು. ಅವರ ಸ್ನೇಹ 'ಮತ'ಗಳ ಕೃತಕ ಎಲ್ಲೆಗಳನ್ನು ಮೀರಿ ಮಾನವತ್ವದ ಕಡೆಗೆ ಜನರು ಹೇಗೆ ನಡೆಯಬೇಕೆಂಬ ಸಂದೇಶವನ್ನು ಎಲ್ಲರಿಗೂ ಸಾರುವಂತಿತ್ತು.

ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರು 'ಸಕಲ ಪ್ರಾಣಿಗಳಿಗೂ ಲೇಸನೇ ಬಯಸುತ್ತಿದ್ದ' ಪರಿ ವಿಸ್ಮಯಕಾರಿಯಾದುದು. ಅವರೆಂದೂ ಒಂದು ತತ್ವ –ಸಿದ್ಧಾಂತಕ್ಕೆ ಮನ್ನಣೆ ನೀಡಿ ಮತ್ತೊಂದನ್ನು ತಿರಸ್ಕರಿಸಿದವರಲ್ಲ. ಸ್ವಾಮಿಗಳು ಹೇಗಿರಬೇಕು ಎನ್ನುವುದಕ್ಕೆ ಅವರೊಂದು ಜ್ವಲಂತ ನಿದರ್ಶನ. ಅವರ ಆಲೋಚನಾಕ್ರಮದ ವಿನೂತನತೆಗೆ ಉದಾಹರಣೆ ಎಂದರೆ ಡಾ. ಯು.ಆರ್. ಅನಂತಮೂರ್ತಿ ಅವರಿಗೆ ಸಂಬಂಧಿಸಿದ ಈ ಕೆಳಗಿನ ಘಟನೆ.

ಅನಂತಮೂರ್ತಿಯವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪದವಿ ವ್ಯಾಸಂಗಕ್ಕೆ ಬಂದಾಗ ಜೆಎಸ್‌ಎಸ್ ಮೈನ್ ಬಿಲ್ಡಿಂಗ್ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಯಾಗಿದ್ದರು. ಎಲ್ಲರಂತೆ ಅವರಿಗೂ ಅವಕಾಶ ಕಲ್ಪಿಸಿಕೊಡಲಾಗಿತ್ತು. ಸ್ವಲ್ಪ ದಿನಗಳ ನಂತರ ಮೈಸೂರಿನಲ್ಲಿ ಕೆಲವು ಬ್ರಾಹ್ಮಣ ಸಂಘಟನೆಗಳು ಯಾವುದೇ ಕಾರಣಕ್ಕಾಗಿ ಶ್ರೀಮಠ ಹಾಗೂ ಶ್ರೀಗಳವರ ವಿರುದ್ಧ ಪ್ರತಿಭಟನೆ ಮಾಡಿದರು. ಬ್ರಾಹ್ಮಣ ಹುಡುಗನಿಗೆ ತಮ್ಮ ಹಾಸ್ಟೆಲ್‌ನಲ್ಲಿ ಸೀಟು ಕೊಟ್ಟು, ಅವನಿಗೆ ಊಟ ಹಾಕಿ, ಜಾತಿ ಕೆಡಿಸಿದ್ದಾರೆ ಎನ್ನುವುದು ಅವರ ಪ್ರತಿಭಟನೆಗೆ ಕಾರಣವಾಗಿತ್ತು. ಆನಂತರ ಶ್ರೀಗಳು ಅನಂತಮೂರ್ತಿಯವರನ್ನು ಕರೆಸಿದರು, ಪ್ರತಿಭಟನೆಯ ಸಂಗತಿಯನ್ನು ವಿವರಿಸಿ ಹೇಳಿದರು.

ಆಗ ಅನಂತಮೂರ್ತಿಯವರು 'ನೋಡಿ ಬುದ್ಧಿ, ನಾನಾಗಲಿ, ನಮ್ಮ ಮನೆಯವರಾಗಲಿ ಈ ಪ್ರತಿಭಟನೆಯನ್ನು ಒಪ್ಪುವುದಿಲ್ಲ. ನಾವೆಲ್ಲರೂ ಮೊದಲು ಮನುಷ್ಯರು, ಆಮೇಲೆ ಮಿಕ್ಕದ್ದು. ತಮ್ಮ ಉದಾರ ಕರುಣೆ ದೊಡ್ಡದೇ ಹೊರತು ಈ ಪ್ರತಿಭಟನೆಯಲ್ಲ. ನನಗೆ ಯಾವುದೇ ಮುಜುಗರವಿಲ್ಲ. ನಾನು ಎಂದಿನಂತೆ ಎಲ್ಲರೊಂದಿಗೆ ಇಲ್ಲಿಯೇ ಇರುತ್ತೇನೆ. ಯಾವುದೇ ಕಾರಣಕ್ಕೂ ತಾವು ನೊಂದುಕೊಳ್ಳ ಬಾರದು' ಎಂದರು. ಆಗ ಶ್ರೀಗಳು 'ನೋಡಪ್ಪ, ನೀನಾಗಲಿ, ನಿನ್ನ ಕುಟುಂಬವಾಗಲಿ ಬೇಸರಗೊಂಡಿಲ್ಲ ಎಂಬುದೇನೋ ಸರಿಯೆ. ಆದರೆ ಪ್ರತಿಭಟನೆ ಮಾಡುವವರು ಕೂಡ ನೊಂದುಕೊಳ್ಳಬಾರದು, ಅಲ್ಲವೇ! ಅವರು ನಂಬಿರುವ ನಂಬಿಕೆಗೆ ಧಕ್ಕೆಯಾದಾಗ ನೋವಾಗುವುದು ಸಹಜ. ನಾವು ಅವರ ಮನಸ್ಸನ್ನು ನೋಯಿಸಲು ಇಷ್ಟಪಡುವುದಿಲ್ಲ' ಎಂದರು.

ಆಗ ಅನಂತಮೂರ್ತಿಯವರು 'ಬುದ್ಧಿ, ಅವರು ಪ್ರತಿಭಟಿಸಿದ್ದಕ್ಕೆ ನನಗೇಕೆ ಶಿಕ್ಷೆ? ನನ್ನನ್ನೇಕೆ ಹಾಸ್ಟೆಲ್‌ನಿಂದ ತೆಗೆದುಹಾಕುತ್ತೀರಿ?' ಎಂದರು. ಆಗ ಶ್ರೀಗಳು 'ಅಯ್ಯೋ ಪೆದ್ದ (ಅವರು ಪ್ರೀತಿಯಿಂದ ಕರೆಯುತ್ತಿದ್ದದ್ದು ಹಾಗೆ), ನಾವೆಲ್ಲಿ ಹೇಳಿದೆವು ನಿನ್ನನ್ನು ತೆಗೆದುಹಾಕುತ್ತೇವೆ ಅಂತ. ನಾವು ನಿನ್ನನ್ನು ತೆಗೆದುಹಾಕುವುದಿಲ್ಲ. ಆದರೆ ಇನ್ನು ಮುಂದೆ ನೀನು ಎಲ್ಲರೊಂದಿಗೆ ಪ್ರಸಾದ ಸ್ವೀಕರಿಸಬೇಡ. ನೀನು ಹಾಸ್ಟೆಲ್ ಮುಂಭಾಗದ ಕೊಠಡಿಯಲ್ಲಿ ಇದ್ದುಕೋ. ನಿನಗೆ ಅಲ್ಲಿಗೇ ಪಡಿಪದಾರ್ಥಗಳನ್ನು ಒದಗಿಸುತ್ತೇವೆ. ನೀನೇ ಅಡುಗೆ ಮಾಡಿಕೊಂಡು ಓದು ಮುಂದುವರಿಸು. ಆಗ ಪ್ರತಿಭಟನೆ ಮಾಡಿದವರಿಗೂ ಸಮಾಧಾನ. ನಿನ್ನ ಓದಿಗೂ ಅಡ್ಡಿಯಾಗುವುದಿಲ್ಲ. ಒಳ್ಳೆಯ ವಿದ್ಯಾರ್ಥಿಯೊಬ್ಬನಿಗೆ ಸಹಾಯ ನೀಡಿದೆವು ಎಂದು ನಮಗೂ ತೃಪ್ತಿ' ಎಂದರು.

ಪರಮಪೂಜ್ಯ ಶ್ರೀಗಳವರ ಆಲೋಚನೆಯ ಈ ಹಾದಿಯೇ ನಿಜವಾದ ಧರ್ಮ. ಇಂಥ ಧೀರ ನಿಲುವುಗಳು ಮಾತ್ರವೇ ಮನುಕುಲಕ್ಕೆ ಆಸರೆಯಾಗಬಲ್ಲವು. ಆ ಕಾರಣದಿಂದಲೇ ಶ್ರೀಗಳು ಎಂದೆಂದಿಗೂ ಎಲ್ಲರ ಮನಸ್ಸಿನಲ್ಲಿ ಸದಾಕಾಲ ತೇಜೋಮೂರ್ತಿಯಾಗಿ ಬೆಳಗುತ್ತಿರುತ್ತಾರೆ.

**ಡಾ. ಎಂ.ಎನ್. ನಂದೀಶ್ ಹಂಚೆ**

# ಯುಗಪ್ರಜ್ಞೆ

**ಜಗದ್ಗುರು ಡಾ. ಶ್ರೀ ಅನ್ನದಾನೀಶ್ವರ ಮಹಾಸ್ವಾಮಿಗಳು**
ಜಗದ್ಗುರು ಶ್ರೀ ಅನ್ನದಾನೀಶ್ವರ ಸಂಸ್ಥಾನ ಮಠ, ಮುಂಡರಗಿ, ಗದಗ ಜಿಲ್ಲೆ

**ಪ**ರಮಪೂಜ್ಯರನ್ನು ಪ್ರಥಮತಃ ಸಂದರ್ಶಿಸಿದ್ದು ಮಲ್ಲನಮೂಲೆ ವಿರಕ್ತಮಠದಲ್ಲಿ. ಇದೊಂದು ಆಕಸ್ಮಿಕ ಅವಕಾಶ. ವಿರಕ್ತಮಠದ ಶ್ರೀ ಚನ್ನಬಸವಸ್ವಾಮಿಗಳ ಆದರಾಭಿಮಾನಗಳ ಫಲವಾಗಿ, ಬಹುದೂರ ಅಂದರೆ ವಾತಾಪಿ ಬಾದಾಮಿಯ ಶ್ರೀಮದ್ವೀರಶೈವ ಶಿವಯೋಗ ಮಂದಿರದಿಂದ ಹೊಸಪೇಟೆಯ ಶ್ರೀ ಜಗದ್ಗುರು ಸಂಗನಬಸವ ಮಹಾಸ್ವಾಮಿಗಳವರೊಡನೆ ಮಲ್ಲನಮೂಲೆ ಮಠಕ್ಕೆ ಆಗಮಿಸಿದೆವು. ಬೆಳಗಿನ ಮಂಗಲಮಯ ವಾತಾವರಣ, ಮಳೆ ಸಾಕಷ್ಟು ಸುರಿದು ಕಾರ್ಯಕ್ರಮಕ್ಕೆ ವ್ಯತ್ಯಯವಾಗಿದ್ದರೂ ಮಠದ ಶ್ರೀಗಳ ಹಾಗೂ ಕಾರ್ಯಕರ್ತರ ಕ್ರಿಯಾಶೀಲತೆಯಿಂದಾಗಿ ಕಾರ್ಯಕ್ರಮ ಸುಗಮವಾಯಿತು.

ಇರುಳೆಲ್ಲ ಪ್ರಯಾಣಿಸಿ ದಣಿವಾಗಿದ್ದರೂ ಪೂಜ್ಯ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಸ್ವಾಮಿಯವರನ್ನು ಕಂಡು ಸಂತಸವಾಗಿತ್ತು. ದರ್ಶನೀಯ ವ್ಯಕ್ತಿಗಳವರು, ಚಿನ್ನದಂಥ ವರ್ಣ, ಸುಂದರ ಮುಖಮಂಡಲ, ರಾಜತೇಜ-ಶಿವಯೋಗತೇಜದೊಂದಿಗೆ ಸಂದರ್ಶಿಸಿದವರನ್ನು ಸಂತೃಪ್ತಗೊಳಿಸುತ್ತಿತ್ತು. ಸುತ್ತೂರು ಮಠದ ಹಿಂದಿನ ಮಹಾಸ್ವಾಮಿಗಳವರ ಮಂತ್ರಶಕ್ತಿಯನ್ನು ಮೈಗೂಡಿಸಿಕೊಂಡ ಪರಮಪೂಜ್ಯರು, ಸಮಾಜಮುಖಿಯಾಗಿ ಕರ್ತವ್ಯದಕ್ಷರಾಗಿದ್ದರು. ಆಂಗ್ಲರ ಆಡಳಿತದಲ್ಲಿ ನಮ್ಮ ಜನ ಅಜ್ಞಾನ, ಬಡತನದಿಂದ ಬಳಲುತ್ತಿರುವುದನ್ನು ಕಂಡು ಮನದಲ್ಲಿ ಮರುಗಿದರು. ಯುಗಪ್ರಜ್ಞೆ ಜಾಗೃತವಾಗಿ ಕಾರ್ಯ ಪ್ರವೃತ್ತರಾದರು. ಬಡಮಕ್ಕಳ ಕಲ್ಯಾಣ ಬಯಸಿ ಅನ್ನದಾನ-ವಿದ್ಯಾದಾನಕ್ಕೆ ಅಣಿಯಾದರು. ಸಾಮಾನ್ಯವಾಗಿ ಪುಣ್ಯಾತ್ಮರ ಬದುಕು ಪರೋಪಕಾರಕ್ಕಾಗಿಯೇ ರೂಪುಗೊಂಡಿರುವುದು.

ಚಂದನದ ಕಟ್ಟಿಗೆ ತನ್ನನ್ನು ಸವೆಸಿಕೊಂಡು ಸುಗಂಧವನ್ನು ಸೂಸುತ್ತದೆ. ಸುಗಂಧಮಲ್ಲಿಗೆ ತನ್ನ ಪರಿಮಳವನ್ನು ಬೀರಿ ಬಾಡುತ್ತದೆ. ನದಿಗಳು ವನ್ಯಸಂಪತ್ತನ್ನು, ಜೀವರಾಶಿಗಳನ್ನು ಸಂತೃಪ್ತಗೊಳಿಸಿ ಸಾಗರ ಸೇರಿ ತನ್ನತನವನ್ನು ಮರೆಮಾಚುತ್ತವೆ. ಮಹಾತ್ಮರು ಲೋಕದವರಂತೆ ಬಾರದೆ ಪುಣ್ಯಪುರುಷರಾಗಿ ಜನಿಸಿ ಜ್ಞಾನಿಗಳಾಗಿ ಬಾಳುತ್ತಾರೆ. ತಮ್ಮ ಪರಿಸರದಲ್ಲಿ ಬಂದವರನ್ನು ಸಂತೈಸಿ ಜ್ಞಾನಸಂಪತ್ತನ್ನು ಕರುಣಿಸುತ್ತಾರೆ. ಜನತೆಯ ಅಜ್ಞಾನವನ್ನು ನಿವಾರಿಸಿ ಮಾನವೀಯ ಮೌಲ್ಯವನ್ನು ಅರಿಯುವಂತೆ ಮಾಡುವರು.

ಸಮಾಜೋಧಾರ್ಮಿಕ ಸೇವೆಯನ್ನು ಕೈಗೊಂಡು ಸಕಲ ಮಾನವ ಜೀವಾತ್ಮರನ್ನು ಮಾನವರನ್ನಾಗಿಸಿ ಮೇಲ್ಮಟ್ಟಕ್ಕೆ ತಲುಪಿಸುತ್ತಾರೆ. ಈ ನಿಟ್ಟಿನಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಪ್ರಾರಂಭದಲ್ಲಿ ಸಾಧಾರಣ ರೀತಿಯಲ್ಲಿ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿದರು. ಜೊತೆಜೊತೆಗೆ ಪ್ರಸಾದ ವಿತರಣೆಯೂ ನಡೆಯಿತು.

ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧ ಫಲ ಧರ್ಮಕಾರ್ಯಕ್ಕೆ
ಮಡಿಯಲೇಬೇಕು ಸರ್ವಜ್ಞ ||

ಎನ್ನುವಂತೆ ಪರಮಪೂಜ್ಯರು ಮುಂದಿಟ್ಟ ಅಡಿಯನ್ನು ಹಿಂದಿಡಲಿಲ್ಲ. ಧರ್ಮಕಾರ್ಯವನ್ನು ಧೈರ್ಯದಿಂದ ಮುನ್ನಡೆಸಿದರು. ತಮ್ಮನ್ನೇ ಮುಡುಪಾಗಿಸಿದರು. ಅವರಲ್ಲಿ ಉತ್ಸಾಹವಿತ್ತು, ಸಾಹಸಪ್ರವೃತ್ತಿಯೊಂದಿಗೆ ಧೈರ್ಯ ತುಂಬಿತ್ತು. ಅಪರಿಮಿತ ಬುದ್ಧಿವಂತರು, ಸಾಕಷ್ಟು ಆರ್ಥಿಕ ಶಕ್ತಿಯೂ ಲಭಿಸಿತು. ಪರಾಕ್ರಮಶಾಲಿಗಳಾಗಿ ಧರ್ಮವನ್ನು, ಶಿಕ್ಷಣವನ್ನು ಜನಮನಕ್ಕೆ ಹಂಚಿದರು. ಬಹುಶಃ ಈ ಪುಣ್ಯಾತ್ಮರನ್ನು ಅವಲೋಕಿಸಿಯೇ ಸುಭಾಷಿತಕಾರನು:

ಉತ್ಸಾಹಃ ಸಾಹಸಂ ಧೈರ್ಯಂ ಬುದ್ಧಿಶಕ್ತೀ ಪರಾಕ್ರಮಃ |
ಷಡೇತೇ ಯಸ್ಯ ತಿಷ್ಠಂತಿ ತಸ್ಯ ದೇವಃ ಸಹಾಯಕೃತ್ ||

ಉತ್ಸಾಹ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ, ಪರಾಕ್ರಮಗಳೆಂಬ ಆರು ಗುಣಗಳು ಯಾರಲ್ಲಿರುತ್ತವೆಯೋ ಅವರಿಗೆ ಸಾಕ್ಷಾತ್ ಪರಮೇಶ್ವರನು ಸಹಾಯ ಮಾಡುವನಂತೆ. ಹಾಗೆಯೇ ಸುತ್ತೂರು ಶ್ರೀಗಳ ದಕ್ಷತೆಯನ್ನು ಕಂಡ ಮೈಸೂರರಸರು ಅನೇಕ ರೀತಿಯಲ್ಲಿ ಸಹಾಯ ಮಾಡಿದರು. ಸಂಸ್ಥಾನದ ಅನೇಕ ಇನಾಯತುಗಳು ಪೂಜ್ಯರ ಧರ್ಮಕಾರ್ಯಕ್ಕಾಗಿ ಸಮರ್ಪಿತವಾದವು. ಬೃಹದಾಶ್ರಯ ಲಭಿಸಿದಾಗ ಕಾರ್ಯಪ್ರವೃತ್ತರಾಗುವುದು ಹೆಚ್ಚಲ್ಲ. ತೊಂದರೆಯಿರುವಾಗಲೂ ಉತ್ಸಾಹಗಳೂ ಧೈರ್ಯಶೀಲರಾದ ಜಗದ್ಗುರುಗಳು ತಮ್ಮ ಚಿನ್ನದ ಲಿಂಗದ ಕರಡಿಗೆಯನ್ನು ಮಾರಿ ಪ್ರಸಾದ ವ್ಯವಸ್ಥೆ ಮಾಡಿದ್ದು ಸಾಮಾನ್ಯ ಮಾತಲ್ಲ. ಬೆಂಕಿಯ ಮೇಲೆ ಬೆಣ್ಣೆ ಕರಗಿದರೆ, ಮಹಾತ್ಮರ ಮನಸ್ಸು ದುಃಖಿಗಳ ಅಳಲನ್ನು ಕಂಡರೆ ಸಾಕು ತಮ್ಮ ಸರ್ವಸ್ವವನ್ನು ತ್ಯಾಗ ಮಾಡುತ್ತಾರೆ.

ಶ್ರೀ ಶಿವರಾತ್ರಿ ರಾಜೇಂದ್ರರ ಹೃದಯವು ದಯಾಪೂರ್ಣವಾಗಿತ್ತು. "ದಯವೇ ಧರ್ಮದ ಮೂಲ"ವೆಂಬ ಶರಣವಾಣಿ ಅವರಲ್ಲಿ ಮನೆಮಾಡಿತ್ತು. ಮಾತು ಮಂತ್ರವಾಗಿತ್ತು. ಮಂತ್ರವು ಯಥಾರ್ಥವನ್ನೇ ಬಿಂಬಿಸುತ್ತದೆ. ಮನಸ್ಸು ಪರಹಿತಕಾರ್ಯದಲ್ಲಿ ನಿರತವಾಗಿರುತ್ತಿತ್ತು. ಅಂತೆಯೇ

ಸದಯಂ ಹೃದಯಂ ಯಸ್ಯ ಭಾಷಿತಂ ಸತ್ಯಭೂಷಿತಮ್ |
ಕಾಯಃ ಪರಹಿತೇ ಯಸ್ಯ ಕಲಿಸ್ತಸ್ಯ ಕರೋತಿತಿಮನಃ ||

ಕವಿವಾಣಿ ಮೊಳಗಿದಂತೆ ಪೂಜ್ಯಶ್ರೀಗಳವರು ಕಲಿಕಾಲಕ್ಕೆ ಅಂಜದೆ ಅಳುಕದೆ ಹಲವಾರು ಉತ್ತಮ ಕಾರ್ಯಗಳನ್ನು ನೆರವೇರಿಸಿದರು. ನಿರಂತರವಾಗಿ ಧರ್ಮಕಾರ್ಯಗಳು ನಿರ್ವಿಘ್ನವಾಗಿ ನಡೆಯುವಂತೆ ಧಾರ್ಮಿಕದತ್ತಿ ನಿಧಿಯನ್ನು ಸ್ಥಾಪಿಸಿದರು. ಇದರ ಫಲವಾಗಿಯೇ ಇಂದು ಶರಣ ಸಾಹಿತ್ಯ ಪರಿಷತ್ ಪ್ರತ್ಯೇಕವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ನಡೆದಿದೆ. ಶಿವರಾತ್ರೀಶ್ವರ ಗ್ರಂಥಮಾಲೆಯಿಂದ ಉತ್ತಮ ಮೌಲಿಕ ಸಾಹಿತ್ಯ ಜನಮನವನ್ನು ತೃಪ್ತಿಗೊಳಿಸುತ್ತಲಿದೆ. ಪೂಜ್ಯರ ಪರಿಶ್ರಮಕ್ಕೆ ಸಾರ್ಥಕ ಉತ್ತರಾಧಿಕಾರಿಗಳು ಲಭ್ಯವಾಗಿ ಗುರುಗಳಿಗಿಂತ ಮುನ್ನಡೆ ಸಾಧಿಸುತ್ತಲಿರುವುದು ಹೆಮ್ಮೆಯ ಸಂಗತಿ. ಜಗದ್ಗುರು ರಾಜೇಂದ್ರ ಮಹಾಸ್ವಾಮಿಗಳು ಅನ್ವರ್ಥಕಚೇತನರು. ಅವರನ್ನು ದರ್ಶಿಸಿದ್ದು ಅದೇ ಮೊದಲು, ಅದೇ ಕೊನೆ. ಆದರೂ ಅವರ ಪ್ರಭಾವವಲಯ ಮರೆಯುವಂಥಹದಲ್ಲ. ಸದಾ ಸ್ಮರಣೀಯರು. ಅವರು ನೀಡಿದ ಧಾರ್ಮಿಕ ದತ್ತಿಯಿಂದ ಶ್ರೀಸನ್ನಿಧಿಯ "ಷಟ್‌ಸ್ಥಲ: ಒಂದು ಅಧ್ಯಯನ" ಮಹಾನ್ ಗ್ರಂಥಕ್ಕೆ ಗೌರವ ಪ್ರಶಸ್ತಿ ಹತ್ತು ಸಾವಿರ ನಗದು ಪುರಸ್ಕಾರ ಲಭಿಸಿದ್ದು ಸಂತಸದ ಸಂಗತಿ ಮತ್ತು ಗದಗ ಜಿಲ್ಲೆಯ ಶರಣ ಸಾಹಿತ್ಯದ ಎರಡನೆಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿದ ಆನಂದ ಮರೆಯುವಂಥದಲ್ಲ. ಇಂದಿನ ಜಗದ್ಗುರು ಶ್ರೀ ಶಿವರಾತ್ರಿದೇಶಿಕೇಂದ್ರ ಮಹಾಸ್ವಾಮಿಗಳವರು ಗುರುವಿಗೆ ತಕ್ಕ ಶಿಷ್ಯರಾಗಿ ಗುರುಗಳ ಮಣಿಹವನ್ನು ಪೂರೈಸುತ್ತಿರುವರು.

ಸುತ್ತೂರು ಸಂಸ್ಥಾನದ ಖ್ಯಾತಿಯನ್ನು ದೇಶದಲ್ಲಿ ಮಾತ್ರವಲ್ಲ, ವಿದೇಶಗಳಲ್ಲೂ ಪ್ರಸಾರ ಮಾಡುತ್ತಿರುವುದು ಗೌರವದ ಗರಿಯೆನಿಸಿದೆ. ಎಲ್ಲವೂ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಮಹಾಮಣಿಹವೆ!

□

## ರಾಜೇಂದ್ರ ಶ್ರೀವಾಣಿ

- ಜನಸಾಮಾನ್ಯರ ಆರೋಗ್ಯ ಸುಧಾರಿಸದ ಹೊರತು ದೇಶದ ಸ್ವಾಸ್ಥ್ಯ ಸುಧಾರಿಸಲಾಗದು.
- ರೋಗಿಗಳು ನಮ್ಮ ಬಂಧುಗಳು.
- ಯುವಶಕ್ತಿ ರಾಷ್ಟ್ರದ ಮಹಾಶಕ್ತಿ. ಯುವ ಶಕ್ತಿಯ ಸದುಪಯೋಗ ವಾಗದಿದ್ದಲ್ಲಿ ರಾಷ್ಟ್ರದ ಏಳಿಗೆ ಅಸಾಧ್ಯ.
- ಸಮಾಜದ ಉದ್ಧಾರ ವಿದ್ಯಾರ್ಜನೆಯಿಂದ ಮತ್ತು ಜ್ಞಾನ ಪ್ರಸರಣದಿಂದಲೇ ಸಾಧ್ಯ.

# ಬಡವರ ಬಂಧು

**ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮಿಗಳು**

ಶ್ರೀ ನಿಡುಮಾಮಿಡಿ ಮಠ, ಬೆಂಗಳೂರು

**ನ**ನ್ನ ಅವರ ಮೊದಲ ಭೇಟಿ 1982 ಜುಲೈ ತಿಂಗಳಲ್ಲಿ. ಸ್ನಾತಕೋತ್ತರ ಎಂ.ಎ ಸೇರಬೇಕೆಂದು ಬಯಸಿ ಮೈಸೂರಿಗೆ ಆಗಮಿಸಿದ ಸಂದರ್ಭದಲ್ಲಿ,

ನಾನು ಓದಿದಂತಹ ಚಿತ್ರದುರ್ಗ ಪದವಿ ಕಾಲೇಜು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರ್ತಾ ಇತ್ತು. ಆಗ ಇನ್ನು ಕುವೆಂಪು ವಿಶ್ವವಿದ್ಯಾನಿಲಯ ಆಗಿರಲಿಲ್ಲ. ಮಾನಸಗಂಗೋತ್ರಿಯ ಪಿ.ಜಿ ಹಾಸ್ಟಲ್‌ಗೆ ಸೇರಬೇಕೆಂದು ಹೋದಾಗ ಅಲ್ಲಿ ಪ್ರತಿ ತಿಂಗಳ ಊಟದ ವೆಚ್ಚ 350-400 ರೂ.ಗಳು ಕಟ್ಟಬೇಕಾಗಿತ್ತು. ಆಗ ನಾನು ಯೋಚನೆ ಮಾಡಿದೆ. ನನ್ನನ್ನು ಓದಿಸತ್ತಾ ಇದ್ದಂತವರು ಶ್ರೀಶೈಲ ಮಠದ ನನ್ನ ಪೂರ್ವಾಶ್ರಮದ ಸಹೋದರರು ಸಹ. ಅವರು ಪ್ರತಿ ತಿಂಗಳು 1000 ರೂ. ಕೊಡುತ್ತೇನೆ ಎಂದು ಹೇಳಿದ್ದರು. ಆದರೆ ನನ್ನ ಉದ್ದೇಶ ಏನು ಇತ್ತು ಅಂದರೆ, 400 ರೂ.ಗಳು ಹಾಸ್ಟಲ್‌ಗೆ ಸೇರುತ್ತಿತ್ತು. ನನ್ನ ಖರ್ಚು 100 ರೂ. ಆಗುತ್ತೆ. ಇನ್ನುಳಿದ 600 ರೂ.ಗಳಲ್ಲಿ 34 ವಿದ್ಯಾರ್ಥಿಗಳನ್ನು ಓದಿಸುತ್ತಿದ್ದೆ. ಆ ಹೊತ್ತಿಗೆ ಅಷ್ಟೊಂದು ಹಣ ಹಾಗೆ ವೆಚ್ಚ ಮಾಡಿದರೆ ಈ ಮಕ್ಕಳಿಗೆ ತೊಂದರೆಯಾಗುತ್ತೆ ಅಂತ ಯೋಚನೆ ಮಾಡಿ, ಸುತ್ತೂರು ಶ್ರೀಮಠದಲ್ಲಿ ಫ್ರೀ ಹಾಸ್ಟಲ್ ಇದೆಯೆಂದು ತಿಳಿದು ಶ್ರೀಗಳವರನ್ನು ಭೇಟಿ ಮಾಡಿ ನಮಸ್ಕಾರ ಮಾಡಿ ವಿನಂತಿ ಮಾಡಿಕೊಂಡೆ. ನಾನು ಶ್ರೀಶೈಲಾ ತಾರಣಮಠದ ಶ್ರೀಗಳ ತಮ್ಮ ಬುದ್ದಿ. ನಾನು ಎಂ.ಎ. ಮಾಡಲಿಕ್ಕೆ ಬಂದಿದ್ದೇನೆ. ನಿಮ್ಮಲ್ಲಿ ಫ್ರೀ ಹಾಸ್ಟಲ್ ಇದೆಯೆಂದು ಕೇಳಿಪಟ್ಟೆ. ನನಗೆ ಅವಕಾಶ ಮಾಡಿಕೊಡಿ ಎಂದು ಕೇಳಿದೆ. ಆಗ ಅವರು ಪಿ.ಜಿ. ಹಾಸ್ಟಲ್ ಇದೆಯೆಲ್ಲಾ ನೀನು ಅಲ್ಲೇ ಸೇರಬಹುದಲ್ಲ ಅಂತ ಕೇಳಿದರು. ಹೌದು ಬುದ್ದಿ ಪಿ.ಜಿ. ಹಾಸ್ಟಲ್ ಇದೆ. ನನಗೆ ಅಲ್ಲಿ ವ್ಯವಸ್ಥೆಯಿದೆ ಎನ್ನುತ್ತಾ ನನ್ನ ವಿಚಾರವನ್ನು ತಿಳಿಸಿದೆ. ಆಗ ಬುದ್ಧಿ ಅವರು ಓಹೋ, ಈಗಲೇ ಸಮಾಜ ಸೇವೆ ಮಾಡ್ತಾ ಇದ್ದೀಯಾ ಅಂತ ಅಂದರು. ಹೌದು ಬುದ್ದಿ ತಮ್ಮಲ್ಲೇ ನನಗೆ ಅವಕಾಶ ಮಾಡಿಕೊಡಬೇಕು ಅಂತ ಕೇಳಿದೆ. ಆಗಲಿ ಒಂದು ವಾರ ಬಿಟ್ಟುಕೊಂಡು ಬಂದು ನೋಡು. ಆಮೇಲೆ ಒಂದು ವಾರ ಬಿಟ್ಟು ಹೋದೆ. ಮೇನ್ ಬಿಲ್ಡಿಂಗ್‌ನಲ್ಲಿ ನನಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿಕೊಟ್ಟರು. ಇದು ಎರಡನೇ ಭೇಟಿ. ಆ ನಂತರದಲ್ಲಿ ಅವರು ಎಲ್ಲೇ ಕಾರ್ಯಕ್ರಮಗಳು ನಡೆದರೂ

ನಾನು ಪಾಲ್ಗೊಳ್ಳುತ್ತಿದ್ದೆ. 1983ರಲ್ಲಿ ದ್ವಿತೀಯ ಎಂ.ಎ. ಓದುತ್ತಿದ್ದೆ. ಎಲ್ಲಾ ವಿಭಾಗದ ಮಕ್ಕಳು, ಎಲ್ಲಾ ಸಮುದಾಯದ, ವಿಭಿನ್ನ ಪ್ರದೇಶದ ಮಕ್ಕಳು ಅಧ್ಯಯನ ಮಾಡುತ್ತಿದ್ದರು. ಪಾಲಿಟೆಕ್ನಿಕ್‌ನಲ್ಲಿ, ಪಿ.ಜಿ. ವಿಭಾಗದಲ್ಲಿ, ಡಿಗ್ರಿ ವಿಭಾಗದ ಮಕ್ಕಳು ಅಲ್ಲಿದ್ದರು.

83ರಲ್ಲಿ ಊಟದಲ್ಲಿ ಮುದ್ದೆ, ಅನ್ನ, ಸಾರು ಕೊಡ್ತಾ ಇದ್ದರು. ಕೆಲವು ಹುಡುಗುರು ಹೊಟ್ಟೆ ನೋವು ಅಂತ ಹೇಳಿದ್ದಕ್ಕೆ ವೈದ್ಯರನ್ನು ಭೇಟಿ ಮಾಡಿದಾಗ, ವೈದ್ಯರು ರಾಗಿಯನ್ನು ಕ್ಲೀನ್ ಮಾಡದೆ ಮಾಡ್ತಾ ಇದ್ದಾರೆ ಎಂಬ ಗುಲ್ಲು ಹಬ್ಬತೊಡಗಿತು. ಇದೆಲ್ಲಾವನ್ನು ಸ್ವಾಮೀಜಿ ಅವರ ಗಮನಕ್ಕೆ ತರಬೇಕೆಂದು ತೀರ್ಮಾನಿಸಿ ಅಲ್ಲಿಗೆ ಹೋಗಲಿಕ್ಕೆ ನನ್ನನ್ನು ಆಯ್ಕೆ ಮಾಡಿದರು. ರಜಾ ಇದ್ದಾಗ ಬುದ್ಧಿಯವರ ಹತ್ತಿರ ಹೋದೆ. ಬುದ್ಧಿ ನೀವು ಕಷ್ಟಪಟ್ಟು ಎಲ್ಲಾ ಮಾಡ್ತೀರಿ. ಮಠಕ್ಕೆ ಅಪಪ್ರಚಾರವಾಗುತ್ತೆ ಬುದ್ಧಿ. ಅವರು ಮಾಡುವ ಅಡಿಗೆ ಎಲ್ಲಾ ಚೆನ್ನಾಗಿರುತ್ತೆ. ಆದರೆ, ಮಕ್ಕಳಿಗೆ ಹೊಟ್ಟೆ ನೋವು ಬರ್ತಾ ಇದೆ ಅಂತ ಮಾತನಾಡುತ್ತಾರೆ. ಎಲ್ಲಾ ಮಾಡಿಯು ಮಕ್ಕಳು ಅಪಪ್ರಚಾರ ಮಾಡಿದರೆ ಮಠಕ್ಕೆ ಕೆಟ್ಟ ಹೆಸರು ಬರುತ್ತೆ ಬುದ್ದಿ. ಈ ಸಲುವಾಗಿ ಎರಡು-ಮೂರು ಮಕ್ಕಳಿಗೆ ಆಪರೇಷನ್ ಕೂಡ ಆಗಿತ್ತು. ಬುದ್ದಿ ಅವರಿಗೂ ಹೇಳಿದರೂ ಸಹ ಹೀಗೆ ಆಗ್ತಾ ಇದೆ ಅಂತ.

ನಾನು ಮತ್ತೆ ಬುದ್ಧಿ ಅವರತ್ತಿರ ಹೋಗಬೇಕಾಯಿತು. ಒಂದು ಮುದ್ದೆಯನ್ನು ತೆಗೆದುಕೊಂಡು ಹೋದೆ. ಕ್ಯಾತನಹಳ್ಳಿಯವರು ನನ್ನ ಕಂಡರೆ ಗುರ್ ಅಂತ ಇದ್ದರು. ಏಕೆಂದರೆ, ಇವನು ಬಂದ್ರೆ ಏನೋ ಒಂದು ದೂರು ತಂದಿರ್ತಾನೆ ಎಂಬ ಭಾವನೆ ಅವರಿಗೆ. ಆದರೂ ನಾನು ಒಳಗೆ ಹೋಗಿ ಬುದ್ದಿಯವರಿಗೆ ನಮಸ್ಕಾರ ಮಾಡಿ, ನಾನು ತೆಗೆದುಕೊಂಡು ಹೋದ ಮುದ್ದೆ ತೋರಿಸುತ್ತಾ ಹೇಳಿದೆ. ಬುದ್ದಿ, ನಾನು ಸುಳ್ಳು ಹೇಳ್ತಾ ಇಲ್ಲ ಬುದ್ದಿ. ನೋಡಿ ಕ್ಲೀನ್ ಮಾಡದೆ ಮುದ್ದೆ ಮಾಡ್ತಾರೆ. ತಿಂದಾಗ ಕರಂಕರಂ ಅನ್ನುತ್ತೆ. ಈ ಸಲುವಾಗಿಯೇ ಇಬ್ಬರು ಮಕ್ಕಳಿಗೆ ಆಪರೇಷನ್ ಕೂಡ ಆಗಿದೆ ಅಂತ ವಿನಂತಿ ಮಾಡಿಕೊಂಡೆ. ಅವರು ಬೇಜಾರು ಮಾಡಿಕೊಂಡು ಈ ಸಲಿ ಖಂಡಿತ ನಾನು ಖುದ್ದಾಗಿ ನೋಡಿ ಹೇಳ್ತೇನೆ ಎಂದು ಹೇಳಿ ನನ್ನನ್ನು ಕಳುಹಿಸಿಕೊಟ್ಟರು. ಆಮೇಲೆ ಅದು ಸುಧಾರಣೆ ಆಯ್ತು.

ಆಮೇಲೆ 85ನೇ ಇಸವಿಯಲ್ಲಿ ಎಂ.ಎ. ಮುಗಿದಿತ್ತು. ಬುದ್ಧ, ಬಸವ ಎಂಬ ಸಂಶೋಧನಾ ಪ್ರಬಂಧ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದೆ. ಅದಕ್ಕೆ ತಿಪ್ಪೇರುದ್ರಸ್ವಾಮಿ ಅವರು ಮಾರ್ಗದರ್ಶಕರಾಗಿದ್ದರು. ಹಾ.ಮಾ. ನಾಯಕರು ನಿವೃತ್ತಿಯಾದ ಮೇಲೆ ಶ್ರೀ ತಿಪ್ಪೇರುದ್ರಸ್ವಾಮಿ ಅವರು ಕುವೆಂಪು ಅಧ್ಯಯನ ಕೇಂದ್ರಕ್ಕೆ ಬಂದರು. ಸುತ್ತೂರು ಶ್ರೀಮಠದ ಹಿರಿಯ ಗುರುಗಳು ಒಂದು ಮೀಟಿಂಗ್ ಕರೆದಿದ್ರು. ಮಠದ ಸಾಂಸ್ಕೃತಿಕ, ಸಾಹಿತ್ಯಕ ಚಟುವಟಿಕೆಗಳನ್ನು ಹೇಗೆ ಅಭಿವೃದ್ಧಿ ಮಾಡಬೇಕೆಂದು ತೀರ್ಮಾನ ಕೈಗೊಳ್ಳಲು ಕರೆಸಿದ್ದರು. ಸಾಹಿತಿಗಳು, ಪಂಡಿತರುಗಳು, ಚಿಂತಕರು ಹೆಚ್ಚುಕಡಿಮೆ 25 ಜನ ಇದ್ದರು. ಜೊತೆಗೆ ನನ್ನನ್ನೂ

ಕರೆದಿದ್ದರು. ಎಲ್ಲರೂ ಮಾತನಾಡಿದ ಮೇಲೆ ನಾನು 3 ಸಲಹೆ ಕೊಟ್ಟಿರುವುದು ನನಗೆ ನೆನಪಿನಲ್ಲಿದೆ. ತ್ರೈಮಾಸಿಕ ಪತ್ರಿಕೆ ಇದೆ. ಅಂತರ ಜಾಸ್ತಿ ಆಗುತ್ತೆ. ಎರಡು ತಿಂಗಳು ಇನ್ನೂ ಒಂದು ತಿಂಗಳಿಗೊಮ್ಮೆಯಾದರೆ ಕಂಟ್ಯೂನಿಟಿ ಇರುತ್ತೆ, ಪ್ರತಿ ತಿಂಗಳು ತಲುಪುತ್ತಾ ಇದ್ದರೆ ಜನರು ಮರೆತುಹೋಗಲ್ಲ. ಇನ್ನೂ ಹೆಚ್ಚಿನ ವಿಷಯಗಳನ್ನು ತಲುಪಿಸಬಹುದು. ಇನ್ನೊಂದು ವಿಷಯವೇನೆಂದರೆ, ಇತ್ತೀಚೆಗೆ ನಮ್ಮ ಮಕ್ಕಳಲ್ಲಿ ವೈದಿಕರ ಮಠಗಳ ರೀತಿ ಸಾಹಿತ್ಯಕ್ಕೆ, ಸಂಸ್ಕೃತಿಗೆ, ಧರ್ಮಪ್ರಚಾರಕ್ಕೆ ಹೆಚ್ಚು ಆದ್ಯತೆ ಕೊಡುತ್ತಾ ಇದ್ದಾರೆ. ನಮ್ಮವರು ಇದಕ್ಕೆ ಕಡಿಮೆ ಆದ್ಯತೆ ಕೊಡ್ತಾ ಇದ್ದಾರೆ. ಶಿಕ್ಷಣ ಸಂಸ್ಥೆಗಳ ಹೆಚ್ಚು ಕಾಳಜಿ ಇದೆ. ಅದು ಇರಬೇಕಾದ್ದು ನ್ಯಾಯಯುತವಾದದ್ದು ಸರಿ. ಆದರೆ, ಅದೇ ಸಂದರ್ಭದಲ್ಲಿ ಸಾಹಿತ್ಯ, ಸಂಸ್ಕೃತಿ ಇಂತಹ ವಿಷಯಗಳಿಗೆ ಹಿನ್ನಡೆಯಾಗಬಾರದು. ವೈದಿಕ ಮಠಗಳು ಅವರು ಬೇರೆ ಏನೇ ಚಟುವಟಿಕೆಗಳನ್ನು ಮಾಡಿಕೊಂಡು ಬಂದರೂ ಸಹ ಧರ್ಮದ ವಿಚಾರದಲ್ಲಿ, ಸಂಸ್ಕಾರಕ್ಕೆ ಹೆಚ್ಚು ಆದ್ಯತೆಯನ್ನು ಕೊಡ್ತಾ ಇದ್ದಾರೆ. ಹಾಗಾಗಿ ಸಮಾಜದ ಮೇಲೆ ನಿರಂತರ ಪ್ರಭಾವವನ್ನು ಉಳಿಸಿಕೊಳ್ಳುತ್ತಾರೆ. ನಮ್ಮ ಮಠಗಳಲ್ಲಿ ಇದು ಕ್ಷೀಣವಾಗಬಾರದು. ನಮ್ಮವರು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಕೊಡ್ತಾ ಇರೋದ್ರಿಂದ ಇಂತಹ ಇನ್ನಿತರ ಕ್ಷೇತ್ರಗಳಲ್ಲಿ ಹಿನ್ನಡೆಯಾಗುತ್ತಿದೆ. ಹಾಗಾಗಿ ಈಕಡೆ ಗಮನ ಕೊಡಬೇಕಾಗುತ್ತದೆ. ಹಾಗಾಗಿ ಅಪ್ರಕಟಿತ ಸಾಹಿತ್ಯ ನಿಡುಮಾಮಿಡಿ ಮಠ, ಮೂರುಸಾವಿರದ ಮಠ, ಗದುಗಿನ ಮಠಗಳು ಹೀಗೆ ವರ್ಷಕ್ಕೆ ಒಂದೆರಡು ಪುಸ್ತಕಗಳನ್ನು ತರ್ತಾ ಇವೆ. ತಮ್ಮಲ್ಲಿಯೂ ಸಹ ಸಾಹಿತ್ಯಪ್ರಚಾರ ಆಗಬೇಕು. ಧರ್ಮಪ್ರಚಾರ ಆಗಬೇಕು. ಯಾದವಗಿರಿ ರಾಮಕೃಷ್ಣ ಆಶ್ರಮದಲ್ಲಿ ಪ್ರತಿ ವಾರ ಪ್ರಾರ್ಥನೆ, ಉಪನ್ಯಾಸ ಹೀಗೆ ಅನೇಕ ಕಾರ್ಯಕ್ರಮಗಳನ್ನು ಮಾಡ್ತಾ ಇದ್ದರು. ಈ ರೀತಿ ನಾವೇಕೆ ಮಾಡಬಾರದು ಅಂತ ನಾನು ಪ್ರಸ್ತಾಪ ಮಾಡಿದ್ದೆ.

ಸ್ವಲ್ಪ ದಿವಸಗಳಾದ ನಂತರ ದ್ವೈಮಾಸಿಕ ಪತ್ರಿಕೆ ಮಾಡಿದ್ದಾರೆ ಅಂತ ಗೊತ್ತಾಗಿ ಸಂತೋಷವಾಯ್ತು. ನಾನು ಆಗ ಕನ್ನಡ ಉಪನ್ಯಾಸಕನಾಗಿದ್ದೆ. ನನ್ನ ವಿದ್ಯಾಗುರುಗಳಾದ ಪ್ರಭುಶಂಕರವರು ಅಮೆರಿಕಕ್ಕೆ ಹೋಗಬೇಕಾಗಿತ್ತು. 1985ರಲ್ಲಿ ಪ್ರಭುಶಂಕರವರು 108 ವಚನಗಳ ಒಂದು ಪುಸ್ತಕವನ್ನು ತಂದರು. ಅವರಿಗೆ ಆಸೆಯೊಂದು ಇತ್ತು. ಈ 108 ವಚನಗಳನ್ನು ಭಾರತದ ಎಲ್ಲಾ ಭಾಷೆಗಳಲ್ಲಿಯೂ ಅನುವಾದ ಮಾಡಿಸಬೇಕು ಎಂಬ ಒಳ್ಳೆ ಕಾರ್ಯವನ್ನು ಅವರು ಎತ್ತಿಕೊಂಡರು. ಆಗ ನಾನು ಶ್ರೀಗಳವರ ಹತ್ತಿರ ಹೋಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಹೇಳಿದೆ ಬುದ್ಧಿ, ಈ ಕಾರ್ಯವನ್ನು ನೀವು ಮಾಡಿದ್ದೇಯಾದರೆ ಮಠಕ್ಕೆ ಒಳ್ಳೇ ಹೆಸರು ಬರುತ್ತದೆ. ಸ್ವಾಮೀಜಿ ಅವರು ಭೇಟಿ ಮಾಡಿ ದಾಗ ಒಂದೊಂದು ಭಾಷೆಗೆ ನಾನು ಆರ್ಥಿಕವಾಗಿ ಸಹಾಯ ಮಾಡುತ್ತೇನೆ. ಈ ಬಸವಣ್ಣನವರ ವಚನಗಳು ಎಲ್ಲರಿಗೂ ತಲುಪುವಂತಾಗಬೇಕು.

□

# ತಪಸ್ವಿ

**ರೆ. ಫಾ. ಡಿ. ನರ್ರೋನಾ**
ಮೈಸೂರು

**"ತ**ನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ, ನೆಲೆಗೊಂಡ ಬಳಿಕ, ಸೌರಾಷ್ಟ್ರ ಸೋಮೇಶ್ವರಲಿಂಗ ಬೇರಿಲ್ಲ ಕಾಣಿರೋ" ಎಂಬ ವಚನ ದೀಪ್ತಿಗೆ ಅನ್ವರ್ಥವಾಗಿ ಬಾಳಿ ಬೆಳಗಿದವರು ಸುತ್ತೂರು ಮಠಾಧೀಶರಾದ ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರು. ಜಗದ್ವಿಖ್ಯಾತ ಮಠದ ಅಧ್ಯಕ್ಷರಾಗಿ ಜಗದ್ಗುರು ಸ್ಥಾನದ ಮೇರು ಸ್ಥಾನದಲ್ಲಿದ್ದರೂ 'ಎನಗಿಂತ ಕಿರಿಯರಿಲ್ಲ, ಶಿವಶರಣರಿಗಿಂತ ಹಿರಿಯರಿಲ್ಲ' ಎಂಬ ನಮ್ರತೆಯ ಮಲ್ಲಿಗೆಯಾಗಿ ಸೇವೆಯ ಪರಿಮಳ ವನ್ನು ಸಮಾಜದ ಉದ್ದಗಲಕ್ಕೆ ಹರಡಿದವರು ಶ್ರೀಗಳು.

ಆಧ್ಯಾತ್ಮಪಥದಲ್ಲಿ ರಾಜಮಾರ್ಗವನ್ನು ತುಳಿದ ಸಂತನಾದರೂ, ಲೌಕಿಕವನ್ನು ಬಿಡಲಿಲ್ಲ. ಲೌಕಿಕದ ಆಂತರ್ಯದಲ್ಲಿ ಆಧ್ಯಾತ್ಮಿಕ ತಳಹದಿಯನ್ನು ಕಂಡುಕೊಂಡರು. ಜಗದ ಹಿತಕ್ಕಾಗಿ ತಮ್ಮನ್ನೇ ಸಮರ್ಪಿಸಿಕೊಂಡರು. ಕಾಯಕವನ್ನೇ ತಪಸ್ಸನ್ನಾಗಿಸಿ, ಅದರ ಫಲವನ್ನು ದಾಸೋಹಭಾವದಿಂದ ಸಮಾಜಕ್ಕೆ ಧಾರೆಯೆರೆದು ಸಮರ್ಪಿಸಿದರು.

ಕರ್ನಾಟಕದ ಮಠಗಳ ಇತಿಹಾಸದಲ್ಲಿ ಸುತ್ತೂರು ವೀರಸಿಂಹಾಸನ ಮಠದ ಪ್ರಾಚೀನತೆ ಹಾಗೂ ಹಿರಿಮೆಯು ಗೌರೀಶಂಕರ ಶಿಖರದಂತೆ ಎತ್ತರವಾಗಿದೆ. ಈ ಭವ್ಯ ಪರಂಪರೆಯಲ್ಲಿ ಲೋಕವನ್ನು ಬೆಳಗಿದವರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು. ಅನ್ನದಾನ-ವಿದ್ಯಾದಾನಗಳನ್ನು ತಪಸ್ಸಿನಂತೆ ಕೈಗೊಂಡಿರುವ ಸ್ವಾಮೀಜಿಯವರು ಕನ್ನಡ ನಾಡು ಕಂಡ ಪುಣ್ಯಪುರುಷರಲ್ಲಿ ಪ್ರಾತಃಸ್ಮರಣೀಯರಾಗಿದ್ದಾರೆ.

"ಜಗವೆಲ್ಲ ನಗುತಿರಲಿ ಜಗದಳುವು ಎನಗಿರಲಿ" ಎನ್ನುವ ಭಾವದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ವೈಯಕ್ತಿಕ ಸಾಧನೆಯಿಂದ ಪಡೆಯಬಹುದಾಗಿದ್ದ ಎತ್ತರ ಬಿತ್ತರಗಳನ್ನು ಯೋಚಿಸದೆ, ಸಮಾಜಮುಖಿಯಾಗಿ ಚಿಂತಿಸಿದರು. ಗ್ರಾಮೀಣ ಬಡಜನತೆಯ ಕರುಳ ಕುಡಿಗಳು ವಿದ್ಯೆಯಿಂದ ವಂಚಿತರಾಗುತ್ತಿದ್ದುದನ್ನು ಮನಗಂಡರು. 'ಎಲ್ಲ ಸಮಸ್ಯೆಗಳ ಮೂಲ ಅವಿದ್ಯೆ' ಎಂಬುದನ್ನರಿತ ಸ್ವಾಮೀಜಿಯವರು ಕೈಕಟ್ಟಿ ಕುಳಿತುಕೊಳ್ಳಲಿಲ್ಲ.

ವಿದ್ಯಾರ್ಥಿ ನಿಲಯಗಳನ್ನು, ವಿದ್ಯಾಸಂಸ್ಥೆಗಳೆಂಬ ಕಲ್ಪತರುಗಳನ್ನು ನೆಟ್ಟು ಪೋಷಿಸಿ ಬೆಳೆಸಿದರು. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಸಂಸ್ಥೆಗಳನ್ನು ಕಟ್ಟುವುದು ಪೋಷಿಸುವುದು, ದಿನನಿತ್ಯ ಅನ್ನದಾಸೋಹ, ಅಕ್ಷರದಾಸೋಹ ನಡೆಸುವುದೆಂದರೆ ನಿಜಕ್ಕೂ ಅದೊಂದು ಮಹಾಯಜ್ಞವಾಗಿತ್ತು.

ವಿದ್ಯಾಪಕ್ಷಪಾತಿಯಾದ, ಕಾಯಕಯೋಗಿ ತ್ರಿವಿಧ ದಾಸೋಹ ಯಜ್ಞಗಳ ಕರ್ತೃವಾದ, ಕರುಣಾಮೂರ್ತಿಯಾದ ಮಹಾಮಾನವತೆಯ ಸಾಕಾರರೂಪಿಯಾದ, ನಿಷ್ಕಲ್ಮಶ ಚೇತನವಾದ ಸದ್ಗುರು ಭಗವದ್‌ವಿಭೂತಿಯವರ ಗುಣಸಾಗರದ ಬಗೆಗೆ ಬಣ್ಣಿಸಲು ಹೊರಟರೆ ಅದು ಸೂರ್ಯನೆದುರಲ್ಲಿ ಹಣತೆಯಿಟ್ಟಂತಾದೀತು! ಅವರ ಮನಸ್ಸು ಸಾಗರದಂತೆ ವಿಶಾಲ, ಆಗಸದಂತೆ ಅನಂತ, ಅವರ ಗುರಿ ರವಿಯ ಬೆಳಕಿನಂತೆ ಪ್ರಕಾಶಮಯ. ಸೂರ್ಯನ ಬೆಳಕು ಮೇಲು ಕೀಳು, ಶುದ್ಧ-ಅಶುದ್ಧ, ತನ್ನವರು ಪರರು ಎನ್ನದೆ, ಬಡವ-ಬಲ್ಲಿದನೆನ್ನದೆ ಸರ್ವರ ಮೇಲೂ ಬೆಳಕು ಚೈತನ್ಯಗಳನ್ನು ಸಮಾನವಾಗಿ ಚೆಲ್ಲುತ್ತದೆ.

ಡಾ. ಕೆ. ಚಿದಾನಂದಗೌಡರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ಮಾನವೀಯ ಪ್ರೀತಿ-ವಿದ್ಯಾದಾನದ ಹಂಬಲ-ಧಾರ್ಮಿಕ ಜಾಗೃತಿಗಳ, ತ್ರಿವೇಣಿ ಸಂಗಮ ಎಂದು ಬಣ್ಣಿಸುತ್ತಾರೆ. ಒಬ್ಬ ಬಡ ವಿದ್ಯಾರ್ಥಿಯನ್ನು ಕಾಲೇಜಿಗೆ ಕಳುಹಿಸಲು ನೆರವಾಗಲು ಶ್ರೀಗಳವರು ತಮ್ಮ ಚಿನ್ನದ ಉಂಗುರವನ್ನು ಒತ್ತೆಯಿಟ್ಟು ಹಣ ಪಡೆದು, ವಿದ್ಯಾರ್ಥಿಯ ವಿದ್ಯಾಭ್ಯಾಸ ಮುಂದುವರಿಸಲು ಸಹಾಯ ಮಾಡಿದರಂತೆ. ಇದು ನಿಜಕ್ಕೂ ಮಾತೃವಾತ್ಸಲ್ಯದ ಪ್ರತೀಕವಲ್ಲವೆ!? ಜನರಿಗೆ ಸದ್ಧರ್ಮದ ಮತ್ತು ಸತ್ಕರ್ಮದ ಮಾರ್ಗದಲ್ಲಿ ದಾರಿ ತೋರಿಸುವ ಉಜ್ವಲ ದಿವ್ಯಜ್ಯೋತಿಯಾದ ಶಿವರಾತ್ರೀಶ್ವರ ಯತಿಗಳಲ್ಲಿ ಕನ್ನಡ ನಾಡಿನ ಯುಗಪುರುಷ ಸಂತರಲ್ಲಿ ಎದ್ದು ನಿಲ್ಲುವವರು.

'ಜ್ಞಾನಂ ವಿಜ್ಞಾನ ಸಹಿತಂ' ಎಂಬ ಭಗವದ್ಗೀತೆಯ ಸಂದೇಶದಂತೆ ಪರಮಪೂಜ್ಯ ಸ್ವಾಮೀಜಿಯವರು ಧರ್ಮ ಮತ್ತು ವಿಜ್ಞಾನಗಳೆರಡರ ಪವಿತ್ರ ಸಂಗಮವು ಮಾನವನ ಸರ್ವತೋಮುಖ ಉನ್ನತಿಗೆ ಅಗತ್ಯವೆಂಬುದನ್ನು ಕಾರ್ಯರೂಪಕ್ಕೆ ತಂದು ಜಗತ್ತಿಗೆ ಗುರಿ ತೋರಿಸಿದವರು ಶಿವರಾತ್ರೀಶ್ವರ ಯತಿಪುಂಗವರು.

ಸ್ವಾಮೀಜಿಯವರು ಧರ್ಮದ ನಿಜವಾದ ಅರ್ಥ ಮತ್ತು ಉದ್ದೇಶಗಳನ್ನು ಸರಿಯಾಗಿ ಅರ್ಥಮಾಡಿಕೊಂಡ ವಿರಳರಲ್ಲಿ ಪ್ರಮುಖರೆನ್ನಬೇಕು. ಜನರಲ್ಲಿ ಅಡಗಿರುವ ದೈವತ್ವದ ವಿಕಾಸಕ್ಕೆ ನೆರವಾಗಿರುವ ಮಹಾಮಹಿಮರು ಶ್ರೀಗಳವರು. ಅವರಲ್ಲಿ ದೈವತ್ವವು ಎಲ್ಲಾ ಆಯಾಮಗಳಲ್ಲೂ ವಿಕಾಸವಾಗಿತ್ತು. ಬೆಳಗುತ್ತಿರುವ ಹಣತೆಯೊಂದು ನೂರಾರು ಹಣತೆಗಳನ್ನು ಬೆಳಗಿಸುವಂತೆ ಅವರು ಜನರಲ್ಲಿರುವ ದೈವತ್ವವು ಹೆಚ್ಚಾಗಿ ಪ್ರಕಾಶಮಾನವಾಗಿ ಬೆಳಗಲು ಪ್ರೇರಕಶಕ್ತಿಯಾದರು.

"ಸುತ್ತೂರೆಂಬ ಹಣತೆಯಲ್ಲಿ
ರಾಜೇಂದ್ರರೆಂಬ ಜ್ಯೋತಿ ಉದಿಸಿ
ದೀನದಲಿತರಿಗೆ ಬೆಳಕಾಗಿ
ವಿಶ್ವದಾದ್ಯಂತ ಜ್ಯೋತಿಯನ್ನು ಹರಡಿ
ತ್ರಿವಿಧ ದಾಸೋಹಿಯಾಗಿ
ಮೈಸೂರಿನಲ್ಲಿ ಬೆಳಗುತಿಹುದು"

ಲೇಖಕರೊಬ್ಬರು ಸ್ವಾಮೀಜಿಯವರ ಬಗೆಗೆ ಬರೆದಿರುವುದು ನೆನಪಿಗೆ ಬರುತ್ತದೆ.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ಕುರಿತು ಲೇಖನವನ್ನು ಯಾವ ದೃಷ್ಟಿಕೋನದಲ್ಲಿ ಬರೆದರೆ ಉತ್ತಮ ಎಂಬುದು ಪ್ರಥಮ ಪ್ರಶ್ನೆ. ಸಾಮಾನ್ಯ ಜನರಿಗೆ ಬೇಕಾದುದು ಒಬ್ಬ ವ್ಯಕ್ತಿಯ ನುಡಿಮುತ್ತುಗಳು ಹಾಗೂ ಅವರ ಜೀವನದ ಆದರ್ಶ. ಇವುಗಳ ಹಿನ್ನೆಲೆಯಲ್ಲಿ ಇವೇ ಒಬ್ಬ ವ್ಯಕ್ತಿಯ ನೈತಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳು. ಆಂಗ್ಲ ಭಾಷೆಯಲ್ಲಿ ಒಂದು ಹೇಳಿಕೆ ಇದೆ. We leave behind footprints on the sands of time. ಪ್ರತಿಯೊಬ್ಬನು ಸಮಾಜದ ಜನತೆಯ ಮೇಲೆ ತನ್ನದೇ ಆದ ಮೌಲ್ಯಗಳ ಪ್ರಭಾವ ಬೀರುತ್ತಾನೆ. ಈ ಮೌಲ್ಯಗಳ ಶಾಶ್ವತವಾದ ಪ್ರಭಾವ ಅವರ ಮೇಲೂ ಅವರ ಅನುಕರಣೆ ಮಾಡುವ ಭಕ್ತರ ಮೇಲೂ ಅಚ್ಚಳಿಯದೆ ಉಳಿಯುತ್ತದೆ.

ಅವರು ಹೇಳಿದ ಕೆಲವು ಸೂತ್ರಗಳನ್ನು ಸನ್ಮಾನ್ಯ ವೀರಭದ್ರಪ್ಪನವರು ಬರೆದ ಸುತ್ತೂರು ಸುರಧೇನು ಎಂಬ ಕಾದಂಬರಿಯಲ್ಲಿ ಓದಿದೆ. ಈ ಸೂತ್ರಗಳು ಅವರ ಜೀವನದ ನೈಜ ಕನ್ನಡಿಯಂತಿವೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ಆ ಸೂತ್ರಗಳಲ್ಲಿ ಕೆಲವು ಹೀಗಿವೆ.

1. ನಮಗೆ ಎಲ್ಲರೂ ಒಂದೇ. ಎಲ್ಲರನ್ನೂ ಒಂದೇ ರೀತಿಯಲ್ಲಿ ಕಾಣದವರು ಸನ್ಯಾಸಿಗಳಾಗಲಾರರು. ನಮಗೆ ಎಲ್ಲರೂ ಬೇಕು. ನಾವು ಎಲ್ಲರಿಗೂ ಬೇಕು. ಇದನ್ನು ಅವರು ಅಕ್ಷರಶಃ ಪಾಲಿಸಿದರು. ದೇವರು ಒಬ್ಬರೇ ಎಂದ ಮೇಲೆ ವಿವಿಧ ತಂಡಗಳಿಗೆ ಅಥವಾ ಧರ್ಮಗಳಿಗೆ ವಿವಿಧ ದೇವರಿಲ್ಲ. ಪ್ರತಿಯೊಬ್ಬ ಸನ್ಯಾಸಿಯಾಗಲಿ, ಗುರುವಾಗಲಿ, ಅದೇ ದೇವರನ್ನು ಪೂಜಿಸುತ್ತಾನೆ. ಅವರ ಸೇವೆ ಮಾಡುತ್ತಾನೆ. ಹೀಗಿರಲು ಒಬ್ಬ ಸನ್ಯಾಸಿಗೆ ವಿಶಾಲ ಮನೋಭಾವ ಇರಲೇಬೇಕು. ಅವನು ಪ್ರತಿಯೊಂದು ಧರ್ಮದ ಭಕ್ತಾದಿಗಳಿಗೆ ಪ್ರೀತಿ ಮತ್ತು ಗೌರವವನ್ನು ತೋರಿಸಬೇಕು.

ಶ್ರೀ ರಾಜೇಂದ್ರ ಮಹಾಸ್ವಾಮಿಯವರಿಗೆ ಈ ವಿಶಾಲ ಮನೋಭಾವ ಇತ್ತು. ಅವರು ವಿಶ್ವದ ಸರ್ವಧರ್ಮಗಳ ಮೈಸೂರು ಶಾಖೆಯ ಅಧ್ಯಕ್ಷರಾಗಿದ್ದರು. ಕೆಲವು ಸಾರಿ ಮೀಟಿಂಗ್ ನಡೆಸುತ್ತಿರುವಾಗ ಮೈಸೂರು ಧರ್ಮಕ್ಷೇತ್ರದ ಬಿಷಪ್ ಅವರನ್ನು ಹಾಗೂ ನನ್ನನ್ನು ಕರೆಯುತ್ತಿದ್ದರು. ಈ ಕರೆಯೋಲೆ ಅವರ ವಿಶಾಲ ಮನೋಭಾವದ ಸಂಕೇತ ಎಂದು ಹೇಳಬಹುದು.

2. ನಮ್ಮ ರಾಷ್ಟ್ರದ ಜೀವ ಧರ್ಮ. ಧರ್ಮ ಉಳಿದರೆ ನಮ್ಮ ದೇಶ ಬದುಕುತ್ತದೆ. ಧರ್ಮ ಯಾವುದೇ ಆಗಲಿ ಪ್ರತಿಯೊಂದು ಧರ್ಮದಲ್ಲಿ ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳಿವೆ. ಈ ಮೌಲ್ಯಗಳನ್ನು ಪವಿತ್ರ ಗ್ರಂಥಗಳಿಂದ ಶೇಖರಿಸಿಟ್ಟಿರಬಹುದು. ಶ್ರುತಿ ಸ್ಮೃತಿಯ ಪಾತ್ರ ಅದರಲ್ಲಿರಬಹುದು. ಋಷಿಗಳ, ಸಂತರ, ಗಣ್ಯರ ಜೀವನದ ಅನುಭವದ ಪರಿಣಾಮ ಅದರಲ್ಲಿರಬಹುದು. ಇದು ಮನುಕುಲದ ಆಸ್ತಿ. ಭಕ್ತಾದಿಗಳಿಗೆ ದಾರಿದೀಪ. ಸಮಾಜದಲ್ಲಿ ದೇವರ ಭಕ್ತಿಯನ್ನು ಸ್ಥಾಪಿಸಲು, ಹಾಗೂ ನೈತಿಕ ಪರಂಪರೆಯ ಹವಾಮಾನ ಹರಡಲು ಧರ್ಮಗಳ ಅವಶ್ಯಕತೆ ಇದೆ. ಇಂತಹ ಅಮೂಲ್ಯ ಹಾಗೂ ಶ್ರೇಷ್ಠ ಸೇವೆಯನ್ನು ಧರ್ಮಗಳು ಮಾಡುತ್ತವೆ. ಆದ್ದರಿಂದ ಪ್ರತಿಯೊಂದು ಧರ್ಮಕ್ಕೆ ಗೌರವವನ್ನು ಕೊಡುವುದು ನಮ್ಮ ಆದ್ಯ ಕರ್ತವ್ಯ.

3. ರಾಜಕೀಯದವರನ್ನು ದೂರೀಕರಿಸಬಾರದು. ಅವರನ್ನು ಬಳಿಗೆ ಕರೆದು ಅವರ ಮೇಲೆ ಧಾರ್ಮಿಕ ಪ್ರಭಾವವನ್ನು ಬೀರಬೇಕು. ರಾಜಕೀಯಕ್ಕೆ ಆಧ್ಯಾತ್ಮಿಕ ಸಂಸ್ಕಾರವನ್ನೇ ಕೊಡಬೇಕು. ಧರ್ಮದಲ್ಲಿ ರಾಜಕೀಯ ಇರಬಾರದು. ಆದರೆ ರಾಜಕೀಯಕ್ಕೆ ಧರ್ಮ ಬೇಕು.

ಇಂದಿನ ಪರಿಸ್ಥಿತಿಗೆ ಈ ಸೂತ್ರ ಬಹಳ ಮುಖ್ಯವಾದುದು. ಜನರ ಸೇವೆ ಜನಾರ್ಧನನ ಸೇವೆ. ಈ ಸೇವೆ ಬರೇ ಹಣ ಅಥವಾ ಅಧಿಕಾರ ಸಂಪಾದಿಸುವ ಸೇವೆಯಾಗಬಾರದು.

ಯೇಸುವಿನ ಜೀವನದ ಒಂದು ಘಟನೆ ಇಲ್ಲಿ ಸಮರ್ಪಕ ಎಂದು ನನಗೆ ಕಾಣುತ್ತದೆ. ಒಂದು ದಿನ ಜೆಬೆದಾಯನ ಮಕ್ಕಳ ತಾಯಿ, ತನ್ನ ಪುತ್ರರ ಸಮೇತ ಯೇಸುವಿನ ಬಳಿಗೆ ಬಂದಳು. ತಮ್ಮಿಂದ ನನಗೊಂದು ಉಪಕಾರ ಆಗಬೇಕೆಂದು ಯೇಸು ಸ್ವಾಮಿಯ ಪಾದಕ್ಕೆ ಬಿದ್ದಳು. ನಿನ್ನ ಕೋರಿಕೆ ಏನೆಂದು ಕೇಳಲು, ತಮ್ಮ ಸಾಮ್ರಾಜ್ಯದಲ್ಲಿ ನನ್ನ ಇಬ್ಬರು ಮಕ್ಕಳಲ್ಲಿ ಒಬ್ಬನು ತಮ್ಮ ಬಲಗಡೆಯಲ್ಲೂ ಇನ್ನೊಬ್ಬನು ತಮ್ಮ ಎಡಗಡೆಯಲ್ಲೂ ಆಸೀನರಾಗುವಂತೆ ಅಪ್ಪಣೆ ಆಗಬೇಕು ಎಂದು ಕೋರಿದಳು. ಅದಕ್ಕೆ ಪ್ರತ್ಯುತ್ತರವಾಗಿ ಅದು ಯಾರಿಗಾಗಿ ನನ್ನ ಪಿತನಿಂದ ಸಿದ್ಧ ಮಾಡಲಾಗಿದೆಯೋ ಅವರಿಗೆ ಸಿಗುವುದು. ಇದನ್ನು ಕೇಳಿ ಉಳಿದ ಹತ್ತು ಮಂದಿ ಶಿಷ್ಯರು ಆ ಇಬ್ಬರ ಮೇಲೆ ಸಿಟ್ಟುಗೊಂಡರು. ಯೇಸುವಾದರೋ ಶಿಷ್ಯರೆಲ್ಲರನ್ನು ತಮ್ಮ ಬಳಿಗೆ ಕರೆದು ಲೋಕದ ಪ್ರಜಾಧಿಪತಿಗಳು ತಮ್ಮ ಪ್ರಜೆಗಳ ಮೇಲೆ ದರ್ಪದಿಂದ ದೊರೆತನ ಮಾಡುತ್ತಾರೆ. ಜನನಾಯಕರು ಎನ್ನಿಸಿಕೊಳ್ಳುವವರು ಜನರ ಮೇಲೆ ಅಧಿಕಾರ ಪ್ರದರ್ಶನ ಮಾಡುತ್ತಾರೆ. ನೀವು ಹಾಗಿರಬಾರದು. ನಿಮ್ಮಲ್ಲಿ ಶ್ರೇಷ್ಠನಾಗಿರಲು ಇಚ್ಛಿಸುವವನು ನಿಮಗೆ ಸೇವಕನಾಗಿರಲಿ. ಪ್ರಥಮನಾಗಿರಲು ಆಶಿಸುವವನು ನಿಮ್ಮ ದಾಸನಾಗಿರಲಿ.

ರಾಜಕಾರಣಿಗಳಿಗೆ ಇದೊಂದು ಒಳ್ಳೆಯ ಸಂದೇಶ. ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಸೂತ್ರಗಳನ್ನು ಹೇಳಿದ್ದು ಮಾತ್ರವಲ್ಲ, ಮಾಡಿ ತೋರಿಸುತ್ತಾ ಇದ್ದರು. ಒಂದು

ಕಾರ್ಯಕ್ರಮ ಏರ್ಪಡಿಸುವಾಗ ರಾಜಕಾರಣಿಗಳಿಗೆ ಸಂದೇಶ ಮತ್ತು ಕರೆಯೋಲೆ. ಅವರು ಧಾರ್ಮಿಕ ಸಂಸ್ಥೆಯ ಹತ್ತಿರ ಬರುವಾಗ, ಧಾರ್ಮಿಕ ಮೌಲ್ಯಗಳು ಸ್ವಲ್ಪಮಟ್ಟಿಗಾದರೂ ಅವರಿಗೆ ಅಂಟಿಕೊಳ್ಳುತ್ತವೆ. ಅವರ ಉತ್ತಮ ಆದರ್ಶವನ್ನು ಸುತ್ತೂರು ಮಠ ಈಗಲೂ ಮುಂದುವರಿಸುತ್ತಿದೆ. ಸುತ್ತೂರಿನಲ್ಲಿ ನಾಲ್ಕೈದು ದಿವಸಗಳ ಕಾರ್ಯಕ್ರಮ ಇದ್ದರೆ ಸಾಕು ಈಗಿನ ಪರಮಪೂಜ್ಯ ಶ್ರೀ ದೇಶಿಕೇಂದ್ರ ಮಹಾಸ್ವಾಮೀಜಿಯವರು ದೆಹಲಿಯಿಂದ ಹಿಡಿದು ಕನ್ಯಾಕುಮಾರಿಯವರೆಗೆ ಇದ್ದ ಮುಖ್ಯ ರಾಜಕಾರಣಿಗಳನ್ನು ವಿವಿಧ ಧರ್ಮಗಳ ಗುರುಗಳನ್ನು ಕರೆಯುತ್ತಾರೆ. ಧಾರ್ಮಿಕ ಸಮ್ಮೇಳನ ರಾಜಕಾರಣಿಗಳ ನೈತಿಕ ಶಿಕ್ಷಣದ ಸಮ್ಮೇಳನವಾಗಿ ಮಾರ್ಪಡುತ್ತದೆ. ಇದು ನಿಜವಾಗಿಯೂ ಶ್ಲಾಘನೀಯ. ಇಂತಹ ದೂರದೃಷ್ಟಿಯ ಕೃತ್ಯಕ್ಕೆ ನಾವು ಅಭಿನಂದನೆ ಸಲ್ಲಿಸಲೇಬೇಕು.

29.8.1916ರಲ್ಲಿ ಲೋಕದ ಕತ್ತಲೆಯನ್ನು ಹೋಗಲಾಡಿಸಿ ಜ್ಞಾನ ಬೆಳಕನ್ನು ಹರಡಿ ಕಲ್ಪವೃಕ್ಷಗಳಂತೆ ಜಗತ್ತಿಗೆ ಕೈಯಾರೆ ನೀಡಿದ ಸದ್ಗುರು, ಬಡವರ ಬಂಧು, ಸರ್ವಧರ್ಮಗಳ ಸಾರಸರ್ವಸ್ವವನ್ನು ಮೈಗೂಡಿಸಿಕೊಂಡ ಶ್ರೀ ಶಿವರಾತ್ರಿ ರಾಜೇಂದ್ರ ಯತಿವರ್ಯರಿಗೆ ನಮನಗಳು.



## ರಾಜೇಂದ್ರ ಶ್ರೀವಾಣಿ

- ಸಮಾಜಕ್ಕೆ ಒಳಿತನ್ನು ಮಾಡಿಯೂ, ಏನೂ ಮಾಡದಂತಿರುವ ಶ್ರೇಷ್ಠ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು.
- ವ್ಯಕ್ತಿಗಿಂತ ಸಮಷ್ಟಿ ದೊಡ್ಡದು.
- ಇನ್ನೊಬ್ಬರಿಗೆ ಆದರ್ಶವನ್ನು ಹೇಳುವವನು ತಾನು ಮೊದಲು ಉನ್ನತ ಧ್ಯೇಯಗಳಿಂದ, ವಿನಯಸಂಪತ್ತಿನಿಂದ ಆದರ್ಶನೀಯನಾಗಿರಬೇಕು.
- ಜನರ ಸೇವೆ ಮಾಡುವ ಅವಕಾಶ ನಮಗೆ ಲಭಿಸಿದಾಗ ಅದು ನಮಗೆ ದೇವರು ಕೊಟ್ಟ ವರ ಎಂದು ಭಾವಿಸಬೇಕು.
- ಸ್ವಾಮಿಗಳಾದವರು ಎಲ್ಲರನ್ನೂ ಪ್ರೀತಿಸಬೇಕು, ಅದು ಅವರ ಕರ್ತವ್ಯ.
- ಸರ್ವರನ್ನು ಸಮಭಾವದಿಂದ ಕಾಣದವರು ಸನ್ಯಾಸಿಗಳಾಗಲಾರರು; ಸನ್ಯಾಸಿಗಳಿಗೆ ಯಾವ ಜಾತಿಬಂಧನವೂ ಇರುವುದಿಲ್ಲ.

# ಸಮಾಜಸುಧಾರಕರು

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

**ಡಾ.** ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳನ್ನು ನೆನಪುಮಾಡಿಕೊಂಡು ಅವರು ನಮ್ಮ ಸಮಾಜಕ್ಕೆ ನೀಡಿರುವಂಥ ಕೊಡುಗೆಯನ್ನು ಅರಿತುಕೊಳ್ಳತಕ್ಕಂಥ ಕೆಲಸ ಆಗಬೇಕಾಗಿದೆ.

ನಾವೆಲ್ಲರೂ ಕೂಡ ಇಲ್ಲಿ ಸೇರಿರತಕ್ಕಂಥದ್ದು, ರಾಜೇಂದ್ರಸ್ವಾಮಿಗಳನ್ನು ನೆನಪು ಮಾಡಿಕೊಂಡು ಅವರ ಬದುಕು, ಅವರು ಸಮಾಜಕ್ಕೆ ಕೊಟ್ಟಂತಹ ನಿಜವಾದ ಸೇವೆ, ಇವು ನಮ್ಮೆಲ್ಲರಿಗೂ ಕೂಡ ಸ್ಫೂರ್ತಿಯನ್ನು ತಂದುಕೊಡುತ್ತವೆ. ನಾವು ಇನ್ನಷ್ಟು ಜನಪರವಾದಂಥ ಆಲೋಚನೆಗಳನ್ನು ರೂಢಿಸಿಕೊಂಡು ಸಮಾಜ ಸೇವೆಯನ್ನು ಮಾಡುವುದಕ್ಕೆ ಶಪಥವನ್ನು ಮಾಡಬೇಕು ಎಂಬ ಮನಸ್ಸು ಬರುತ್ತದೆ. ಅವರು ಬದುಕಿನಲ್ಲಿ ಬಿಟ್ಟುಹೋಗಿರತಕ್ಕಂಥ ಆದರ್ಶಗಳನ್ನು ನಾವೆಲ್ಲ ಮೈಗೂಡಿಸಿಕೊಂಡು ಮಾನವನಾಗಿ ಬದುಕಲಿಕ್ಕೆ ಪ್ರಯತ್ನ ಮಾಡತಕ್ಕಂಥದ್ದೆ ಅವರಿಗೆ ಸಲ್ಲಿಸತಕ್ಕಂಥ ದೊಡ್ಡ ಗೌರವ ಎಂದು ಭಾವಿಸುತ್ತೇನೆ.

ನಾನು ಶಾಸಕನಾದ ಮೇಲೆ 1983ರಲ್ಲಿ ಪೂಜ್ಯ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರನ್ನು ಕೆಲವು ಸಮಾರಂಭಗಳಲ್ಲಿ ಭಾಗಿಯಾಗಿ ಅವರ ಆಶೀರ್ವಚನವನ್ನು ಪಡೆಯುವಂಥ ಅವಕಾಶ ಸಿಕ್ಕಿತ್ತು. ಯಾರೇ ಆದರೂ ಸಹ ರಾಜೇಂದ್ರ ಸ್ವಾಮಿಗಳ ಸಂಪರ್ಕಕ್ಕೆ ಹೋದಾಗ ಅವರು ಸ್ವಾಭಾವಿಕವಾಗಿ ಅವರಿಂದ ಪ್ರಭಾವಿತರಾಗುತ್ತಿದ್ದರು. ಕಾರಣ ಅವರಲ್ಲಿದ್ದಂಥ ಮಾನವೀಯ ಗುಣಗಳು ಪ್ರತಿಯೊಬ್ಬರನ್ನೂ ಪ್ರಭಾವಿತರನ್ನಾಗಿ ಮಾಡುವಂಥ ಒಂದು ದಿವ್ಯಶಕ್ತಿ ಅವರಲ್ಲಿತ್ತು. ಅವರ ಬಗ್ಗೆ ನನಗೆ ಅಪಾರವಾದ ಗೌರವ. ನಾನು ಯಾವುದೇ ಸಂದರ್ಭದಲ್ಲಿ ಭೇಟಿ ಮಾಡಿದರೂ ಕೂಡ ಬಹಳ ಪ್ರೀತಿಯಿಂದ, ಆದರದಿಂದ ಕಾಣುತ್ತಿದ್ದರು. ಆಶೀರ್ವಾದ ಮಾಡುತ್ತಿದ್ದರು. ಜನರ ಸೇವೆಯನ್ನು ನಿಸ್ವಾರ್ಥದಿಂದ ಮಾಡಬೇಕು ಎಂದು ಹೇಳುತ್ತಿದ್ದರು. ಹಾಗಾಗಿ ಯಾವಾಗಲೂ ಕೂಡ ನನಗೆ ನಿರಂತರವಾಗಿ ಸ್ಫೂರ್ತಿಯನ್ನು ಕೊಡತಕ್ಕಂಥ ಶಕ್ತಿಯಾಗಿದ್ದರು. ಅವರು ಸುಮಾರು ವರ್ಷಗಳ ಹಿಂದೆ ಆಗ ಇನ್ನೂ ಜನರಿಗೆ ವಿದ್ಯೆ ಸಿಗದಿದ್ದ ಕಾಲದಲ್ಲಿ ಸಮಾಜಕ್ಕೆ ಜ್ಞಾನವನ್ನು ಕೊಡಬೇಕು, ಪ್ರತಿಯೊಬ್ಬ ವ್ಯಕ್ತಿಯನ್ನೂ ವಿದ್ಯಾವಂತನನ್ನಾಗಿ ಮಾಡಬೇಕು ಎಂಬ ಗುರಿಯನ್ನು ಇಟ್ಟುಕೊಂಡು, ಈ ಒಂದು ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನು ಮಾಡಿದರು. ಇವತ್ತು

ಪ್ರತಿಯೊಬ್ಬರೂ ವಿದ್ಯಾವಂತರಾಗಬೇಕು. ಅವರಲ್ಲಿ ಜ್ಞಾನವಿಕಾಸವಾಗಬೇಕು. ಇಷ್ಟಾದ ಮೇಲೂ ಮನುಷ್ಯ ಮನುಷ್ಯನಾಗಿ ಬಾಳಬೇಕಾದರೆ ಬಹಳ ಕಷ್ಟದ ಕೆಲಸ. ಆದರೆ ವಿದ್ಯಾವಂತನಾದ ಮೇಲೆ ನಾವೆಲ್ಲರೂ ಸಮಾಜದಲ್ಲಿ ಪರಸ್ಪರ ಪ್ರೀತಿ ವಿಶ್ವಾಸದಿಂದ ಗೌರವದಿಂದ ಬಾಳಬೇಕಾದ ಕೆಲಸ ಮಾಡಬೇಕಾಗುತ್ತದೆ. ಒಂದು ಕಡೆ ಜಗತ್ತಿನಲ್ಲಿ ಅಭಿವೃದ್ಧಿಯನ್ನು ಕಾಣುತ್ತೇವೆ. ಆದರೆ ಎಲ್ಲೋ ಒಂದು ಕಡೆ ದ್ವೇಷಾಸೂಯೆಗಳಿಂದ, ಸ್ವಾರ್ಥಗಳಿಂದ, ವಿಧ್ವಂಸಕ ಕೃತ್ಯಗಳನ್ನು ಮಾಡುತ್ತಿರುವುದನ್ನೂ ಕಾಣುತ್ತೇವೆ. ಇದು ವಿದ್ಯೆಗೆ ವಿರುದ್ಧವಾದ ಬೆಳವಣಿಗೆ ಅನ್ನೋದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಒಂದು ದೇಶ, ಒಂದು ಸಮಾಜ ನೂರಕ್ಕೆ ನೂರರಷ್ಟು ಸಾಕ್ಷರರಾಗಿದ್ದಾರೆ ಎಂದರೆ ಅವರೆಲ್ಲಾ ಕೂಡ ಮನುಷ್ಯರಾಗಿದ್ದಾರೆ ಎಂದು ಭಾವಿಸಬಹುದು. ಸಾಕ್ಷರರಿದ್ದೂ ಕೂಡ ಮಾನವರಾಗಿ ನಡೆದುಕೊಳ್ಳದೇ, ಮೃಗಗಳಂತೆ ನಡೆದುಕೊಂಡರೆ ಅವರಿಗೆ ವಿದ್ಯೆನೂ ಇಲ್ಲ, ವಿಕಾಸವೂ ಇಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಮನುಷ್ಯ ಆಕಸ್ಮಿಕವಾಗಿ ಹುಟ್ಟೋದು. ಆದರೆ ಸಾಯುವುದಂತೂ ಗ್ಯಾರಂಟಿ. ಅದಕ್ಕೆ ಯಾರ ಅಭ್ಯಂತರನೂ ಇಲ್ಲ. ಕೆಲವರು 100 ವರ್ಷ ಬದುಕಬಹುದು, ಕೆಲವರು 50 ವರ್ಷ. ಕರ್ನಾಟಕದಲ್ಲಿ ಈಗ ಮನುಷ್ಯನ ಆಯಸ್ಸು ಸರಾಸರಿ 60 ವರ್ಷ ಆಗಿದೆ. ಈ 60 ವರ್ಷಗಳಲ್ಲಿ ನಾವು ಸಮಾಜಕ್ಕೆ ಏನು ಮಾಡಿದ್ದೀವಿ ಎಂಬುದು ಬಹು ಮುಖ್ಯ. ನಾವು ಎಷ್ಟು ವರ್ಷ ಬದುಕಿದೆ ಎಂಬುದು ಮುಖ್ಯವಲ್ಲ. ನಾವು ಬದುಕಿದ್ದಷ್ಟು ವರ್ಷಗಳಲ್ಲಿ ನಾವು ನಮ್ಮ ಬದುಕನ್ನು ಸಾರ್ಥಕ ಮಾಡಿಕೊಂಡಿದ್ದೇವೋ ಇಲ್ಲವೋ ಎಂಬುದು ಬಹಳ ಮುಖ್ಯವಾದ ವಿಚಾರ. ಅಂಥ ಸಾರ್ಥಕ ಬದುಕನ್ನು ಕಂಡವರು ಸ್ವಾಮೀಜಿಗಳು. ಮನೆಯಲ್ಲಿ ಊಟ ಮಾಡಲಿಕ್ಕೂ ಸಾಧ್ಯವಿಲ್ಲದಂತಹ ಮಕ್ಕಳಿಗೆ ಇವತ್ತು ವಿದ್ಯೆಯನ್ನು ಕೊಟ್ಟು, ಅವರ ಬದುಕನ್ನು ರೂಪಿಸಿಕೊಟ್ಟು, ಮಹಾ ಶ್ರೇಷ್ಠ ಕೆಲಸವನ್ನು ಸ್ವಾಮೀಜಿಯವರು ಮಾಡಿದ್ದಾರೆ. ಅದಕ್ಕೆ ನಾವೆಲ್ಲರೂ ರಾಜೇಂದ್ರ ಶ್ರೀಗಳಿಗೆ ಕೃತಜ್ಞತೆ ಸಲ್ಲಿಸಬೇಕಾದುದು ನಮ್ಮ ಕರ್ತವ್ಯ ಎಂದು ಭಾವಿಸುತ್ತೇನೆ. ಆ ಪರಂಪರೆಯಲ್ಲಿಯೇ ಈಗಿನ ಪೂಜ್ಯ ಸ್ವಾಮೀಜಿಗಳು ಅದನ್ನು ಮುಂದುವರೆಸಿಕೊಂಡು, ಇನ್ನೂ ವಿಸ್ತಾರ ಮಾಡುವಂತಹ ಕೆಲಸ ಮಾಡುತ್ತಿದ್ದಾರೆ. ಬರೀ ಕರ್ನಾಟಕ ಅಷ್ಟೇ ಅಲ್ಲ, ತಮಿಳುನಾಡು, ದೆಹಲಿ ಅಲ್ಲದೆ ಭಾರತದ ಉದ್ದಗಲಕ್ಕೂ ವಿಸ್ತರಿಸುತ್ತ ಬಂದಿದ್ದಾರೆ. ಅವರ ವಿದ್ಯಾಕ್ಷೇತ್ರ ಮತ್ತು ಆಧ್ಯಾತ್ಮಿಕ ಕ್ಷೇತ್ರ ವಿಸ್ತಾರ ಆಗ್ತಾನೇ ಇದೆ. ಅದು ಇಂದಿನ ಸ್ವಾಮೀಜಿಯವರ ನೇತೃತ್ವದಲ್ಲಿ ಯಶಸ್ಸನ್ನು ಕಾಣಲಿ ಎಂದು ಆಶಿಸುತ್ತೇನೆ. ಅದು ಆಗುತ್ತೆ ಅನ್ನೋ ವಿಶ್ವಾಸ ಕೂಡ ನನಗೆ ಇದೆ.

ಪೂಜ್ಯ ರಾಜೇಂದ್ರ ಶ್ರೀಗಳ ಆಶಯದಂತೆಯೇ ನಮ್ಮ ಸರ್ಕಾರ ಆಯುರ್ವೇದಕ್ಕೆ, ಕೃಷಿ ಕ್ಷೇತ್ರಕ್ಕೆ ಖರ್ಚು ಮಾಡಿರುವ ವೆಚ್ಚ 2 ಪಟ್ಟು ಹೆಚ್ಚಾಗಿದೆ. 440 ಕೋಟಿಯಿಂದ 800 ಕೋಟಿವರೆಗೂ ಹೆಚ್ಚು ಮಾಡಿದ್ದೇವೆ. ಹಾಗೇನೆ ಶಿಕ್ಷಣ ಕ್ಷೇತ್ರಕ್ಕೂ ಕೂಡ ಶೇ. 60 ಪಟ್ಟು ಹೆಚ್ಚು ಮಾಡಿದ್ದೇವೆ. ಉದ್ದೇಶವೇನೆಂದರೆ ಸಮಾಜದ ಅತ್ಯಂತ ಕಟ್ಟಕಡೆಯ ಮನುಷ್ಯನೂ

ಕೂಡ ವಿದ್ಯೆಯಿಂದ ವಂಚಿತರಾಗಬಾರದು ಅನ್ನೋ ಕಾರಣಕ್ಕೋಸ್ಕರ. ಸಾರ್ವಜನಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಸರ್ಕಾರ ಕೆಲಸ ಮಾಡ್ತಾ ಇದೆ. ಇವತ್ತು ಏನು ಕಾರ್ಯಕ್ರಮ ಪ್ರಾರಂಭ ಮಾಡಿದ್ದೇವೆಯೋ ಅದನ್ನು ಜನ ಮೆಚ್ಚಿಕೊಂಡಿದ್ದಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅದು ಫಲ ಸಿಕ್ಕಿದ ಮೇಲೆ ನಿಮ್ಮ ಆಶೀರ್ವಾದ ಇನ್ನೂ ಹೆಚ್ಚು ಇಮ್ಮಡಿಯಾಗುತ್ತದೆ. ಗ್ರಾಮೀಣ ಜನರಲ್ಲಿ ಚೈತನ್ಯವನ್ನು ತುಂಬತಕ್ಕಂಥ ಕೆಲಸ ಅವರು ಮಾಡುತ್ತಿದ್ದಾರೆ. ಹೀಗೆ ಸರ್ಕಾರದ ಸೌಲಭ್ಯಗಳಿಲ್ಲದೇನೆ, ಜನರ ಪ್ರೀತಿವಿಶ್ವಾಸಗಳಿಂದ ಬರುವ ದೇಣಿಗೆಯಿಂದ ಮಠಗಳು ಇವತ್ತು ಉತ್ತಮವಾದ ಕೆಲಸಗಳನ್ನು ಮಾಡ್ತಾ ಇವೆ. ಇದರ ಜೊತೆಗೆ ಜನರಲ್ಲಿ ಒಂದು ಆದರ್ಶ ಬದುಕನ್ನು ರೂಪಿಸುವಂಥ ಕೆಲಸ ಮಾಡ್ತಾ ಇವೆ. ಬರೀ ವಿದ್ಯಾವಂತರಾದರೆ ಸಾಲದು, ನಮಗೆ ಮನುಷ್ಯತ್ವ ಇದೆಯೇ ಎಂದು ಕೇಳಿಸುವಂತಹ ಕೆಲಸ ಮಾಡ್ತಾ ಇವೆ. ಸರ್ಕಾರ ಒಂದೇ ಈ ಕೆಲಸ ಮಾಡಲು ಸಾಧ್ಯವಾಗ್ತಾ ಇರ್ಲಿಲ್ಲ. ಇವತ್ತು ನಾವೇನು ಸಾಕ್ಷರತೆ 67ರಷ್ಟಾಗಿದೆ ಎಂದು ಉತ್ತರ ಕೊಡುತ್ತಿದ್ದೇವೆ, ಅಸೆಂಬ್ಲಿ ಮತ್ತು ಜನರ ಮುಂದೆ ಹೇಳ್ತಾ ಇದ್ದೇವೆ ಅದು ಆಗ್ತಾ ಇರಲಿಲ್ಲ. ಬರೀ 30 % ಅಥವಾ 40% ರಷ್ಟು ಮಾತ್ರ ಇರ್ತಾ ಇದ್ದೆವು. ಶ್ರೀಮಠಗಳು ಇವತ್ತು ಸ್ವಯಂಪ್ರೇರಣೆಯಿಂದ ಮಾನವನ ಉದ್ಧಾರದ ದೃಷ್ಟಿಯಿಂದ, ಈ ಕೆಲಸಗಳನ್ನು ಅವರು ಮಾಡುತ್ತಿರುವುದರಿಂದ ಸರ್ಕಾರದ ಜವಾಬ್ದಾರಿಗಳನ್ನು ಅವರು ಸ್ವಲ್ಪ ಕಡಿಮೆ ಮಾಡ್ತಾ ಇದ್ದಾರೆ.

ಬಹಳ ದೊಡ್ಡ ವ್ಯಕ್ತಿತ್ವ ಇದ್ದಂತಹ ಪೂಜ್ಯರು ಅವರು. ಇವತ್ತೇನು ಸುತ್ತೂರು ಮಹಾಸಂಸ್ಥಾನ ಶಿಕ್ಷಣ ಕ್ಷೇತ್ರದಲ್ಲಿ, ಆರೋಗ್ಯ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ, ಧಾರ್ಮಿಕ ಕ್ಷೇತ್ರದಲ್ಲಿ ಬೆಳವಣಿಗೆ ಕಂಡಿದೆ ಅದಕ್ಕೆಲ್ಲ ರಾಜೇಂದ್ರ ಶ್ರೀಗಳು ಹಾಕಿದಂತಹ ಅಡಿಪಾಯ ಬಹಳ ಮುಖ್ಯ ಅಂತ ನಾನು ಅನ್ಕೊಂಡಿದ್ದೇನೆ. ಅವರ ದೂರದರ್ಶಿತ್ವ ಮತ್ತೆ ಸಮಾಜದ ಬಗ್ಗೆ ಇದ್ದಂಥ ಕಳಕಳಿ ಮತ್ತು ಬದ್ಧತೆ, ಅವರ ನಂಬಿಕೆ, ಸಮಾಜ ಸರ್ವತೋಮುಖವಾಗಿ ಅಭಿವೃದ್ಧಿಯಾಗಬೇಕಾದರೆ ಬರೀ ಧರ್ಮಬೋಧನೆಯಿಂದ ಮಾತ್ರ ಸಾಧ್ಯ ಆಗಲ್ಲ ಅನ್ನುವುದನ್ನು ಅರಿತಿದ್ದರು ಅವರು. ಅವರಿಗೆ ಜ್ಞಾನವನ್ನೂ ಕೂಡ ಕೊಡಬೇಕಾಗ್ತದೆ. ನಮ್ಮ ಸಮಾಜದಲ್ಲಿ ಬಹುಸಂಖ್ಯಾತ ಜನ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದಾರೆ. ಆ ವಂಚಿತರಾಗಿರತಕ್ಕಂಥ ವರ್ಗಕ್ಕೆ ನ್ಯಾಯ ಸಿಗಬೇಕಾದರೆ ಅವರಿಗೂ ಕೂಡ ಜ್ಞಾನವನ್ನು ಒದಗಿಸಬೇಕಾಗುತ್ತದೆ, ಅವರನ್ನೂ ಕೂಡ ವಿದ್ಯಾವಂತರನ್ನಾಗಿ ಮಾಡಬೇಕಾಗುತ್ತದೆ. ಬರೀ ವಿದ್ಯಾವಂತರನ್ನಾಗಿ ಮಾಡಿದರೇ ಸಾಲದು. ಅವರಿಗೂ ಗುಣಮಟ್ಟದ ಶಿಕ್ಷಣ ಸಿಗ್ಬೇಕು. ಆ ಗುಣಮಟ್ಟದ ಶಿಕ್ಷಣ ಸಿಕ್ಕಿದಾಗ ಮಾತ್ರ ಅವರೂ ಕೂಡ ಸಮಾಜದಲ್ಲಿ ಮುಖ್ಯವಾಹಿನಿಗೆ ಬರಲಿಕ್ಕೆ ಸಾಧ್ಯ ಆಗ್ತದೆ. ಇಲ್ದೆ ಹೋದ್ರೆ ಸಮಾಜದಲ್ಲಿರತಕ್ಕಂಥ ಸಾಮಾಜಿಕ, ಆರ್ಥಿಕ ಅಂತರ ಹಾಗೆಯೇ ಉಳಿದುಕೊಂಡು ಹೋಗ್ತದೆ ಅನ್ನತಕ್ಕಂಥ ವಿಷಯವನ್ನು ತಿಳ್ಕೊಂಡು ಈ ವಿದ್ಯಾಸಂಸ್ಥೆಗೆ ಅವರು ಅಡಿಗಲ್ಲು

ಹಾಕಿದರು. ನಾವೆಲ್ಲ ಚಾರಿತ್ರಿಕವಾಗಿ ನೋಡ್ದಾಗ ಸಮಾಜದ ಬಹುತೇಕ ಜನ ಶಿಕ್ಷಣದಿಂದ ವಂಚಿತರಾಗಿದ್ದಂಥದ್ದು. ಎಲ್ರೂ ಶಿಕ್ಷಣ ಕಲಿಯತಕ್ಕಂಥ ಅವಕಾಶಗಳು ಇರ್ಲಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಸಂವಿಧಾನದಲ್ಲಿ ಎಲ್ಲರಿಗೂ ಕೂಡ ಶಿಕ್ಷಣ ಅಂತ ಹೇಳಿದ ಮೇಲೆ, ಕಡ್ಡಾಯ ಶಿಕ್ಷಣ ಅಂತ ಹೇಳಿದ ಮೇಲೆ ಶಿಕ್ಷಣವನ್ನು ಕಲಿಯತಕ್ಕಂಥ ಅವಕಾಶಗಳು ಹೆಚ್ಚು ಹೆಚ್ಚು ಆಯ್ತು. ಬಹುಶಃ ಈ ಸಂವಿಧಾನದ ಆಶಯವನ್ನು ಪೂರೈಸುವಲ್ಲಿ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಬಹಳಷ್ಟು ಶ್ರಮಿಸಿದರು ಎಂದು ಹೇಳಲಿಕ್ಕೆ ಬಯಸ್ತಾ ಇದ್ದೇನೆ. ಸರ್ಕಾರ ಮಾಡಬೇಕಾದಂಥ ಅನೇಕ ಕೆಲಸಗಳನ್ನು ಇವತ್ತು ಸುತ್ತೂರು ಶ್ರೀಮಠ ಮಾಡ್ತಾ ಇದೆ ಎಂದರೆ ಅತಿಶಯೋಕ್ತಿಯಾಗಲಾರದು. ಸುಮಾರು 60 ಸಾವಿರ ಜನ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ವಿದ್ಯೆ ಕಲಿಯುತ್ತಿದ್ದಾರೆ ಎಂದರೆ ಅದು ಸಾಮಾನ್ಯದ ವಿಷಯವಲ್ಲ. ಅದು ಮಹತ್ಸಾಧನೆಯಾಗಿದೆ. ಇವತ್ತು ಜಾತಿ ವ್ಯವಸ್ಥೆ ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಉಳಿದಿರತಕ್ಕಂಥದ್ದು. ಜಾತಿ ವ್ಯವಸ್ಥೆ ಹೋಗ್ಬೇಕು ಅಂತ್ಲೇನೆ ಬಸವಾದಿ ಶರಣರು ಒಂದು ದೊಡ್ಡ ಸಾಮಾಜಿಕ ಕ್ರಾಂತಿಯನ್ನು ಈ ನಾಡಿನಲ್ಲಿ ಮಾಡಿದರು. ಎಲ್ಲರೂ ಸಮಾನತೆಯಿಂದ ಬದುಕಬೇಕು, ಸ್ವಾಭಿಮಾನದಿಂದ ಬದುಕಬೇಕು. ಎಲ್ಲರಿಗೂ ಸಮಾನ ಅವಕಾಶವಿರಬೇಕು. ಆಗ ಮಾತ್ರ ಒಂದು ಸಮಾಜ ಸರ್ವತೋಮುಖವಾಗಿ ಬೆಳೀಲಿಕ್ಕೆ ಸಾಧ್ಯವಾಗುತ್ತದೆ. ಈ ಅಂತರವನ್ನು ನಾವು ತೆಗೆದುಹಾಕ್ದೇ ಹೋದ್ರೆ, ಈ ವೈರುಧ್ಯವನ್ನು ನಾವು ತೆಗೆದುಹಾಕ್ದೇ ಹೋದ್ರೆ, ಯಾವುದೇ ಸಮಾಜ ಉದ್ಧಾರ ಆಗಲಿಕ್ಕೆ ಸಾಧ್ಯ ಇಲ್ಲ. ಅದಕ್ಕೆ ಮೊದಲಿಗೆ ಎಲ್ಲರಿಗೂ ಕೂಡ ಶಿಕ್ಷಣ ಕೊಡತಕ್ಕಂಥ ಕೆಲಸ ಆಗ್ಬೇಕು. ಈ ವ್ಯವಸ್ಥೆ ಹೋಗಬೇಕಾದರೆ ಪ್ರತಿಯೊಬ್ಬರ ನಡುವೆ ಇರತಕ್ಕಂಥ ಸಾಮಾಜಿಕ, ಆರ್ಥಿಕ ಅಂತರವನ್ನು ತೆಗೆದುಹಾಕಿದಾಗ ಮಾತ್ರ ಜಾತಿ ಹೋಗ್ತದೆ ಹೊರ್ತು ಮಾತುಗಳಿಂದ ಜಾತಿ ಹೋಗಲಿಕ್ಕೆ ಸಾಧ್ಯ ಆಗಲ್ಲ. ಅದಕ್ಕೋಸ್ಕರ ಪ್ರತಿಯೊಬ್ಬರಿಗೂ ಕೂಡ ಗುಣಮಟ್ಟದ ಶಿಕ್ಷಣ ಸಿಗ್ಬೇಕು, ಪ್ರತಿಯೊಬ್ಬರಿಗೂ ಕೂಡ ಉದ್ಯೋಗ ಸಿಗ್ಬೇಕು. ಪ್ರತಿಯೊಬ್ಬರಿಗೂ ಕೂಡ ಆರ್ಥಿಕ ಸಫಲತೆ ಬರ್ಬೇಕು. ಆಗ ಮಾತ್ರ ಪರಸ್ಪರ ಸಮಾನತೆ ಬರಲಿಕ್ಕೆ ಸಾಧ್ಯ ಆಗ್ತದೆ. ಜಾತಿ ಕೂಡ ಕ್ರಮೇಣವಾಗಿ ಹೋಗಲಿಕ್ಕೆ ಸಾಧ್ಯ ಆಗ್ತದೆ. ಆ ದಿಕ್ಕಿನಲ್ಲಿ ಮಹತ್ವವಾದಂಥ ಹೆಜ್ಜೆಗಳನ್ನು ಸುತ್ತೂರು ಮಠದವರು ಇಟ್ಟಿದ್ದಾರೆ.

ಅದಕ್ಕಾಗಿ ಸರ್ಕಾರದ ವತಿಯಿಂದ ಅವರಿಗೆ ನಾನು ಗೌರವಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳನ್ನು ನೆನೆದುಕೊಳ್ಳುವಂಥ ಅವಕಾಶವನ್ನು ಈಗಿನ ಪೂಜ್ಯ ಸ್ವಾಮೀಜಿಗಳು ಕಲ್ಪಿಸಿಕೊಟ್ಟಿದ್ದಾರೆ. ಈ ಅವಕಾಶ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಪೂಜ್ಯ ಸ್ವಾಮೀಜಿಯವರಿಗೆ ನನ್ನ ಹೃದಯಪೂರ್ವಕ ನಮಸ್ಕಾರಗಳನ್ನು ತಿಳಿಸುತ್ತೇನೆ.

□

# ಸಮಾಜದ ಆಸ್ತಿ

**ಜಗದೀಶ್ ಶೆಟ್ಟರ್**
ಮಾಜಿ ಮುಖ್ಯಮಂತ್ರಿಗಳು

**ಪೂ**ಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ 100ನೇ ಜಯಂತಿಯ ಈ ಸಂದರ್ಭದಲ್ಲಿ ಅವರು ನಾಡಿಗೆ, ಸಮಾಜಕ್ಕೆ ಕೊಟ್ಟಂತಹ ಮಾರ್ಗದರ್ಶನ, ಸಂದೇಶ, ಕೊಡುಗೆಗಳನ್ನು ನಾವು ನೆನಪು ಮಾಡಿಕೊಳ್ಳಬೇಕು. ಮುಂದಿನ ನಮ್ಮ ದಿಕ್ಸೂಚಿಗಳನ್ನು, ದಾರಿಗಳನ್ನು ಸರಿಯಾದ ದಿಕ್ಕಿನಲ್ಲಿ ನಾವು ಒಯ್ಯಬೇಕು ಅನ್ನೋದನ್ನು ಈ ಸಂದರ್ಭ ದಲ್ಲಿ ನಾನು ಹೇಳಬಯಸುತ್ತೇನೆ. 1916ನೇ ಇಸವಿಯಲ್ಲಿ ಪೂಜ್ಯ ರಾಜೇಂದ್ರ ಮಹಾಸ್ವಾಮೀಜಿಯವರು ಹುಟ್ಟಿದ ನಂತರ ಅವರು 16ನೇ ವಯಸ್ಸಿನಲ್ಲಿ ಭವ್ಯ ಇತಿಹಾಸವುಳ್ಳ ಈ ಒಂದು ಸುತ್ತೂರು ಮಠದ 23ನೇ ಪೀಠಾಧಿಪತಿಗಳಾಗಿ ಗದ್ದುಗೆಯನ್ನು ಏರಿದ ಮೇಲೆ ಅಣ್ಣ ಬಸವಣ್ಣನವರ ಒಂದು ಮಾರ್ಗದರ್ಶನದಲ್ಲಿ ಆ ದಾಸೋಹದ ಪರಿಕಲ್ಪನೆ ಯನ್ನು, ಅನ್ನ, ಜ್ಞಾನ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಮಾಡಿದ್ದಾರೆ.

ಇವತ್ತು ಜೆಎಸ್ಎಸ್ ಶಿಕ್ಷಣ ಸಂಸ್ಥೆ ಇಡೀ ನಾಡಿನಲ್ಲಿ, ಇಡೀ ರಾಷ್ಟ್ರದಲ್ಲಿ, ರಾಷ್ಟ್ರವನ್ನು ಬಿಟ್ಟು ಬೇರೆ ದೇಶದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿದೆ. ಈ ಒಂದು ಶಿಕ್ಷಣ ಸಂಸ್ಥೆಯನ್ನು 1954ರಲ್ಲಿ ಪ್ರಾರಂಭ ಮಾಡಿದಂಥೋರು ಪೂಜ್ಯ ರಾಜೇಂದ್ರ ಮಹಾ ಸ್ವಾಮೀಜಿಯವರು. ಇವತ್ತು ಜೆಎಸ್ಎಸ್ ಶಿಕ್ಷಣ ಸಂಸ್ಥೆ ಅತ್ಯಂತ ದೊಡ್ಡ ಶಿಕ್ಷಣ ಸಂಸ್ಥೆಯಾಗಿ ಬೆಳೆದು ಬಂದಿದೆ. ಸುಮಾರು 60 ಸಾವಿರ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಎಲ್ಲಾ ಹಂತದ ಶಿಕ್ಷಣ ಲಭಿಸುತ್ತಿದೆ. 300ಕ್ಕೂ ಹೆಚ್ಚು ಅಧಿಕ ಶಿಕ್ಷಣ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವತ್ತು ಸರ್ಕಾರ ಮಾಡುವಂಥ ಕೆಲಸವನ್ನು ಜೆಎಸ್ಎಸ್ ಶಿಕ್ಷಣ ಸಂಸ್ಥೆ ಮಾಡುತ್ತಿದೆ. ಜಗದ್ಗುರು ರಾಜೇಂದ್ರ ಮಾಹಾಸ್ವಾಮೀಜಿಗಳಿರಬಹುದು, ಇವತ್ತಿನ ದೇಶಿಕೇಂದ್ರ ಮಹಾಸ್ವಾಮಿಗಳಿರಬಹುದು. ಶಿಕ್ಷಣರಂಗಕ್ಕೆ ಎಷ್ಟು ಮಹತ್ವ ಕೊಟ್ಟಿದ್ರು ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಆ ವ್ಯವಸ್ಥೆಯನ್ನು ಮೀರಿ 1954ರಲ್ಲಿ ಜೆಎಸ್ಎಸ್ ಶಿಕ್ಷಣ ಸಂಸ್ಥೆಯನ್ನು ರಾಜೇಂದ್ರ ಸ್ವಾಮಿಗಳು ಸ್ಥಾಪನೆ ಮಾಡಿದರು.

ಒಂದು ಸಮಾಜದಲ್ಲಿ ಶೈಕ್ಷಣಿಕವಾಗಿ ಬೆಳೆದ ಬಹಳಷ್ಟು ಜನ ಇದ್ದರೆ ಇಡೀ ಸಮಾಜಕ್ಕೆ ಒಂದು ಗೌರವ ಬರಲಿಕ್ಕೆ ಸಾಧ್ಯವಿದೆ. ಹೀಗಾಗಿ ಇವತ್ತು ಯಾವ ಸಮಾಜ ಶೈಕ್ಷಣಿಕವಾಗಿ

ಹಿಂದೆ ಇರುತ್ತದೆಯೋ ಆ ಸಮಾಜದ ವ್ಯಕ್ತಿಗಳೂ ಸಹಿತ ಆರ್ಥಿಕ, ಸಾಮಾಜಿಕವಾಗಿ ಹಿಂದೆ ಇರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಇದಕ್ಕಾಗಿ ನಾವು ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಆ ಮಹತ್ವದೊಂದಿಗೆ ಇವತ್ತು ನಮ್ಮ ನಾಗರಿಕರು ಹೆಚ್ಚಿನ ರೀತಿಯಲ್ಲಿ ಉತ್ತಮವಾದ ಶಿಕ್ಷಣವನ್ನು ಪಡೆಯುವ ಮುಖಾಂತರ ಸಮಾಜದ ಆಸ್ತಿಯಾಗಿ ಬೆಳೆಯಬೇಕು. ಆ ಒಂದು ಕೆಲಸವನ್ನು ಶ್ರೀಮಠ ಮಾಡಿದೆ. ರಾಜೇಂದ್ರ ಜಗದ್ಗುರುಗಳು ಮಾಡಿದ್ದಾರೆ. ನಾವು ಎಲ್ಲರಿಗೂ ಬೇಕು, ನಮಗೆ ಎಲ್ಲರೂ ಬೇಕು. ನುಡಿದು ಅದರಂತೆ ನಡೆದಂಥ ಪೂಜ್ಯರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅನುಷ್ಠಾನ ಮಾಡಿದಂಥ ಆದರ್ಶ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮುಖಾಂತರ ನಾವು ಅವರಿಗೆ ನಿಜವಾದಂಥ ಅರ್ಥಪೂರ್ಣವಾದಂಥ ಕೃತಜ್ಞತೆಗಳನ್ನು ನಮ್ಮ ಸ್ಮರಣೆಗಳನ್ನು ಸಲ್ಲಿಸಬೇಕಾಗಿದೆ. ವಿದ್ಯಾಭ್ಯಾಸದ ಮೂಲಕ ಸಮಾಜದ, ಸರ್ವಾಂಗೀಣ ಅಭಿವೃದ್ಧಿ ಎಂಬ ಪ್ರಬುದ್ಧ ಆಶಯದೊಂದಿಗೆ ಇವತ್ತೇನು ಮಠ ಮುನ್ನಡೆಯುತ್ತಿದೆಯೋ ಇದೇ ರೀತಿಯಾದಂಥ ಹೆಚ್ಚಿನ ಸೇವೆಯನ್ನು ಸಮಾಜಕ್ಕೆ ಸಲ್ಲಿಸಲಿ ಎಂದು ಆಶಿಸೋಣ. ಪೂಜ್ಯ ರಾಜೇಂದ್ರ ಮಹಾಸ್ವಾಮೀಜಿಯವರು ಹಾಕಿಕೊಟ್ಟಂತಹ ಮಾರ್ಗ ಏನಿದೆ ಅದನ್ನು ನಾವು ನಿಜವಾಗಿ ಅನುಷ್ಠಾನ ಮಾಡಿದಾಗ ಮಾತ್ರ. ಸಮಾಜ ಸೇವೆ ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಲು ಸಾಧ್ಯವಾಗುತ್ತದೆ.

□

## ರಾಜೇಂದ್ರ ಶ್ರೀವಾಣಿ

- ಸತ್ಯಶುದ್ಧವಾದ ಕಾಯಕನಿಷ್ಠೆಯನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
- ಯಾವುದೇ ಕಾಯಕವಾಗಲಿ, ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡಿದರೆ ಫಲ ಖಂಡಿತ ಲಭಿಸುತ್ತದೆ.
- ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನಿಸಿದ ಕೂಡಲೇ ಮಾಡಬೇಕು, ನಾಳೆ ನೋಡೋಣ ಎಂದು ಮುಂದೆ ಹಾಕಬಾರದು.
- ನಾವು ಮಾಡುವ ಕಾಯಕ ಶುದ್ಧವಾಗಿರಬೇಕು. ಕಾಯಕವಿಲ್ಲದವನಿಗೆ ಧರ್ಮವಿಲ್ಲ, ಧರ್ಮವಿಲ್ಲದವನಿಗೆ ದೇವರಿಲ್ಲ. ಎಲ್ಲರೂ ದುಡಿಯಬೇಕು, ಎಲ್ಲರೂ ಉಣ್ಣಬೇಕು.

# ನನ್ನ ತವರು

**ಡಾ. ಹೆಚ್.ಸಿ. ಮಹದೇವಪ್ಪ**
ಸಮಾಜಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು

**ಸು**ತ್ತೂರು ಸಂಸ್ಥಾನ ಕರ್ನಾಟಕದಲ್ಲಿ ತನ್ನದೇ ಆದಂತಹ ಧರ್ಮದ ಬುನಾದಿ ಮತ್ತು ಅಭ್ಯುದಯವನ್ನು ಕಂಡಿದೆ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಖ್ಯಾತಿಗೆ ಒಳಪಟ್ಟು, ಶೈಕ್ಷಣಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದಲ್ಲಿ ಶೋಷಿತ ವರ್ಗಗಳೂ ದಲಿತ ಹಿಂದುಳಿದ ವರ್ಗಗಳ ಮಕ್ಕಳಿಗೂ ಶಿಕ್ಷಣವನ್ನು ಮತ್ತು ದಾಸೋಹ ವನ್ನು ನೀಡುವ ಮುಖಾಂತರ ಅವರಿಗೆ ಜ್ಞಾನಾರ್ಜನೆಯನ್ನು ಮಾಡತಕ್ಕಂತಹ ಶ್ರೇಷ್ಠ ಕಾರ್ಯವನ್ನು ಮಾಡಿದೆ. ಇವತ್ತು ಈ ಸಂಸ್ಥೆಯಲ್ಲಿ ವಿದ್ಯಾರ್ಜನೆ ಮಾಡಿದಂತಹ ಲಕ್ಷಾಂತರ ವಿದ್ಯಾರ್ಥಿಗಳು ಸ್ವಾವಲಂಬನೆಯ ಬದುಕನ್ನು ಕಂಡುಕೊಂಡಿದ್ದಾರೆ. ನಾನು ಹುಟ್ಟಿದ ಹದಿನಾರು ಗ್ರಾಮ ಸುತ್ತೂರು ಶ್ರೀಕ್ಷೇತ್ರದ ಪಕ್ಕದಲ್ಲಿರುವುದು ಅತ್ಯಂತ ಸಂತೋಷದ ಸಂಗತಿ. ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡತಕ್ಕಂತಹ ಸಂದರ್ಭದಲ್ಲಿ ಜಾತಿ ಮತ್ತು ಅಸ್ಪೃಷ್ಯತೆಯ ಸಮಸ್ಯೆಗಳು ಇಡೀ ಭಾರತದ ಸಂಸ್ಕೃತಿ ಮತ್ತು ಪರಂಪರೆಯನ್ನು ತಲೆತಗ್ಗಿಸುವಂತೆ ಮಾಡಿದೆ. ಜಾತಿ ವ್ಯವಸ್ಥೆ ಮತ್ತು ಅಸ್ಪೃಷ್ಯತೆಯ ಆಚರಣೆಗಳು ಬದುಕಿನಲ್ಲಿ ಇರತಕ್ಕಂತಹ ಸಂದರ್ಭದಲ್ಲಿ ಒಂದು ಧರ್ಮ ಇದನ್ನು ಸಮರ್ಪಕವಾಗಿ ಕೈಗೆತ್ತಿಕೊಂಡು ಸಮಾಜದ ಅತಿ ದೊಡ್ಡ ಪಿಡುಗನ್ನು ನಿವಾರಣೆ ಮಾಡಲು ತನ್ನನ್ನು ತಾನು ತೊಡಗಿಸಿಕೊಳ್ಳುವುದರ ಮುಖಾಂತರ ಬಸವಣ್ಣನವರು ಹಾಗೂ ಡಾ. ಅಂಬೇಡ್ಕರ್‌ರವರು ಕಂಡಂತಹ ಜಾತಿರಹಿತ ಹಾಗೂ ಶೋಷಣೆರಹಿತ ಸಮಾಜವನ್ನು ಕಟ್ಟಲಿಕ್ಕೆ ರಾಜೇಂದ್ರ ಶ್ರೀಗಳು ಕಾರಣೀಭೂತರಾಗಿದ್ದಾರೆ. □

## ರಾಜೇಂದ್ರ ಶ್ರೀವಾಣಿ

- ದುಡಿಯದೇ ಸುಖ ಬಯಸುವ ಮನೋಭಾವವನ್ನು ಬಿಟ್ಟು, ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿದರೆ ಸಮಸ್ಯೆಗಳು ಉದ್ಭವಿಸುವುದಿಲ್ಲ.

# ಮಾತೃಹೃದಯಿ ಮಹಾತಪಸ್ವಿಗಳು

**ಅಡಗೂರು ಹೆಚ್. ವಿಶ್ವನಾಥ್**

ಮಾಜಿ ಸಚಿವರು ಹಾಗೂ ಮಾಜಿ ಸಂಸದರು

**ಆ**ದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಒಂಬತ್ತನೆಯ ಶತಮಾನದಲ್ಲಿ ಸಂಸ್ಥಾಪಿಸಿದ ಸುತ್ತೂರು ವೀರಸಿಂಹಾಸನ ಮಠವು ಅಂದಿನ ಸಮಾಜದಲ್ಲಿದ್ದ ಅನೀತಿ, ಅನ್ಯಾಯ, ಅಧಾರ್ಮಿಕತೆ, ಅಶ್ರದ್ಧೆ ಮತ್ತು ಅಸಮಾನತೆಗಳನ್ನು ಹೋಗಲಾಡಿಸಿ, ನ್ಯಾಯ, ನೀತಿ, ಧರ್ಮ, ಶ್ರದ್ಧೆ, ಶಾಂತಿ, ದಯೆ ತವರಾಗಿದೆ. ಶತಶತಮಾನಗಳಿಂದಲೂ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಮುನ್ನತಿಗೆ ಶ್ರಮಿಸುವುದರ ಜೊತೆಗೆ ಅನ್ನ ದಾಸೋಹ, ವಿದ್ಯಾ ದಾಸೋಹ, ಆರೋಗ್ಯ ದಾಸೋಹ, ಸಮಾನತೆಯ ದಾಸೋಹ ಹೀಗೆ ಜನತೆಗೆ ಲೇಸನೆ ಬಯಸುವ ಪವಿತ್ರ ತಾಣವಾಗಿದೆ.

ಅಂತಹ ಪವಿತ್ರ ತಾಣದಲ್ಲಿ 1968ನೇ ಇಸವಿಯಲ್ಲಿ ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ಡಿಗ್ರಿ ವಿದ್ಯಾರ್ಥಿಯಾಗಿ 3 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದ್ದು ನನ್ನ ಭಾಗ್ಯ. ಆ ಸಂದರ್ಭದಲ್ಲಿ ಸುತ್ತೂರು ಮಹಾಸಂಸ್ಥಾನದ ಶ್ರೀ ರಾಜೇಂದ್ರ ಸ್ವಾಮಿಗಳವರನ್ನು ನೇರವಾಗಿ ನೋಡುವ ಅವಕಾಶ ನನ್ನದಾಗಿತ್ತು. ಕಾಲೇಜಿನ ಸಾಂಸ್ಕೃತಿಕ ಉತ್ಸವದ ಮುಂದಾಳಾಗಿದ್ದರಿಂದ ಇದು ನನಗೆ ಸಾಧ್ಯವಾಯಿತು. ಆಗ ವಾಟಾಳ್ ನಾಗರಾಜ್ ಜೊತೆ ಕನ್ನಡ ಚಳುವಳಿಯಲ್ಲಿ ಹೆಚ್ಚು ಭಾಗವಹಿಸುತ್ತಿದ್ದೆ. ದೊಡ್ಡ ದೊಡ್ಡ ಚಳುವಳಿಗಳಲ್ಲಿ ನಾನು ಹೆಚ್ಚು ಭಾಗವಹಿಸುತ್ತಿದ್ದೆ. ಅಂಥ ಸಂದರ್ಭಗಳಲ್ಲಿ ಶ್ರೀ ರಾಜೇಂದ್ರ ಮಹಾಸ್ವಾಮಿ ಗಳವರು ನನ್ನ ಬಗ್ಗೆ ತೋರಿಸುತ್ತಿದ್ದ ಕಾಳಜಿ, ಅಕ್ಕರೆ ಅಷ್ಟಿಷ್ಟಲ್ಲ. ಆಗ ಅವರ ಸಾನ್ನಿಧ್ಯ ದಲ್ಲಿದ್ದವರಿಗೆ ನನ್ನ ಬಗ್ಗೆ ಹೇಳುತ್ತಾ ಇದ್ದರು – "ವಿಶ್ವನಾಥ ಎಲ್ಲಿದ್ದಾರೆ ನೋಡಿಯಪ್ಪ, ಗಲಾಟೆ, ಚಳುವಳಿಗಳು ಅಂದರೆ ಎಲ್ಲಾದಕ್ಕೂ ಮುಂದೆ ಮುಂದೆ ಹೋಗೋದು ಹೆಚ್ಚು. ಎಲ್ಲಾದಕ್ಕೂ ನುಗ್ಗಿಬಿಡುತ್ತಾನೆ, ಎಲ್ಲಾದ್ರೂ ಸಿಕ್ಕಿಹಾಕಿಕೊಂಡಿದ್ದಾರ ನೋಡಿಯಪ್ಪ" ಅಂತ ಹೇಳುತ್ತಿದ್ದುದುಂಟು. ನಾವೆಲ್ಲಾ ಅವರ ಮನೆ ಮಕ್ಕಳಿದ್ದ ಹಾಗೆ ಇದ್ದೆವು.

ಕಾಲೇಜಿನ ಎಲೆಕ್ಷನ್ ಇನ್ನಿತರೆ ಸಂದರ್ಭಗಳಲ್ಲಿ ಕೆಲವು ವಿದ್ಯಾರ್ಥಿಗಳೆಲ್ಲಾ ಮರದಡಿ ನಿಂತು ಊಟ ಮಾಡ್ತಾ ಇದ್ದರು. ಅದನ್ನು ನಾನು ಪೂಜ್ಯರ ಗಮನಕ್ಕೆ ತಂದೆ. ಅದರ

ಮಾರನೆಯ ದಿನದಿಂದಲೇ ಒಳಗಡೆ ಕೂತು ಊಟ ಮಾಡುವಂತೆ ವ್ಯವಸ್ಥೆ ಮಾಡಿ ಆದೇಶ ಮಾಡಿದರು. ಅಲ್ಲಿಯವರೆಗೆ ಈ ವಿಚಾರ ಅವರ ಗಮನಕ್ಕೂ ಬಂದಿರಲಿಲ್ಲ.

ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಸುತ್ತೂರು ಮಹಾಸಂಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ಶಿಕ್ಷಣ ಸಂಸ್ಥೆಗಳ ಸರ್ವಾಂಗೀಣ ಅಭಿವೃದ್ಧಿಗೆ ಭದ್ರ ಬುನಾದಿ ತಮ್ಮ ಜೀವನವನ್ನು ಅದಕ್ಕಾಗಿ ಮೀಸಲಾಗಿಟ್ಟರು.

1978ನೇ ಇಸವಿಯಲ್ಲಿ ಎಲೆಕ್ಷನ್‌ಗೆ ನಾನು ನಿಂತಂಥ ಸಂದರ್ಭ. ಅಂದು ನನ್ನ ಸ್ನೇಹಿತರ ಜೊತೆಗೂಡಿ ತಾಲ್ಲೂಕು ಕಛೇರಿಗೆ ಅರ್ಜಿ ಸಲ್ಲಿಸಿ ವಾಪಸ್ಸು ಬರುತ್ತಿರುವಾಗ ಸ್ವಾಮೀಜಿಯವರು ಎದುರಾದರು. ಅವರ ಜೊತೆಯಲ್ಲಿ ಬೇರೆ ಬೇರೆ ಪಾರ್ಟಿಯವರು ಸಹ ಇದ್ದರು. ಆಗ ಪೂಜ್ಯರಿಗೆ ನಮಸ್ಕರಿಸಿ ವಿನಂತಿ ಮಾಡಿಕೊಂಡೆ. "ಪೂಜ್ಯರೇ, ನಾನು ಎಲೆಕ್ಷನ್‌ಗೆ ನಿಲ್ಲುತ್ತಾ ಇದ್ದೇನೆ. ಇದೀಗ ತಾನೆ ಅರ್ಜಿಯನ್ನು ತಹಶೀಲ್ದಾರವರಿಗೆ ಸಲ್ಲಿಸಿ ಬಂದಿದ್ದೇನೆ, ತಮ್ಮ ಆಶೀರ್ವಾದ ಬೇಕು" ಎಂದೆ.

ತಕ್ಷಣವೇ ಅವರು "ನಿನಗೆ ಒಳ್ಳೆಯದಾಗಲಪ್ಪ, ನಿನಗೆ ಗೆಲುವು ಸದಾ ಇರಲಿ" ಎಂದು ಹಾರೈಸಿದರು. ಬೇರೆ ಎಲ್ಲಾ ಪಾರ್ಟಿಯವರಿದ್ದರೂ ಕೂಡ ನನಗೆ ಆಶೀರ್ವಾದ ಮಾಡಿದ್ದು ನನಗೆ ಹೆಚ್ಚು ಖುಷಿ ತಂದಿತು.

1978ರಲ್ಲಿ ಜಗದ್ಗುರುಗಳ ಆಶೀರ್ವಾದ ಫಲಿಸಿ ನಾನು ಶಾಸಕನಾದೆ. ಬಹುಶಃ ನಮ್ಮ ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿಯಾಗಿ ಶಾಸಕನಾದವನು ನಾನೆ ಮೊದಲು. ಆ ಸಂದರ್ಭದಲ್ಲಿ ಡಿಗ್ರಿ ಕಾಲೇಜಿನ 2ನೇ ಬ್ಯಾಚ್‌ನಲ್ಲಿ 24 ಜನ ವಿದ್ಯಾರ್ಥಿಗಳು ಇದ್ದೆವು. ಇವರೆಲ್ಲರೂ ಕೂಡ ಬೇರೆ ಬೇರೆ ನಿಟ್ಟಿನಲ್ಲಿ ಪೂಜ್ಯರ ಆಶೀರ್ವಾದದಿಂದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಅಡಗೂರು ಚನ್ನಬಸಪ್ಪನವರು ಸಹ ನಮ್ಮ ಹಿರಿಯ ಸ್ನೇಹಿತರು. ಅವರಾದಿಯಾಗಿ ಬಡವರು, ಬಲ್ಲಿದರೆನ್ನದೆ ಎಲ್ಲರನ್ನೂ ಬಹಳ ಪ್ರೀತಿವಿಶ್ವಾಸದಿಂದ ನಮ್ಮನ್ನು ನಡೆಸಿಕೊಳ್ಳು ತ್ತಿದ್ದಂತವರು, ನಮ್ಮ ಸ್ವಾಮಿಗಳು.

ಸರ್ವಕ್ಷೇತ್ರಕ್ಕೂ ಸಾಧನೆಗೆ ಮಾದರಿ ಈ ನಮ್ಮ ಜೆಎಸ್‌ಎಸ್ ಸಂಸ್ಥೆ. ಶಿಕ್ಷಣ, ಆರೋಗ್ಯ, ಸಾಮಾಜಿಕ ಸೇವಾಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮಾದರಿಯಾಗುವಂತೆ ಇಂದು ಬೆಳೆದು ನಿಂತಿದೆ ಎಂದರೆ, ಅದು ಜಗದ್ಗುರುಗಳವರ ಆಶೀರ್ವಾದ. ನಮ್ಮ ಪುಣ್ಯದ ಫಲ. ಶಿಸ್ತು, ಸಂಘಟನೆ, ಕಾರ್ಯತತ್ಪರತೆ ಮತ್ತು ಅನುಷ್ಠಾನ ನಿಷ್ಠೆಗಳಿಗೆ ಹೆಸರಾದವರು ಅವರು. ಅಂಥ ಮಹಾಸ್ವಾಮಿಗಳವರು ಹಾಕಿದ ಭದ್ರ ಬುನಾದಿಯನ್ನು

ಇವತ್ತಿನ ದೇಶಿಕೇಂದ್ರ ಮಹಾಸ್ವಾಮಿಗಳವರು ಮುಂದುವರಿಸಿಕೊಂಡು ಸಮೃದ್ಧಿಯಾಗಿ ಬೆಳೆಸಿದ್ದಾರೆ. ಯಾರೇ ಬಂದರೂ ಶಾಂತಚಿತ್ತದ ಸಮಾಧಾನದ ದಾಸೋಹವನ್ನು ಸ್ವಾಮಿಗಳು ನೀಡುತ್ತಾ, ಆಶೀರ್ವಾದ ಮಾಡುತ್ತಿರುವುದು ಇವತ್ತಿಗೂ ನಡೆಯುತ್ತಿದೆ.

ಇಂದು ಎಲ್ಲಾ ಶಾಲಾ–ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳಿಗೆ ಮೀಸಲಾತಿ ಕಲ್ಪಿಸಿದ್ದಾರೆ. ಅಂದು ಈ ಮೀಸಲಾತಿ ವ್ಯವಸ್ಥೆ ಇಲ್ಲದಿದ್ದರೂ ಸಹ ಶ್ರೀ ರಾಜೇಂದ್ರ ಸ್ವಾಮಿಗಳವರು ಯಾವ ಜಾತಿ ವ್ಯವಸ್ಥೆಯನ್ನೂ ನೋಡದೆ ಪ್ರತಿಭೆ ಇರುವ ಪ್ರತಿಯೊಂದು ಜನಾಂಗಕ್ಕೂ ಉನ್ನತ ಹುದ್ದೆಗಳನ್ನು ದಯಪಾಲಿಸಿದ್ದರು. ಕೆಮಿಸ್ಟ್ರಿ ಉಪನ್ಯಾಸಕರಾದ ಶ್ರೀ ಸತ್ಯನಾರಾಯಣ (ಬ್ರಾಹ್ಮಣರು) ಜ್ಯೂಯಲಜಿ ಉಪನ್ಯಾಸಕರು ಶ್ರೀ ಹೊನ್ನಯ್ಯನವರು (ಒಕ್ಕಲಿಗರು) ಜ್ಯೂಯಲಜಿ ಉಪನ್ಯಾಸಕರಾದ ರೆಹಮಾನ್ ಮತ್ತು ಫ್ರಾನ್ಸಿಸ್ ಹೀಗೆ ಎಲ್ಲಾ ಜನಾಂಗದವರಿಗೂ ಉನ್ನತ ಹುದ್ದೆಗಳನ್ನು ಕಲ್ಪಿಸಿದ್ದರು. ಎಲ್ಲಾ ವರ್ಗ ವರ್ಣದ ವಿದ್ಯಾರ್ಥಿಗಳಿಗೂ ಸಹ ಅವಕಾಶ ಕಲ್ಪಿಸುತ್ತಿದ್ದರು. ಅದರಲ್ಲೂ ಹಳ್ಳಿಗಾಡಿನ ಮಕ್ಕಳಿಗೆ, ದೀನದಲಿತರಿಗೆ ವಿದ್ಯಾರ್ಥಿನಿಲಯ ತೆರೆದಿದ್ದರು. ಸುತ್ತೂರು ಶ್ರೀಮಠ ಸಮಾಜದ ಅನೇಕ ಸಮಸ್ಯೆಗಳಿಗೆ ಪರಿಹಾರದ ಕೇಂದ್ರವಾಗಿತ್ತು. ಹಾಗಾಗಿ ಸುತ್ತೂರು ಮಹಾ ಸಂಸ್ಥಾನ ಸರ್ವಧರ್ಮಗಳ ತೋಟ, ಪ್ರತಿಯೊಂದು ಜನಾಂಗದ ಕರ್ಮಭೂಮಿಯಾಗಿತ್ತು.

ಕರ್ನಾಟಕ ಮಾತ್ರವಲ್ಲದೆ, ದೇಶ–ವಿದೇಶಗಳಲ್ಲೂ ಶಿಕ್ಷಣ ದಾಸೋಹ ನಡೆಸುತ್ತಾ ಬಂದಿರುವ ಸುತ್ತೂರು ಮಠ ಇಂದು ಬೃಹತ್ ಹೆಮ್ಮರವಾಗಿ ಬೆಳೆದು ನಿಂತಿದೆ. ಕಾಯಕಯೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಾಹಿತ್ಯ ಆರಾಧಕರು. ಅವರ ಸೇವೆ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತದ್ದು. ಈ ದೇಶಕ್ಕೆ ಮಾದರಿ ಎಂದು ಹೇಳುವುದಕ್ಕೆ ನಮಗೆ ಅಭಿಮಾನ, ಸಂತೋಷವಾಗುತ್ತದೆ.

ಅದರಲ್ಲೂ ನಾವು ಆ ಸಂಸ್ಥೆಯ ಪ್ರಾಡಕ್ಟ್‌ಗಳು. ನಮಗಂತೂ ಎಲ್ಲಿಲ್ಲದ ಸಂತೋಷ. ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆಶೀರ್ವಾದ ನಮಗೆ ಶುಭವನ್ನುಂಟು ಮಾಡಿದೆ. ಅವರ ಆಶೀರ್ವಾದದಿಂದ ಎಲ್ಲರೂ ಸಹ ಉನ್ನತ ಹುದ್ದೆಗಳಲ್ಲಿದ್ದೇವೆ. ಅವರು ಏನು ಆಶೀರ್ವಾದ ಮಾಡಿ ಕಳುಹಿಸಿದ್ದಾರೋ ಅದನ್ನು ನಾವು ಇಂದಿಗೂ ಅನುಭವಿಸುತ್ತಾ ಇದ್ದೇವೆ. ಅವರ ಆಶೀರ್ವಾದದ ಫಲ ಇಂದು ನಮ್ಮೆಲ್ಲರಿಗೂ ಒಳ್ಳೆಯ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಿದೆ. ಮುಂದೆಯೂ ಸಹ ಇಂತಹ ಆಶೀರ್ವಾದ ನಮ್ಮ ಮೇಲೆ ಇರಲಿ ಅಂತ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

□

# ವಾತ್ಸಲ್ಯಮಯಿ

**ಡಾ. ಎನ್. ಬಸವಾರಾಧ್ಯ**

**ನಾ**ನು ಬೆಂಗಳೂರಿನಲ್ಲಿ ಇಂಟರ್‌ಮೀಡಿಯಟ್ ವ್ಯಾಸಂಗ ಮುಗಿಸಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಂ.ಎ. ವ್ಯಾಸಂಗ ಮಾಡುವ ಸನ್ನಿವೇಶ ಅದು. ನಾನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ಮತ್ತು ಮನಶ್ಶಾಸ್ತ್ರದ ಎಂ.ಎ.ಗೆ ಅರ್ಜಿಯನ್ನು ಸಲ್ಲಿಸಿದೆ. ಕಡುಬಡತನದಲ್ಲಿದ್ದ ನಾನು ಉಚಿತ ವಿದ್ಯಾರ್ಥಿನಿಲಯಗಳಲ್ಲೇ ವ್ಯಾಸಂಗವನ್ನು ಮುಗಿಸಿದ್ದೆ. ಹಾಗಾಗಿ ಉಚಿತ ವಿದ್ಯಾರ್ಥಿನಿಲಯದಲ್ಲಿ ಅವಕಾಶ ಲಭ್ಯವಾಗದಿದ್ದಲ್ಲಿ ನನ್ನ ವ್ಯಾಸಂಗವನ್ನು ಮುಂದುವರಿಸುವ ಸನ್ನಿವೇಶವೇ ಪ್ರಾಪ್ತವಾಗುತ್ತಿರಲಿಲ್ಲ. ಹೀಗಿರುವಲ್ಲಿ ಪರಿಚಯಸ್ಥರ ಮೂಲಕ ಶ್ರೀಗಳವರನ್ನು ಭೇಟಿಯಾದಾಗ ಪೂಜ್ಯರು ನನ್ನ ಇತಿವೃತ್ತಗಳನ್ನೆಲ್ಲಾ ಕೇಳಿ ಕನ್ನಡ ಎಂ.ಎ.ಗೆ ಸೇರಿದರೆ ವಿದ್ಯಾರ್ಥಿನಿಲಯದಲ್ಲಿ ಸೀಟು ಕೊಡುವುದಾಗಿ ಹೇಳಿದರು. ಕನ್ನಡಕ್ಕೆ ಅಷ್ಟಾಗಿ ಮಾನ್ಯತೆ ಇಲ್ಲದಿದ್ದ ಆ ಕಾಲದಲ್ಲಿ ಮನಶ್ಶಾಸ್ತ್ರದ ಎಂ.ಎ. ಸೇರಿದರೆ ಮುಂದೆ ಪ್ರಯೋಜನವಾಗಬಹುದೆಂದು ನಾನು ಭಾವಿಸಿದ್ದೆ. ಆದರೆ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ದೊರೆಯದಿದ್ದಲ್ಲಿ ನನ್ನ ವ್ಯಾಸಂಗ ಮುಂದುವರಿಯುವಂತಿರಲಿಲ್ಲ. ಹಾಗಾಗಿ ನಾನು ಅನಿವಾರ್ಯವಾಗಿ ಕನ್ನಡ ಎಂ.ಎ.ಗೆ ಸೇರಿಕೊಂಡೆ. ಆಮೇಲೆ ಅದರ ಮಹತ್ವ ನನಗೆ ಅರಿವಾಯಿತು. ಶ್ರೀಗಳವರ ದೂರದೃಷ್ಟಿಯನ್ನು ಕಂಡು ಆಶ್ಚರ್ಯಚಕಿತನಾದೆ. ಕನ್ನಡದಲ್ಲಿ ಅಲ್ಪಸ್ವಲ್ಪ ಕೆಲಸ ಮಾಡಿ ಆ ಸಂಬಂಧವಾಗಿ ನನಗೆ ಏನಾದರೂ ಪದವಿ, ಪ್ರಶಸ್ತಿ, ಘನತೆ, ಗೌರವಗಳು ಪ್ರಾಪ್ತವಾಗಿದ್ದರೆ ಅದು ಶ್ರೀಗಳವರ ಕೃಪಾಕಟಾಕ್ಷದಿಂದ.

ಪರಮಪೂಜ್ಯ ಶ್ರೀಗಳವರ ಮಾನವೀಯತೆಗೆ ಶಿಷ್ಯವಾತ್ಸಲ್ಯಕ್ಕೆ ಒಂದು ಜ್ವಲಂತ ದೃಷ್ಟಾಂತವನ್ನು ಅನಿವಾರ್ಯವಾಗಿ ನೀಡಲೇಬೇಕಾಗಿದೆ. ನನ್ನ ವ್ಯಾಸಂಗವನ್ನು ಮುಗಿಸಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನ ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡೆ. ಕೆಲವು ವರ್ಷಗಳಾದ ಮೇಲೆ ನನ್ನ ಚಿರಂಜೀವಿ ಇಂಟರ್‌ಮೀಡಿಯಟ್ ಮುಗಿಸಿ ಬಿ.ಇ.ಗೆ ಸೇರಬೇಕಾಯಿತು. ನಾನು ಶ್ರೀಗಳವರಿಗೆ ಈ ವಿಷಯವನ್ನು ಮೊದಲೇ ನಿವೇದಿಸಿ ಕೊಂಡು ನಮ್ಮ ಹುಡುಗನಿಗೆ ಒಂದು ಸೀಟನ್ನು ಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದೆ. ಅದಕ್ಕೆ "ಆಗಲಿ ಹೋಗು" ಎಂದಿದ್ದರು. ಶ್ರೀಗಳವರ ಮಾತಿನಂತೆ ನಾನು ಬೇರೆ ಯಾವುದೇ ಕಾಲೇಜುಗಳಿಗೆ ಅರ್ಜಿ ಸಲ್ಲಿಸಲೇ ಇಲ್ಲ. ಆ ಕಾಲದಲ್ಲಿ ಇಂಜಿನಿಯರಿಂಗ್ ಸೀಟುಗಳಿಗೆ

ಬಹಳ ಬೇಡಿಕೆಯೂ ಇತ್ತು, ಬೆಲೆಯೂ ಇತ್ತು. ಮೊದಲ ಪಟ್ಟಿ ಪ್ರಕಟವಾಯ್ತು. ಅದರಲ್ಲಿ ನಮ್ಮ ಹುಡುಗನ ಹೆಸರಿರಲಿಲ್ಲ. ನನಗೆ ಆತಂಕ ಹೆಚ್ಚಾಯಿತು. ಒಂದು ವರ್ಷ ವ್ಯರ್ಥವಾಗುವುದಲ್ಲ ಎಂಬ ಚಿಂತೆ ಆವರಿಸಿತು. ಆದರೂ ಪ್ರತಿನಿತ್ಯ ಶ್ರೀಗಳವರನ್ನು ತಪ್ಪದೆ ಭೇಟಿ ಮಾಡುತ್ತಿದ್ದೆ. ಶ್ರೀಗಳವರು ಮಾತ್ರ "ಆಗಲಿ ಹೋಗು" ಎಂದೇ ಹೇಳುತ್ತಿದ್ದರು. ಕೆಲವು ದಿನಗಳಾದ ಮೇಲೆ ಜೆಎಸ್‌ಎಸ್ ಇಂಜಿನಿಯರಿಂಗ್ ಕಾಲೇಜಿಗೆ ಹೆಚ್ಚಿನ ಸೀಟುಗಳು ಲಭ್ಯವಾದುವು. ಆಮೇಲೆ ಒಂದು ದಿನ ಹೋದಾಗ ಶ್ರೀಗಳವರು "ಏನು ಕೊಡುತ್ತೀಯಾ" ಎಂದು ಕೇಳಿದರು. "ನನ್ನ ಬಳಿ ಏನು ಇದೆ ಬುದ್ಧಿ?" ಎಂದೆ. "ಅಯ್ಯೋ ದಡ್ಡ, ಸರ್ಕಾರದ ನಿಯಮದಂತೆ ಫೀಜು ಕಟ್ಟಬೇಕು ಎಂಬುದಾದರೂ ಗೊತ್ತಿದೆಯಾ?" ಎಂದರು. 'ಇಲ್ಲ ಬುದ್ಧಿ' ಎಂದೆ. "ಅಯ್ಯೋ ದಡ್ಡ, ಸರ್ಕಾರ ನಿಗದಿಪಡಿಸಿರುವ ಶುಲ್ಕವನ್ನು ಕೊಟ್ಟು ಕಾಲೇಜಿಗೆ ಸೇರಿಸು ಹೋಗು" ಎಂದು ಒಂದು ಪತ್ರವನ್ನು ಬರೆದು ಕೊಟ್ಟರು. ಅದರಂತೆ ಸೇರಿಸಿದ್ದಾಯಿತು.

ಆಮೇಲೆ ಬಾಗಲಕೋಟೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೆರಿಟ್ ಸೀಟು ಸಿಕ್ಕಿರುವುದಾಗಿ ಪತ್ರ ಬಂತು. ಆಗ ನನ್ನ ಮಗನಿಗೆ ಮೆರಿಟ್ ಸೀಟು ಸಿಕ್ಕಿರುವುದನ್ನು ತಿಳಿದ ಸೀಟಿನ ಇತರ ಆಕಾಂಕ್ಷಿಗಳು ಶ್ರೀಗಳವರಿಗೆ ಈ ವಿಷಯ ತಿಳಿಸಿದರು. ಶ್ರೀಗಳವರು ನನ್ನನ್ನು ಕರೆಸಿ "ನಿಮ್ಮ ಮಗನಿಗೆ ಮೆರಿಟ್ ಸೀಟು ಸಿಕ್ಕಿದೆಯಂತಲ್ಲ, ನೀನು ಇಲ್ಲಿ ಕಟ್ಟಿರುವ ಹಣವನ್ನು ಹಿಂದಕ್ಕೆ ತೆಗೆದುಕೊಂಡು ಅಲ್ಲಿಗೆ ಸೇರಿಸು. ಒಂದು ವರ್ಷವಾದ ಮೇಲೆ ಇದೇ ಕಾಲೇಜಿಗೆ ವರ್ಗ ಮಾಡಿಸಿಕೊಳ್ಳೋಣ" ಎಂದರು. ನಾನು ಇದರ ಸಾಧಕ ಬಾಧಕಗಳನ್ನೆಲ್ಲ ಆಲೋಚಿಸಿ, "ಒಮ್ಮೆ ಈ ಕಾಲೇಜಿಗೆ ಸೇರಿಸಿದ ಮೇಲೆ ಬೇರೆ ಎಲ್ಲಿಗೆ ಕಳಿಸುವುದಕ್ಕೂ ನನ್ನ ಮನಸ್ಸು ಒಪ್ಪುವುದಿಲ್ಲ" ಎಂದೆ. "ಹೋಗಲಿ ಬಿಡು" ಎಂದು ಸುಮ್ಮನಾದರು. ನನ್ನಿಂದ ಕಾಲೇಜಿಗೆ ಬರುತ್ತಿದ್ದ ಸಹಸ್ರಾರು ರೂಪಾಯಿಗಳು ನಷ್ಟವಾದುವು ಎಂದು ಮನಸ್ಸಿನಲ್ಲೇ ಮರುಗಿದೆ. ಇದು ಒಂದು ಕಥೆಯಾದರೆ, ಅದರ ಮುಂದಿನ ವರ್ಷ ಮತ್ತೊಂದು ಪ್ರಸಂಗ ನಡೆಯಿತು.

ನನ್ನ ಮತ್ತೊಬ್ಬ ಮಗ ಇಂಟರ್‌ಮೀಡಿಯಟ್ ಮುಗಿಸಿದ ಮೇಲೆ ಬಿ.ಇ. ಓದಲೇಬೇಕೆಂದು ಹಠ ಹಿಡಿದ. ಅವನು ಪ್ರಥಮ ದರ್ಜೆಯಲ್ಲಿ ಮಾತ್ರ ಪಾಸಾಗಿದ್ದ. ಹಿಂದಿನ ವರ್ಷ ಪರಮಪೂಜ್ಯ ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ನನ್ನ ಹಿರಿಯ ಮಗನಿಗೆ ಇಂಜಿನಿಯರಿಂಗ್‌ಗೆ ಸೀಟು ಕೊಟ್ಟು ಅವಕಾಶ ಮಾಡಿಕೊಟ್ಟಿದ್ದಾರೆ. ಮತ್ತೆ ಈ ಎರಡನೆಯ ಮಗನಿಗೆ ಯಾವ ಡೊನೇಷನ್ ಇಲ್ಲದೆ ಸೀಟು ಕೇಳುವುದಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ನಾನು ಡೊನೇಷನ್ ಕೊಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ನನ್ನ ಮಗ ಬೇರೆ ಯಾವುದನ್ನು ಓದುವುದಕ್ಕೂ ಸಿದ್ಧನಿರಲಿಲ್ಲ. ಈ ಧರ್ಮಸಂಕಟವನ್ನು ಪೂಜ್ಯರಿಗೆ ಆಪ್ತರಾಗಿದ್ದ ನನ್ನ ಮಿತ್ರರಲ್ಲಿ ಹೇಳಿಕೊಂಡೆ. ಅವರು ನನ್ನನ್ನು ಸಮಾಧಾನಪಡಿಸಿ

ಶ್ರೀಗಳವರಿಂದ ಸೀಟು ಕೊಡಿಸುವುದಾಗಿ ಭರವಸೆ ನೀಡಿದರು. ನಾನು ಮಾತ್ರ ಶ್ರೀಗಳವರಲ್ಲಿಗೆ ಬರುವುದಿಲ್ಲ ಎಂದು ನನ್ನ ಮಿತ್ರರಿಗೆ ತಿಳಿಸಿಬಿಟ್ಟೆ. ಆಗ ನನ್ನ ಮಿತ್ರರು ನನ್ನ ಮಗನನ್ನು ಜೊತೆಯಲ್ಲಿ ಕರೆದುಕೊಂಡು ಶ್ರೀಗಳವರಲ್ಲಿಗೆ ಹೋದರು. ಕುಶಲ ಸಂಭಾಷಣೆಗಳೆಲ್ಲ ಆದಮೇಲೆ ನನ್ನ ಮಿತ್ರರು ಶ್ರೀಗಳವರಿಗೆ "ಇವನು ನಮ್ಮ ಹುಡುಗ, ಇವನಿಗೆ ತಮ್ಮ ಇಂಜಿನಿಯರಿಂಗ್ ಕಾಲೇಜಿನಲ್ಲಿ ಒಂದು ಸೀಟು ಕೊಡಬೇಕು. ಅದಕ್ಕಾಗಿ ಕರೆದುಕೊಂಡು ಬಂದಿದ್ದೀನಿ ಬುದ್ಧಿ" ಎಂದರು. ಆಗ ಶ್ರೀಗಳವರು "ನೀವು ಯಾವತ್ತೂ ಏನನ್ನೂ ಕೇಳಿಲ್ಲ, ಶ್ರೀಮಠದ ಪರಮ ಅಭಿಮಾನಿಗಳು. ನೀವು ಈಗಲೇ ಕರೆದುಕೊಂಡು ಹೋಗಿ ಸೇರಿಸಿ" ಎಂದು ಪತ್ರವನ್ನು ಬರೆದು ಕೊಟ್ಟರು. "ನಿಮ್ಮ ಹುಡುಗನನ್ನು ಇಲ್ಲೇ ಹಾಸ್ಟೆಲಿನಲ್ಲಿ ಸೇರಿಸಿಬಿಡಿ" ಎಂದು ಹೇಳಿ ಕಳುಹಿಸಿದರು. ಕೂಡಲೇ ಕಾಲೇಜಿಗೆ ಸೇರಿಸಿಬಿಟ್ಟದ್ದಾಯಿತು. ಕೆಲದಿನಗಳಾದ ಮೇಲೆ ಸೀಟು ಸಿಕ್ಕದ ಕೆಲವರು ನನ್ನ ಇಬ್ಬರು ಹುಡುಗರಿಗೆ ಸೀಟು ಕೊಟ್ಟಿದ್ದಾರೆ ಎಂದು ಗೊಣಗಾಡಿಕೊಂಡು ಶ್ರೀಗಳವರಿಗೂ ಈ ವಿಷಯ ತಿಳಿಸಿದರಂತೆ. ಆದರೆ ಪರಮಪೂಜ್ಯರು ಎಂದೂ ಈ ವಿಷಯವನ್ನು ನನ್ನಲ್ಲಿ ಪ್ರಸ್ತಾಪಿಸಿದವರೇ ಅಲ್ಲ. ಇಂತಹ ಮಹಾನುಭಾವರು, ಬಡವರ ಬಂಧು, ಪರಮಪೂಜ್ಯ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ತ್ರಿಕಾಲದಲ್ಲಿಯೂ ಅಷ್ಟೇ ಅಲ್ಲ ಸದಾಕಾಲದಲ್ಲಿಯೂ ಸ್ಮರಣೀಯರು.

ಶ್ರೀಗಳವರು ನನ್ನ ಬಾಳಿನ ಭಾಗ್ಯದೇವತೆ. ಗ್ರಾಮಾಂತರದಿಂದ ಬಂದ ನನ್ನಂಥ ಕಾಡುಶಿಲೆಯನ್ನು ತಮ್ಮ ಮಾನವೀಯತೆ ಎಂಬ ಉಳಿಯಿಂದ ಕಡೆದು ಒಂದು ಆಕಾರವನ್ನು ಕೊಟ್ಟ, ಪರಮ ತಪೋಧನರು.

□

## ರಾಜೇಂದ್ರ ಶ್ರೀವಾಣಿ

- ಪುರಾತನ ಸಂಸ್ಕೃತಿ, ಪುಣ್ಯಕ್ಷೇತ್ರಗಳ ಉಳಿವಿಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು.
- ರಾಷ್ಟ್ರದ ಅಭಿಮಾನ ಎಲ್ಲರಲ್ಲಿಯೂ ಬೆಳೆಯಬೇಕು, ರಾಷ್ಟ್ರ ಉಳಿದರೆ ಮಾತ್ರ ಎಲ್ಲರ ಉಳಿವು.
- ಭಾರತ ಜಗತ್ತನ್ನೇ ಎಚ್ಚರಿಸಬಲ್ಲ ಭವ್ಯ ಪರಂಪರೆಯನ್ನು ಪಡೆದ ರಾಷ್ಟ್ರ.

# ದಲಿತೋದ್ಧಾರದ ಮೆಟ್ಟಿಲು

ಡಾ. ಸಾ. ಶಿ. ಮರುಳಯ್ಯ

'ಶ್ರದ್ಧೆಯೇ ಸಿದ್ಧಿಗೆ ಮೂಲ' ಎಂಬ ಮಹಾಮಂತ್ರವನ್ನು
ಪಠಿಸಿದ ಮಹರ್ಷಿ ನೀನಯ್ಯಾ,
ದುಡಿಮೆಯಲ್ಲಿಯೇ ದೇವರನ್ನು ಕಾಣಿಸಿದ
ಕರ್ಮಯೋಗಿ ನೀನಯ್ಯಾ,
'ನಿಜದರಿವು ಅಜನಿರವು' ಎಂದುದ್ಘೋಷಿಸಿದ
ಮಹಾಜ್ಞಾನಿ ನೀನಯ್ಯಾ,
ನಿತ್ಯ ದಾಸೋಹದಲಿ ಸತ್ಯ ಶ್ರೀಗಂಧವಾಗಿ ಸವೆದುಕೊಂಡ
ತ್ರಿವಿಧ ದಾಸೋಹಿ ನೀನಯ್ಯಾ,
ಎನ್ನೆದೆಯ ಧರೆಯಲ್ಲಿ ಕಪ್ಪುರದ ಖಂಡವಾಗಿ ಬೆಳಗಿದ
ಚಿಜ್ಯೋತಿ ನೀನಯ್ಯಾ,
ಎನ್ನ ಗುರು ಶಿವರಾತ್ರಿ ರಾಜೇಂದ್ರ ಮಹಾ ಪ್ರಭುವೆ
ನೀನಿತ್ತ ಬೆಳಕಿಗೆ ನಾನೇನ ನೀವೆನಯ್ಯಾ?

**ನ**ನ್ನ ಹೃನ್ಮಂದಿರದಲ್ಲಿ ಪ್ರತಿಷ್ಠಾಪಿತರಾಗಿರುವ ಪರಮೇಷ್ಠಿಸ್ವರೂಪರಾದ ಸುತ್ತೂರು ಜಗದ್ಗುರು ಶ್ರೀ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದಿವ್ಯ ಪಾದಾರವಿಂದಗಳಲ್ಲಿ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸಿ, ಸಭಾಧ್ಯಕ್ಷರಾದ ಶ್ರೀ ಎ.ಎ. ಶಾಂತಮಲ್ಲಪ್ಪನವರೆ, ಶ್ರೀಮತಿ ಶಾಂತಮಲ್ಲಪ್ಪನವರೆ ಹಾಗೂ ಆತ್ಮೀಯರೆ - ಅಣ್ಣನನ್ನು ಸ್ವಾಮಿ ಸಂಗಮನಾಥನು ಒಂದು ದಿನ ಕೇಳಿದನಂತೆ-

'ಬಸವ ಬಾರಯ್ಯ, ಮರ್ತ್ಯಲೋಕದೊಳಗೆ ಭಕ್ತರುಂಟೇ ಹೇಳಯ್ಯಾ?' ಎಂದು.

ಅದಕ್ಕೆ ಬಸವಣ್ಣ ಹೇಳಿದನಂತೆ-

'ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ ನಾನೊಬ್ಬನೆ ಭಕ್ತನು!' ಎಂದು.

ಅಣ್ಣನ ಉತ್ತರ ಅಲ್ಲಿಗೇ ನಿಂತಿದ್ದರೆ ತುಂಬಾ ಅಪಾರ್ಥಕ್ಕೆ ಕಾರಣವಾಗುತ್ತಿತ್ತೆಂದು ತೋರುತ್ತದೆ. ಬಸವಣ್ಣನಿಗೆ ಎಷ್ಟು ಸೊಕ್ಕು 'ನಾನು' ಎಂಬುದಿನ್ನೂ ಅವನಲ್ಲಿ ಅಳಿದಿಲ್ಲ. ಹಾಗೆ ಹೀಗೆ ಎಂಬೆಲ್ಲ ಭಾವನೆಗಳ ಬೆಳವಣಿಗೆಗೆ ದಾರಿಮಾಡಿಕೊಡುತ್ತ ಇತ್ತು. ಆದರೆ ಅಣ್ಣನ ಮುಂದಿನ ಮಾತುಗಳು ಹೀಗಿವೆ.

[ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ ನಾನೊಬ್ಬನೇ ಭಕ್ತನು]

ಮರ್ತ್ಯಲೋಕದ ಭಕ್ತರೆಲ್ಲರೂ ಜಂಗಮಲಿಂಗ, ನೀನೇ ಅಯ್ಯಾ!

ಕೂಡಲಸಂಗಮದೇವಾ.

ಭೂಲೋಕದಲ್ಲಿ ತಾನೊಬ್ಬನೇ ಭಕ್ತ, ಉಳಿದವರೆಲ್ಲರೂ ಸುಳಿದಾಡುವ ಲಿಂಗಗಳು, ಸಾಕ್ಷಾತ್ ಶಿವಸ್ವರೂಪಿಗಳು, ಶಿವನೇ ಅವರು! ಅಣುರೇಣು ತೃಣಕಾಷ್ಠಗಳಲ್ಲಿ ಅಡಗಿದ್ದಾನೆ ಭಗವಂತ! ಎಲ್ಲರೆದೆಗಳೂ ಶಿವನ ಚಿದಂಶದ ಸದನಗಳು.

'ಹೂವಾಗ ಹುದುಗ್ಯಾನ, ಮಾಲ್ಯಾಗ ಮಲಗ್ಯಾನ ಗಿರಿಮಲ್ಲ' ಅಂತಹ ಪರಮಾತ್ಮನ ಪ್ರತಿರೂಪಿಗಳಾಗಿರುವ ಭಕ್ತರೆಂದು ಹೇಳಿಕೊಂಡರೂ ಜಂಗಮಲಿಂಗಗಳೇ ತಾವಾಗಿರುವ ಸಮಸ್ತರಿಗೂ ಭಕ್ತನಾಗಿ ಸೇವೆಗೈಯುವ ಭಾಗ್ಯ ನನ್ನದು ಎಂದು ಎಲ್ಲೆಲ್ಲೂ, ಎಲ್ಲರಲ್ಲೂ ಶಿವನನ್ನೇ ದರ್ಶಿಸಿದ.

ಅಣ್ಣನಂತೆಯೇ ಸೇವೆಯೇ ಪೂಜೆ, ಸವಿನುಡಿಯೇ ಮಂತ್ರ, ಲೋಕಸಂಗ್ರಹಕಾರ್ಯವೇ ಗಂಧ ಅಕ್ಷತೆ, ಸದಾಚಾರವೇ ಸದಾಶಿವನಿಗೆತ್ತಿದ ಧೂಪದೀಪ ನೈವೇದ್ಯ - ಎಂಬ ಸದ್ಭಾವನೆಯಿಂದ ನಿರಂತರವೂ ಮನುಕುಲದ ಹಿತಕ್ಕಾಗಿ, ಹಿರಿಮೆಗಾಗಿ ಸದಾ ದುಡಿಯುತ್ತಿದ್ದಾರೆ ನಮ್ಮ ಸುತ್ತೂರು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರು. ಸರ್ವರಲ್ಲೂ, ಸದಾ ವೇಳೆಯಲ್ಲೂ ಶಿವನನ್ನೇ ಕಾಣುತ್ತಿದ್ದಾರೆ. ಅವರ ನಿಕಟವರ್ತಿಗಳಾದ ಅನೇಕರು ಗಮನಿಸಿರಬಹುದು ಅವರು ಮಾತುಮಾತಿಗೂ ತಮ್ಮ ಎದೆಯನ್ನು ಮುಟ್ಟಿಕೊಂಡು, ಕೈಗಳನ್ನು ಕಣ್ಣಿಗೆ ಒತ್ತಿಕೊಳ್ಳುತ್ತಿರುತ್ತಾರೆ. ಅದರರ್ಥ ನನ್ನ ಹೃದಯಾಂತರಾಳದಲ್ಲಿ ಅಡಗಿರುವ ಪರಶಿವನೆ, ನಿನ್ನ 'ಕಣ್' ತಪ್ಪಿಸಿ ನಾನು ನಡೆಯಲಾರೆ ನುಡಿಯಲಾರೆ, ನೀನು ನುಡಿಸಿದಂತೆ ನುಡಿಯುವ ಶುಕ ನಾನು, ನಾನಾಡಿದ್ದು ನೀನೇ ನುಡಿದದ್ದು. ಇದರ ಅಭೇದಕ್ಕೆ ನನ್ನ ಹೃದಯ, ನನ್ನ ನಾಲಗೆ ಇವೇ ಸಾಕ್ಷಿ - ಎಂಬುದನ್ನು ನಿರ್ದೇಶಿಸಿ ತೋರಿಸುತ್ತಾರೋ ಎಂಬಂತೆ ಅವರ ಚರ್ಯೆ ಇದೆ. ಕಣ್ಣಾರ ಕಂಡವರಿಗೆ ಮಾತ್ರ ಈ ರಹಸ್ಯ ವೇದ್ಯ.

ನಮ್ಮ ಶ್ರೀಗಳವರು ಶರಣಧರ್ಮದ ಸಂವಾಹಕರು, ನಿಷ್ಠಾನುಯಾಯಿಗಳು; ಶರಣರ ಹಲವು ವಚನಗಳಿಗೆ ಇವರು ವ್ಯಾಖ್ಯಾನವಾಗಿ ನಿಂತಿದ್ದಾರೆ! ದೀನದಲಿತರ ಸೇವೆ, ಹರಿಜನ ಗಿರಿಜನರ ಉದ್ಧಾರ ಇವೇ ಅವರ ನಿತ್ಯದ ನೇಮ, ಅನುಷ್ಠಾನಗಳು. 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು' ಎಂಬುದು ಅವರ ದೈನಂದಿನ ಗಾಯತ್ರಿ! ಇಂತಹ ಮಹಾಚೈತನ್ಯ ಮಾನವಶರೀರಿಯಾಗಿ ಭೂತಲಕ್ಕವತರಿಸಿ ಬಂದು ಇಂದಿಗೆ ಅರವತ್ತಾರು ವರ್ಷಗಳು ತುಂಬಿದುವು. ಆ ದಿನವನ್ನು ಹಬ್ಬವನ್ನಾಗಿ ಆಚರಿಸಲು ನಾವೆಲ್ಲರೂ ಇಲ್ಲಿ ನೆರೆದಿದ್ದೇವೆ. ಈ ಹಬ್ಬದಾಚರಣೆ ಆ ದಿವ್ಯಾತ್ಮನ ಶ್ರೇಯಸ್ಸಿಗಷ್ಟೇ ಅಲ್ಲ, ನಮ್ಮ ಪ್ರೇಯಸ್ಸಿಗೂ ಹೌದು.

ಈ ಪವಿತ್ರಾವಸರದಲ್ಲಿ ನಮ್ಮ ಮನಸ್ಸನ್ನು ಆ ಮಹದ್‌ವಿಭೂತಿಯ ಧ್ಯಾನ, ಆರಾಧನ, ಗುಣಗಾನಗಳಿಂದ ಪವಿತ್ರಗೊಳಿಸಿಕೊಳ್ಳಬೇಕು. ತನ್ಮೂಲಕ ಧನ್ಯತೆಯನ್ನು ಸಾಕಾರಗೊಳಿಸಿಕೊಳ್ಳಬೇಕು. ಅಂತಹ ಒಂದು ಅಮೃತಾವಕಾಶವನ್ನು ನನಗೆ ಕಲ್ಪಿಸಿಕೊಟ್ಟ ಶ್ರೀ ಸನ್ನಿಧಿಯ ಅರವತ್ತಾರನೆಯ ವರ್ಧಂತ್ಯುತ್ಸವದ ಕಾರ್ಯನಿರ್ವಾಹಕ ಮಂಡಳಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು.

ಬಂಧುಗಳೇ,

ನಾನು ಶುದ್ಧ ವೀರಶೈವ. ಹಾಗೆಂದು ಹೇಳಿಕೊಳ್ಳುವಲ್ಲಿ ನನಗೆ ಹೆಮ್ಮೆ ಇದೆ. ಅನ್ಯಧರ್ಮೀಯರು ಇಲ್ಲಿದ್ದಲ್ಲಿ ದಯಮಾಡಿ ತಪ್ಪು ತಿಳಿದುಕೊಳ್ಳಬಾರದಾಗಿ ಪ್ರಾರ್ಥನೆ. ನಾನು ನನ್ನ ತಾಯಿಯನ್ನು ಪ್ರೀತಿಸುತ್ತೇನೆ. ಅಂದರೆ ಬೇರೆಯವರ ತಾಯಿಯನ್ನು ದ್ವೇಷಿಸುತ್ತೇನೆ ಎಂದರ್ಥವಲ್ಲ. ನನ್ನನ್ನು ಹಡೆದಾಕೆಗೆ ಗೌರವ ತೋರಿಸುವುದು ನನ್ನ ಕರ್ತವ್ಯ. ಅದನ್ನು ನಿರ್ಭೀತಿಯಿಂದ ನಿರ್ವಹಿಸುತ್ತಿದ್ದೇನೆ. ಆದರೆ ಏನು ದೌರ್ಭಾಗ್ಯವೊ ಏನೊ ಯಾವುದೇ ಕೋರ್ಟು ಕಛೇರಿಗೆ ಹೋಗಿ ಅಲ್ಲೊಬ್ಬ ಲಿಂಗಾಯತ ಅಧಿಕಾರಿ ಇದ್ದರೆ ಅವನನ್ನು ಮಾತನಾಡಿಸಿ ನೀನು ಯಾವ ಜಾತಿ ಎನ್ನಿ ಅವನು ಕೂಡಲೇ ಘಟಸರ್ಪದ ಹೆಡೆ ತುಳಿದವನಂತಾಗುತ್ತಾನೆ. ತಾನು ಲಿಂಗಾಯತ ಎಂದು ಹೇಳಿಕೊಳ್ಳುವುದಕ್ಕೆ ಹೆದರಿ ಸಾಯುತ್ತಾನೆ. ಅವನ ಬದಲು ಓರ್ವ ಕ್ರಿಶ್ಚಿಯನ್ ಕೇಳಿದರೆ, I am a true christian' ಅಂತಾನೆ. ಒಬ್ಬ ಮುಸ್ಲಿಂ 'ನಾನು ಕಟ್ಟಾ ಮುಸಲ್ಮಾನ' ಅಂತಾನೆ. ಆ ಧೈರ್ಯ ಇವಕ್ಕೇಕಿಲ್ಲ? ಇವರು ವೀರಶೈವರೆ? ಸತ್ಯ ಹೇಳ್ತೇನೆ ಇಂಥವರು ವೀರರೂ ಅಲ್ಲ, ಶೈವರೂ ಅಲ್ಲ, ಇವರು ನಪುಂಸಕರು! ಅವರ ಮಾತು ಬೇಡ. ನಾವೀಗ ಅಕ್ಷರಶಃ ವೀರ-ಶೈವರಾಗಬೇಕು. ಕ್ರಾಂತಿಯ ಬಣ್ಣ ತಳೆದರೂ ಚಿಂತೆಯಿಲ್ಲ, ಇಂದು ಕರ್ನಾಟಕದಲ್ಲಿ ವೀರಶೈವರು ಒಂದಾಗಬೇಕು. ಅವರ ಮಕ್ಕಳು ಮೊಮ್ಮಕ್ಕಳ ಅಭ್ಯುದಯಕ್ಕಾಗಿ ಹೋರಾಡಬೇಕು. ವೀರಶೈವ ಮಠಗಳು ರಾಜಕೀಯಕ್ಕೆ ಕಾಲಿರಿಸಬೇಕು. ರಾಜಕೀಯ ಧರ್ಮದ ಬೆನ್ನೆಲುಬು. ರಾಜಕೀಯದ ಅರ್ಥ ಪುಂಡನ ಕಡೆಯ ನಿರ್ಧಾರ ಎಂದಲ್ಲ; ರಾಜಕೀಯ ಸ್ವೇಚ್ಛಾಚಾರದ ವೇದಿಕೆಯೂ ಅಲ್ಲ; ಅದು ಸೇವೆಯ ಕರ್ಮಭೂಮಿ. ಈ ನೈಜಾರ್ಥದಲ್ಲಿ ಗ್ರಹಿಸಿಕೊಂಡು ಅದನ್ನು ದುಡಿಸಿಕೊಳ್ಳಬೇಕು. ಬಸವಣ್ಣ ಕಲ್ಯಾಣದ ಮಹಾಮಂತ್ರಿಯಾಗಿದ್ದರಿಂದಲೇ ಅವನು ಸಾರಿದ ಧರ್ಮಕ್ಕೆ ಒಂದು ಅರ್ಥ ಬಂತು. ಒಂದು ವೇಳೆ ಅವನು ಸಾಮಾನ್ಯ ಪೌರನಾಗಿದ್ದಿದ್ದರೆ ಧರ್ಮಪ್ರಸಾರದ ಕಾರ್ಯ ಅಂದಾದ ಪ್ರಮಾಣದಲ್ಲಿ ಆಗಲು ಸಾಧ್ಯವಿತ್ತೇ ಆಲೋಚಿಸಿ. ಹಳ್ಳಿಗೊಂದು ಬಸವಣ್ಣನ ಗುಡಿ ಇದೆ. ಹಳ್ಳಿಗೊಂದು ವೀರಶೈವರ ಮನೆಯಿದೆ; ಮಠಗಳೂ ಇವೆ. ಪ್ರತಿ ಮನೆಯೂ ಮಂತ್ರಾಲೋಚನೆಯ ಹಾಗೂ ಸಮಾಜಚಿಂತನೆಯ ಮಂತ್ರಾಲಯ ಆಗಬೇಕು. ಪ್ರತಿಯೊಂದು ಮಠವೂ ವೀರಶೈವ ಸಂಘಟನೆ, ವಿರೋಧ ಮತಗಳ ಪ್ರತಿಭಟನೆ – ಇವುಗಳ ಕೇಂದ್ರವಾಗಬೇಕು. ನಿಜವಾದ ರಾಜಕೀಯದ ರಂಗಗಳಾಗಬೇಕು. ಈ ಪವಿತ್ರ ದಿನದಲ್ಲಿ ಸತ್ಯಶುದ್ಧ ಕಾಯಕನಿಷ್ಠರಾದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ

ವರ್ಧಂತ್ಯುತ್ಸವದ ಈ ಶುಭ ಮುಹೂರ್ತದಲ್ಲಿ ನಾನು ಸಮಸ್ತ ವೀರಶೈವ ಮಠಗಳಿಗೂ ಕರೆ ಕೊಡುತ್ತಿದ್ದೇನೆ — ಕೃಪೆಮಾಡಿ ಎಲ್ಲ ಮಠಗಳೂ ಇಂದಿನಿಂದ ಮುಂದೆ ರಾಜಕೀಯರಂಗ ದಲ್ಲಿ ಸಕ್ರಿಯ ಪಾತ್ರವನ್ನು ವಹಿಸಬೇಕು ಎಂದು. ಹಿಂದೆ ಪೂಜೆ ಅನುಷ್ಠಾನಗಳು ಎಷ್ಟು ಮುಖ್ಯವಾಗಿದ್ದುವೊ ಇಂದು ಸಮಾಜದ ಒಳಿತಿಗಾಗಿ ದುಷ್ಟಶಕ್ತಿಗಳನ್ನು ಸದೆಬಡೆಯಲು ವೀರಶೈವ ಸಮಾಜ ಒಂದಾಗಬೇಕು, ಹೋರಾಡಬೇಕು, ಕೆಚ್ಚು ತೋರಬೇಕು. ಅಂತಾಗಬೇಕಾದರೆ ರಾಜಕೀಯಕ್ಕೆ ಪ್ರವೇಶಿಸಬೇಕು. ಧರ್ಮದ್ರೋಹಿಗಳಿಗೆ, ದೇಶದ್ರೋಹಿಗಳಿಗೆ, ಸಮಾಜ ಘಾತುಕರಿಗೆ ವೀರಶೈವ ಸಮಾಜ ಸರಿಯಾದ ಪಾಠ ಕಲಿಸಲೇಬೇಕು. ಆ ಕಾರಣ ಇಂದು ಎಲ್ಲ ವೀರಶೈವ ಬಾಂಧವರೂ ಶ್ರೀ ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಪ್ರತಿಜ್ಞಾಬದ್ಧರಾಗಲೇಬೇಕು ಎಂದು ಆಗ್ರಹಪೂರ್ವಕವಾಗಿ ಆಹ್ವಾನಿಸುತ್ತೇನೆ.

ಬಂಧುಗಳೇ,

ಇಂದು ವೀರಶೈವ ಮಠಗಳಿಗೆ, ಬೌದ್ಧವಿಹಾರಗಳಿಗೆ ನಿಜವಾದ ಸಮಾಜಸೇವೆ ಮಾಡುವ ಒಂದು ಅಮೃತಾವಕಾಶ ಬಂದಿದೆ. ಅದು ತಾನಾಗಿಯೇ ಒದಗಿಬಂದಿದೆ. ಅದು ಅಸ್ಪೃಶ್ಯತೆಯನ್ನು ದೂರಮಾಡಿ, ಹರಿಜನರನ್ನು ಮತಾಂತರದ ಪಿಡುಗಿನಿಂದ ಉದ್ಧರಿಸುವುದು. ಶ್ರೀ ಪೇಜಾವರ ಮಠದ ಸ್ವಾಮೀಜಿಯವರೊಬ್ಬರು ನಿಷ್ಠೆಯಿಂದ ವಿಶ್ವವಿಶಾಲ ಭಾವನೆಯಿಂದ ಹೆಣಗುತ್ತಿದ್ದಾರೆ. ಅವರಂತೆ ಎಲ್ಲ ವೀರಶೈವ ಸ್ವಾಮಿಗಳೂ ಸುಧಾರಣೆಯ ದೀಕ್ಷೆ ಸ್ವೀಕರಿಸಬೇಕು. ವೀರಶೈವ ಹಾರುವ ಮೊದಲಾಗಿ ಅಂತ್ಯಜ ಕಡೆಯಾಗಿ, ಸಕಲರನ್ನೂ ಶಿವನೆಂದೇ ಭಾವಿಸಿ ಪೂಜಿಸಿದ, ಬಸವಣ್ಣ ಅಂದು ಉತ್ತಮ ಕುಲದವರನ್ನು ಶರಣರೆಂದು ಕರೆದರೆ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಸಮಗಾರ ಹರಳಯ್ಯ ಮೊದಲಾದವರನ್ನು ಶರಣಶ್ರೇಷ್ಠರು ಎಂದು ಕರೆಯುತ್ತಿದ್ದ. ಇಂದು ಕರ್ನಾಟಕ — ಅಷ್ಟೇಕೆ ಇಡೀ ಭರತಖಂಡದಲ್ಲೇ ಒಂದು ಧಾರ್ಮಿಕ ಕ್ರಾಂತಿ ಆಗಿ, ಹರಿಜನರು ಲಿಂಗಧಾರಿಗಳಾಗಿ ಅಥವಾ ಆಗದೆ ಹಿಂದೂ ಧರ್ಮದಲ್ಲಿ ಉಳಿದು ಬೆಳೆಯುವುದಾದರೆ, ರಾಕ್ಷಸೀ ಮನೋಧರ್ಮದ ಅನ್ಯಧರ್ಮಗಳ ಪಿಡುಗಿನಿಂದ ಬದುಕುವುದಾದರೆ ಅದು ಕೇವಲ ವೀರಶೈವ ಧರ್ಮದಿಂದ ಸಾಧ್ಯ; ವೀರಶೈವ ಮಠಗಳಿಂದ ಸಾಧ್ಯ! ಸಾಕಷ್ಟು ಪ್ರಮಾಣದಲ್ಲಿ ಬೌದ್ಧ ಧರ್ಮಕ್ಕೆ ಸಾಧ್ಯ. ಬೇರಾವ ಧರ್ಮ, ಮಠ-ಪೀಠಗಳಿಂದಲೂ ಸಾಧ್ಯ ಇಲ್ಲ. ಭಾರತ ಭಾರತವಾಗಿ ಉಳಿಯಬೇಕಾದರೆ ಹಿಂದೂಸ್ತಾನ ಹಿಂದೂಸ್ತಾನವೇ ಆಗಿ ಬದುಕಬೇಕಾದರೆ ವೀರಶೈವ ದಿಟ್ಟ ಹೆಜ್ಜೆ ಇಡಬೇಕಾಗಿದೆ. ಇಂದು ಅದು ಹಿಂದೆ ಬಿದ್ದರೆ ಕೇವಲ ಇನ್ನೆರಡು ಜನಗಣತಿಯೊಳಗಾಗಿ ಹಿಂದೂಸ್ತಾನ ಪಾಕಿಸ್ತಾನವೆಂದು ನಾಮಾಂತರ ಮಾಡಿಕೊಳ್ಳಬೇಕಾದ ಗತಿ ಬರುವುದರಲ್ಲಿ ಸಂದೇಹವಿಲ್ಲ.

ಕೆಲವರು ಹೇಳಿದರು -"ಯಾವ ಹಾವನೂರ್, ವೀರಶೈವರನ್ನು ಮುಂದುವರಿದವರು ಎಂದು ವರದಿ ಒಪ್ಪಿಸಿ ಸಮಾಜದ ನಾಶಕ್ಕೆ ಕಾರಣರಾದರೋ ಅವರೇ ಮೊನ್ನೆ ಹುಬ್ಬಳ್ಳಿಯಲ್ಲಿ ಮತಾಂತರದ ಪಿಡುಗನ್ನು ದೂರಮಾಡಬೇಕಾದರೆ ಅದು ವೀರಶೈವ ಮಠಗಳಿಂದ ಮಾತ್ರ ಸಾಧ್ಯ ಎಂದು ನುಡಿದರು. ಇದು ಶುದ್ಧ ವಿಪರ್ಯಾಸದ ಮಾತು ಅಲ್ಲವೇ? ಇಂತಹ ವರ್ತನೆಗೆ ಯಾವುದೇ ರಾಷ್ಟ್ರದ ರಾಜಕೀಯ ನಾಚಿ ತಲೆಬಾಗಬೇಕು ಅಲ್ಲವೇ? ಮಾತಿನಂತೆ ಮನವಿಲ್ಲದ ಜಾತಿಡೊಂಬರಿಗೆ ನಾಯಕತ್ವ ನೀಡಿ ನಮ್ಮ ರಾಷ್ಟ್ರ ಪತನ ಪದವಿ ಪಡೆಯಿತು ಅಲ್ಲವೇ?" ಎಂದೆಲ್ಲ ಪ್ರಶ್ನಿಸಿದ್ದೂ ಉಂಟು. ಆದರೆ ಅಂತಹ ನನ್ನ ಸಮಾಜಬಾಂಧವರಲ್ಲಿ ನನ್ನ ಕಳಕಳಿಯ ಪ್ರಾರ್ಥನೆ-ವೀರಶೈವರು ಹೇಡಿಗಳಲ್ಲ. ಅವರು "ಸ್ವತಂತ್ರ ಧೀರರು." ಅವರು ಹೇಗೋ ಬದುಕುತ್ತಾರೆ. ಆದರೆ ತಾವು ಬದುಕಿ ಅನ್ಯರಿಗೆ ಬದುಕು ಕೊಡುತ್ತಾರೆ, ಬದುಕಗೊಡುತ್ತಾರೆ. ಬೇರೆಯವರಂತೆ ನಂಬಿಕೆಗೆ ದ್ರೋಹಬಗೆವವರಲ್ಲ, ಸ್ವಾರ್ಥಿಗಳಲ್ಲ. ಅವರಿಗಾದ ವೈಯಕ್ತಿಕ ನಷ್ಟ ಏನೇ ಇರಲಿ, ರಾಷ್ಟ್ರಕ್ಕೆ ಬಂದಿರುವ ಈ ಆಪತ್ತು ದೂರವಾಗಬೇಕು. ಆದ್ದರಿಂದ ನನ್ನ ಪ್ರಾರ್ಥನೆ ಇಷ್ಟೆ. ಸುತ್ತೂರು ಮಠ, ಹುಬ್ಬಳ್ಳಿ, ಧಾರವಾಡ, ಭಾಲ್ಕಿ, ಮುಂಡರಗಿ, ಚಿತ್ರದುರ್ಗದ ಮಠಗಳು, ಸಿರಿಗೆರೆ ಮಠ, ಸಿದ್ಧಗಂಗಾ ಮಠ, ಕುಪ್ಪೂರುಗದ್ದಿಗೆ ಮಠ, ಗದಗ, ಬಾಳೆಹಳ್ಳಿ ಶ್ರೀಶೈಲ ಪೀಠಗಳು, ಬೌದ್ಧವಿಹಾರಗಳು ಎಲ್ಲವೂ ಸೇರಿ ತಲಾ ಹತ್ತು ಜನ, ನೂರು ಜನ ಸ್ವಯಂಸೇವಕ ಸನ್ಯಾಸಿಗಳನ್ನು ಮದರಾಸಿನ ಕಾಮಾಕ್ಷೀಪುರ, ಬೆಂಗಳೂರು ಕಂಟೋನ್‌ಮೆಂಟ್ ಭಾಗಗಳಿಗೆ ಹಾಗೂ ಆಂಧ್ರ, ತಮಿಳುನಾಡು, ಉತ್ತರ ಭಾರತದ ಹಲವೆಡೆಗಳಲ್ಲಿ ತಂಡತಂಡವಾಗಿ ಸ್ವಂತ ಖರ್ಚಿನಿಂದ ಕಳುಹಿಸಬೇಕು. ಹೋದವರು ಜನತೆಗೆ ತಿಳಿಯಹೇಳಬೇಕು. ಅಸ್ಪೃಶ್ಯರು ಎಂಬವರಲ್ಲಿರುವ ಕೀಳರಿಮೆ (Inferiority Complex)ಯನ್ನು ದೂರಮಾಡಿ ಸಹಪಂಕ್ತಿ ಭೋಜನ ಮಾಡಿ ಸತ್ಕುಲಕ್ಕೆ ಸೇರಿಸಬೇಕು. ಅಂದರೆ ಎಲ್ಲರಿಗೂ ಲಿಂಗಧಾರಣೆ ಮಾಡಿ ವೀರಶೈವರನ್ನಾಗಿಸುವುದು ಎಂದರ್ಥವಲ್ಲ. ಅವರಿಗೆ ಸಜ್ಜನಿಕೆ ಮೂಡಿಸಿ ಭಾರತೀಯನಾಗಿ ಹರಿಜನನಾಗಿಯೇ, ಹಿಂದೂ ಜನಾಂಗದ ಒಂದಂಗವಾಗಿ ಬದುಕುವಂತೆ ತಿಳಿಯಹೇಳಬೇಕು, ತಿದ್ದಬೇಕು, ಅವರನ್ನು ಹಿಂದೂಗಳನ್ನಾಗಿಯೇ ಉಳಿಸಬೇಕು. ಸ್ವಇಚ್ಛೆಯಿಂದಲೇ ಮುಂದೆ ಬಂದರೆ ಅಂತಹವರಿಗೆ ವೀರಶೈವ ದೀಕ್ಷೆ, ಬೌದ್ಧ ಧರ್ಮ ಪ್ರವಚನ ನೀಡಿ ಉದ್ಧರಿಸಬೇಕು. ನೀವು ಉಳಿದರೆ ನಿಮ್ಮ ಧರ್ಮ ಉಳಿಯುತ್ತೆ, ನಿಮ್ಮ ಧರ್ಮ ಉಳಿದರೆ ನಿಮ್ಮ ದೇಶ ಉಳಿಯುತ್ತೆ, ಇಲ್ಲವಾದರೆ ಸರ್ವನಾಶ! ಮುಂದಿನ ನಮ್ಮ ಪೀಳಿಗೆ ನಮಗೆ ಶಾಪಕೊಡದಿರಬೇಕಾದರೆ ನಾವಿಂದು ಕಂಕಣ ಕಟ್ಟಿಕೊಳ್ಳಲೇಬೇಕು. ಅದಕ್ಕೆಂದೇ ಆಗಲೇ ಹೇಳಿದೆ ವೀರಶೈವರಿಗೆ, ವೀರಶೈವ ಮಠಗಳಿಗೆ, ಬೌದ್ಧವಿಹಾರಗಳಿಗೆ ಇಂದು ಯಾರಿಗೂ ಸಿಗದ ರಾಷ್ಟ್ರಕ್ಕೆ, ಧರ್ಮಕ್ಕೆ ಸೇವೆ ಸಲ್ಲಿಸುವ ಪುಣ್ಯಾವಕಾಶ ಲಭಿಸಿದೆ ಎಂದು. ವೀರಶೈವ ಧರ್ಮವನ್ನು ಒಪ್ಪಿದವರಿಗೆ ಒಂದು ರುದ್ರಾಕ್ಷಿ, ಒಂದು ವಿಭೂತಿಗಟ್ಟಿ ಕೊಡಿ ಅಷ್ಟು ಸಾಕು, ಅವರನ್ನು ಹಿಂದೂಗಳಾಗಿಯೇ ಉಳಿಸಿ,

ರಾಷ್ಟ್ರವನ್ನ ಕಾಪಾಡಿ. ಮುಸಲ್ಮಾನರಿಗೆ ಪ್ರಪಂಚದಲ್ಲಿ ನೂರೆಂಟು ಇಸ್ಲಾಂ ರಾಷ್ಟ್ರಗಳಿವೆ. ಕ್ರಿಶ್ಚಿಯನ್ನರಿಗಿವೆ, ಆದರೆ ಹಿಂದೂಗಳಿಗೆ ಹಿಂದೂಸ್ತಾನ ಒಂದೇ. ಅವರ ತಾಯ್ನಾಡು. ಅದನ್ನು ಬಿಟ್ಟರೆ ಅವರಿಗೆ ಬೇರೆ ಗತಿಯೇ ಇಲ್ಲ. ಅದನ್ನು ಹಿಂದೂಸ್ತಾನವಾಗಿ ಉಳಿಸುವುದು ಎಲ್ಲ ಭಾರತೀಯ ಹಿಂದೂಗಳ ಧರ್ಮ.

ಹಿಂದೂ ಎಂದಾಗ ಒಂದು ಸಂದೇಹ ಬರಬಹುದು. ಕ್ಷಮಿಸಿ, ಹಿಂದೂ ಎಂದರೆ ಬೇರಾರೂ ಅಲ್ಲ. ಭಾರತವನ್ನು ತನ್ನ ಧರ್ಮದ ಮಾತೃಸ್ಥಾನವಾಗಿ ಉಳ್ಳವನು ಎಂದರ್ಥ. ಕ್ರೈಸ್ತರಿಗೆ ಜೆರೂಸಲೆಮ್ ಧರ್ಮದ ಮಾತೃಸ್ಥಾನ, ಮುಸಲ್ಮಾನನಿಗೆ ಮಕ್ಕಾ ಧರ್ಮದ ಮಾತೃಸ್ಥಾನ ಅಂತೆಯೇ ಉಳಿದೆಲ್ಲ ಭಾರತೀಯರಿಗೂ, ಅವರು ಯಾವುದೇ ಜಾತಿ-ಪಂಥಗಳಿಗೆ ಸೇರಿರಲಿ ಅವರ ಧರ್ಮದ ಮಾತೃಸ್ಥಾನ ಭಾರತ ಆಗಿದ್ದಲ್ಲಿ, ಅವರು ನಿಜವಾದ ಭಾರತೀಯರು, ನಿಜವಾದ ಹಿಂದೂಗಳೂ ಎಂದು ತಿಳಿಯಬೇಕು. ಈಗ ನಾವೆಲ್ಲರೂ ಹಿಂದೂಗಳು, ನಾವೆಲ್ಲರೂ ಒಂದಾಗೋಣ, ರಾಷ್ಟ್ರವನ್ನು ಉಳಿಸೋಣ.

ನಮ್ಮ ದುರದೃಷ್ಟವೊ ಅಥವಾ ರಾಷ್ಟ್ರದ ದೌರ್ಭಾಗ್ಯವೊ ಕಾಣೆ! ನಮ್ಮ ನಾಯಕರುಗಳಿಗೆ ಸ್ವಾರ್ಥ ಹೊರತು ಬೇರೇನೂ ಬೇಕಾಗಿಲ್ಲ. ಅವರಿಗಿರುವುದೊಂದೇ ಹಣದ ದಾಹ! ಓಟಿನ ಬೇಟೆ! ತಾನುಂಟೋ ಮೂರು ಲೋಕವುಂಟೋ ಎಂಬ ಭಾವನೆ ಬೆಳೆದು ಮರವಾಗಿದೆ ಅವರಲ್ಲಿ. ಭಾರತ ಈಗ ಹತ್ತಿಕೊಂಡು ಉರಿಯುತ್ತಿರುವ ಮನೆ. ಈ "ಬೆಂದ ಮನೆಯಲ್ಲಿ ಇರಿದಷ್ಟೇ ಲಾಭ' ಎಂಬ ದೌಷ್ಟ್ಯ ಹಲವರದು, ಮನೆ ಹತ್ತಿ ಉರಿದರೆ ನನಗೇನಂತೆ ಎರಡು "ಗಳ" ಇರಿದು ಕಂಕುಳಲ್ಲಿಟ್ಟುಕೊಂಡರೆ ಸಾಕು ಎನ್ನುತ್ತಿದ್ದಾರೆ ಈ ದೇಶಭಕ್ತರು. ಇಂಥವರಿಗೆ ಮಾರ್ಗದರ್ಶನ ನೀಡುವ ನಾಯಕಮಣಿಗಳು ದೇವರಿಗೇ ಪ್ರೀತಿ! ಅಪ್ಪ ಸತ್ತರೇನಂತೆ ತಿನ್ನಲು ಉದ್ದಿನೊಡೆ ಸಿಕ್ಕವಲ್ಲಾ ಸಾಕು ಎನ್ನುವ ಅಲ್ಪ ತೃಪ್ತರು ಈ ರಾಷ್ಟ್ರಪ್ರೇಮಿಗಳು! ಇವರಿಬ್ಬರ ಕಬಂಧಾಲಿಂಗನದಲ್ಲಿ ಸುಕ್ಷೇಮದಿಂದಿರುವ ನಾವು ಸಾಮಾಜಿಕ ಪ್ರಜೆಗಳು ಅಂಧರಾಗಿದ್ದೇವೆ. ರಾಷ್ಟ್ರದ ಕಲ್ಪನೆಯೇ ನಮ್ಮ ತಪ್ಪಲೆಯಂತಹ ತಲೆಗೆ ಬರುವುದಿಲ್ಲ; ದೇಶೋದ್ಧಾರ ನಮ್ಮ ದಪ್ಪ ಚರ್ಮಕ್ಕೆ ತಟ್ಟುವುದೇ ಇಲ್ಲ; ತಟ್ಟಿದರೂ ಅದರೊಳಗೆ ಇಳಿಯುವುದು ಸಾಧ್ಯವೇ ಇಲ್ಲ; ಆ ಮಟ್ಟಕ್ಕಿದೆ. ಆದ್ದರಿಂದ ನಮ್ಮ ರಾಜಕಾರಣಿಗಳು, ಸಮಾಜ ಸುಧಾರಕರು ಹಾಗೂ ನಾವು ಈ ಮೂರೂ ಜನರ ಸ್ಥಿತಿ ಹೇಗಿದೆ ಎಂಬುದಕ್ಕೆ ಒಂದು ಕಥೆ ಹೇಳ್ತೇನೆ - ಮೊನ್ನೆ 'The persion tales' ಎಂಬ ಒಂದು ಪುಸ್ತಕ ಓದುತ್ತಿದ್ದೆ. ಅದರದೊಂದು ಕಥೆ ಹೀಗಿದೆ. ದಯವಿಟ್ಟು ಕೇಳಬೇಕಾಗಿ ಪ್ರಾರ್ಥನೆ.

ಪರ್ಷಿಯಾ ದೇಶದ ಒಂದು ಊರಿನಲ್ಲಿ 'ಕನ್ನಡಿ' ಎಂದರೇನೆಂದೇ ಗೊತ್ತಿರಲಿಲ್ಲವಂತೆ. ಕನ್ನಡಿ ಎನ್ನುವುದರ ಹೆಸರನ್ನೇ ಯಾರೂ ಕೇಳಿರಲಿಲ್ಲವಂತೆ. ಒಂದು ದಿನ ಅಕಸ್ಮಾತ್ ಒಬ್ಬ ವ್ಯಕ್ತಿಗೆ ಒಂದು ಕನ್ನಡಿ ಸಿಕ್ಕಿತಂತೆ. ಅದನ್ನು ನೋಡಿದ. ಅದರಲ್ಲಿ ಅವನ ಪ್ರತಿಬಿಂಬ ಕಂಡಿತು. ಅವನಿಗೆ ಆಶ್ಚರ್ಯವಾಯಿತು, ಆನಂದವೂ ಆಯಿತು. ಆಶ್ಚರ್ಯ! ಇದೇನಿದು

ಈ ಫೋಟೋ ಇಷ್ಟು ದಿನ ಎಲ್ಲಿತ್ತು ಎಂದು, ಆನಂದ. ಅದರಲ್ಲಿ ತನ್ನ ಅಜ್ಜ ಇದ್ದುದು. ಅವನಿಗೆ ಅದರದಲ್ಲಿದ್ದುದು ತನ್ನ ಪ್ರತಿಬಿಂಬ ಎಂಬ ಅರಿವಾಗಲಿಲ್ಲ. ಅವನ ಅಜ್ಜನನ್ನು ನೋಡಿದ್ದ ಚಿಕ್ಕಂದಿನಲ್ಲಿ; ಅವನ ಹಾಗೇ ಇತ್ತು ಅದರಲ್ಲಿದ್ದ ಅವನ ಪ್ರತಿಬಿಂಬ. ಅದನ್ನು ಅಜ್ಜನ ನೆನಪಾದಾಗಲೆಲ್ಲಾ ಆ ಕನ್ನಡಿ ಹೊರತೆಗೆದು ಅದರಲ್ಲಿ ಪ್ರತಿಫಲಿತವಾಗುತ್ತಿದ್ದ ತನ್ನ ಬಿಂಬವನ್ನೇ ನೋಡಿಕೊಂಡು, ತನ್ನ ಅಜ್ಜನ ಭಾವಚಿತ್ರ ಎಂದು ಭಾವಿಸಿ ಅದಕ್ಕೆ ನಮಸ್ಕರಿಸಿ ಬಚ್ಚಿಟ್ಟುಕೊಳ್ಳುತ್ತಿದ್ದ. ಯಾರಿಗೂ ಕಾಣಿಸುತ್ತಿರಲಿಲ್ಲ. ತನ್ನ ಹೆಂಡತಿಗೂ ಅದನ್ನ ತೋರಿಸಿರಲಿಲ್ಲ. ಅವಳು ಬಂದಳೆಂದರೆ ಕನ್ನಡಿಯನ್ನು ಅವಳಿಗೆ ಗೊತ್ತಾಗದೆಡೆ ಬಚ್ಚಿಡುತ್ತಿದ್ದ. ಅವನ ಹೆಂಡತಿ ಅವನ ನಾಲ್ಕಾರು ಸಲದ ವರ್ತನೆಯನ್ನು ಕಂಡು, ಅವಳ ಕುತೂಹಲ ಹೆಚ್ಚಿತು. ಗಂಡ ಎಲ್ಲೋ ಹೋಗಿದ್ದ ಸಮಯವನ್ನು ಕಾದು ನೋಡಿದಳು. ಅದರಲ್ಲಿ ಅವಳ ಮುಖ ಕಾಣಬೇಕೆ!

ಅವಳಿಗೆ ಆಶ್ಚರ್ಯ ಹಾಗೂ ಸಿಟ್ಟು ಏಕಕಾಲದಲ್ಲಿ ಮೂಡಿದುವು. ನನ್ನ ಗಂಡ ನನಗೇ ಮೋಸ ಮಾಡುತ್ತಿದ್ದಾನೆ. ಯಾವಳೋ ಸುಂದರಿಯೊಬ್ಬಳನ್ನು ಕಾಮಿಸಿ ದ್ರೋಹ ಬಗೆಯುತ್ತಿದ್ದಾನೆ. ಅದಕ್ಕೆಂದೇ ಬಯಕೆಯಾದಾಗ ಆ ಚೆಲುವೆಯ ಫೋಟೋ ನೋಡುವುದು. ಸ್ಪರ್ಶಿಸಿ ಮುತ್ತಿಟ್ಟು ಬಚ್ಚಿಡುವುದು ಮಾಡುತ್ತಿದ್ದಾನೆ ಎಂದೆಲ್ಲಾ ಭಾವಿಸಿದಳು. ಅವಳೂ ಕನ್ನಡಿ ಕಂಡವಳಲ್ಲ, ಕನ್ನಡಿಯಲ್ಲಿನ ಬಿಂಬ ತನ್ನ ಪ್ರತಿಬಿಂಬ ಎಂಬ ಅರಿವು ಇಲ್ಲ. ಸುಖದ ನೆಲೆವೀಡಾಗಿದ್ದ ಮನೆಯಲ್ಲಿ ಕುರುಕ್ಷೇತ್ರ ಆರಂಭವಾಯಿತು. ಗಂಡ ಹೆಂಡಿರಲ್ಲಿ ಮಾತಿಲ್ಲ, ಕಥೆಯಿಲ್ಲ, ನಿತ್ಯ ಜಗಳ, ಕಿತ್ತಾಟ ರಾದ್ಧಾಂತ.

ದೂರು ಆ ಊರಿನ ಮುಸಲ್ಮಾನ ಪ್ರವಾದಿಯವರೆಗೆ ಮುಟ್ಟಿತು. ಪ್ರವಾದಿ ಅವರ ಮನೆಗೆ ಬಂದ. ವಿಚಾರಿಸಿದ. ಹಾಲಿನಂತಿದ್ದ ಅವರ ಸಂಸಾರ ಇದ್ದಕ್ಕಿದ್ದಹಾಗೆ ಒಡೆದು ಹಾಳಾಗಲು ಕಾರಣ ಕೇಳಿದ. ಹೆಂಡತಿ ವರದಿ ಒಪ್ಪಿಸಿದಳು. ತನ್ನ ಗಂಡ ಬೇರೊಬ್ಬಳನ್ನು ಗುಪ್ತವಾಗಿ ಕಾಮಿಸಿದ್ದಾನೆ. ನಾನೇ ನನ್ನ ಕಣ್ಣಾರ ಅವನ ಹಳೇ ಅಂಗಿಯ ಕಿಸೆಯಲ್ಲಿದ್ದ ಫೋಟೋ ನೋಡಿದ್ದೇನೆ ಎಂದು ಆಪಾದಿಸಿದಳು. ಗಂಡ ಅವಳ ಆಪಾದನೆಗಳನ್ನು ನಿರಾಕರಿಸಿದ. ಅಲ್ಲದೆ ಆ ಕನ್ನಡಿಯಲ್ಲಿರುವುದು ನನ್ನ ಅಜ್ಜನ ಫೋಟೋ ಯಾವ ಹೆಂಗಸಿನದ್ದಲ್ಲ ಎಂದು ಹೇಳಿ ತನ್ನನ್ನೇ ತಾನು ಸಮರ್ಥಿಸಿಕೊಂಡ. ಹೆಂಡತಿ ಆಪಾದನೆ ಅದಕ್ಕೆ ತಕ್ಕ ಗಂಡನ ಪ್ರತಿಪಾದನೆ ಮತ್ತು ಸಮರ್ಥನೆಗಳು ಜೋರಾಗಿಯೇ ನಡೆದು ಪ್ರವಾದಿಗೆ ಬೇಸರ ಬಂತು. ಅವರಿಬ್ಬರ ವಿರಸಕ್ಕೆ ಕಾರಣವಾದ ಕನ್ನಡಿ ತರಿಸಿದ. ಅದರಲ್ಲಿ ಕಣ್ಣಿಟ್ಟು ನೋಡಿದ. ಸ್ವಲ್ಪ ಹೊತ್ತು ನೋಡಿದ. ಆಮೇಲೆ ತೃಪ್ತಿಯ ನಿಟ್ಟುಸಿರು ಬಿಟ್ಟು, "ಅಯ್ಯೋ ನಿಮ್ಮ ದಡ್ಡತನಕ್ಕೆ ನಗಬೇಕೋ ಅಳಬೇಕೋ ನನಗೊಂದೂ ತಿಳಿಯದು. ನೋಡಿ, ನೀನು ಹೇಳಿದಂತೆ ಇದು ನಿಮ್ಮಜ್ಜನ ಫೋಟೋವೂ ಅಲ್ಲ, ನೀನು ಹೇಳಿದಂತೆ ನಿನ್ನ ಗಂಡನ ಪ್ರೇಯಸಿಯದೂ ಅಲ್ಲ. ಇದು, ಓರ್ವ ಪ್ರವಾದಿಯ ಫೋಟೋ" ಅಂದ.

ಅದರಲ್ಲಿ ಅವನಿಗೆ ಕಾಣಿಸಿದ್ದು ಅವನ ಪ್ರತಿಬಿಂಬವೇ ಆದರೂ ಅದು ತನ್ನ ಬಿಂಬ ಎಂಬ ಅರಿವು ಇಲ್ಲ.

ಈ ಕಥೆಯಿಂದ ನಮಗೆ ವೇದ್ಯವಾಗುವುದಿಷ್ಟು — ಈ ಮೂವರಿಗೂ ಕನ್ನಡಿಯಲ್ಲಿ ಕಾಣಿಸಿದ್ದು ತಮ್ಮ ಪ್ರತಿಬಿಂಬಗಳು ಎಂಬ ಅರಿವಿಲ್ಲ. ನಮ್ಮ ನಾಯಕರಿಗೆ, ಸಮಾಜ ಸುಧಾರಕರಿಗೆ, ಇವರ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ನಮಗೆ — ಈ ಮೂವರಲ್ಲೂ ಆತ್ಮಪ್ರತ್ಯಯವೆಂಬುದೇ ಇಲ್ಲದಾಗಿದೆ. ಇಂಥಹ ಆತ್ಮಜ್ಞಾನವಿಲ್ಲದ, ಅವಿವೇಕದ ಮುದ್ದೆಗಳಿಗೆ ಧರ್ಮದ ರಕ್ಷಣೆಯ ಹೊಣೆಯಾಗಲೀ, ರಾಷ್ಟ್ರದ ಪ್ರಗತಿಯ ಕಲ್ಪನೆಯಾಗಲೀ ಹೇಗೆ ಬರಲು ಸಾಧ್ಯ? ಆ ಕಾರಣ ಆತ್ಮಪ್ರತ್ಯಯವನ್ನು ಸರ್ವರಲ್ಲೂ ಮೂಡಿಸಬಲ್ಲ ಚಿಲುಮೆಗಳೆಂದರೆ ನಮ್ಮ ಮಠಮಾನ್ಯಗಳು. ಅಲ್ಲಿರುವ ಧರ್ಮಪೀಠಗಳನ್ನೇರಿರುವ ಅಪರೋಕ್ಷಜ್ಞಾನಿಗಳೂ, ಲೋಕಹಿತಸಾಧಕರೂ ಆದ ಶ್ರೀ ಶ್ರೀಗಳವರು. ಈ ಮಹತ್‌ಕಾರ್ಯದಲ್ಲಿ ನಮ್ಮ ಸುತ್ತೂರು ಪೀಠ ಹಿಂದೆ ಬಿದ್ದಿಲ್ಲ.

ನಮ್ಮ ಸುತ್ತೂರು ಜಗದ್ಗುರುಗಳವರು ಸಮಾಜಸೇವೆ ರಾಷ್ಟ್ರಸೇವೆಗಳಲ್ಲಿ ಮುಂದಾಳುಗಳು. ಆದ್ದರಿಂದ ಅವರ ಈ 66ನೆಯ ವರ್ಧಂತ್ಯುತ್ಸವದ ಶುಭ ಮುಹೂರ್ತವು ಆ ಮಹಾಮಣಿಹಕ್ಕೆ ಅಸ್ತಿಭಾರ ಹಾಕಲಿ. ಅವರೇ ಆ ಕಾರ್ಯವನ್ನು ಆರಂಭಿಸಲಿ ಎಂದು ಅನನ್ಯ ಭಕ್ತಿಯಿಂದ ಹಾಗೂ ತುಂಬು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಮನುಕುಲಕ್ಕೆ ವೀರಶೈವ ಕೊಟ್ಟ ಕಾಣಿಕೆಗಳು ನೂರಾರು. ಮೇಲು-ಕೀಳು ಭಾವನೆ, ಹೆಣ್ಣು-ಗಂಡು ಎಂಬ ಭೇದ, ಧನಿಕ-ದರಿದ್ರನೆಂಬ ತಾರತಮ್ಯ, ಮಡಿ ಮೈಲಿಗೆಗಳೆಂಬ ಡಾಂಭಿಕತನ — ಇಂಥವೆನಿತನ್ನೊ ದೂರ ಮಾಡಿ, ಅನೇಕರ ಬದುಕಿಗೆ ಒಂದು ಅರ್ಥವನ್ನು ಕಲ್ಪಿಸಿಕೊಟ್ಟಿತು ನಿಜ. ಅಂಥವುಗಳಲ್ಲಿ ಕಾಯಕಕ್ಕೆ ಕೊಟ್ಟ ಮಹತ್ವ ಅದರಲ್ಲೂ ಅದು ಸಾರಿದ ವೃತ್ತಿಗೌರವ (Dignity of labour) ಜಗದ್ವಿಖ್ಯಾತ, ಸರ್ವಾದರಣೀಯವಾದ ಸರ್ವಶ್ರೇಷ್ಠ ಸೇವೆ.

ವೀರಶೈವರಲ್ಲಿ ಶಿವನಿಗಿಂತ ಶರಣ ಶ್ರೇಷ್ಠ. ಶರಣನಿಗಿಂತ ಅವನ ನುಡಿ ಶ್ರೇಷ್ಠ ನಡೆ ಶ್ರೇಷ್ಠ, ಅಷ್ಟೇ ಶ್ರೇಷ್ಠ ಅವನ ಕಾಯಕನಿಷ್ಠೆ. ಕಾಯಕದ ಮಹತ್ವ ಕುರಿತ ಒಂದೆರಡು ಕಥೆಗಳನ್ನು ಹೇಳಬೇಕು ಅನ್ನಿಸುತ್ತೆ—

ಕಂಕರಿ ಕಕ್ಕಯ್ಯ ಕಲ್ಯಾಣದ ಭಕ್ತ. ಆತ ನಿತ್ಯವೂ ಕಂಕರಿ ನುಡಿಸಿ, ಕಾಯಕದ ಪ್ರತಿಫಲವನ್ನು ತಂದು ಜಂಗಮ ದಾಸೋಹ ನಡೆಸುತ್ತಿದ್ದ. ಆದರೆ ಒಂದು ದಿನ ಶಿವ ಅವನ ಕಂಕರಿ ನಾದಕ್ಕೆ ಮೋಹಗೊಂಡು ಕುಣಿಯತೊಡಗಿದ. ಕಕ್ಕಯ್ಯ ಕಂಕರಿ ನುಡಿಸಿಯೇ ನುಡಿಸಿದ ಶಿವ ನರ್ತಿಸಿಯೇ ನರ್ತಿಸಿದ. ಮೂರು ದಿನಗಳಾದರೂ ಇಬ್ಬರೂ ನಿಲ್ಲಿಸಲಿಲ್ಲ. ಕಡೆಗೆ ಶಿವನೇ ಸೋತ. ಹೇಳಿದ —

'ಕಕ್ಕಯ್ಯ ನಿನ್ನ ಭಕ್ತಿಗೆ ಮೆಚ್ಚಿದೆ. ಏನು ಬೇಕು ಬೇಡು.'

'ನಿನ್ನ ಮೆಚ್ಚು ನಿನ್ನಲ್ಲಿರಲಿ, ನನ್ನ ಮೂರು ದಿನದ ಕಾಯಕವ ತಾರ.'

'ನಿನ್ನ ಕೂಡೆ ಕುಣಿದುದು ವ್ಯರ್ಥವೆ?'

'ನೀನು ಊರೊಳಗೊಂದು ಮನೆಯ ಮಾಡಿರಲು ನಾನು ಕಾಯಕಕ್ಕೆ ಬಂದಡೆ ನಿನ್ನೊಡನೆ ಕುಣಿದೆನೆಂದೊಡೆ ನೀ ಬಿಡುವೆಯಾ?'

ಶಿವ ಆಗಲೂ ಸೋತು ಮೂರು ದಿನದ ಕಾಯಕ ತೆತ್ತ. ತೆತ್ತಾನಂತರ 'ಕೈಲಾಸಕ್ಕೆ ಬಾರ' ಎಂದ.

'ನಿನ್ನ ಒಕ್ಕಲು ಸಹವಾಗಿ ಭಕ್ತರಿರ್ದ ಮರ್ತ್ಯಕ್ಕೆ ನೀನೆ ಬಾರಯ್ಯ' ಎಂದ ಕಕ್ಕಯ್ಯ.

ಕಾಯಕದ ಬಗ್ಗೆ, ಮಾನವ ಸೇವೆಯ ಬಗ್ಗೆ, ಭಕ್ತರ ಉದ್ಧಾರದ ಬಗ್ಗೆ ವೀರಶೈವಕ್ಕೆ ಅಷ್ಟು ಕಳಕಳಿ.

ಮತ್ತೊಂದು ನಿದರ್ಶನ —

ನುಲಿಯ ಚಂದಯ್ಯ 'ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದಾಗಬೇಕು' ಎಂದವ ಒಮ್ಮೆ ಹಗ್ಗ ಹೊಸೆಯುವ ತನ್ನ ಕಾಯಕಕ್ಕೆ ಬೇಕಾದ ಹೊಡಕೆಯ ಹುಲ್ಲನ್ನು ತರಲು ಹಳ್ಳಕ್ಕೆ ಹೋದ. ಅವನ ಕೊರಳಲ್ಲಿದ್ದ ಲಿಂಗಪ್ಪ ಬೇಕೆಂದೇ ಜಾರಿ ನೀರಿನಲ್ಲಿ ಬಿದ್ದ. ಕಾಯಕನಿರತನಾಗಿದ್ದ ಚಂದಯ್ಯ ಲಿಂಗಪ್ಪನ ಕಡೆಗೆ ತನ್ನ ಗಮನ ಹರಿಸಲಿಲ್ಲ. ಲಿಂಗಪ್ಪನಿಗೆ ಭಯ ಆಯಿತು. ಪುರುಷ ವೇಷದಲ್ಲಿ ಓಡಿ ಬಂದು ತನ್ನನ್ನು ಮತ್ತೆ ಪುರಸ್ಕರಿಸುವಂತೆ ಬೇಡಿಕೊಂಡ. ಹೇಳ್ತಾನೆ ಚಂದಯ್ಯ 'ನನ್ನ ಅಪ್ಪಣೆ ಇಲ್ಲದೆ ಹೋದ ನಿನ್ನನ್ನು ಮತ್ತೆ ಸ್ವೀಕರಿಸಲಾರೆ...ಆದರೆ ನನ್ನ ಕಾಯಕದಲ್ಲಿ ಈಗ ನೀನು ಭಾಗಿಯಾಗಿ ಹಗ್ಗಗಳನ್ನು ಮಾರಿಕೊಂಡು ಬರುವ ಹಾಗಿದ್ದರೆ ಮಾತ್ರ ಮನೆಗೆ ಬರಬಹುದು' ಎಂದ.

ಶಿವ ಕರಾರಿಗೆ ಒಪ್ಪಿದ. ತಾನೇ ಹಗ್ಗಗಳನ್ನು ಹೊಸೆದು ಬಸವಣ್ಣನಿಗೆ ಮಾರಿ ಸಹಸ್ರ ಹೊನ್ನು ತಂದ.

ಚಂದಯ್ಯನಿಗೆ ರೇಗಿಹೋಯಿತು —

"ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ, ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯಾ. ನಿನ್ನಾಸೆಯ ವೇಷದ ಪಾಶಕ್ಕೆ ನೀನೇ ಹೋಗು" ಎಂದು ಶಪಿಸಿದನಂತೆ. ಇಂತಹ ದಿವ್ಯ ನಿರ್ಲಕ್ಷ್ಯ ವೀರಶೈವರದು. ಆದ್ದರಿಂದ ಇಂದು ವೀರಶೈವರ, ವೀರಶೈವ ಮಠಮಾನ್ಯಗಳ ಮುಂದಿರುವ ಪವಿತ್ರತಮ ಕಾಯಕ ಎಂದರೆ ದಲಿತೋದ್ಧಾರ, ಸಮಾಜ ಸಂರಕ್ಷಣೆ, ಹಿಂದೂ ಧರ್ಮದ ಪುನರುತ್ಥಾನ, ಭರತಖಂಡದ ಭದ್ರತೆ. ಇದನ್ನು ಬೌದ್ಧ ಧರ್ಮವೇ ಮೊದಲಾದ ಅನ್ಯಧರ್ಮಗಳ ನೆರವಿನಿಂದ ಬ್ರಹ್ಮಸಮಾಜ, ಆರ್ಯಸಮಾಜ ಮೊದಲಾದ ಸಮಾಜಗಳ ಸಹಕಾರದಿಂದ ನೆರವೇರಿಸಲಿ ಎಂದು ಕೇಳಿಕೊಳ್ಳುತ್ತೇನೆ.

**ಆತ್ಮೀಯರೆ,**

ಇಂದಿನ ಈ ಸಮಾರಂಭದಲ್ಲಿ ಸಮಾವೇಶಗೊಂಡಿರುವ ನಾವೆಲ್ಲರೂ ಸುತ್ತೂರು ಜಗದ್ಗುರುಗಳವರಿಗೆ ಋಣಿಗಳು. ಏಕೆಂದರೆ ಅವರಿತ್ತ ಉಪ್ಪು ನಮ್ಮೆಲ್ಲರ ಧಮನಿಗಳಲ್ಲೂ ರಕ್ತವಾಗಿ ಹರಿಯುತ್ತಿದೆ. ಇಂದಿನ ಸಭಾಧ್ಯಕ್ಷರಾದ ಶಾಂತಮಲ್ಲಪ್ಪನವರು ಮೊದಲಾಗಿ ನನ್ನವರೆಗೆ ಎಲ್ಲರೂ ಅವರ ಕರುಣೆಯ ಕೂಸುಗಳೇ ಆಗಿದ್ದೇವೆ. ಸುತ್ತೂರು ಹಾಸ್ಟೆಲ್ ಒಂದಿಲ್ಲದಿದ್ದರೆ ನಮ್ಮಲ್ಲಿ ಅದೆಷ್ಟೋ ಜನ ಉನ್ನತ ಶಿಕ್ಷಣದ ಸೌಭಾಗ್ಯವನ್ನು ಕಳೆದುಕೊಳ್ಳಬೇಕಾಗುತ್ತಿತ್ತು; ನಾವಾರೂ ಇಂದು ಇಲ್ಲಿ ಸೇರುವ ಅವಕಾಶ ಇರುತ್ತಿದ್ದಿಲ್ಲ. ನಮ್ಮಂತಹ ಅವೆಷ್ಟೋ ಶಿಕ್ಷಣಾಪೇಕ್ಷಿ ಪಕ್ಷಿಗಳಿಗೆ ಸುತ್ತೂರು ಹಾಸ್ಟೆಲ್ ಆಶ್ರಯವೀಯುವ ಒಂದು ವಟವೃಕ್ಷವಾಗಿದೆ. ಈ ವೃಕ್ಷಕ್ಕೆ ನೀರೆರೆದು ಪೋಷಿಸುತ್ತ ಬಂದ ಕೃಷಿಕರೇ ನಮ್ಮ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಅವರ ಮಗುವಿನಂತಹ ಮುಗ್ಧ ವದನವನ್ನು ನೋಡಿದ ಎಂತಹ ನಾಸ್ತಿಕನಿಗೂ ಮಣಿಯಬೇಕೆಂಬ ಭಾವನೆ ಮೂಡುತ್ತದೆ. ಅಂತಹ ಸ್ನಿಗ್ಧಮೂರ್ತಿ ಶತಾಯುವಾಗಲಿ. ಜಗದ್ಗುರುಗಳವರ ಶುಭಾಶೀರ್ವಾದ ನಮಗೆ ಬೇಕು. ನಮ್ಮ ಶುಭ ಹಾರಯಿಕೆ ಅವರದಾಗಬೇಕು. ಅದಕ್ಕಾಗಿ ಇಲ್ಲಿ ಇಷ್ಟೂ ಜನ, ಇಷ್ಟೂ ಕಾಲ ಸೇರಿ ಹಬ್ಬವನ್ನು ಆಚರಿಸುತ್ತಿದ್ದೇವೆ. ಆ ಕಾರಣ ನಿಮ್ಮೆಲ್ಲರ ಪರವಾಗಿ ನಾನು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ದೀರ್ಘಾಯಸ್ಸು ಮತ್ತು ಆರೋಗ್ಯಗಳನ್ನು ಕೋರುತ್ತೇನೆ. ಅಷ್ಟೇ ಅಲ್ಲದೆ ಅವರ 66ನೆಯ ವರ್ಧಂತ್ಯುತ್ಸವವನ್ನು ಆಚರಿಸಿದ ನಮಗೆ ಅವರ ಶತಮಾನೋತ್ಸವವನ್ನು ಇಷ್ಟೇ ಅಲ್ಲ— ಇದಕ್ಕಿಂತಲೂ ವೈಭವದಿಂದ ಆಚರಿಸುವ ಭಾಗ್ಯ ಲಭಿಸಲಿ ಎಂದು ಆ ಜಗನ್ಮಾತೆಯನ್ನು ಪ್ರಾರ್ಥಿಸುತ್ತಾ ಅಧ್ಯಕ್ಷರ ಅನುಮತಿ ಪಡೆದು, ಎಲ್ಲರಿಗೂ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

□

## ರಾಜೇಂದ್ರ ಶ್ರೀವಾಣಿ

- ಮಹಾನುಭಾವರ ಮಾರ್ಗಗಳು ಬೇರೆಬೇರೆಯಾಗಿದ್ದರೂ ಗುರಿ ಒಂದೇ, ಅದುವೇ ಪರಮಾತ್ಮನ ಸಾಕ್ಷಾತ್ಕಾರ.
- ನಾನು ಮಾಡುತ್ತೇನೆ, ನನ್ನಿಂದಾಯಿತು, ನನ್ನ ಸ್ವ ಶಕ್ತಿಯಿಂದ ಎಲ್ಲಾ ಸಾಧಿಸುತ್ತೇನೆ ಎನ್ನುವ ಹಮ್ಮು ಬಿಮ್ಮು ಬಿಡಬೇಕು.
- ಮನುಷ್ಯನ ಜನ್ಮ ದೊಡ್ಡದು, ಇಲ್ಲಿ ಮೇಲು–ಕೀಳು ಎಂಬ ಭೇದಭಾವನೆಯಿಲ್ಲ.

# ಯತ್ರೈವ ಯತ್ರೈವ ....

ಪ್ರೊ. ಎಸ್. ನಂಜುಂಡಯ್ಯ

ಮಹಾನುಭಾವರಾದ ಶಿವಶರಣರು ಮಹಾಲಿಂಗಸ್ವರೂಪಿಗಳು. ನಿಜವನರಿದ ನಿಶ್ಚಿಂತರು. ಮರಣವ ಗೆಲಿದ ಮಹಾಂತರು. ಸಮಯ ಸಂದರ್ಭಗಳಲ್ಲಿ ಶಿವನಿಗೇ ಸವಾಲನ್ನು ಎಸೆಯುವ ಧೀಮಂತರು. ಸತತ ಸಾಧನ-ಸಿದ್ಧಿಯ ಬಲದಿಂದ ಶಿವನನ್ನೇ ಮೆಚ್ಚಿಸಿದ ಮಹಾಮಹಿಮರು. ಶಿವಯೋಗಬಲ್ಲಿದರ ನಡೆ-ನುಡಿಗಳು ಲೋಕದವರಂತಲ್ಲ. ಅವರು ಲೋಕದಂತೆ ಬಾರರು, ಲೋಕದಂತೆ ಇರರು, ಲೋಕದಂತೆ ಹೋಗರು. ಆದರೆ ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು, ಮುಕ್ತಿಯಂತೆ ಹೋಹರು. ಶಿವನು ಅವರೊಡನೆ ಕೂಡಿ ನೋಡುತ್ತಾ ಅವರೊಡನೆ ನುಡಿಯುತ್ತಾ ಅವರೊಡನೆ ಸುಖಿಸುತ್ತಾ ತಾನು ಬೇರೆ ಅವರು ಬೇರೆ ಎಂದೆನಿಸದೆ ಅವರೊಡನೆ ಬಿಚ್ಚಿ ಬೇರಾಗದಂತಹ ರೀತಿಯಲ್ಲಿ ಬೆರೆಸಿ ಸಮರಸಗೊಳ್ಳುವನು, ಒಂದಾಗುವನು. ಈ ನಿಟ್ಟಿನಲ್ಲಿ ದಿಟ್ಟಿಸುವುದಾದರೆ ತಮ್ಮ ಅನ್ಯಾದೃಶವಾದ ಇಷ್ಟಲಿಂಗ ಪೂಜಾನುಷ್ಠಾನದಲ್ಲಿ, ಅನನ್ಯವಾದ ಆಂತರಂಗಿಕ ಶಿವಯೋಗ ತಪಸ್ಸಾಧನೆಯಲ್ಲಿ ಸರ್ವತ್ರ ಶಿವನನ್ನೇ ದರ್ಶಿಸುತ್ತಾ ಶಿವನೊಡನೆ ಸದಾ ಸುಖಿಸುತ್ತಾ ಸರ್ವತ್ರ ಸಮದರ್ಶಿಗಳೆನಿಸಿದವರು ಹಾಗೂ ನಾಡಿನ ತುಂಬೆಲ್ಲ ಶಿವಬೆಳಕನ್ನು ಚೆಲ್ಲಿದವರು ಪ್ರಾತಃಸ್ಮರಣೀಯರಾದ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಸಹಸ್ರಾರು ವರ್ಷಗಳ ಸುದೀರ್ಘ ಇತಿಹಾಸವನ್ನೊಳಗೊಂಡು ಈ ನಾಡಿನ ಸರ್ವತೋಮುಖ ಸಮೃದ್ಧಿಗೆ ಅನನ್ಯವಾದ ಅಸಂಖ್ಯ ಕೊಡುಗೆಗಳನ್ನು ನೀಡುತ್ತಾ ಬಂದಿರುವ ಸುತ್ತೂರು ಶ್ರೀಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಬಹುಮುಖಸೇವೆ ಚಿರಸ್ಮರಣೀಯ. ಇಂದಿನ ಯುಗಧರ್ಮಕ್ಕೆ ತಕ್ಕಂತೆ ಶ್ರೀಮಠವನ್ನು ಸನ್ನದ್ಧಗೊಳಿಸಿದವರು; ಅನ್ನ-ಅರಿವು-ಆರೋಗ್ಯ ಈ ತ್ರಿವಿಧಗಳ ಮಹಾದಾಸೋಹಕೇಂದ್ರವನ್ನಾಗಿಸಿದವರು; ಹಲವಾರು ಉಚಿತ ಪ್ರಸಾದನಿಲಯಗಳನ್ನು ಹಾಗೂ ಶಾಲಾ ಕಾಲೇಜುಗಳೇ ಮೊದಲಾದ ನೂರಾರು ಶಿಕ್ಷಣ ಸಂಸ್ಥೆಗಳನ್ನು ತೆರೆಯುವುದರ ಮೂಲಕ ನಾಡಿನಲ್ಲಿ ಶೈಕ್ಷಣಿಕ ಕ್ರಾಂತಿಯನ್ನೆಸಗಿ ಸಹಸ್ರ ಸಹಸ್ರ ಮಂದಿ ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸಿದವರು; ಮಿಗಿಲಾಗಿ ತಾವು ಕೈಕೊಂಡ ಸೇವಾಧರ್ಮವನ್ನು ನೂರ್ಮಡಿ - ಸಹಸ್ರಮಡಿಯಾಗಿ ಜಗದಗಲ ವಿಸ್ತರಿಸುವಂತಹ ಪರಮತೇಜೋಮೂರುತಿಗಳಾದ ಇಂದಿನ

ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರನ್ನು ಕರುಣಿಸಿದವರು – ಪವಾಡಪುರುಷರಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು.

ಮಠ ಎಂದರೆ ಗುರುಕುಲ, ವಿದ್ಯಾದಾನ ಕೇಂದ್ರ, ಆಧ್ಯಾತ್ಮಿಕತೆಯ ಆಗರ. ಅಂತೆಯೆ 'ಮಠಃ ಛಾತ್ರಾದಿ ನಿಲಯಃ' ಎಂಬ ಅಮರಸಿಂಹನ ಉಕ್ತಿಯನ್ನು ಸಾಕಾರಗೊಳಿಸಿದ ಶ್ರೀಗಳವರ ಪಾಲಿಗೆ ವಿದ್ಯಾರ್ಥಿಗಳೇ ಜೀವಂತ ದೇವರಾಗಿ ಕಂಡರು. ವಿದ್ಯೆಯನ್ನು ಅರಸಿ ಬಂದಬಂದವರಿಗೆಲ್ಲಾ ಅನ್ನ-ಅರಿವು-ಆಸರೆಗಳನ್ನು ನೀಡಿ ಆನಂದಪಟ್ಟರು, 'ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್' – ಎಂಬಂತೆ ಅವರಿವರೆನ್ನದೆ ಸರ್ವರನ್ನೂ ಸಂಪ್ರೀತಿಯಿಂದ ತಮ್ಮಲ್ಲಿಗೆ ಆಕರ್ಷಿಸಿದರು. ಮಾನವತೆಯ ಮಧ್ಯೆ ನಿಂತು ಮಹಾಮಾನವತೆಯ ಬೆಳಕು ತೋರಿದರು. ಸುಳಿದಾಡುವ ಮಹಾಲಿಂಗಸ್ವರೂಪಿಗಳಾಗಿ ಧ್ಯಾನ-ಧಾರಣ-ಸಮಾಧಿ, ಜಪತಪಾದಿ ಮೌನಶೀಲಗುಣಸಂಪನ್ನರಾಗಿ ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರಗೈದರು. "ಸಂತಃ ಸ್ವಯಂ ಪರಹಿತೇಷು ಕೃತಾಭಿಯೋಗಾಃ" ಎಂಬಂತೆ ಪರಹಿತಕ್ಕಾಗಿ ತಮ್ಮನ್ನೇ ತಾವು ಶ್ರೀಗಂಧದಂತೆ ತೇದುಕೊಂಡು ಸುತ್ತೆಲ್ಲ ಶಿವತತ್ತ್ವ ಪರಿಮಳವನ್ನು ಬೀರಿದರು. ಬಹಿರಂಗದಲ್ಲಿ ಕಾಯಕತಪಸ್ವಿಗಳಾಗಿ ಅಂತರಂಗದಲ್ಲಿ ಶಿವಯೋಗ ತೇಜಸ್ವಿಗಳಾಗಿ ನಿಜಗುಣರ ನಿಜೋಕ್ತಿಯಂತೆ ಲೌಕಿಕ-ಪಾರಮಾರ್ಥಗಳೆರಡನ್ನೂ ಕೂಡಿ ನಡೆಸಿದರು.

> ಸಾರ್ವಭೌಮನು ಸೃಷ್ಟಿಯೊಳಗದೋರ್ವನೆ ಕಾಣೊ
> ಸರ್ವವನು ತನ್ನಾತ್ಮವೆಂದು ಬದುಕುವನು
> ನಿರ್ವಿಕಾರಾಂತರಂಗದಿ ಜಗವ ಧರಿಸುವನು
> ಸರ್ವಮಂಗಳನವನು — ಮಂಕುತಿಮ್ಮ

ಎಂಬ ಕವಿ ಡಿವಿಜಿಯವರ ವಾಣಿಯಂತೆ ಸರ್ವದರಲ್ಲಿಯೂ ಸರ್ವಾತ್ಮನನ್ನೇ ಕಾಣುತ್ತಾ ಸರ್ವವನ್ನೂ ತನ್ನಾತ್ಮವೆಂದೇ ಭಾವಿಸಿದರು. 'ಎತ್ತೆತ್ತ ನೋಡಿದಡತ್ತತ್ತ ನೀನೇದೇವಾ' ಎಂಬುದಾಗಿ ಅಣ್ಣ ಬಸವಣ್ಣನಂತೆ ದೃಷ್ಟಿ ಹಾಯ್ದೆಡೆಯಲ್ಲೆಲ್ಲ ಭಗವಂತನನ್ನೇ ಕಾಣುತ್ತಾ ಸಕಲರಿಗೂ ಲೇಸ ಬಯಸುತ್ತಾ ಬದುಕಿದರು. ಹೀಗೆ ಎಲ್ಲವನ್ನೂ ಅರಿತು ಆಚರಿಸಿಯೂ ಹೊರಗೇನೂ ತೋರ್ಪಡಿಸಿಕೊಳ್ಳದೆ ಗುಟ್ಟುತೋರದ ಅಜಗಣ್ಣನಂತೆ ಗುಪಿತಯೋಗಿಗಳಾಗಿದ್ದರು. "ಅರಿಯಬಾರದ ಘನವನು ಅರಿದವರು ಅರಿಯದಂತಿರ್ಪರು ಕಾಣಾ ಗೊಹೇಶ್ವರಾ" ಎಂಬ ಪ್ರಭುವಾಣಿಗೆ ಬರೆದ ಭಾಷ್ಯದಂತಿದ್ದರು.

ಒಟ್ಟಾರೆ ನೋಡುವುದಾದರೆ, ಜಗತ್ತಿನ ಮಹಾಪುರುಷರೆಲ್ಲರೂ ಒಂದರ್ಥದಲ್ಲಿ ಪವಾಡಪುರುಷರಂತೆಯೇ ಕಾಣುತ್ತಾರೆ. ಅಂತೆಯೆ ಶ್ರೀ ರಾಜೇಂದ್ರ ಜಗದ್ಗುರುಗಳವರ ಇಡೀ ಬದುಕೇ ಒಂದು ಪವಾಡದಂತಿದೆ. ತಮ್ಮ ಅವಿರತವಾದ ಶಿವಯೋಗಸಾಧನೆಯಿಂದ ತಾವು ಸಂಕಲ್ಪ ಮಾಡಿದ್ದೆಲ್ಲವನ್ನೂ ಸಾಧಿಸಿ ತೋರಿಸಿ ಪ್ರಸಿದ್ಧ ಶಿವಯೋಗೀಂದ್ರರಾಗಿ ಕಂಗೊಳಿಸಿದುದನ್ನು ಕಣ್ಣಾರೆ ಕಾಣುವಂತಾದುದೊಂದು ಪರಮಪುಣ್ಯ ವೆಂದೆನ್ನಬಹುದು.

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಎಲ್ಲರಂತೆ ಹೊರಜಗತ್ತಿನಲ್ಲಿ ಶ್ರೀಮಠದ ಹಾಗೂ ವಿದ್ಯಾಸಂಸ್ಥೆಗಳ ದಿನನಿತ್ಯದ ವ್ಯವಹಾರಗಳ ಜೊತೆಗೆ ತಮ್ಮ ದರ್ಶನಾಶೀರ್ವಾದಗಳಿಗಾಗಿ ಎಲ್ಲೆಡೆಗಳಿಂದಲೂ ಧಾವಿಸಿ ಬರುತ್ತಿದ್ದ ಭಕ್ತಸ್ತೋಮದ ಬಿನ್ನಹ - ಬೇಡಿಕೆಗಳತ್ತ ಗಮನವಿಡುವುದರಲ್ಲಿ ಬಹುತೇಕ ತೊಡಗಿರುತ್ತಿದ್ದರು. ಆದರೂ ಅವರ ಒಳಜಗತ್ತಿನಲ್ಲಿ ಅಂದರೆ ಅವರ ಮನೋಮಂದಿರದಲ್ಲಿ ಶ್ರೀಕ್ಷೇತ್ರದ ಮೂಲಕರ್ತೃಗಳಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ರೂಪು-ನೋಟ-ನೆನಹುಗಳು ಸದೈವ ಓತಪ್ರೋತವಾಗಿ ಸಾಗುತ್ತಿದ್ದುದನ್ನು ಅವರ ಸನಿಹಕ್ಕೆ ಬಂದಂತಹ ಸೂಕ್ಷ್ಮಗ್ರಾಹಿಗಳು ಮಾತ್ರ ಮನಗಾಣಬಹುದಾಗಿದ್ದಿತು. "ಯದ್ಯತ್ ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಮ್" ಎಂಬ ಶಂಕರರ ವಾಣಿಯಂತೆ ತಾವು ಕೈಕೊಳ್ಳುವ ಎಲ್ಲ ಕಾರ್ಯಚಟುವಟಿಕೆಗಳನ್ನು ಶ್ರೀಗುರುವಿಗೇ ನಿವೇದಿಸುತ್ತಾ ತಾವು ಕೇವಲ ನಿಮಿತ್ತಮಾತ್ರವೆಂದು ಭಾವಿಸುತ್ತಿದ್ದರು. ತಾವು ಇದನ್ನೆಲ್ಲ ಮಾಡಿದೆವು, ತಮ್ಮಿಂದ ಇದೆಲ್ಲವೂ ಆಯಿತು ಎಂಬ ಭಾವನೆಯ ಲವಲೇಶವೂ ಮನದಲ್ಲಿ ಸುಳಿಯದಂತಹ ರೀತಿಯಲ್ಲಿ ಮಾಡಿದ್ದೆಲ್ಲವೂ ಆ ಗುರುವಿನ ಕೃಪೆಯೆಂದೇ ಭಾವಿಸಿ ನಿರ್ಲಿಪ್ತತೆಯಿಂದ ಅತ್ಯಾಶ್ಚರ್ಯಕರವಾದ ಮಹತ್ಕಾರ್ಯಗಳನ್ನೆಸಗಿ ಮಹಿಮಾಪುರುಷರೆನಿಸಿದರು. ಅವರ ಅಖಂಡವಾದ ಶಿವಯೋಗ ತಪಸ್ಸಿನ ಸಾಧನ-ಸಿದ್ಧಿಗಳ ಔನ್ನತ್ಯವನ್ನು, ಅವರ ದಿವ್ಯ ಜೀವನ ಸಿದ್ಧಾಂತದ ರೂಪ-ರೇಷೆಗಳನ್ನು ನಿಚ್ಚಳವಾಗಿ ಪರಿಚಯಿಸುವಂತಿದೆ. ಪೂಜ್ಯರು ಅಲ್ಲಲ್ಲಿ ಆಗಾಗ್ಗೆ ಸಭೆ-ಸಮಾರಂಭಗಳಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನಗಳನ್ನು ನೀಡುವಲ್ಲಿ ಮೊದಲಿಗೆ ಆರಂಭಿಸುತ್ತಿದ್ದ ಪ್ರಾರ್ಥನಾರೂಪದ ಹಾಗೂ ಅರ್ಥಗರ್ಭಿತವಾದ ಈ ಒಂದು ಪುಣ್ಯಶ್ಲೋಕ! ಅದುವೆ ಅವರ ಜೀವನದ ಸಾರಸರ್ವಸ್ವವನ್ನು ಸಾರಿಹೇಳುವಂತಹ ಒಂದು ಸೂಳ್ನುಡಿ. ಅವರು ಕಂಡುಂಡ ಶಿವಾನುಭವದ ಸವಿಯನ್ನು ಪ್ರತಿಧ್ವನಿಸುವಂತಹ ಹಾಗೂ ಪ್ರತಿಬಿಂಬಿಸುವಂತಹ ಸವಿನುಡಿಯ ಸಿರಿಗನ್ನಡಿ! ಸಾಧಕರಿಗೊಂದು ಕೈಗನ್ನಡಿ! ಆ ಶ್ಲೋಕ ಹೀಗಿದೆ ನೋಡಿ:

> ಯತ್ರೈವ ಯತ್ರೈವ ಶಿರೋ ಮದೀಯಂ
>     ತತ್ರೈವ ತತ್ರೈವ ಪದಂ ತ್ವದೀಯಮ್ |
> ಯತ್ರೈವ ಯತ್ರೈವ ಮನೋ ಮದೀಯಂ
>     ತತ್ರೈವ ತತ್ರೈವ ತವ ಸ್ವರೂಪಮ್ ||

ಚಂದ್ರಾವಲೋಕನ ಎಂಬ ಗ್ರಂಥದಲ್ಲಿನ ಈ ಶ್ಲೋಕವನ್ನು ವಿಜಯನಗರದ ಇಮ್ಮಡಿ ಪ್ರೌಢದೇವರಾಯ (1419-46)ನಲ್ಲಿ ಸಚಿವ, ಬಹುಶಃ ಭಂಡಾರ ಸಚಿವನಾಗಿದ್ದ ಜಕ್ಕಣಾರ್ಯನು ತನ್ನ "ಏಕೋತ್ತರಶತಸ್ಥಲೀ" ಗ್ರಂಥದಲ್ಲಿ ಅಂಗಸ್ಥಲಮ್ ವಿಭಾಗದಲ್ಲಿನ

42ನೆಯದಾದ ಸರ್ವಾಚಾರಸಂಪನ್ನಸ್ಥಲಮ್‌ನಲ್ಲಿ 8ನೆಯ ಶ್ಲೋಕವಾಗಿ ಉದ್ಧರಿಸಿದ್ದಾನೆ ಮತ್ತು ಅದಕ್ಕೆ ಪ್ರತಿಪದಾರ್ಥವನ್ನೂ ಸಹ ನೀಡಿದ್ದಾನೆ.

ಎಲೆ ಶಿವನೆ, ಮದೀಯಂ-ನನ್ನದಾದ, ಶಿರಃ - ಶಿರಸ್ಸು, ಯತ್ರೈವ ಯತ್ರೈವ - ಎಲ್ಲೆಲ್ಲಿ ವರ್ತಿಸುತ್ತಿಹುದು, ತ್ವದೀಯಂ - ನಿನ್ನದಾದ, ಪದಂ - ಶ್ರೀಪಾದವು, ತತ್ರೈವ ತತ್ರೈವ - ಆ ಯಾವ ಠಾವಿನಲ್ಲಿಯೆ ವರ್ತಿಸುತ್ತಿಹುದು. ಮದೀಯಂ - ನನ್ನದಾದ, ಮನಃ - ಮನಸ್ಸು, ಯತ್ರೈವ ಯತ್ರೈವ - ಎಲ್ಲೆಲ್ಲಿ ಇಹುದು, ತವ - ನಿನ್ನ, ಸ್ವರೂಪಂ - ಸ್ವರೂಪವು, ತತ್ರೈವ ತತ್ರೈವ – ಆ ಯಾವ ಠಾವಿನಲ್ಲಿಯೆ ಇಹುದು.

ಮತ್ತೆ, "ಚಾಮುಂಡಿ ಬೆಟ್ಟಕ್ಕೆ ಮಾಡಿಸಿರುವ ಮಾರ್ಗದಲ್ಲಿ ಹೋಗಿ ಲಲಿತಾದ್ರಿಯನ್ನು ಸೇರಿದಾಗ ಮೊಟ್ಟಮೊದಲು ಕಣ್ಣಿಗೆ ಬೀಳುವುದು

ಯತ್ರೈವ ಯತ್ರೈವ ಮನೋ ಮದೀಯಂ
ತತ್ರೈವ ತತ್ರೈವ ತವ ಸ್ವರೂಪಮ್ |
ಯತ್ರೈವ ಯತ್ರೈವ ಶಿರೋ ಮದೀಯಂ
ತತ್ರೈವ ತತ್ರೈವ ಪದದ್ವಯಂ ತೇ ||

ಎಲ್ಲೆಲ್ಲಿ ನನ್ನ ಶಿರಸ್ಸು ಒರಗುತ್ತದೆಯೋ
ಅಲ್ಲೆಲ್ಲಾ ನಿನ್ನ ಪಾದಕಮಲವನ್ನಿರಿಸು
ಎಲ್ಲೆಲ್ಲಿ ನನ್ನ ಮನಸ್ಸು ಪ್ರವರ್ತಿಸುತ್ತದೆಯೋ
ಅಲ್ಲೆಲ್ಲಾ ನಿನ್ನ ಸ್ವರೂಪದರ್ಶನ ಮಾಡಿಸು

ಎಂಬ ಭಗವತ್ ಪ್ರಾರ್ಥನಾರೂಪದ ಈ ಸರಳ ಸುಂದರ ಶ್ಲೋಕ, ಅದರಲ್ಲಿನ ಉದಾತ್ತ ಭಕ್ತಿಭಾವ, ಹೃದಯಾಂತರಾಳದ ಹಂಬಲ, ಭಗವಂತನಲ್ಲಿ ಸಾಧಕನ ಕಳಕಳಿಯ ಪ್ರಾರ್ಥನೆ – ಇದೆಲ್ಲವೂ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಮೃದುಮಧುರ ಹೃದಯವನ್ನು ಸೂರೆಗೊಂಡಿತು, ಅಚ್ಚಳಿಯದ ಪ್ರಭಾವ ಬೀರಿತು; ಅದು ಸಂಭವಿಸಿದ ಶುಭಸಂದರ್ಭವಿದು–

ಈ ಹಿಂದೆ, ಅಂದೊಮ್ಮೆ ಪೂಜ್ಯರು ತಮ್ಮ ಜೊತೆಯವರೊಡಗೂಡಿ ಸಂಜೆಯ ಹೊತ್ತು ವಾಯುವಿಹಾರಕ್ಕಾಗಿ ಲಲಿತಾದ್ರಿಯ ಕಡೆಯಿಂದ ಚಾಮುಂಡಿ ಬೆಟ್ಟದತ್ತ ಹೋಗುತ್ತಿದ್ದಾಗ ತಟ್ಟನೆ ಕಣ್ಣಿಗೆ ಬಿದ್ದಂತಹ ಒಂದು ಅಪೂರ್ವ ಘಳಿಗೆ ಅದು. ಅಂದಿನಿಂದ ಮೊದಲ್ಗೊಂಡು ಆ ಶ್ಲೋಕ ಅವರ ಅಂತರಂಗದಲ್ಲಿ ನೆಲೆಯೂರಿ ನಿಂತು ತಾನೇತಾನಾಗಿ ಸದಾ ಅನುರಣಿಸುತ್ತಿತ್ತು. ಅದರ ಅಂತರಾರ್ಥವನ್ನೆ ತಮ್ಮ ಉಸಿರಾಗಿಸಿ ಕೊಂಡು ಬದುಕಿನಲ್ಲಿ ಸದಾ ಅನುಷ್ಠಿಸುತ್ತಾ ಅದನ್ನೇ ತಮ್ಮ ಆಶೀರ್ವಚನಗಳಲ್ಲಿ ಸ್ಮರಿಸಿ ಭಕ್ತಕೋಟಿಯನ್ನು ಆಶೀರ್ವದಿಸುತ್ತಿದ್ದು ಕೊನೆಗೆ ಅದೇ ಪ್ರಾರ್ಥನೆ, ಮನನ-ಧ್ಯಾನಗಳೊಂದಿಗೆ ಭಗವಂತನಲ್ಲಿ ಬೆರೆದು ಒಂದಾದುದು ಸದಾ ಸಂಸ್ಮರಣೀಯ ಹಾಗೂ ಸರ್ವ ಆದರ್ಶನೀಯ.

ಅಲ್ಲದೆ 'ಶಿವರಾತ್ರಿ ಶಿವಾಚಾರ್ಯ' ಎಂಬ ಕೃತಿಯಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಬಗ್ಗೆ ಬರೆಯುವಲ್ಲಿ "ಶ್ರೀಗಳವರು ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ತಮ್ಮ ಆಶೀರ್ವಚನ ನೀಡುವ ಮುನ್ನ ಅವರು ಈ ಶ್ಲೋಕದಿಂದ ಆರಂಭಿಸುತ್ತಿದ್ದರು. ಪ್ರಕೃತ ಅಂಥ ಮಹನೀಯರನ್ನು ಕುರಿತು ಬರೆಯುವ ಮುನ್ನ ಅದೇ ಶ್ಲೋಕವನ್ನು ಉಲ್ಲೇಖಿಸುವುದು ಅಪ್ರಕೃತವಾಗಲಾರದು" ಎಂದು ಆ ಶ್ಲೋಕದಿಂದಲೇ ಅಧ್ಯಾಯವೊಂದನ್ನು ಆರಂಭಿಸುತ್ತಾ ಪ್ರೊ. ಎಂ.ಜಿ. ನಂಜುಂಡಾರಾಧ್ಯರು ಶ್ರೀಗಳವರನ್ನು ಪರಿಚಯಿಸಿರುವುದೂ ಕೂಡ ಇಲ್ಲಿ ಮನನೀಯ!

ಒಟ್ಟಾರೆ, ಪೂಜ್ಯರ ಮೇಲೆ ವಿಶೇಷ ಪ್ರಭಾವ ಬೀರಿದ ಹಾಗೂ ಪೂಜ್ಯರು ಸಂಸ್ಮರಿಸುತ್ತಿದ್ದ ಸ್ತುತಿರೂಪದ ಈ ಶ್ಲೋಕ ಸಾಧಕರ ನೆನಹಿನಲ್ಲಿ ಸದಾ ನಿನದಿಸುತ್ತಿರಲಿ, ಭಕ್ತರ ಬದುಕನ್ನು ಪ್ರಸಾದಿಸುವಂತಾಗಲಿ ಎಂಬ ಸದಾಶಯದೊಂದಿಗೆ ಅವರ ದಿವ್ಯಸ್ಮೃತಿಗೆ ಅರ್ಪಿಸಿದ ಒಂದು ನುಡಿಗಾಣಿಕೆ, ಈ ಕಿರುಬರಹ.

□

## ರಾಜೇಂದ್ರ ಶ್ರೀವಾಣಿ

- ಯಶಸ್ಸನ್ನು ನಾವು ಹುಡುಕಿಕೊಂಡು ಹೋಗಬಾರದು. ಅದು ನಮ್ಮನ್ನು ಹುಡುಕಿಕೊಂಡು ಬರಬೇಕು.
- ಸಂಗೀತವನ್ನು ಕಲಿಯುವ ಸಂಸ್ಕಾರ ಇಲ್ಲದಿದ್ದರೂ ಕೇಳಿ ಆನಂದಿಸುವ ಸಂಸ್ಕಾರವನ್ನಾದರೂ ಬೆಳೆಸಿಕೊಳ್ಳಬೇಕು.
- ದುಡಿಮೆಯನ್ನು ಗೌರವಿಸಲು ಕಲಿತರೆ ಆಗ ದುಡಿಯುವವರನ್ನು ಗೌರವಿಸಲು ಕಲಿಯಬಹುದು.
- ಸಮಾಜದಿಂದ ತಂದುದನ್ನು ಸಮಾಜಕ್ಕೆ ಕೊಟ್ಟಿದ್ದೇವೆ, ಇದರಲ್ಲಿ ನಮ್ಮದು ಎನ್ನುವುದು ಏನಿದೆ?
- ಜ್ಞಾನ ದಾಸೋಹದಿಂದ ಮನುಷ್ಯನ ಸರ್ವತೋಮುಖ ಅಭಿವೃದ್ಧಿ ಸಾಧ್ಯ.
- ಹಸಿದವನಿಗೆ ಒಂದು ಹೊತ್ತು ಊಟ ಹಾಕುವುದು ದಾಸೋಹವಲ್ಲ, ಹಸಿದಿರುವ ಕುಟುಂಬಗಳಿಗೆ ಹಸಿವುಬಾರದಂತೆ ಮಾಡುವುದು ನಿಜವಾದ ದಾಸೋಹ.

# ಸಾಹಿತಿಯ ಭಾವಕೋಶದಲ್ಲಿ....

**ಪ್ರೊ. ವೀರಭದ್ರ**

ಪರಮಪೂಜ್ಯ ಜಗದ್ಗುರು ಶ್ರೀ ಪಟ್ಟದ ಶಿವರಾತ್ರಿ ಮಹಾಸ್ವಾಮಿಗಳವರು ರೈಲಿನಿಂದ ಕಾಶಿಯ ನಿಲ್ದಾಣದಲ್ಲಿಳಿಯುತ್ತಲೇ – ಉದ್ವೇಗ ಕಾತರ ಆತುರಗಳ ಆವೇಗಕ್ಕೆ ಒಳಗಾದರು. ಯಾವಾಗ ಶ್ರೀ ಗೌರೀಶಂಕರ ಸ್ವಾಮಿಗಳವರ ವಾಸಗೃಹಕ್ಕೆ ಹೋಗಿಯೇನೋ ಎಂದು ಅವಸರಿಸಿದರು. ಕುದುರೆಗಾಡಿಯೊಂದನ್ನು ಬಾಡಿಗೆಗೆ ಮಾತಾಡಿ, ವಿಳಾಸ ತಿಳಿಸಿದರು.

ಕುದುರೆ ಲುಟ್ಕು ಲುಟ್ಕು ಎಂದು ನಡಿಗೆಯ ವೇಗದಲ್ಲಿ ಗಾಡಿ ಎಳೆಯುವುದನ್ನು ಕಂಡು–ಗಾಡಿ ಬೇಡ, ಕುದುರೆಯನ್ನೇ ಬಾಡಿಗೆಗೆ ಮಾತಾಡಿಬಿಡಲೇ? ಹೇಗೂ ನಮಗೆ ಕುದುರೆ ಸವಾರಿ ಮಾಡಿ ಅಭ್ಯಾಸವಿದೆಯಲ್ಲಾ? – ಎನ್ನಿಸುತ್ತಿರುವಂತೆಯೇ –

'ಬೇಗ ಬೇಗ ಗಾಡಿ ಹೊಡೆಯಪ್ಪಾ'

– ಎಂದು ಹೇಳಿದರೆ – ಭಾಷೆ ಗೊತ್ತಿಲ್ಲದ ಗಾಡಿಯವನು ತನ್ನ ಯಥಾರೀತಿಯ ಕಾಯಕವನ್ನು ಮುಂದುವರೆಸಿದ.

ಕೊನೆಗೆ ಬಂದೇ ಬಂದಿತು, ನಿಶ್ಚಿತ ಗುರಿ.

ಬಾಡಿಗೆ ಕೊಟ್ಟು, ಕಾವಿಚೀಲ, ಸಾಮಾನು ಸರಂಜಾಮುಗಳ ಚಿಕ್ಕ ಗಂಟನ್ನು ಹಿಡಿದು ಮಾರು ಮಾರು ದೂರ ಹೆಜ್ಜೆ ಹಾಕುತ್ತ ಹೊಸಿಲ ಬಳಿ ಬಂದರು.

ಬಾಗಿಲ ಚೌಕಟ್ಟಿನಲ್ಲಿ ಅರುಣೋದಯವಾಯಿತೋ ಎಂಬಂತೆ ಕೆಂಪು ಕಾವಿ ವಸ್ತ್ರಧಾರಿ ಪ್ರತ್ಯಕ್ಷವಾದುದನ್ನು ಮೊದಲು ಕಂಡವರೇ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು.

ಹೌಹಾರಿದರು!

ಪುಟಿದೆದ್ದ ಚೆಂಡಿನಂತೆ ಧಿಗ್ಗನೆ ಕುಳಿತಲ್ಲಿಂದ ಪುಟಿದೆದ್ದು, ಥರಗುಟ್ಟುತ್ತ ಅದು ಹೇಗೆ ಒಂದು ಮಾರು ದೂರ ಹೋದರೋ ಏನೋ! ಹಿರಿಯ ಗುರುಗಳವರ ಪಾದಗಳಿಗೆ ದೀರ್ಘದಂಡ ನಮಸ್ಕಾರಮಾಡಿ, ಎದ್ದು ನಿಂತವರು, ಶ್ರೀಗಳವರ ಮುಖ ನೋಡಲು ಅಂಜಿ, ಸರ್ರನೆ ತೆರೆದ ಬಾಗಿಲ ಮರೆಗೆ ಹೋಗಿ ಹುದುಗಿ, ನೆಲ ದಿಟ್ಟಿಸುತ್ತ, ಮೂಗಿನ ತುದಿಯ ಮೇಲೆ, ಅಗಲ ಹಣೆಯ ಮೇಲೆ ಉಕ್ಕುಕ್ಕುತ್ತಿರುವ ಬೆವರ ಹನಿಗಳನ್ನು ತೊಡೆಯಲೂ ಆಗದೆ, ಅದುರುವ ತುಟಿಗಳಿಂದ, ನಗಾರಿ ಬಾರಿಸುತ್ತಿರುವಂತೆ ಧಡಧಡಿಸುವ ಹೃದಯದಿಂದ ನಿಂತುಬಿಟ್ಟರು.

ಇಷ್ಟೆಲ್ಲ ಕ್ಷಣ ಎರಡರಲ್ಲಿ ನಡೆದುಹೋಯಿತು.

ಇದನ್ನು ಗಮನಿಸಿದ ಶ್ರೀ ಗೌರೀಶಂಕರ ಸ್ವಾಮಿಗಳವರಿಗೆ ಎಲ್ಲವೂ ಅರ್ಥವಾಯಿತು. ಹಿರಿಯ ಜಗದ್ಗುರುಗಳ ಅನಿರೀಕ್ಷಿತ ದರ್ಶನದಿಂದಾಗಿ ದೇಹಾದ್ಯಂತ ಪುಳಕಗಳುಂಟಾದುವು.

"ಇಂದು ಇಂದುಧರನನ್ನು ಕಂಡಂತಾಯ್ತು ! ನನ್ನ ಭಾಗ್ಯ !"

– ಎನ್ನುತ್ತ ಎದ್ದು ಹೋಗಿ ಹಾರ್ದಿಕವಾಗಿ ಸ್ವಾಗತಿಸುತ್ತ ಪ್ರಣಾಮ ಮಾಡಿದರು. ಹಿರಿಯ ಗುರುಗಳೂ ಪ್ರತಿವಂದಿಸಿದರು.

"ದಯಮಾಡಿಸಿ ದಯಮಾಡಿಸಿ"

– ಎಂದು ಶ್ರೀಗಳವರನ್ನು ಅತ್ಯಾನಂದದಿಂದ, ಆತ್ಮೀಯವಾಗಿ ಒಳಗೆ ಕರೆದೊಯ್ಯುತ್ತ

"ಕೆಂಪಣ್ಣ !"

– ಎಂದು ಕೂಗಿ ಕರೆದರು.

ಕೆಂಪಣ್ಣನಿಗೆ ಸ್ನಾನ – ಪೂಜೆ – ಪ್ರಸಾದ ಸಿದ್ಧತೆ ಅಣಿಗೊಳಿಸಲು ಅಪ್ಪಣೆ ಮಾಡಿ, ಶ್ರೀಗಳವರನ್ನು ಪೀಠದ ಮೇಲೆ ಕುಳ್ಳಿರಿಸಿ, ತಾವು ನೆಲದ ಮೇಲೆ ಕುಳಿತರು.

"ಇದೇನು ! ನೀವು ಮಾಡ್ತಿರೋದು ! ಬನ್ನಿ ಬನ್ನಿ ! ನೀವೂ ಈ ಮಂಚದ ಮೇಲೆ ಕೂತ್ಕೊಳ್ಳಿ"

– ಎಂದು ಶ್ರೀಗಳವರು ಒತ್ತಾಯಿಸಿದರೂ, ಶ್ರೀ ಗೌರೀಶಂಕರ ಸ್ವಾಮಿಗಳವರು –

"ಉಂಟೇ ! ಉಂಟೇ ! ಶಿವನ ಮುಂದೆ, ಶಿವನ ಪಾದಮೂಲದಲ್ಲಿಯೇ ನಂದಿ ಕೂತ್ಕೋಬೇಕು. ತುಂಬ ದಣಿದಿದ್ದೀರಿ. ಮೊದಲು ಸ್ವಲ್ಪ ವಿಶ್ರಾಂತಿ ಪಡೆಯಿರಿ" ಎಂದರು.

– ಹಿರಿಯ ಜಗದ್ಗುರುಗಳು ತಮ್ಮ ಕರಕಮಲಸಂಜಾತರತ್ತ ನೋಡುತ್ತಲೆ –

ತಾವಿನ್ನು ಎಂದಿಗೂ ಮತ್ತೆ ಕಾಣಲಾರೆವೇನೋ ಎಂದು ಭಾವಿಸಿ, ಈ ಒಂದು ವಾರ ಪರ್ಯಂತ ಅನುಕ್ಷಣವೂ – 'ಕಾಣುವೆವೋ, ಕಾಣೆವೋ...' ಎಂದು ಒಳಗೇ ಚಿಂತಿಸುತ್ತ, 'ನಮ್ಮ ಕಣ್ಮಣಿ, ನಮ್ಮ ಪುಟ್ಸ್ವಾಮಿ ಮತ್ತೆಂದಿಗೂ ಕಂಡುಬರುವುದಿಲ್ಲವೇನೋ' – ಎಂದು ಚಿಂತೆಯಿಂದ ಬೇಯುತ್ತಿದ್ದ ಅಂತರಂಗದಲ್ಲಿ ಕುದಿದು ಉಕ್ಕೇರುತ್ತಿದ್ದ ದುಃಖಾಶ್ರು ನೆರೆಯಂತೆ ನುಗ್ಗಿ ಹರಿಯತೊಡಗಿತು. ಇನ್ನೇನು ದುಃಖವೆಲ್ಲಾ ಸೋರಿಹೋಯಿತು ಎನ್ನುತ್ತಿರುವಷ್ಟರಲ್ಲಿಯೇ, ಮತ್ತೆ ಅಶ್ರುಧಾರೆ ಉಕ್ಕಿ ಉಕ್ಕಿ ಹರಿಯತೊಡಗಿತು – 'ಕಂಡೆವಲ್ಲಾ, ನಮ್ಮ ನಿಧಿಯನ್ನು, ದೊರಕಿತಲ್ಲಾ ಕಳೆದೇಹೋಗಿದ್ದ ರತ್ನ' – ಎಂಬ ಆನಂದ ಹರಿಯತೊಡಗಿತು. ಮತ್ತೆ ಮತ್ತೆ ದುಃಖೋದ್ವೇಗದ ಪ್ರವಾಹ, ಪುನಃ ಪುನಃ ಸಂತಸದ ನೆರೆ ಅಡೆತಡೆಯಿಲ್ಲದೆ ಹರಿಯುತ್ತಿರಲು –

ಶ್ರೀ ರಾಜೇಂದ್ರರ ಸಮಸ್ತ ಅಸ್ತಿತ್ವ ಕರಗಿ ನೀರಾಗಿ, ಪಶ್ಚಾತ್ತಾಪ – 'ಗುರುವರ್ಯರಿಗೆ ಎಂಥಾ ದುಃಖವನ್ನುಂಟುಮಾಡಿದೆನಲ್ಲಾ, ಎಂಥ ಕಟುಕ ನಾನು' – ಎಂದು ಕಂಬನಿಯಾಗಿ–

'ನಾನೆಂಥಾ ಅವಿಧೇಯನಾದೆನಲ್ಲಾ, ಛೀ ! ಛೀ !'

– ಎಂದು ತಮ್ಮ ಮೇಲೆಯೇ ಅಸಹನೀಯ ಕೋಪ-ಸುಡು ಕಣ್ಣೀರಾಗಿ–

'ನನ್ನನ್ನಿನ್ನು ಕ್ಷಮಿಸಿಯಾರೇ...'

– ಎಂಬ ತಲ್ಲಣ ಆತಂಕಗಳು ಧಾರೆಯಾಗಿ –

'ನನಗೆಂಥ ಶಿಕ್ಷೆ ಕಾದಿದೆಯೋ'

– ಎಂಬ ಭೀತಿ ನೀರಾಗಿ –

'ನಾನಿನ್ನೆಂದೂ, ಎಂದೆಂದಿಗೂ ಗುರುಗಳ ಮನ ನೋಯಿಸಲೇ ಬಾರದು'

– ಎಂಬ ದೃಢ ನಿರ್ಧಾರ ಸುಡುಸುಡು ಮುತ್ತು ಮುತ್ತಾಗಿ –

ನಿಮಿಷಗಳ ಮೇಲೆ ನಿಮಿಷಗಳು, ಹೀಗೆ ಅರ್ಧ ತಾಸಿನ ತನಕ....

ಕೊನೆಗೆ ಹಿರಿಯ ಜಗದ್ಗುರುಗಳು –

"ಇವರನ್ನು ನೋಡುತ್ತಲೇ ನಮ್ಮ ದಣಿವು ನೀರಡಿಕೆ ಎಲ್ಲ ಮಾಯವಾಗಿಬಿಟ್ಟಿತು. ಅಂತೂ ಶಿವರಾತ್ರೀಶ್ವರರು ನಮ್ಮ ಪ್ರಾರ್ಥನೆಯನ್ನು ಕೇಳಿಸಿಕೊಂಡು ಕೃಪೆಮಾಡಿದರಲ್ಲಾ! ಅಷ್ಟೇ ಸಾಕು..."

ಗುರುಗಳ ಈ ವಾತ್ಸಲ್ಯಪೂರಿತ ಮಾತುಗಳನ್ನು ಕೇಳುತ್ತಲೇ, ಕಿರಿಯ ಶ್ರೀಗಳವರಿಗೆ ದುಃಖದ ಅವುಗೆಯಿಂದ ಹಿಮರಾಶಿಯ ಮೇಲೆ ಒರಗಿದಂತಾಯಿತು.

ಫಲಭರಿತ ಕಾವಿಚೀಲವನ್ನು ಕಿರಿಯರನ್ನು ಕರೆದು ಅವರ ಕೈಗೆ ಕೊಟ್ಟು –

"ಹಣ್ಣುಹಂಪಲುಗಳು – ಶ್ರೀ ಬೇಲಿಮಠದ ಸ್ವಾಮಿಗಳವರು ಕೊಟ್ಟಿದಾರೆ. ನೀವಿಬ್ಬರೂ ಸ್ವೀಕರಿಸಿ"

– ಎಂದು ತಿಳಿಸಿದರು.

"ತಮ್ಮನ್ನು ಬಿಟ್ಟು ನಾವು ಭುಂಜಿಸುವುದೇ ? ನಿಮ್ಮ ಸ್ನಾನ-ಪೂಜೆಯಾಗಲಿ. ತಾವು ಕರುಣಿಸಿ ಕೊಡಿ. ಆಗ ಮಾತ್ರ ಈ ಹಣ್ಣುಹಂಪಲು ಅಮೃತಸಮಾನವಾಗುತ್ತೆ"

– ಎಂದರು ಶ್ರೀ ಗೌರೀಶಂಕರ ಸ್ವಾಮಿಗಳವರು.

ಹಿರಿಯ ಶ್ರೀಗಳವರು ಕಠೋರ ಎನ್ನುವಷ್ಟರಮಟ್ಟಿನ ಮೌನ ವಹಿಸಿದರು !

ತಮ್ಮ ಕರಕಮಲಸಂಜಾತರನ್ನು ಮತ್ತೆ ಕಂಡೆವಲ್ಲಾ ಎಂಬ ಸಂತಸದಿಂದ ಬೆಳಗಿದ ಮುಖ ಈಗ ಶಿಲಾ ಕಾಠಿಣ್ಯ ವಹಿಸಿತು.

ಶ್ರೀ ಗೌರೀಶಂಕರರು ಮತ್ತೆ ಮತ್ತೆ ವಿನಂತಿಸಿಕೊಂಡರು. ಕೊನೆಗೆ–

ಹಿರಿಯ ಶ್ರೀಗಳವರು –

"ನೀವೊಂದು ಮಾತುಕೊಟ್ಟರೆ ಪೂಜೆಗೆ ಅಣಿಯಾಗುತ್ತೇವೆ."

ಅವರು ಊಹಿಸಿದ್ದರು –

'ಪುಟ್ಸ್ವಾಮಿ ದೃಢನಿರ್ಧಾರದಿಂದ ಇಲ್ಲಿಗೆ ಬಂದಿದಾರೆ. ಶಿಷ್ಯತ್ವ ವಹಿಸಲೆಂದೇ ಬಂದಿರುವ ಇವರು ನಮ್ಮ ಜೊತೆ ಹಿಂತಿರುಗುವುದು ಕಷ್ಟಸಾಧ್ಯ. ಯಾರ ಗುರುತ್ವಾಕರ್ಷಣೆಗೆ ಪಕ್ಕಾಗಿ, ಸೆಳೆತಕ್ಕೆ ಸಿಕ್ಕು ಬಂದಿದಾರೋ, ಆ ಗೌರೀಶಂಕರ ಸ್ವಾಮಿಗಳವರೇ ಒಪ್ಪಿಸಿ, ಹಿಂತಿರುಗಿ ಕಳಿಸಿದರೆ ಮಾತ್ರ ಪುಟ್ಸ್ವಾಮಿ ಬರುವುದು ಸಾಧ್ಯ.'

– ಹೀಗೆ ಊಹಿಸಿರುವುದನ್ನು ಶ್ರೀ ಗೌರೀಶಂಕರ ಸ್ವಾಮಿಗಳವರೂ ಊಹಿಸಿ ಹೀಗೆಂದರು–

"ಕಲಿಯಲೆಂದು ಮಹದಾಸೆಯಿಂದ ಬಂದಿದಾರೆ. ನಾಲ್ಕಾರು ವರ್ಷ ಇರಲಿ. ಕಲಿಯಲಿ. ಆಮೇಲೆ ನಾವೇ ಕಳಿಸುತ್ತೇವೆ."

"ಈತ ಮಹತ್ತರ ಹೊಣೆ ಹೊತ್ತಿದ್ದಾನೆ. ಅದನ್ನು ನಿರ್ವಹಿಸಲೇ ಬೇಕು–"

– ಎಂದು ಪ್ರಾರಂಭಿಸಿ ಮೈಸೂರಿನಲ್ಲಿ ಸಂಸ್ಕೃತ ಪಾಠಶಾಲೆ ಪ್ರಾರಂಭಗೊಂಡ ಹಿನ್ನೆಲೆಯನ್ನು ಸಾದ್ಯಂತವಾಗಿ ವಿವರಿಸಿದ ಮೇಲೆ ಶ್ರೀ ಗೌರೀಶಂಕರ ಸ್ವಾಮಿಗಳವರು 'ಆಗಲಿ' ಎಂದ ಮೇಲೆಯೇ ಹಿರಿಯ ಜಗದ್ಗುರುಗಳವರು ಸ್ನಾನಗೃಹದತ್ತ ತೆರಳಿದರು.

ಹಿರಿಯ ಶ್ರೀಗಳವರು ಇಷ್ಟಲಿಂಗಪೂಜಾಮಗ್ನರಾದರು.

ಸ್ಥಾಣುವಿನ ಮುಂದೆ ಸ್ಥಾಣುವಿನಂತೆ ಕುಳಿತರು.

ಅಂಗೈಯಲ್ಲಿ ಲಿಂಗ – ಹೃತ್ಕಮಲದಲ್ಲೂ ಲಿಂಗ !

ಲಿಂಗಾಂಗಸಮರಸಭಾವದಲ್ಲಿ ತಲ್ಲೀನರಾದರು.

ಮೌನವಾಗಿ ರಾಜಸಂಬಂಧಿ ವೃದ್ಧೆ ಪೂಜಾವೈಭವವನ್ನು ರೆಪ್ಪೆ ಹೊಡೆಯದೆ ಕಣ್ತುಂಬ ನೋಡಿ, ಕಂಗಳ ಬರ ಹಿಂಗಿಸಿಕೊಂಡಂತೆ, ಆನಂದತುಂದಿಲಳಾಗಿ, ತನ್ನ ಬೊಗಸೆಯಲ್ಲಿ ತುಂಬಿಕೊಂಡ ಹೂ-ಪತ್ರೆಗಳನ್ನು – ಶ್ರೀಗಳವರ ಪೂಜೆ ಮುಗಿಯುತ್ತಲೇ ಸರಸರ ಹೋಗಿ, ಗುರುಗಳ ಪಾದಯುಗಳದ ಮೇಲಿರಿಸಿ, ಉದ್ದಕ್ಕೂ ಅಡ್ಡಬಿದ್ದು ನಮಸ್ಕರಿಸಿದಳು.

ಶ್ರೀಗಳವರು–

'ಇಷ್ಟಸಿದ್ಧಿರಸ್ತು!'

– ಎಂದು ಆಶೀರ್ವದಿಸಿದರು !

ದಯವಿಟ್ಟು ವಿಶ್ರಾಂತಿ ಪಡೆಯಿರಿ ಎಂದು ವಿನಂತಿಸಿದರೂ ಕೇಳದೆ, ಹಿರಿಯ ಶ್ರೀಗಳವರು ಶ್ರೀ ಗೌರೀಶಂಕರ ಸ್ವಾಮಿಗಳವರ ಜೊತೆಗೆ ಏನೆಲ್ಲ ಘನ ವಿಷಯಗಳ ಸಲ್ಲಾಪ-ಸಂಭಾಷಣೆ-ಚರ್ಚೆ- ವಿವೇಚನೆಗಳಿಗೆ ತೊಡಗಿಬಿಟ್ಟರು!

ಮಾತು ಸುತ್ತಿಬಳಸಿ, ಶರಣರ ಪ್ರಸ್ತಾಪಕ್ಕೆ ತೊಡಗಿತು.

ಬಸವಣ್ಣನವರು ಬಯಲಾಗುತ್ತಲೆ, ಶರಣರ ತಂಡಗಳು ಚದುರಿಹೋಗಿ, ಎಲ್ಲೆಲ್ಲೋ ಹೋದಂತೆ, ಒಂದು ತಂಡ ಮುಸುಡಿ ಚೌಡಯ್ಯನವರ ನೇತೃತ್ವದಲ್ಲಿ ಸುತ್ತೂರಿಗೆ ಬಂದುದು, ಹಲವು ವರ್ಷ ಸುತ್ತೂರು ಜಗದ್ಗುರುಗಳ ಆಶ್ರಯದಲ್ಲಿ ತಂಗಿದ್ದು, ವಚನ ಸಾಹಿತ್ಯ, ಶರಣ ತತ್ವಗಳ ಪ್ರಚಾರ ನಡೆಸಿದ್ದು ಮುಂತಾದ ಶರಣ ವಿಚಾರವಾಗಿ ಚಿಂತನಮಂಥನ ನಡೆಯಿತು.

ಹಿರಿಯ ಜಗದ್ಗುರುಗಳವರು – 'ಇಂದಿಗೂ ಶರಣತತ್ವಗಳು ಎಷ್ಟು ಪ್ರಸ್ತುತ' ಎಂಬುದನ್ನು ವಿಶದೀಕರಿಸಿದ್ದನ್ನು ಕೇಳಿ ಶ್ರೀ ಗೌರೀಶಂಕರ ಸ್ವಾಮಿಗಳವರು ಅತ್ಯಂತ ಆನಂದಭರಿತರಾಗಿ "ಬಸವಣ್ಣನವರು ನಡೆದಂತೆ ನುಡಿದು, ನುಡಿದಂತೆ ನಡೆದು ಆಚರಿಸಿದ, ಬೋಧಿಸಿದ ತತ್ವಗಳು ಇಂದು ಭಾರತಕ್ಕೊಂದೇ ಅಲ್ಲ, ಇಡೀ ಪ್ರಪಂಚಕ್ಕೇನೇ ಆಚರಣೆಗೆ, ಅನುಷ್ಠಾನಕ್ಕೆ ಅರ್ಹವಾಗಿವೆ. ಇಂದು ಗಾಂಧಿಯವರ ಹರಿಜನೋದ್ಧಾರ – ಅಂದಿನ ಬಸವಾದಿ ಶರಣರು ಹರಳಯ್ಯ - ಮಧುವರಸರಲ್ಲಿ ಬಾಂಧವ್ಯ ಬೆಸೆಯುವುದರ ಮೂಲಕ ಆಗುಮಾಡಿದ ತತ್ವವೇ ಹೌದು. ಇಂದು ಕಾರ್ಲ್‌ಮಾರ್ಕ್ಸ್ ಪ್ರತಿಪಾದಿಸುತ್ತಿರುವ ಸಮತಾವಾದ – ಬಸವಣ್ಣನವರು ಅಂದೇ ಪ್ರತಿಪಾದಿಸಿದ್ದಲ್ಲವೇ ! ಈ ಹೊತ್ತು Work is Worship ಅಂತ ಏನು ಹೇಳ್ತಾರೆ– ಅದನ್ನು ಅಂದೇ ಶರಣರು ಹೇಳಿದರು – 'ಕಾಯಕವೇ ಕೈಲಾಸ' ಎಂದು! ನಮ್ಮ ದುರದೃಷ್ಟ ಏನೆಂದರೆ, ಎಂಟುನೂರು ವರ್ಷಗಳ ಹಿಂದಿನ ಶಾಶ್ವತ ಮೌಲ್ಯಗಳ ಶರಣರ ತತ್ವಗಳನ್ನು ಸಕ್ರಮವಾಗಿ ಪ್ರಚಾರ ಮಾಡಲಿಲ್ಲ. ಕಾಶ್ಮೀರದಿಂದ, ಸೌರಾಷ್ಟ್ರದಿಂದ, ತಮಿಳು, ತೆಲುಗು ನಾಡುಗಳಿಂದಲೂ ಆ ಕಾಲದಲ್ಲಿ ಸಮಾನಮನಸ್ಕರು, ಚಿಂತನಶೀಲರು, ವಿಚಾರವಾದಿಗಳು ಬಸವ-ಅಲ್ಲಮರ ನೇತೃತ್ವದಲ್ಲಿ ಒಟ್ಟುಗೂಡಿದ್ದರು. ಆಯಾ ಭಾಷೆಯವರು ತಮ್ಮ ತಮ್ಮ ಭಾಷೆಗಳಲ್ಲಿ ಶರಣತತ್ವಗಳನ್ನು, ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಪ್ರಚಾರ ಮಾಡುವಂಥ ಯೋಚನೆ – ಯೋಜನೆಗಳು ಸಿದ್ಧಗೊಳಿಸಿಕೊಳ್ಳುವ ಅಮೃತಘಳಿಗೆ ಬರಲೇ ಇಲ್ಲ. ಕುಹಕಿಗಳ, ಕುತಂತ್ರಿಗಳ, ಪುರೋಹಿತಷಾಹಿಗಳ ಕುಟಿಲತನ ದಿಂದಾಗಿ – ಬೌದ್ಧಮತ ಉಚ್ಚಾಟನೆ ಮಾಡಲ್ಪಟ್ಟಂತೆ, ಶರಣ ತತ್ವಗಳು ಎಲ್ಲೆಡೆ ಹರಡಲು ಸಾಧ್ಯವಾಗದ ಹಾಗೆ, ಕೆಲವರನ್ನು ಕೊಲೆಮಾಡಿದರು, ಕೆಲವರನ್ನು ಹೊಡೆದೋಡಿಸಿದರು.... ಕೆಲವರು ತಾವೇ ಎಲ್ಲೆಲ್ಲಿಗೋ ಪಲಾಯನಮಾಡಿಬಿಟ್ಟರು...'

ಇದು ವೈಚಾರಿಕ – ಧಾರ್ಮಿಕ ದುರಂತ !

"ಇಂದು ವ್ಯವಸ್ಥಿತವಾಗಿ ಮತ್ತೆ ಶರಣತತ್ವಗಳ ಪ್ರಚಾರ ಕೈಕೊಳ್ಳುವ ಅಗತ್ಯ ತುಂಬಾ ಇದೆ...."

– ಹೀಗೆ ಶ್ರೀ ಗೌರೀಶಂಕರರ ವಿಚಾರಧಾರೆ ಜಲಪಾತದಂತೆ ಭೋರ್ಗರೆಯುತ್ತ ಪ್ರವಹಿಸಿದ್ದನ್ನು ಕಂಡು ಹಿರಿಯ ಜಗದ್ಗುರುಗಳು, ಕಿರಿಯ ಸ್ವಾಮೀಜಿಯವರು ಆ ರಾಜವಂಶದ ವೃದ್ಧೆಯೂ ಬೆರಗುವಡೆದರು.

"ಶ್ರೀ ಗೌರೀಶಂಕರರೇ ಇಲ್ಲಿಗಿಂತ ನಿಮ್ಮ ಅಗತ್ಯ ಕರ್ನಾಟಕಕ್ಕೆ ತುಂಬಾ ಇದೆ. ನೀವು ನಮ್ಮ ನಾಡಿಗೆ ದಯಮಾಡಿಸಬೇಕು. ಈ ಮಹತ್ತರ ಕಾಯಕ ನಿಮ್ಮ ಅಮೃತವಾಣಿಯಿಂದ ಪ್ರಾರಂಭವಾಗಲಿ, ನಿಮ್ಮ ಅಮೃತಹಸ್ತದಿಂದ ಉದ್ಘಾಟನೆಯಾಗಲಿ"

– ಎಂದು ತುಂಬು ಹೃದಯದಿಂದ ಶ್ರೀ ಪಟ್ಟದ ಶಿವರಾತ್ರಿ ಮಹಾಸ್ವಾಮಿಗಳವರು ಸಲಹೆ ನೀಡಿದರು.

"ಇಲ್ಲಿ ನನ್ನದೊಂದು ಕೆಲಸ ಇದೆ. ಅದು ಮುಗಿಯುತ್ತಲೆ ಬರುತ್ತೇನೆ. ನಿಮ್ಮ ಮಾತಿಗೆ ಎದುರಾಡುವೆನೇ? ಆಗಲಿ! ಈ ನಿಮ್ಮ ಅಪ್ಪಣೆಯೇ ನನಗೆ ಆಶೀರ್ವಾದ."

ಹೀಗೆ ಎರಡು ಮೂರು ದಿನ ಗಹನ ವಿಚಾರಪರಿಪ್ಲುತ ಗೋಷ್ಠಿಯೇ ನಡೆಯಿತು ಎನ್ನಬಹುದು.

ಈ ಹಿರಿಯ ಚೇತನಗಳ ದರ್ಶನದಿಂದ, ಅಂತರಂಗದ ಜ್ಞಾನಪ್ರಕಾಶದಿಂದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರರ ತರುಣ ಮನಸ್ಸು ಮೂಕವಿಸ್ಮಿತವಾಯಿತು. ಹೇಳಲಾಗದ ಹುಮ್ಮಸ್ಸು, ಉಮೇದಿಗಳು ಭರದಿಂದ ಉಕ್ಕಿ ಹರಿದುವು.

ಮಹತ್ತರವಾದುದನ್ನು ಸಾಧಿಸಬೇಕೆಂಬ ಹುಮ್ಮಸ್ಸು ಬೇರುಬಿಡತೊಡಗಿತು....

ಕಾಶಿಯ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ಮೂವರು ಸ್ವಾಮಿಗಳವರು ನೋಡಿದರು. ಗಂಗೆಯಲ್ಲಿ ಮಿಂದರು. ವಿಶ್ವನಾಥನ ದರ್ಶನದಿಂದ ರೋಮಾಂಚಿತರಾದರು.

ಮೈಸೂರಿಗೆ ಹೊರಡಲು ಹಿರಿಯ ಜಗದ್ಗುರುಗಳವರು ಅವಸರಪಡತೊಡಗಿದರು. ಮತ್ತೆ ಶ್ರೀ ಗೌರೀಶಂಕರರ ನಿರ್ಮಲ ಶುದ್ಧಾಂತಃಕರಣದ ಅಪೇಕ್ಷೆಯ ಮೇರೆಗೆ ಮತ್ತೆರಡು ದಿನ ಕಾಶಿಯಲ್ಲಿ ಉಳಿದುಕೊಂಡರು.

ರಾಜವಂಶದ ವೃದ್ಧ ಮಾತೆಯವರಿಗೆ ಸಾಂತ್ವನ ಹೇಳಿದರು.

"ಕಿರಿಯ ಜಗದ್ಗುರುಗಳವರು ಒಂದೆರಡು ವರ್ಷ ಇಲ್ಲಿಯೇ ಇರಲಿ. ಬಿಟ್ಟು ಹೋಗಿ"

– ಎಂದು ಮತ್ತೊಮ್ಮೆ ಕಳಕಳಿಯಿಂದ ಕೇಳಿಕೊಂಡ ಶ್ರೀ ಗೌರೀಶಂಕರರ ಮಾತಿಗೆ–

"ಮೈಸೂರಿನಲ್ಲಿ ಇವರಿಲ್ಲದೇ ಹೋದರೆ ಸಂಸ್ಕೃತ ಪಾಠಶಾಲೆ ಮುಚ್ಚಬೇಕಾಗುತ್ತದೆ. ಉಚಿತ ವಿದ್ಯಾರ್ಥಿನಿಲಯ ಮುಚ್ಚಿಹೋಗುತ್ತದೆ. ಉಚಿತ ಅಶನ - ವಸತಿಗಳಿಂದಾಗಿ ನಿಶ್ಚಿಂತೆಯಿಂದ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳು – ದಿಕ್ಕಾಪಾಲಾಗಬೇಕಾಗುತ್ತದೆ."

ಹಿರಿಯರು ತಮ್ಮ ಖಚಿತ ಅಭಿಪ್ರಾಯ ವ್ಯಕ್ತಪಡಿಸಿದರು. ಹೊರಟುನಿಂತರು. ನಾಲ್ಕಾರು ದಿನಗಳಲ್ಲಿ ಬೆಸೆದು ಬೆಳೆದ ಆತ್ಮೀಯತೆಯಿಂದಾಗಿ ಸ್ವಾಮಿಗಳವರಾದರೂ ಅಗಲಿಕೆಯ ನೋವು ಮನಸ್ಸಿನ ಮಗ್ಗದಲ್ಲಿ ಲಾಳಿಯಾಡಿತು.

ವೃದ್ಧ ಮಾತೆ ಕಂಬನಿದುಂಬಿ ನಮಸ್ಕರಿಸಿದಳು.

ಶ್ರೀ ಗೌರೀಶಂಕರರು ಶ್ರೀ ಶಿವರಾತ್ರಿ ರಾಜೇಂದ್ರರ ಬಳಿ ಸಾರಿ, ಹೆಗಲ ಮೇಲೆ ಕೈಯಿರಿಸಿ – ಮಹತ್ತರವಾದ ಅಪೂರ್ವವೂ ಅನನ್ಯವೂ ಆದ ಮಣಿಹ ತಮಗಾಗಿ ಕಾಯುತ್ತಿದೆ – ಎಂಬುದನ್ನು ಸ್ಪರ್ಶದಿಂದಲೇ ನೆನಪಿಸಿದರು !

ಗೌರೀಶಂಕರ ಪರ್ವತದ ಒಡಲಾಳದಿಂದ ಉದ್ಭವಿಸಿ ಜುಳುಜುಳು ಹರಿವ ಗಂಗಾ ನದಿ ಭಗೀರಥನನ್ನು ಹಿಂಬಾಲಿಸಿದಂತೆ – ಶ್ರೀ ಗೌರೀಶಂಕರ ಸ್ವಾಮಿಗಳ ಆಂತರ್ಯದಿಂದ ಹರಿದ ಹರಕೆ ಹಾರೈಕೆಗಳ ಗಂಗಾಸಲಿಲವನ್ನು ತಮ್ಮ ತ್ರಿಕರಣಗಳಲ್ಲಿ ತುಂಬಿಕೊಂಡು ಶ್ರೀ ಶಿವರಾತ್ರಿ ರಾಜೇಂದ್ರರು ತಾವೇ ಗಂಗೆಯಾಗಿ ಹಿರಿಯ ಜಗದ್ಗುರುಗಳವರನ್ನು ಹಿಂಬಾಲಿಸಿದರು.

* * *

ಪ್ರಗತಿಶೀಲ ಸಾಹಿತ್ಯದ ಉತ್ಕರ್ಷದ ಕಾಲದಲ್ಲಿ – "ಹಿಂತಿರುಗಿ ಬರಲಿಲ್ಲ" "ನೊಗದ ನೇಣು" ಮುಂತಾದ ಗಮನಾರ್ಹ ಕಾದಂಬರಿಗಳ ಕರ್ತೃ, 'ಮುಕ್ಕಣ್ಣ'ನಂತಹ ಸಾರ್ವಕಾಲಿಕ ಶ್ರೇಷ್ಠ ಕಥೆಗಳನ್ನು ಬರೆದ, 'ರೈತ' ಪತ್ರಿಕೆಯ ಸಂಪಾದಕತ್ವ ವಹಿಸಿದ ಬಳ್ಳಾರಿಯ ವಕೀಲರಾಗಿದ್ದು, ಕೆಲಕಾಲ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿದ್ದ, ಅನಂತರ ಸೆಷನ್ಸ್ ಜಡ್ಜ್ ಆಗಿ ಖ್ಯಾತರಾಗಿ ಈಗ ನಿವೃತ್ತರಾಗಿರುವ ಶ್ರೀ ಕೋ. ಚೆನ್ನಬಸಪ್ಪನವರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೊಡನೆ ನಿಕಟ ಪರಿಚಯ ಬೆಳೆದ ಮೇಲೆ ಆಗಾಗ ಭೇಟಿಯಾದಾಗ ಶ್ರೀಗಳವರ ಅಂತರಂಗದ ಅಂತರ್‌ಗಂಗೆ ಯಂಥ ವಿಚಾರಧಾರೆಯನ್ನು, ಭಾವಾನುಭಾವಗಳನ್ನು ಕಂಡು ಕೇಳಿ ರೋಮಾಂಚನಗೊಂಡಂಥ ವರು ಜ್ಞಾಪಿಸಿಕೊಳ್ಳುತ್ತಾರೆ –

"ನಾನು ಕಂಡ ಹಾಗೆ ಮೂವತ್ತು ವರ್ಷಗಳಿಂದ ಈ ನಿತ್ಯ ದಾಸೋಹ ಅಂದರೆ ನಿತ್ಯ ಪವಾಡ ನಡೆಯುತ್ತಿದೆ ! ಅಷ್ಟು ದವಸ-ಧಾನ್ಯ ಸಾಮಗ್ರಿ, ಹಣ ಎಲ್ಲಿಂದ ಬರುತ್ತದೆ ? ಹಿಂದಿನ ಕಾಲದ ಸ್ವಾಮಿಗಳಂತೆ ನೀರನ್ನು ತುಪ್ಪ ಮಾಡಿ, ಬೆತ್ತ ಮುಟ್ಟಿಸಿ ಅನ್ನದ ಕೊಪ್ಪರಿಗೆಯನ್ನು ಅಕ್ಷಯಪಾತ್ರೆ ಮಾಡಿ ಇಷ್ಟೆಲ್ಲಾ ನಡೆಸುತ್ತಾರೆ ಎಂದೇನೂ ಅಲ್ಲ. ಈಗಿರುವ ಶ್ರೀಗಳವರು ಪೀಠದ ಉಸ್ತುವಾರಿಯನ್ನು ವಹಿಸಿಕೊಂಡ ಮೇಲೆ ಅವರೊಡನೆ ನಿಕಟಪರಿಚಯ ಬೆಳೆದ ಮೇಲೆ ಈ ಬೃಹತ್ ಅನ್ನದಾಸೋಹದ ರಹಸ್ಯವೇನೆಂಬುದನ್ನು ನಾನು ಕಂಡುಕೊಂಡೆ.

'ನಮ್ಮ ಮಠಕ್ಕೆ ಎಲ್ಲ ಜಾತಿಯ ಜನರೂ ನಡೆದುಕೊಳ್ಳುತ್ತಾರೆ. ಎಲ್ಲರೂ ಉದಾರವಾಗಿ ಕಾಣಿಕೆ ಕೊಡುತ್ತಾರೆ. ನಾವು ಕೇಳಬೇಕೆಂದೇನೂ ಇಲ್ಲ. ಮಠಕ್ಕಾಗಿ ಪ್ರತಿಯೊಂದು ಕುಟುಂಬವೂ

ಇಂತಿಷ್ಟು ನಿಧಿ ತೆಗೆದಿಡುತ್ತಾರೆ. ಅವರೇ ಗಾಡಿಗಳಲ್ಲಿ ಹೇರಿಕೊಂಡುಬಂದು ಕೊಡುತ್ತಾರೆ. ಲಿಂಗಾಯಿತರಲ್ಲದವರೇ ಬಹುಸಂಖ್ಯೆಯಲ್ಲಿರುವ ಈ ಪ್ರದೇಶದಲ್ಲಿ ಅವರೇ ಬಹುಸಂಖ್ಯಾತ ಶಿಷ್ಯರಾಗಿರುವುದು ಸಹಜ'– ಎಂದರು ಶ್ರೀಗಳವರು.

ಜಾತೀಯ ಭಾವನೆ, ಅದರಲ್ಲೂ ಜಾತಿ ದ್ವೇಷದ ಜ್ವಾಲೆ ಹತ್ತಿ ಉರಿಯುತ್ತಿರುವ ಈ ಕಾಲದಲ್ಲೂ ಒಂದು ಮತದ ಜಗದ್ಗುರುಗಳ ಬಗ್ಗೆ ಇಷ್ಟೊಂದು ಭಕ್ತಿ-ವಿಶ್ವಾಸಗಳು ಎಲ್ಲ ಮತದವರಿಗೂ ಇನ್ನೂ ಉಳಿದಿರುವುದು ಆಶ್ಚರ್ಯದ ಸಂಗತಿಯೇ ಸರಿ !

"ನಮಗೆ ಸನ್ಯಾಸಿಗಳಿಗೆ ಯಾವ ಜಾತಿಯ ಬಂಧನವೂ ಇಲ್ಲ. ಯಾರ ಹೊಟ್ಟೆಯಲ್ಲಿ ಹುಟ್ಟಿದ್ದೇವೆಯೋ ಅವರೇ ನಮಗೆ ಸಂಬಂಧವಿಲ್ಲದವರಾಗಿ ಹೋಗುತ್ತಾರೆ ! ಅವರ ಮನೆತನಕ್ಕೆ ಹೊರತಾಗಿಬಿಡುತ್ತೇವೆ. ನಮ್ಮ ಜೀವನವೇ ಬೇರೆಯಾಗಿಬಿಡುತ್ತದೆ. 'ಪೂರ್ವಾಶ್ರಮದ ತಂದೆ-ತಾಯಿಗಳು' ಎಂದೇ ಹೇಳುತ್ತೇವೆ. ಹೀಗಿರುವಾಗ ನಮಗೆ ಎಲ್ಲರೂ ಒಂದೇ! ಎಲ್ಲರನ್ನೂ ಒಂದೇ ರೀತಿಯಾಗಿ ಕಾಣದವರು ಸಂನ್ಯಾಸಿಗಳಾಗಲಾರರು. ನಮಗೆ ಎಲ್ಲರೂ ಬೇಕು, ನಾವು ಎಲ್ಲರಿಗೂ ಬೇಕು!"

1962ರಲ್ಲಿ ನಮ್ಮ ದೇಶದ ಮೇಲೆ ಚೀನೀ ದಾಳಿ ನಡೆದಾಗ, ದೇಶಾದ್ಯಂತ ಚಿನ್ನದ ಸಂಗ್ರಹ ನಡೆಯಿತು. ಶ್ರೀ ಸುತ್ತೂರು ಶ್ರೀಗಳವರು ತಮ್ಮ ಚಿನ್ನದ ಲಿಂಗದ ಕರಡಿಗೆಯನ್ನು ತೆಗೆದು ಕೊಡುಗೆಯಾಗಿ ನೀಡಿದರು! ವೀರಶೈವ ಸಿದ್ಧಾಂತದ ಪ್ರಕಾರ ಲಿಂಗವೇ ಪ್ರಾಣ– ಲಿಂಗವಂತರಿಗೆ. ಅದನ್ನು ಎಷ್ಟು ಜತನವಾಗಿ ಅಂಗದಮೇಲೆ ಧರಿಸುತ್ತಾರೆ, ಕಾದಿಡುತ್ತಾರೆ ಎಂದರೆ ತಮ್ಮ ಪ್ರಾಣಕ್ಕಿಂತಲೂ ಅದನ್ನು ಅಧಿಕವಾಗಿ ನೋಡುತ್ತಾರೆ. ಲಿಂಗದಕಾಯಿ ಎಂದರೆ ಭಕ್ತನ ಕಾಯವಿದ್ದಂತೆ. ಇಂಥ ಪವಿತ್ರ ನಿಧಿಯನ್ನು ಸ್ವಾಮಿಗಳು– ಅಂದಿನ ಕರ್ನಾಟಕ ಮುಖ್ಯಮಂತ್ರಿಗಳು ಒಂದು ಸಾರ್ವಜನಿಕ ಸಭೆಯಲ್ಲಿ ಚಿನ್ನದ ದೇಣಿಗೆಗಾಗಿ ಮನವಿ ಮಾಡಿದಾಗ – ಸ್ವಾಮಿಗಳು ಬಹಿರಂಗ ಸಭೆಯಲ್ಲಿ ಬಿಚ್ಚಿ ಕೊಟ್ಟರು !

ಸ್ವಲ್ಪ ದಿನಗಳಲ್ಲಿ ನಾನು ಮೈಸೂರಿಗೆ ಹೋದಾಗ ಈ ಘಟನೆಯ ಬಗ್ಗೆ ಮಾತು ಬಂತು. ಸ್ವಾಮಿಗಳು ಹೇಳಿದರು-

'ರಾಜಕಾರಣಿಗಳಿಗೆ ಇದು ದೇಶದ ರಾಜಕೀಯ ಸ್ವಾತಂತ್ರ್ಯದ ಪ್ರಶ್ನೆ. ವ್ಯಾಪಾರಿಗಳಿಗೆ ತಮ್ಮ ಆರ್ಥಿಕಾಭಿವೃದ್ಧಿಯ ಚಿಂತೆ. ಒಬ್ಬೊಬ್ಬರಿಗೆ ಒಂದೊಂದು ದೃಷ್ಟಿಯಿಂದ ಈ ಸಮಸ್ಯೆ ಮಹತ್ವದ್ದಾಗಿದೆ. ಆದರೆ ನಮ್ಮ ದೃಷ್ಟಿಯಲ್ಲಿ ಇದು ನಮ್ಮ ಆರ್ಷೇಯ ಧರ್ಮದ ಅಳಿವು-ಉಳಿವಿನ ಪ್ರಶ್ನೆ. ಈ ದೇಶ ಉಳಿದರೆ ನಮ್ಮ ಧರ್ಮ ಉಳಿದೀತು. ಇಲ್ಲದಿದ್ದರೆ ನಮ್ಮ ಗುಡಿಗೋಪುರಗಳು, ಮಠಮಾನ್ಯಗಳು – ಫ್ಯಾಕ್ಟರಿಗಳೋ, ಶಸ್ತ್ರಾಗಾರಗಳೋ ಆಗಿಹೋಗುತ್ತವೆ. ಜೀವ ಇದ್ದರೆ ದೇಹಕ್ಕೆ ಬೆಲೆ. ಹಾಗೆಯೇ ನಮ್ಮ ರಾಷ್ಟ್ರದ ಜೀವ – ಧರ್ಮ. ಧರ್ಮ ಉಳಿದರೆ ನಮ್ಮ ದೇಶ ಬದುಕುತ್ತದೆ. ಈ ದಾಳಿ ಬೇರೆಯವರಿಗಿಂತ ಹೆಚ್ಚಾಗಿ ನಮಗೆ ಸಂಬಂಧಿಸಿದ ಪ್ರಶ್ನೆ.'

ಆಗ ನಾನು–'ಈ ವಿಪತ್ತನ್ನು ನಿವಾರಿಸಲು ನಮಗೆ ಫ್ಯಾಕ್ಟರಿಗಳೂ ಶಸ್ತ್ರಾಗಾರಗಳೂ ಬೇಕಲ್ಲ ಬುದ್ಧಿ? ನಮ್ಮ ಮಠಗಳೆಲ್ಲ ಈಗ ಫ್ಯಾಕ್ಟರಿಗಳಾಗುವುದೇ ಮೇಲೆಂದು ಕಾಣುತ್ತದೆ' – ಎಂದೆ.

'ಈಗ ಆಪತ್ಕಾಲದಲ್ಲಿ ಬಂದ ಈ ಸಂಕಟ ಪರಿಹಾರಕ್ಕಾಗಿ ಹಾಗೆ ಮಾಡಿದರೂ ತಪ್ಪಲ್ಲ. ಆದರೆ ಮಠಗಳು ಫ್ಯಾಕ್ಟರಿಗಳಾಗಬೇಕಿಲ್ಲ. ಮಠಗಳ ಜೊತೆಗೇ ಫ್ಯಾಕ್ಟರಿಗಳಾಗಲೇಬೇಕು. ಫ್ಯಾಕ್ಟರಿಗಳು ಚೆನ್ನಾಗಿ ಕೆಲಸ ಮಾಡಲು, ಕೆಲಸ ಮಾಡಿ ಸಂಪತ್ತು ಸಮೃದ್ಧಿಯಾದ ಮೇಲೆ ಶಾಂತಿ, ನೆಮ್ಮದಿ ನೆಲೆಸಲು ಮಠಗಳು ಅಗತ್ಯವಾಗಿ ಬೇಕು. ಮಠಗಳಿಲ್ಲದ ಫ್ಯಾಕ್ಟರಿಗಳ ದೇಶ ಕೇವಲ ದೈತ್ಯಶಕ್ತಿ'– ಎಂದು ಅಪ್ಪಣೆಕೊಡಿಸಿದರು.

ಶಿವಮೊಗ್ಗದಲ್ಲಿ ಶ್ರೀಯುತರು ಸೆಷನ್ಸ್ ಜಡ್ಜ್ ಆಗಿದ್ದಾಗ, ಒಮ್ಮೆ ಶ್ರೀಗಳವರು ಶಿವಮೊಗ್ಗದಿಂದ ರಾತ್ರಿ ಹೊತ್ತೇ ಮೈಸೂರಿಗೆ ಹೊರಡಲಿರುವ ವಿಷಯ ತಿಳಿದು ಶ್ರೀಯುತರು ರಾತ್ರಿ ತಮ್ಮಲ್ಲಿಯೇ ಪೂಜೆ ಪ್ರಸಾದ ಮುಗಿಸಿ, ತಂಗಿದ್ದು ಬೆಳಗ್ಗೆ ಹೋಗಬೇಕು– ಎಂದು ನಾನು ಬಂದು ಬಿನ್ನವಿಸಿಕೊಳ್ಳುತ್ತೇನೆ ಎಂದಾಗ ಜಗದ್ಗುರುಗಳವರು-

'ಬೇಡಿ, ಬಂದೇ ಕರೆಯಬೇಕೆಂದೇನೂ ಇಲ್ಲ. ನಿಮ್ಮ ಆಗ್ರಹ ಹಾಗಿದ್ದರೆ ಈ ರಾತ್ರಿ ಇದ್ದೇ ಬೆಳಗ್ಗೆ ಹೊರಡುತ್ತೇವೆ"– ಎಂದು ಶ್ರೀಗಳವರು ಮನೆಗೆ ಬಂದೇಬಿಟ್ಟರು !

ಸುತ್ತೂರು ವೀರಸಿಂಹಾಸನಾಧೀಶ್ವರರಾದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಹೀಗೆ ಬಿನ್ನವಿಸಿದೊಡನೆ ಬಿಜಯಂಗೈಯುವುದು ಆಶ್ಚರ್ಯಕರವಲ್ಲವೆ? ಶ್ರೀಗಳವರು ಹೇಳಿದರು–

"ನಮ್ಮ ಶಿಷ್ಯರಲ್ಲಿ ಬಹಳ ಬಡವರು ಇದ್ದಾರೆ. ಲಿಂಗಾಯತರಲ್ಲದವರೂ ಇದ್ದಾರೆ. ಅವರು ಬಿನ್ನಹ ಮಾಡುತ್ತಾರೆ. ಅವರಲ್ಲಿಗೂ ಹೋಗುತ್ತೇವೆ. ನಮ್ಮ ಪೂಜೆಗಾಗಿ ತಮ್ಮ ಬಡ ನಿವಾಸದಲ್ಲಿ ಒಂದು ಕಡೆ ಪ್ರತ್ಯೇಕ ಸ್ಥಳ ಏರ್ಪಡಿಸುತ್ತಾರೆ. ಅಲ್ಲಿ ಅವರ ಪ್ರೀತ್ಯರ್ಥವಾಗಿ, ಶ್ರೇಯೋಭಿವೃದ್ಧಿಗಾಗಿ ಪೂಜೆ ತೀರಿಸಿಕೊಂಡು ಬರುತ್ತೇವೆ."

* * *

ಅಸಂಖ್ಯಾತ ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಿಯ ಗುರುಗಳೂ, ಮಗುವಿನಂಥ ಮುಗ್ಧ ಮನಸ್ಸಿನವರೂ, ಅನನ್ಯ ವಿದ್ವನ್ಮಣಿಗಳೂ, ಸುಸಂಸ್ಕೃತರೂ, ಶ್ರೇಷ್ಠ ಸಾಹಿತಿಗಳೂ ಆದಂಥ ಪ್ರೊ. ತ.ಸು. ಶಾಮರಾಯರು ಪರವಶರಾಗಿ ಉದ್ಗರಿಸುತ್ತಾರೆ–

"ಛೆ ! ಎಂತಹ ವ್ಯಕ್ತಿಗಳಪ್ಪಾ ಅವರು, ಅವರು ಮನುಷ್ಯರಲ್ಲ, ದೈವೀಪುರುಷರು ! ಆತನೊಬ್ಬ ಮಹಾತ್ಮ ! ಬಡವರ ಬಂಧು ....."

"ಈಗ್ಗೆ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಡೆದ ಒಂದು ಪುಟ್ಟ ಘಟನೆ ನನ್ನ ಹೃದಯದಲ್ಲಿ ಚಿರಸ್ಥಾಯಿಯಾಗಿ ನೆಲೆಸಿದೆ. ಒಂದು ದಿನ – ಆ ದಿನವೇ ನನ್ನ ಬಾಳಿನ

ಸುದಿನ. ಮಧ್ಯಾಹ್ನ ಸುಮಾರು ಒಂದು ಗಂಟೆಯ ಸಮಯ. ನಾನು ಊಟಕ್ಕಾಗಿ ಏಳುವ ಮುನ್ನ ಬಾಗಿಲನ್ನು ಮುಂದೆ ಮಾಡಲೆಂದು ಹೆಜ್ಜೆ ಇಟ್ಟಿದ್ದೆ. ಓ! ಇದೇನಾಶ್ಚರ್ಯ! ಸ್ವಾಮೀಜಿಯವರು ನನ್ನ ಮನೆಯೊಳಗೆ ತಮ್ಮ ಒಬ್ಬರು ಶಿಷ್ಯರೊಡನೆ! ನಾನು ಅಚ್ಚರಿಯಿಂದ ಸ್ತಂಭೀಭೂತನಾದೆ. ನನ್ನ ಕಣ್ಣುಗಳನ್ನು ನಾನೇ ನಂಬದಾದೆ. ಆಹ್ವಾನಿಸಿದರೂ ಬರಲಾರರೆಂದು ಭಾವಿಸಿದ ಪೂಜ್ಯ ಶ್ರೀಗಳು ಆಹ್ವಾನವಿಲ್ಲದೆಯೇ ನನ್ನ ಮನೆಗೆ ಆಗಮಿಸಿದರೆಂದರೆ ಅದು ಒಂದು ಪವಾಡವೇ ಸರಿ. ನಮಸ್ಕರಿಸಿ ತೊದಲುತ್ತ–

'ಸ್ವಾಮೀಜಿ, ಇದೇನು ನಿಮ್ಮ ಕರುಣೆ! ನಾನು ಧನ್ಯ. ತಮ್ಮ ಪಾದಧೂಳಿಯಿಂದ ನನ್ನ ಮನ, ಮನೆಗಳು ಪವಿತ್ರವಾದುವು'– ಎಂದೆ.

ಸ್ವಾಮೀಜಿ ಕಿರುನಗೆ ನಗುತ್ತಾ –

'ರಾಯರೆ, ಇಲ್ಲಿ ಯಾರೋ ಭಕ್ತರ ಮನೆಗೆ ಆಹ್ವಾನಿತರಾಗಿ ಬಂದಿದ್ದೆವು. ಹಿಂದಿರುಗುವಾಗ ನಿಮ್ಮ ಹೆಸರಿನ ಹಲಗೆ ಕಣ್ಣಿಗೆ ಬಿತ್ತು. ನಿಮ್ಮನ್ನು ಮಾತನಾಡಿಸಿ ಹೋಗುವಾ ಎಂದು ಬಂದೆವು. ಒಳಗೆ ಬರಬಹುದೆ ?'

– ಎಂದು ನಕ್ಕರು.

ಅದಕ್ಕೆ ನಾನು ಅಪರಿಮಿತ ಸಂತೋಷದಿಂದ ಮತ್ತೊಮ್ಮೆ ಅವರಿಗೆ ನಮಸ್ಕರಿಸಿ, ಮನೆಯವರೆಲ್ಲರಿಗೂ ನಮಸ್ಕರಿಸುವಂತೆ ಸೂಚಿಸಿ, ಅವರನ್ನು ಒಳಕ್ಕೆ ಕರೆದೊಯ್ದು ಆಸೀನರಾಗಬೇಕೆಂದು ಪ್ರಾರ್ಥಿಸಿದೆ. ಅನಂತರ ಬೆಳ್ಳಿಯ ತಟ್ಟೆಯೊಂದರಲ್ಲಿ ತೆಂಗಿನಕಾಯಿಯನ್ನು, ಐವತ್ತು ರೂಪಾಯಿಗಳ ದಕ್ಷಿಣೆಯನ್ನೂ ಸ್ವಾಮೀಜಿಯವರ ಪಾದಕ್ಕೆ ಒಪ್ಪಿಸಿದೆ. ಸ್ವಾಮೀಜಿಯವರು ಪ್ರೀತಿಯಿಂದ ಅದನ್ನು ಸ್ವೀಕರಿಸಿದರು. ಇದಲ್ಲವೇ ನಮ್ಮ ಭಾಗ್ಯ !

* * *

ಕೊಳ್ಳೇಗಾಲ ತಾಲ್ಲೂಕಿನ ಮಧುವನಹಳ್ಳಿಯ ಮಾಜಿ ಶಾಸಕರು ಶ್ರೀ ಮಸಣಶೆಟ್ಟಿಯವರು ತಾವು ಶ್ರೀಗಳವರ ಪರಮಭಕ್ತರಾದ ಬಗೆಯನ್ನು ಮನದುಂಬಿ ವರ್ಣಿಸಿದ್ದಾರೆ –

"ನನ್ನ ಜೀವಮಾನದಲ್ಲಿ ಮರೆಯಲಾಗದ ಘಟನೆಯೊಂದು ನಡೆಯಿತು. ಅದೇನೆಂದರೆ ನನ್ನ ಮಗಳ ಮದುವೆಯ ಸಂದರ್ಭ. ಮಹಾಸ್ವಾಮಿಗಳನ್ನು ಮದುವೆಗೆ ಏಕೆ ಕರೆಯಬಾರದು? ಬರುತ್ತಾರೊ ಹೇಗೋ? ನನ್ನಂಥ ಹಿಂದುಳಿದವರ ಮನೆಗೆ ಅವರು ಹೇಗೆ ಬಂದಾರು?– ಎಂದು ಬಹಳ ಆಲೋಚನೆ ಮಾಡಿದೆ. ಆಮೇಲೆ ಏನಾದರಾಗಲಿ ಕರೆದೇಬಿಡೋದು ಸರಿ ಎಂದು ತೀರ್ಮಾನಿಸಿದೆ. ಜಗಜ್ಯೋತಿ ಬಸವಣ್ಣನವರು ಹರಳಯ್ಯ, ಮಾದಾರ ಚೆನ್ನಯ್ಯ, ಕಕ್ಕಯ್ಯನವರನ್ನು ಅಪ್ಪ ಅಮ್ಮ ಎಂದರಲ್ಲ ! ಅಂಥ ಧರ್ಮದ

ಸ್ವಾಮಿಗಳು ನಾನು ಭಕ್ತಿಯಿಂದ ಕರೆದರೆ ಬಂದೇ ಬರುತ್ತಾರೆ ಎಂಬ ಭರವಸೆ. ಈ ನಡುವೆ ನಾನು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿ ಮತ್ತು ಎಂಎಲ್‌ಸಿಯಾಗಿದ್ದೆ. ಇದರಿಂದ ಸುತ್ತೂರು ಮಠಕ್ಕೆ ಶಿಷ್ಯರಾಗಿದ್ದ ದೊಡ್ಡ ದೊಡ್ಡ ಲಿಂಗಾಯಿತ ನಾಯಕರೆಲ್ಲರೂ ನನಗೆ ಪರಿಚಯವಾದವರೆ. ಮದುವೆ ಆಹ್ವಾನ ಪತ್ರಿಕೇನ ಸ್ವಾಮಿಗಳವರಿಗೆ ಕೊಟ್ಟು ಬರುವಂತೆ ಆಹ್ವಾನಿಸಬೇಕು. ನನ್ನ ಜೊತೆಗೆ ಬನ್ನಿ ಅಂತ ಯಾರನ್ನೇ ನಾನು ಕರೆದಿದ್ದರೂ ಸಂತೋಷವಾಗಿಯೇ ಬರುತ್ತಿದ್ದರು. ಆದರೆ ಆ ರೀತಿ ಮಾಡಲು ನನ್ನ ಮನಸ್ಸು ಏಕೋ ಒಪ್ಪಲಿಲ್ಲ. ಸ್ವಾಮಿಗಳವರನ್ನು ನಾನು ಕರೆದರೆ ಖಂಡಿತಾ ಬರುತ್ತಾರೆ ಎಂದುಕೊಂಡೇ ಮೈಸೂರಿಗೆ ಬಂದೆ. ಸ್ವಾಮಿಗಳನ್ನು ಕಂಡು ನಮಸ್ಕಾರಹಾಕಿ ಆಹ್ವಾನ ಪತ್ರಿಕೆಯನ್ನು ಅವರಿಗೆ ಕೊಟ್ಟೆ. ಅದನ್ನು ನೋಡಿ –

'ಓ, ಮಗಳ ಮದುವೆ ಮಾಡುತ್ತಿದ್ದೀರಾ ? ತುಂಬ ಸಂತೋಷ' – ಎಂದರು. ಅದಕ್ಕೆ ನಾನು–

'ತಾವು ದಯಮಾಡಿ ಬರಬೇಕು ಬುದ್ಧೀ. ತಾವು ನಮಗೆಲ್ಲಾ ಆಶೀರ್ವಾದ ಮಾಡಬೇಕು' – ಎಂದು ಹೇಳಿದೆ ಅಷ್ಟೆ.

ನನ್ನ ಬಿನ್ನಹವನ್ನು ಕೇಳಿದ ಅವರು ಎಷ್ಟು ಜೋರಾಗಿ ನಕ್ಕರೆಂದರೆ ನನಗೇ ಆಶ್ಚರ್ಯ ! ನಾನು ಕರೆದದ್ದು ತಪ್ಪಾಯಿತೇನೋ ? ಅಥವಾ ನನ್ನನ್ನು ಹಾಸ್ಯಮಾಡುತ್ತಿದ್ದಾರೇನೋ ? ಎಂದು ಒಂದು ಕ್ಷಣ ಅನುಮಾನವಾಯಿತು. ಆದರೆ ಈ ಅನುಮಾನ ಒಂದು ಕ್ಷಣಕ್ಕಿಂತ ಹೆಚ್ಚು ಹೊತ್ತು ಉಳಿಯಲಿಲ್ಲ.

'ಮಗಳ ಮದುವೆಗೆ ನಾವು ಬರಬೇಕಾ ಮಸಣಶೆಟ್ಟರೆ ? ಆಯಿತು ಬರುತ್ತೇವೆ' – ಎಂದು ಅವರೇನೋ ಹೇಳಿದರು.

ಆದರೆ ಅವರು ಈಗ ಉಪಚಾರಕ್ಕೆ ಹೇಳುತ್ತಿರಬಹುದು ಎಂಬ ಅನುಮಾನ. ಇದಕ್ಕೆಲ್ಲಾ ಕಾರಣ ಅವರ ಸಂತೋಷದ ನಗು !

ಮದುವೆಯ ದಿನ ಅವರು ಬಂದೇಬಂದರು !

ನನಗೆ ಎಷ್ಟು ಸಂತೋಷವಾಯಿತೆಂದರೆ, ನನಗೆ ಕಣ್ಣಲ್ಲಿ ನೀರೇ ಬಂದುವು. ಆ ದಿನ ಅವರು ನಮ್ಮ ಮನೆಗೆ ಕಾಲಿಟ್ಟಾಗ ನಾವೆಲ್ಲ ಪಾವನರಾದೆವು. ನಮ್ಮವರೇ ಆದ ಸುತ್ತಮುತ್ತಲಿನ ಎಲ್ಲರ ಭಕ್ತಿಯನ್ನು ಸ್ವೀಕರಿಸಿದ ಸ್ವಾಮಿಗಳವರು ಒಂದು ಗಂಟೆಗೂ ಮೀರಿ ಇದ್ದು ವಧೂವರರನ್ನು ಆಶೀರ್ವದಿಸಿ ಮತ್ತೆ ಮೈಸೂರಿಗೆ ದಯಮಾಡಿಸಿದರು. ಆದರೆ ಇದನ್ನೆಲ್ಲಾ ನೋಡಿದ ನನ್ನ ಲಿಂಗಾಯತ ಮಿತ್ರರಿಗೆ ಮತ್ತು ಲಿಂಗಾಯತ ನಾಯಕರಿಗೆ ಆಶ್ಚರ್ಯವೋ ಆಶ್ಚರ್ಯ. ಅವರು ನನಗೆ ಏನೇನೋ ಪ್ರಶ್ನೆಗಳನ್ನು ಕೇಳಿದರು. ಅಂದರೆ ಯಾರ ಮೂಲಕ ನಾನು ಹೋಗಿ ಸ್ವಾಮಿಗಳವರಿಗೆ ಆಹ್ವಾನವಿತ್ತೆ ಎಂದು ಪದೇ ಪದೇ

ಕೇಳಿದರು – ಅದಕ್ಕೆ ನನ್ನದು ಒಂದೇ ಮಾತಿನ ಉತ್ತರ – ನಾನೇ ಹೋಗಿ ಭಕ್ತಿಯಿಂದ ಕರೆದೆ. ಬಂದರು ! ಯಾಕೆ ಬರಬಾರದೆ ?– ಎಂದೂ ಕೇಳಿದೆ.

ಸ್ವಾಮಿಗಳವರು ಬಸವಣ್ಣನವರ ಅವತಾರ. ಅದನ್ನು ಎಲ್ಲರೂ ತಿಳ್ಕೋಬೇಕು – ಎಂದೂ ಹೇಳಿದೆ.

ರಾಜೇಂದ್ರಬುದ್ಧಿಯವರು ನಮ್ಮ ಸ್ವಾಮಿಗಳು ಎಂದು ಅವರ ಒಂದು ಫೋಟೋವನ್ನು ಮಠದಲ್ಲಿ ಪಡೆದುಕೊಂಡು ನನ್ನ ಮನೆಗೆ ತಂದೆನು. ಆವೊತ್ತಿನಿಂದ ಈವೊತ್ತಿನವರೆಗೂ ಮತ್ತು ಇನ್ನು ಮುಂದೆಯೂ ಅದನ್ನು ದೇವರ ಮನೆಯಲ್ಲಿಟ್ಟುಕೊಂಡು ಪೂಜೆ ಮಾಡುತ್ತೇನೆ ...."

* * *

ತಮ್ಮ ಬಾಲ್ಯದಿಂದಲೂ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ನಿಕಟವರ್ತಿಯಾಗಿದ್ದ ಶ್ರೀ ಎಂ.ಎಸ್. ಪರಶಿವಮೂರ್ತಿಯವರು ಹೊಸದಾಗಿ ಇಂಜಿನಿಯರ್ ಹುದ್ದೆಯನ್ನು ವಹಿಸಿಕೊಂಡು ಶಿವಮೊಗ್ಗಕ್ಕೆ ಹೋದ ಮೇಲೆ, ಜಗದ್ಗುರುಗಳು ವಿದ್ಯಾರ್ಥಿನಿಲಯಗಳನ್ನು ಕಟ್ಟಿಕೊಂಡು ಒಂದೇ ಸಮನೆ ಅವುಗಳನ್ನು ಬೆಳೆಸುತ್ತಾ ಆ ಸಾಧನೆಯಲ್ಲಿ ತಮ್ಮ ದೇಹವನ್ನೇ ಸವೆಸುತ್ತಿರುವುದನ್ನು ಪರಿಭಾವಿಸಿ ಅತ್ಯಂತ ಆತಂಕದಿಂದ, ತುಂಬು ಕಾಳಜಿಯಿಂದ 1946ರಲ್ಲಿ ಶ್ರೀಗಳವರಿಗೆ–'ಶಕ್ತಿಮೀರಿ ವಿದ್ಯಾರ್ಥಿನಿಲಯಗಳನ್ನು ಕಟ್ಟಿಕೊಂಡು ತೊಂದರೆಪಡುತ್ತ ನಿಮ್ಮ ಆರೋಗ್ಯವನ್ನು ಮನಶ್ಶಾಂತಿಯನ್ನು ಹಾಳು ಮಾಡಿಕೊಳ್ಳುತ್ತಿದ್ದೀರಿ'– ಎಂಬ ಅರ್ಥ ಬರುವ ಹಾಗೆ ಪತ್ರ ಬರೆದದ್ದಕ್ಕೆ ಶ್ರೀಗಳವರು 17.8.46 ರಂದು ಮರು ಪತ್ರ ಬರೆಯುತ್ತಾರೆ–

'...ನಮ್ಮ ಮನಶ್ಶಾಂತಿಯ ವಿಚಾರವಾಗಿ ಬರೆದಿರುತ್ತೀಯೆ. ನೀನು ನಿನ್ನ ಹಾಗೆ ನನ್ನನ್ನು ಅಳೆಯುತ್ತೀಯೇ ಹೊರತು ನಮ್ಮ ಕರ್ತವ್ಯದ ಕಡೆಗೆ ನಿನ್ನ ದೃಷ್ಟಿಯೇ ಬರಲಾರದು. ಮನಶ್ಶಾಂತಿ ಎಂದರೆ ಏನು ಭಾವಿಸಿರುವೆಯೋ ಅದೇ ನನಗೆ ತಿಳಿಯದು. ಸುಖವಾಗಿ ಮಾತನಾಡಿಕೊಂಡು ಕಾಲಕಳೆದು ಬಂದರೆ ಮನಶ್ಶಾಂತಿಯೆಂದು ತಿಳಿದಿರುತ್ತೀಯಾ? ಹಾಗೆ ತಿಳಿದಿದ್ದರೆ ಅದು ಭ್ರಮೆ. ನಾನು ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ನನ್ನ ಜವಾಬ್ದಾರಿ ಮುಗಿಯಿತು. ಪರಮಾತ್ಮನಿಗೆ ಅದು ಅರ್ಪಣೆಯಾಗಲಿ. ಇದರಿಂದ ಬರುವ ಮಾನಾಪಮಾನ ಗಳೂ ಲಾಭನಷ್ಟಗಳೂ ಈಶ್ವರಾರ್ಪಿತವಾಗಲಿ ಎಂದು ಕರ್ಮವನ್ನು ಮಾಡಿ, ಮನಸಾರೆ ಆನಂದಪಟ್ಟು, ಕರ್ತವ್ಯ ಕರ್ಮಗಳನ್ನು ನಿರ್ವಹಿಸಿದರೆ ಮನಸ್ಸಿಗೆ ಶಾಂತಿ ಬರಲಿಲ್ಲವೇ? ಕ್ಷೋಭೆ ಬಂತೆ ? ಶಾಂತಿ ಅಶಾಂತಿಗಳ ಅರ್ಥವೇನು? ....ಯಾವಾಗಲಾದರೂ ನಾನು ನನ್ನ ಲೌಕಿಕ ಕರ್ಮಗಳ ವಿಷಯದಲ್ಲಿ ಚಿಂತಿಸುವುದನ್ನು ನೋಡಿರುತ್ತೀಯಾ? ಹಾಗೆ ಯಾರಾದರೂ ಅಂದರೂ ಮೇಲಣ ಡಂಭಾಚಾರಕ್ಕೆ ಅವರ ಹತ್ತಿರ ಮಾತಾಡಿ ಕಾಲ ಕಳೆಯುತ್ತಿದ್ದೆನು.

ಅದು ತಪ್ಪಾದರೂ ವ್ಯವಹಾರದಿಂದ ಹಾಗೆ ಮಾಡುತ್ತಿದ್ದೆನು. ಮನಸ್ಸಿಗೆ ಯಾವಾಗಲೂ ಶಾಂತಿಯೇ ಇರುತ್ತೆ. ಆನಂದವೂ ಇರುತ್ತೆ. ನೀನೇ ನಿನ್ನನ್ನು ಯೋಚಿಸಿ ನನ್ನನ್ನು ಹೀಗೇ ಇರಬಹುದೆಂಬ ಭಾವನೆಯಿಂದ ತಿಳಿದೆ. ಎಂದಿಗೂ ಹಾಗಾಗಲಾರದು. ನನ್ನ ಕರ್ತವ್ಯವನ್ನು ನಾನು ಮಾಡಲೇಬೇಕು. ಅದು ಯಾವ ಕಾರಣದಿಂದಲೂ ತಪ್ಪಬಾರದು. ಆತ್ಮಸಾಕ್ಷಾತ್ಕಾರ ಮಾರ್ಗಕ್ಕೆ ಇದೂ ಒಂದು ಸಾಧನ. ಇದು ಯಾವ ಕಾರಣದಿಂದಲೂ ಅದಕ್ಕೆ ವಿರೋಧವಿಲ್ಲ ವೆಂದು ತಿಳಿ. ನಿನ್ನನ್ನು ತೃಪ್ತಿಪಡಿಸಲು ಹೀಗೆ ಹೇಳಿಲ್ಲ. ಇದರಿಂದ ಅದಕ್ಕೆ ಸಾಧನೆಯೇ ಹೊರತು ಕೆಡಕೇನೂ ಇಲ್ಲ.... ಪ್ರಪಂಚದ ಸಂಸಾರವನ್ನೆಲ್ಲಾ ಕಟ್ಟಿಕೊಂಡಿರುತ್ತೀರ – ಎಂದು ಬರೆದಿರುತ್ತೀಯೆ. ಹಾಗೆಂದಿಗೂ ಇಲ್ಲ. ಕಟ್ಟುವುದೂ ಬಿಡುವುದೂ ನಮ್ಮದಲ್ಲ. ಎಲ್ಲವೂ ದೈವೇಚ್ಛೆ. ನನ್ನ ಒಂದು ಸಣ್ಣ ಕೆಲಸವೂ ಪರಮಾತ್ಮನ ಇಚ್ಛೆಯಿಂದ ನಡೆಯುವುದೇ ಹೊರತು ಅನ್ಯಥಾ ಇಲ್ಲ. ಯಾವ ತಾಪತ್ರಯಗಳ ಪರಿಣಾಮವೂ –ಪ್ರತ್ಯಕ್ಷ ಪರೋಕ್ಷ – ಯಾವಾಗಲೂ ಇರುವುದೇ. ಇದು ಖಂಡಿತ ಸತ್ಯವಾದ ಮಾತು. ಇಲ್ಲಿಯವರೆಗೂ ನಾನು ಈ ವಿಷಯದಲ್ಲಿ ಏನೂ ಕಿಂಚಿತ್ತೂ ಯೋಚನೆಯನ್ನೇ ಮಾಡಿಲ್ಲ, ಮುಂದೆ ಮಾಡುವುದೂ ಇಲ್ಲ. ದೊಡ್ಡ ಕೆಲಸಕ್ಕೆ ಕೈ ಹಾಕಿದಾಗ ಕೆಲಸವಾಗದಿದ್ದರೂ ವ್ಯಥೆಯಿಲ್ಲ. ಈ ದಿನ 1000 ಜನಕ್ಕೆ ಅಡುಗೆ ಮಾಡಬೇಕಾದರೂ ಸಾಮಾನನ್ನು ನೋಡುವುದೇ ಇಲ್ಲ; ಕೆಲಸ ಪ್ರಾರಂಭಿಸಿಯೇಬಿಡುತ್ತೇನೆ. ಎಲ್ಲವೂ ದೈವೇಚ್ಛೆಯಿಂದ ನಡೆಯುತ್ತದೆ. ವ್ಯವಹಾರ ವನ್ನು ಕಟ್ಟಿಕೊಂಡಷ್ಟೂ ಶಾಂತಿ ದೂರವಾಗುತ್ತದೆಂದು ಮತ್ತೊಮ್ಮೆ ಬರೆದಿರುತ್ತೀಯೆ. ವ್ಯವಹಾರ ವೆಂದರೆ ಯಾವ ವ್ಯವಹಾರ ಎಂದು ಯೋಚಿಸು. ನಾನು ಮಾಡುವುದೂ ವ್ಯವಹಾರ, ನೀನು ಮಾಡುವುದೂ ವ್ಯವಹಾರ. ಆ ವ್ಯವಹಾರದಲ್ಲಿ ನನ್ನ ಧ್ಯೇಯವೇನು? ನಿನ್ನ ಧ್ಯೇಯವೇನು? ಸಾಧನೆಯ ಪರಿಣಾಮವು ವೈಪರೀತ್ಯವಾದರೆ ನನ್ನ ಮನಸ್ಸಿನ ಪರಿಣಾಮವೇನು? ನಿನ್ನ ಮನಸ್ಸಿನ ಪರಿಣಾಮವೇನು? ಎರಡನ್ನೂ ತುಲನೆಮಾಡು. ಅನಂತರ ವ್ಯವಹಾರವನ್ನು ಬಿಡಿ ಎಂದು ಹೇಳು. ಈ ವ್ಯವಹಾರವು ನಮಗೆ ಅವಶ್ಯ ಆಗಲೇ ಬೇಕು. ಒಂದು ಪಕ್ಷ ನಿನ್ನ ಇಚ್ಛೆಯಂತೆ ಇದ್ದರೆ ಹೆಚ್ಚು ವ್ಯವಹಾರದ ಪೆಟ್ಟುಗಳಿಂದ ಇನ್ನೂ ಅಶಾಂತಿಯು ಹೆಚ್ಚಬಹುದು. ಅದಕ್ಕಾಗಿ ನೀನು ಚಿಂತಿಸಬೇಡ. ನನ್ನ ಚಿಂತೆಗಿಂತಲೂ ಮೊದಲು ನಿನ್ನ ಚಿಂತೆಯನ್ನೇ ಮಾಡು......

'....ಆರೋಗ್ಯದ ವಿಷಯದಲ್ಲಿ ಎಷ್ಟು ನಾನು ಎಚ್ಚರದಿಂದಿರಲು ಬಯಸಿದರೂ ಆಗುವುದಿಲ್ಲ. ಒಂದು ಹೊತ್ತು ಊಟ ಸಿಕ್ಕಿದರೆ ಎರಡು ಹೊತ್ತು ಸಿಗುವುದೇ ಇಲ್ಲ. ಈ ದಿನ ಬೆಳಗ್ಗೆ 7 ಗಂಟೆಗೆ ಊಟ ಮಾಡಿ ಬೆಂಗಳೂರಿಗೆ ಬಂದೆ. ಇಲ್ಲಿ ಏನೂ ಇಲ್ಲ. ರಾತ್ರಿ 11 ಗಂಟೆ, ನಿನಗೆ ಪತ್ರ ಬರೆಯುತ್ತಿದ್ದೇನೆ. ತುಂಬಾ ಹಸಿವು. ಶರೀರಧರ್ಮ, ಏನು ಮಾಡುವುದು ? ಇದಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲ. ನೀವು ಹಾಗೆ ಮಾಡಬಾರದೆಂದು ಬರೆದಿರುತ್ತೀಯೆ. ಮಾಡಬಾರದೆಂದೇ ಶ್ರೀ ಗೌರೀಶಂಕರ ಸ್ವಾಮಿಗಳೂ ವಚನವನ್ನು ತೆಗೆದುಕೊಂಡು ಕಳಿಸಿದರು.

ಸನ್ನಿವೇಶ ಇಲ್ಲಿ ಅನುಕೂಲವಿಲ್ಲ. ಎಲ್ಲವೂ ನಿನಗೆ ಗೊತ್ತಿದೆ. ಇದು ಜನ್ಮಾಂತರದ ಸಂಸ್ಕಾರ. ಇದಕ್ಕೆ ಯಾರೂ ಏನೂ ಮಾಡಲಾಗುವುದಿಲ್ಲ. ಎಷ್ಟು ಪ್ರಯತ್ನ ಮಾಡಿದರೂ ಆಹಾರದ ಅಭಾವ ನನಗೆ ಯಾವಾಗಲೂ ಇದೆ. ಇದೂ ಈಶ್ವರೇಚ್ಛೆಯಾಗಿದ್ದರೆ ನಾನೇನು ಮಾಡಲಿ? ಪಾಪ! ಇದಕ್ಕಾಗಿ ನೀನು ಚಿಂತಿಸಬೇಡ. ನಿನ್ನ ವಿಶ್ವಾಸವು ಅಧಿಕ. ಅದಕ್ಕಾಗಿ ನೀನು ಹೀಗೆ ಬರೆದಿರುತ್ತೀಯೆ. ಆದರೂ ಇದರಿಂದ ನಾನು ಏನೂ ತೊಂದರೆಗೊಳ್ಳಲಾರೆ. ಎಲ್ಲಕ್ಕಿಂತ ಮಿಗಿಲಾಗಿ ನನಗೆ ನನ್ನ ಗುರುವಿನಲ್ಲಿ ಅಪರಿಮಿತವಾದ ನಂಬಿಕೆ. ಅವನು ಯಾವಾಗಲೂ ಕಾಪಾಡುತ್ತಾನೆ....'

* * *

ಒಂದು ದಿನ ಶ್ರೀಗಳವರು ತಾವು ತೊಡಬೇಕಾಗಿದ್ದ ಕಾವಿ ಅಂಗಿಯ ಭುಜದ ಭಾಗ ಹರಿದದ್ದನ್ನು – ಸೂಜಿದಾರದಿಂದ – ಗೋಣಿಚೀಲವನ್ನು ದಪ್ಪದಪ್ಪನಾಗಿ ದೂರದೂರಕ್ಕೆ ಹೊಲಿಗೆ ಹಾಕುತ್ತಾರಲ್ಲಾ ಹಾಗೆ, ಹೇಗೆಹೇಗೋ ಹೊಲಿಯುತ್ತಾ ಇದ್ದಾಗ, ಶ್ರೀ ಸಿ. ಅಂಕಪ್ಪ, ನಾಟಕಕಾರರು, ಶ್ರೀಗಳವರ ಪರಮಭಕ್ತರು – ಯಾವುದೋ ಕೆಲಸದ ಮೇಲೆ ಒಳಹೋದರು – ಮೇಲಿನ ದೃಶ್ಯವನ್ನು ಕಂಡವರೆ, ಚಕಿತರಾಗಿ ತಮಗಿರುವ ಸಲಿಗೆಯಿಂದ ಕೊಂಚ ಹಾಸ್ಯ ಧೋರಣೆಯಿಂದ –

'ಹರಿದ ಅಂಗಿ ತೊಡುವ ಬಡತನ ನಿಮಗೇನು ಬಂದಿದೆ ಬುದ್ಧಿ? ದೊಡ್ಡ ಮಠದ ಜಗದ್ಗುರುಗಳು ! ಅನೇಕ ಸಂಸ್ಥೆಗಳ ಸಂಸ್ಥಾಪಕರು! ನಿಮಗೆ ಬಡತನವೇ ?!'

'ಹೊಸದಾಗಿ ಬಟ್ಟೆ ಕೊಳ್ಳಲು, ಹೊಸ ಅಂಗಿ ಹೊಲಿಸಿಕೊಳ್ಳಲು ನಮ್ಮದೆನ್ನುವುದು ಇಲ್ಲಿ ಏನಿದೆ ? ಎಲ್ಲ ಭಕ್ತರದ್ದು, ಸಾರ್ವಜನಿಕರದ್ದು – ಸಮಾಜದ್ದು ! ಅಲ್ಲದೆ ಈ ಅಂಗಿ ನಮಗೆ ಬೇಕಾದ ಪ್ರಿಯ ಭಕ್ತರು ಕಾಣಿಕೆಯಾಗಿ ಕೊಟ್ಟಿದ್ದು, ಗೊತ್ತೆ? ಅವರು ನಮಗೆ ತುಂಬ ಬೇಕಾದವರು, ಪ್ರಿಯ ಭಕ್ತರು. ಅದಕ್ಕೇ ಇಷ್ಟು ಬೇಗ ಇದನ್ನು ನಿವೃತ್ತಿಗೊಳಿಸಲು ಬಯಸುವುದಿಲ್ಲ' – ಎಂದು ಆಪ್ಯಾಯಮಾನವಾಗಿ ಹೇಳಿದ್ದನ್ನು ಸ್ಮರಿಸಿಕೊಂಡಿದ್ದಾರೆ.

* * *

ಮೈಸೂರಿನ ಮಾಜಿ ಉಪಮಹಾಪೌರರು, ಶ್ರೀಮತಿ ಲೀಲಾ ಚೆನ್ನಯ್ಯನವರು, ತಮ್ಮ ಪತಿ ತೀರಿದಾಗ, ತಮಗೆ ಮಕ್ಕಳಿಲ್ಲದ್ದರಿಂದ ಇರುವ ಆಸ್ತಿಯನ್ನು ಹಾಗೂ ತಮ್ಮನ್ನು ನೋಡಿಕೊಳ್ಳಲು ದತ್ತು ತೆಗೆದುಕೊಳ್ಳಲು ಯತ್ನಿಸಿ, ವಿಫಲರಾಗಿ, ಅದರಿಂದ ನೊಂದು, ಏನು ಮಾಡಲೂ ತೋಚದೆ ಎಲ್ಲವನ್ನೂ ದಾನಕೊಡಲು ಬಯಸಿ ಕೊನೆಗೆ ಪೂಜ್ಯ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ದರ್ಶನಮಾಡಿ, ತಮ್ಮ ಅಳಲನ್ನು ಹೇಳಿಕೊಂಡರು –

"ನಾನು ಅವರನ್ನು ಕಂಡು ನನ್ನ ಕಷ್ಟವನ್ನೆಲ್ಲಾ ಹೇಳಿಕೊಂಡೆ. ಹಾಗೆ ನಾನು ಹೇಳುವುದನ್ನೆಲ್ಲಾ ತುಂಬ ಸಾವಧಾನವಾಗಿ ಅವರು ಕೇಳಿಸಿಕೊಂಡರು. ನನ್ನ ಮಾತುಗಳಿಂದ ನನ್ನ ಆಗಿನ ಪರಿಸ್ಥಿತಿಯನ್ನು ಚೆನ್ನಾಗಿಯೇ ಅರ್ಥಮಾಡಿಕೊಂಡರೆಂದು ಕಾಣುತ್ತದೆ. ಅವರು ಆ ಸಮಯದಲ್ಲಿ ನುಡಿದ ಮಾತುಗಳು ಈಗಲೂ ನನಗೆ ಚೆನ್ನಾಗಿ ನೆನಪಿವೆ. ಅವರು ಹೇಳಿದುದಿಷ್ಟೆ.

'ನೀನು ಹೇಳುವುದೆಲ್ಲ ಅರ್ಥವಾಗುತ್ತದೆ. ಆದರೆ ನೀನು ಸದ್ಯಕ್ಕೆ ಮಾಡಿರುವ ಆಲೋಚನೆ ಸರಿಯಲ್ಲ. ಅಂದರೆ ದಾನ ಇತ್ಯಾದಿಗಳನ್ನು ಮಾಡುವುದಕ್ಕೆ ಮುನ್ನ ಇಲ್ಲಿಯತನಕ ನೀನು ಹೇಗೆ ಬದುಕಿ ಬಾಳಿಕೊಂಡು ಬಂದುದಾಯಿತೊ ಇನ್ನು ಮುಂದೆಯೂ ಹಾಗೆಯೇ ಇರಲು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಇದು ಬಹಳ ಮುಖ್ಯ. ಅದಕ್ಕೆ ತಕ್ಕ ವ್ಯವಸ್ಥೆಗಳಾಗಿ ಉಳಿದುದನ್ನು ಮನಸ್ಸಿಗೆ ಒಪ್ಪುವ ರೀತಿ ಏನುಬೇಕಾದರೂ ಮಾಡ ಬಹುದು. ನೀನು ಒಂಟಿಯಾಗಿ ಬೇರೊಬ್ಬರ ಆಶ್ರಯ, ದಾಕ್ಷಿಣ್ಯಗಳಿಗೆ ಸಿಕ್ಕಿಹಾಕಿಕೊಳ್ಳು ವಂತಾಗಬಾರದು. ಹಾಗಾಗುವುದಾದರೆ ಬದುಕು ತುಂಬಾ ಕಷ್ಟಕರವಾಗುತ್ತದೆ.'

– ಎಂದೆಲ್ಲಾ ನನಗೆ ಉಪದೇಶವಿತ್ತು ಆ ಸಮಯದಲ್ಲಿ ನಾನು ದಾನ ನೀಡುವುದರ ವಿರುದ್ಧವಾಗಿ ಎಚ್ಚರಿಕೆ ಕೊಟ್ಟರು.

ಆ ಸಮಯದಲ್ಲಿ ಅವರು ಬಯಸಿದ್ದರೆ ನನ್ನದನ್ನೆಲ್ಲಾ ಸುತ್ತೂರು ಮಠಕ್ಕೆ ಕೊಡು ಎಂದು ಹೇಳಬಹುದಿತ್ತು. ಅವರು ಹಾಗೆ ಮಾಡಲಿಲ್ಲ. ಬದಲು ನನಗೆ ಮಾರ್ಗದರ್ಶನ ಮಾಡಿದ ಮಹಾನುಭಾವರು.....

* * *

"ನಾನು 'ರೆಡ್‌ಹೌಸ್' (ಮೈಸೂರಿನ ಲಕ್ಷ್ಮೀಪುರಂನಲ್ಲಿದ್ದ ಶ್ರೀಗಳವರ ಹಾಸ್ಟೆಲ್)ನಲ್ಲಿ ಓದುತ್ತಿದ್ದಾಗ ನಾನು ಮತ್ತು ನನ್ನ ಗೆಳೆಯನಾದ ಸಿದ್ಧಲಿಂಗಸ್ವಾಮಿ (ಈಗ ವಾಣಿಜ್ಯ ತೆರಿಗೆ ಅಧಿಕಾರಿಗಳು) ಅಡಿಗೆಯವನಿಂದ ನೀರು ಕುಡಿಯಬೇಕೆಂಬ ನೆಪದಲ್ಲಿ ರಾತ್ರಿವೇಳೆ ಬೀಗದ ಕೈ ಪಡೆದು ಅಡಿಗೆ ಮನೆಯಲ್ಲಿಟ್ಟಿದ್ದ ಕಡಲೆಕಾಯಿಗಳನ್ನು ಕದ್ದುಬಿಡುವುದು, ಬಿಸಿನೀರನ್ನು ಮೊಗೆದು ಸ್ನಾನ ಮಾಡುವುದು–ಹೀಗೆಲ್ಲಾ ಮಾಡುತ್ತಿದ್ದೆವು. ಒಮ್ಮೆ ಅಡಿಗೆಯವನಿಗೆ ಸಿಕ್ಕಿಬಿದ್ದೆವು. ಆತ ನನ್ನನ್ನು ಬಯ್ದು ರಂಪ ಮಾಡಿದನು. ನಾನು ದುಡುಕಿ (ತಪ್ಪು ಮಾಡಿಯೂ) ಆತನ ಜೊತೆ ಕೆಟ್ಟದಾಗಿ ನಡೆದುಕೊಂಡೆ. ಆತ ಬೆಳಗ್ಗೆ ಅಡಿಗೆ ಮಾಡಿ ಮುಗಿಸಿ ಸಮೀಪದ ಅರಸು ಬಿಲ್ಡಿಂಗ್‌ನಲ್ಲಿದ್ದ ಶ್ರೀಗಳವರಲ್ಲಿಗೆ ಹೋಗಿ ರಾತ್ರಿ ನಡೆದ ಸಮಾಚಾರವನ್ನು ಹೇಳಿಕೊಂಡಿರಬೇಕು. ಶ್ರೀಗಳು ನನ್ನನ್ನು ಕರೆಸಿದರು. ನಾನು ಹೋಗಿ ನಮಸ್ಕಾರ ಮಾಡಲು ಬಾಗುವಷ್ಟರಲ್ಲಿ ಕೆನ್ನೆಗೆ ಬಾರಿಸಲು ಕೈ ಎತ್ತಿದರು ಅಷ್ಟೆ. ಆ ಕೈ ಮುಂದುವರಿಯಲಿಲ್ಲ! "ಕತ್ತೆ, ಏನ್ಮಾಡಿದೆಯೋ ಇವನ್ನ?" –ಎಂದು ಎತ್ತಿದ ಕೈಯನ್ನು ಎತ್ತಿದ್ದಂತೆಯೇ ಗದರಿಸಿದರು.

"ಸ್ವಾಮೀಜಿಯವರಿಗೆ ಸಿಟ್ಟುಬಂದುದನ್ನು ನಾನು ಅಂದೇ ಮೊದಲು ನೋಡಿದ್ದು! 'ಅವನು ಅಯ್ಯನವರು ಕಣೋ!' – ಎಂದು ಧರ್ಮಸೂಕ್ಷ್ಮವನ್ನು ಬಿಡಿಸಿದರು. ಆಗ ನನಗೆ ಅರಿವಾಯ್ತು – ಅಡಿಗೆಯವನು ಅಯ್ಯನವರು, ಅಂದರೆ ಜಂಗಮ ಎಂದು. ಸರಿ. ಶ್ರೀಗಳು ನನ್ನ ಕೈಲಿ ಕ್ಷಮೆ ಕೇಳಿಸಿ, ಅವನಿಗೆ ಸಮಾಧಾನ ಹೇಳಿ ಕಳುಹಿಸಿದರು. ಶ್ರೀಗಳಿಗೆ ನಾನು ಕಡಲೆಕಾಯಿ ಕದ್ದದ್ದಕ್ಕಿಂತಲೂ ಜಂಗಮನಿಗೆ ಅವಮಾನ ಮಾಡಿದ್ದು ಪ್ರಧಾನವಾದ ಅಂಶವಾಗಿತ್ತು.

ಜಂಗಮತ್ವಕ್ಕೆ ಶ್ರೀಗಳು ಸಲ್ಲಿಸುತ್ತಿದ್ದ ಗೌರವಕ್ಕೆ ಇದು ನಿದರ್ಶನವಾಗಿತ್ತು."

– ದಿ. ಡಿ.ಎಂ. ಮಹದೇವಮೂರ್ತಿ.

* * *

1973ರ ಬಸವ ಜಯಂತಿಯನ್ನು ತಮಿಳುನಾಡಿನ ಕೃಷ್ಣಗಿರಿಯಲ್ಲಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಕಾವೇರಿಪಟ್ಟಣದ ಶಾಸಕರಾಗಿದ್ದ ದಿ. ನಾಗರಾಜ ಮಣೇಗಾರ್ ಅವರು ಏರ್ಪಡಿಸಿದ್ದರು. ಸಭೆಯಲ್ಲಿ ಭಾಗವಹಿಸಿದ್ದ ನಾನು (ಪಂಡಿತ ಕೆ.ಪಿ. ಶಿವಲಿಂಗಯ್ಯ) ನನ್ನ ಭಾಷಣದಲ್ಲಿ "ತಮಿಳುನಾಡನ್ನು ಆಳಿದ ಚೋಳ ಚಕ್ರವರ್ತಿಗಳಿಗೆ ಶ್ರೀ ಸುತ್ತೂರು ಪೀಠಾಧಿಪತಿಗಳೇ ರಾಜಗುರುಗಳು. ರಾಜರಾಜ ಚೋಳನು ಈ ಪೀಠಕ್ಕೆ ಅಪಾರ ದಾನದತ್ತಿಗಳನ್ನು ಕೊಟ್ಟು ತನ್ನ ಭಕ್ತಿಸಮರ್ಪಣೆ ಮಾಡಿ ಪ್ರೋತ್ಸಾಹಿಸಿದ್ದಾನೆ"– ಎಂದು ಹೇಳಿದೆ. ಶ್ರೀಗಳವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಶ್ರೀ ಶಿವಲಿಂಗಯ್ಯನವರು ಹೇಳಿದ್ದು ನಿಜ. ಅದರಿಂದಲೂ ಮತ್ತು ನಮ್ಮ ಹಿಂದಣ ಮಹಾಸ್ವಾಮಿಗಳವರ ತಪೋನುಷ್ಠಾನಬಲದಿಂದಲೂ ನಮ್ಮ ಶ್ರೀಮಠ ಉಚ್ಛ್ರಾಯಸ್ಥಿತಿಗೆ ಬರಲು ಸಾಧ್ಯವಾಯಿತು" ಎಂದು ಅಪ್ಪಣೆ ಕೊಡಿಸಿದರು.

ಆದರೆ ಶ್ರೀಗಳವರು ನನ್ನನ್ನು "ಶ್ರೀ ಶಿವಲಿಂಗಯ್ಯನವರು"– ಎಂದು ಸಂಬೋಧಿಸಿದುದನ್ನು ಕೇಳಿ ನನಗೆ ಒಂದು ರೀತಿಯ ಮುಜುಗರವೇ ಆಯಿತು. ಮೇರುಸದೃಶ ವ್ಯಕ್ತಿತ್ವದ ಈ ಮಹಾಚೇತನವೆಲ್ಲಿ! ನಾನೆಲ್ಲಿ! ಎಂದುಕೊಂಡೆ. ಮತ್ತೆ ಮುಂದೆಂದೂ ನನ್ನನ್ನು ಹೀಗೆ ಸಂಬೋಧಿಸಬಾರದೆಂದು ಪ್ರಾರ್ಥಿಸಿಕೊಳ್ಳಬೇಕೆಂದು ತೀರ್ಮಾನಿಸಿ, ಸಮಾರಂಭ ಮುಗಿದ ಮೇಲೆ ಅವರೊಬ್ಬರೇ ಇದ್ದಾಗ "ಶ್ರೀಮಠದ ವಿದ್ಯಾರ್ಥಿ ಹಾಗೂ ಸನ್ನಿಧಿಯ ಶಿಷ್ಯನಾದ ನನಗೆ ಬಹುವಚನ ಪ್ರಯೋಗ ಮಾಡಿದಿರಲ್ಲಾ ಬುದ್ಧೀ...." ಎಂದು ಪ್ರಸ್ತಾಪಿಸಿದೆ.

"ನಿನಗೆ ಗೊತ್ತಿಲ್ಲ – ಸಭಾಮರ್ಯಾದೆಯ ಪ್ರಕಾರ ಒಬ್ಬ ಕಾಲೇಜು ಪ್ರಾಧ್ಯಾಪಕರ ಬಗೆಗೆ ಹೇಳುವಾಗ ಹಾಗೆ ಸಂಬೋಧಿಸಲೇಬೇಕು. ಅದಕ್ಕೇಕೆ ಚಿಂತೆ ಮಾಡ್ತೀಯಾ ? ಇರೋ ಪ್ರೀತಿ ವಿಶ್ವಾಸ ಎಲ್ಲಿ ಹೋಗ್ತದೆ ?" ಎಂದರು.

* * *

"1975ರಲ್ಲಿ ಸರಗೂರಿನಲ್ಲಿ ಕಟ್ಟಿಸಿದ್ದ ಜೆಎಸ್‌ಎಸ್ ಶಾಲಾ ಕೊಠಡಿಗಳ ಉದ್ಘಾಟನೆಗೆ ಶ್ರೀಗಳವರ ಜೊತೆಗೆ ಆಗ ಮೈಸೂರು ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಆರ್ಯಮಿತ್ರ ಅವರನ್ನು ಆಹ್ವಾನಿಸಿದ್ದೆವು. ಶ್ರೀ ಆರ್ಯಮಿತ್ರರು ಹುಟ್ಟಿನಿಂದ ಹರಿಜನರು. ಅವರು ಉನ್ನತ ಅಧಿಕಾರಿಗಳು. ಅಲ್ಲದೆ ಉನ್ನತ ವ್ಯಕ್ತಿತ್ವವನ್ನು ಪಡೆದವರಾಗಿದ್ದರು. ಶ್ರೀಗಳವರ ಮೇಲೆ ಅವರಿಗೆ ಅಪಾರ ಭಕ್ತಿ ಮತ್ತು ವಿಶ್ವಾಸ. ಹೀಗೆ ಆದಿನ ಶ್ರೀಗಳವರ ಪೂಜೆ ನಮ್ಮ (ಡಾ. ಸಿ. ಎಸ್. ಮೃತ್ಯುಂಜಯಪ್ಪ) ಮನೆಯಲ್ಲಿ ನಡೆಯಿತು. ನಂತರ ಪ್ರಸಾದಕ್ಕೆ ಎಲ್ಲರೂ ಕೂರುವ ಸಂದರ್ಭವೊದಗಿತು.

"ನಮ್ಮ ಮನೆಯಲ್ಲಿ ಊಟದಮನೆ ಮತ್ತು ಪೂಜೆಮನೆ ಹೆಚ್ಚುಕಡಿಮೆ ಒಂದೇ ಎನ್ನಬೇಕು. ಆಗ ನಾನು ಉನ್ನತ ಅಧಿಕಾರಿಗಳಾದ ಆರ್ಯಮಿತ್ರರಿಗೆ ವಿಶೇಷ ವ್ಯವಸ್ಥೆ ಮಾಡಿ ಊಟಕ್ಕೆ ಬಡಿಸುವ ವಿಚಾರವಾಗಿ ಶ್ರೀಗಳವರೊಂದಿಗೆ ಪ್ರಸ್ತಾಪಿಸಿದೆ. ಅದಕ್ಕೆ ಅವರು –

'ಹಾಗೇನೂ ಮಾಡುವ ಅಗತ್ಯವಿಲ್ಲ. ನಿಮ್ಮ ಜೊತೆಗೆ ಅವರನ್ನೂ ಕೂರಿಸಿಕೊಳ್ಳಿ. ಅವರೂ ನಮ್ಮವರೆ! ಅವರಿಗೂ ನಿಮ್ಮ ಜೊತೆಯಲ್ಲಿ ಪ್ರಸಾದವಾಗಲಿ !'

–ಎಂದು ತಿಳಿಸಿ ಅಲ್ಲಿದ್ದ ಎಲ್ಲರಿಗೂ ಆಶ್ಚರ್ಯವುಂಟುಮಾಡಿದರು.

ಸರಿ, ಪ್ರಸಾದಕ್ಕೆಂದು ಎಲ್ಲರೂ ಒಟ್ಟಿಗೇ ಕುಳಿತೆವು.

ಶ್ರೀಗಳವರು ನಮ್ಮೆಲ್ಲರ ಎದುರಿಗೇ ಕುಳಿತುಕೊಂಡು ಹೆಚ್ಚು ಹೆಚ್ಚು ಊಟ ಮಾಡುವಂತೆ ಒತ್ತಾಯ ಮಾಡುತ್ತಿದ್ದ ಅವರ ಪ್ರಿಯವಾದ ನುಡಿಗಳನ್ನು ನಾನು ಮರೆಯುವುದಿರಲಿ ; ಊಟವಾದ ನಂತರ ಆರ್ಯಮಿತ್ರರು ಎದ್ದುಹೋಗಿ ಶ್ರೀಗಳವರ ಪಾದಕ್ಕೆ ನಮಸ್ಕರಿಸುತ್ತ –

'ಈ ದಿನ ನಾನು ಎಂದೂ ಊಟಮಾಡದಷ್ಟು ಹೆಚ್ಚಿಗೆ ಮಾಡಿದೆ ಬುದ್ಧೀ'

–ಎಂದು ಹೇಳುತ್ತಿದ್ದಾಗ ಆರ್ಯಮಿತ್ರರು ಎಷ್ಟು ಭಾವುಕರಾಗಿದ್ದರೆಂದರೆ ಅದನ್ನು ಹೇಳತೀರದು. ಅದಕ್ಕೆ ಶ್ರೀಗಳವರು ಎಂದಿನ ತಮ್ಮ ಮುಗ್ಧ ನಗೆಯನ್ನು ನಕ್ಕಿದ್ದರು..."

* * *

"ನಾನು (ಶ್ರೀ ಕೆ.ಎಂ. ನಾಗಣ್ಣಾಚಾರಿ, ಸುತ್ತೂರು ವಿದ್ಯಾರ್ಥಿನಿಲಯದ ಹಳೆಯ ವಿದ್ಯಾರ್ಥಿ – ನಿವೃತ್ತ ಜಿಲ್ಲಾಧಿಕಾರಿಗಳು) ಹಲವಾರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಶ್ರೀಗಳವರೊಂದಿಗೆ ಭಾಗವಹಿಸುವ ಅವಕಾಶವಿರುತ್ತಿತ್ತು. ಮೊದಮೊದಲು ನಾಲ್ಕಾರು ಕಾರ್ಯಕ್ರಮಗಳಲ್ಲಿ ನಾನು ವೇದಿಕೆಯ ಮೇಲೆ ಶ್ರೀಗಳವರ ಪಕ್ಕವೇ ಕೂರಲು ಹಿಂಜರಿದೆ. ನಾನೆಲ್ಲಿ? ಆ ಮೇರುಸದೃಶ ವ್ಯಕ್ತಿಯೆಲ್ಲಿ? ಎಂದು ನಾನು ಅಂದುಕೊಂಡರೂ ಅವರು ನನ್ನ ಹೃದಯದಲ್ಲೇ ಇರುವವರು ಎಂಬ ಆತ್ಮೀಯತೆ ಒಂದುಕಡೆ. ಇದನ್ನು ಗಮನಿಸುತ್ತಲೇ ಬಂದಿದ್ದ ಶ್ರೀಗಳವರು, ನಂಜನಗೂಡಿನಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ವೇದಿಕೆಯ

ಕೆಳಗೆ ಕುಳಿತಿದ್ದ ನನ್ನನ್ನು ಕರೆದು ಬೆನ್ನುತಟ್ಟಿ ಅವರ ಸನಿಹವೇ ಕೂರಲು ಹೇಳಿದರು. ಆಗಂತೂ ನನಗೆ ಕಣ್ಣುಗಳಲ್ಲಿ ನೀರು ತುಂಬಿ ಬಂತು.... ಅವರು ಹೇಳಿದ ಒಂದು ಮಾತು – ಸದಾ ನನ್ನ ಬದುಕಿನಲ್ಲಿ ದಾರಿದೀಪವಾಗಿದೆ –

"ನೀನೀಗ ಅಧಿಕಾರಿ. ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನಿಸಿದ ಕೂಡಲೆ ಮಾಡಿಬಿಡು, ನಾಳೆ ನೋಡೋಣ ಎಂದು ಮುಂದಕ್ಕೆ ಹಾಕಬೇಡ, ನಾಳೆ ಎಂದರೆ ನೀನು ಇಲ್ಲಿಯೇ ಇರುವೆ ಎಂದು ಖಾತರಿಯೇನು?"

* * *

ವಿಚಾರವಾದಿ, ಕವಿ, ಜೆಎಸ್‌ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕ, ಗಾಯಕ, 'ಸಪ್ತಸ್ವರ ಬಳಗ'ದ ಆಧಾರಸ್ತಂಭ ಶ್ರೀ ಬಿ. ಸೋಮಶೇಖರಪ್ಪನವರು ತಮ್ಮ ಅನುಭವಕ್ಕೆ ಬಂದ ಒಂದು ಪ್ರಸಂಗವನ್ನು ದಾಖಲಿಸಿದ್ದಾರೆ-

"ಈಗ ನಾನು ಹೇಳಲಿರುವ ಘಟನೆ 1980ರಲ್ಲಿ ನಡೆದದ್ದು ; ಅದೂ ನಾನು ಮೈಸೂರಿನ 'ವಿಚಾರವೇದಿಕೆ'ಯಡಿಯಲ್ಲಿ ವೀರಶೈವ ಸಮ್ಮೇಳನವನ್ನು ವಿರೋಧಿಸುವ ಗುಂಪಿನಲ್ಲಿದ್ದ ಕಾರಣದಿಂದಾಗಿ –

"ಮೈಸೂರಿನ ವಿಚಾರವಾದಿ ಒಕ್ಕೂಟದ ಸದಸ್ಯನಾಗಿ ಜಾತಿ ಸಮ್ಮೇಳನಗಳನ್ನು ವಿರೋಧಿಸಬೇಕು. ಅವು ಯಾವ ಜಾತಿಯವೇ ಆಗಲಿ, ಜಾತಿಯ ಮೇಲಾಟದಿಂದ ನಮ್ಮ ಭಾರತೀಯ ಬಾಳು ಹಾಳಾಗಿದೆ ಎಂಬ ಠರಾವು ಮಾಡಿ – ಬ್ರಾಹ್ಮಣ ಸಮ್ಮೇಳನ, ಒಕ್ಕಲಿಗ ಸಮ್ಮೇಳನ ಮುಂತಾದುವನ್ನು ವಿರೋಧಿಸಿದ್ದೆವು. ಅದೇ ರೀತಿ ಮೈಸೂರಿನಲ್ಲಿ ಅಖಿಲ ಭಾರತ ವೀರಶೈವ ಸಮ್ಮೇಳನವಾದಾಗ ಅದನ್ನೂ ಪ್ರತಿಭಟಿಸಬೇಕೆಂದು ಒಕ್ಕೂಟದಲ್ಲಿ ನಿರ್ಣಯವಾಗಿ ಸಮ್ಮೇಳನದ ದಿನ ಪ್ರತಿಭಟನಾ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಜಾತಿ ವಿನಾಶಮಾಡಿ ಎಲ್ಲರನ್ನೂ ಮಾನವಜಾತಿಯ ಕಕ್ಷೆಯಲ್ಲಿ ತಂದ ಬಸವಾದಿ ಪ್ರಮಥರ ತತ್ವಾನುಯಾಯಿಗಳಾದ ವೀರಶೈವರೂ ಜಾತಿ ಮಾಡಬಾರದೆಂಬುದು ನಮ್ಮ ಪ್ರೀತಿ ಸಿಟ್ಟುಗಳ ಆಗ್ರಹವಾಗಿದ್ದಿತು.

"ಅಂದಿನ ಸಮ್ಮೇಳನದ ಅಧ್ಯಕ್ಷತೆ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರದಾಗಿತ್ತು. ಪ್ರತಿಭಟನಾ ಮೆರವಣಿಗೆಯುದ್ದಕ್ಕೂ ನಮ್ಮ ಕೂಗು –

'ಬಸವಾದಿ ಶರಣರಿಗೆ ಜಯವಾಗಲಿ, ಜಾತಿ ವಿನಾಶವಾಗಲಿ, ಜಾತಿ ಮಾಡುವ ಮಠಾಧಿಪತಿಗಳಿಗೆ ಧಿಕ್ಕಾರ' – ಇತ್ಯಾದಿಯಾಗಿತ್ತು.

ಮರುದಿವಸ ನಾನಿದ್ದ ಜೆಎಸ್‌ಎಸ್ ಕಾಲೇಜಿನಲ್ಲಿ ನನ್ನ ವಿರುದ್ಧ ಗಲಾಟೆಯೋ ಗಲಾಟೆ! ಸರಿ ಮೈಸೂರಿನ ಪ್ರಮುಖರೆಲ್ಲ ನನ್ನನ್ನು ಕರೆದುಕೊಂಡು ಶ್ರೀ ಸ್ವಾಮೀಜಿಯವರಲ್ಲಿಗೆ ನಿಯೋಗ ಹೋಯಿತು.

ವಿಶೇಷವೆಂದರೆ ಆ ಚರ್ಚೆ ಬಿಸಿಯಾಗಿರದೆ ಸೌಹಾರ್ದಯುತ ವಾಗಿಯೇ ಇದ್ದದ್ದು. ನಿಯೋಗದಲ್ಲಿದ್ದ ಪ್ರೊ. ಸಂಜೀವಯ್ಯ, ಪ. ಮಲ್ಲೇಶ್, ಶಿವರಾಮು ಕಾಡನಕುಪ್ಪೆ, ಕೆ. ರಾಮದಾಸ, ಡಾ. ಪ್ರಭುಶಂಕರ, ದೇವನೂರ ಮಹಾದೇವ ಮುಂತಾದವರೆಲ್ಲ ಸ್ವಾಮಿಗಳ ಸಮಾಜಸೇವೆಯನ್ನು ಶ್ಲಾಘಿಸಿ, ಅವರ ಹಾಸ್ಟೆಲ್, ಸ್ಕೂಲು ಕಾಲೇಜುಗಳಲ್ಲಿನ ಜಾತ್ಯತೀತ ಮನೋಧರ್ಮವನ್ನು ಬಿಚ್ಚಿ ಮಾತನಾಡಿದರೇ ಹೊರತು ಅವರನ್ನು ಎಲ್ಲೂ ನೀವು ಜಾತಿ ಮಾಡುತ್ತೀರಿ ಎಂದದ್ದಿಲ್ಲ. ಪ್ರತಿಯಾಗಿ "ನಾವು ಪ್ರತಿಭಟಿಸಿದ್ದು ನಿಮ್ಮನ್ನು ವೈಯಕ್ತಿಕವಾಗಿಯಲ್ಲ ಒಂದು ಸಿದ್ಧಾಂತಕ್ಕಾಗಿ"–ಎಂದು ಮನದಟ್ಟು ಮಾಡಲಾಯಿತು. ಎಲ್ಲವನ್ನೂ ಸಮಾಧಾನಚಿತ್ತರಾಗಿ ಆಲಿಸಿದ ಸ್ವಾಮಿಗಳು ಹೇಳಿದ ಮಾತುಗಳು ಮನನೀಯ–

'ನೀವು ಏನೇ ಹೇಳಿ, ಹೇಳಿಕೇಳಿ ನಾವು ವೀರಶೈವ ಧರ್ಮಕ್ಕೆ ಸೇರಿದ ಒಂದು ಮಠದ ಪೀಠಾಧಿಪತಿ. ನಿಮ್ಮ ಹಾಗೆ ನಾನು ಸ್ವತಂತ್ರನಲ್ಲ. ನನಗೆ ನನ್ನದೇ ಆದ ನೀತಿ ನಿಯಮಗಳು, ರೀತಿ ರಿವಾಜುಗಳಿವೆ. ನನ್ನ ಕಾರ್ಯವ್ಯಾಪ್ತಿ ವೀರಶೈವ ಸಮಾಜಕ್ಕೆ ಸೀಮಿತವಾಗಿದ್ದರೂ ಅದನ್ನೂ ಮೀರಿ ನಮ್ಮ ಮಠದ ವ್ಯಾಪ್ತಿಯಲ್ಲಿ ಬರುವ ಶಾಲೆ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಎಲ್ಲ ಧರ್ಮದ ಜನರಿಗೂ ಅವಕಾಶ ಮಾಡಿಕೊಟ್ಟಿದ್ದೇವೆ. ಅದಕ್ಕೆ ನಮ್ಮ ಸಮಾಜದ ಉದಾರ ಒಪ್ಪಿಗೆಯೂ ಮೌನವಾಗಿ ಲಭ್ಯವಾಗಿದೆ. ಅದನ್ನು ನೀವು ಗಮನಿಸಬೇಕು. ನಮ್ಮ ನೌಕರವರ್ಗದಲ್ಲಿ ನಮ್ಮ ವಿದ್ಯಾರ್ಥಿಸಮುದಾಯದಲ್ಲಿ ಅದನ್ನೂ ನೀವು ಕಾಣಬಹುದು. ಅದನ್ನು ಬಿಟ್ಟು ಸ್ವಾಮಿಗಳು ಜಾತಿ ಮಾಡುತ್ತಾರೆ ಎಂದರೆ ಹೇಗೆ ?'

ಈ ನಡುವೆ ಬಸವಾದಿಪ್ರಮಥರ ವಿಚಾರವನ್ನು ಯಾರೋ ಎತ್ತಿದರು. ಅದಕ್ಕೆ ಉತ್ತರವಾಗಿ ಸ್ವಾಮೀಜಿಯವರು ಹೇಳಿದ ಮಾತು ಹೃದ್ಯವಾಗಿತ್ತು –

'ನೋಡಿ ನಾವೇನೋ ವೇದಿಕೆಯ ಮೇಲೆ ಬಸವಣ್ಣನವರ ವಚನಗಳನ್ನು ಹೇಳುತ್ತೇವೆ ನಿಜ. ಆದರೆ ಅದರಂತೆ ನೂರಕ್ಕೆ ನೂರರಷ್ಟು ನಡೆದುಕೊಳ್ಳಲಾಗುತ್ತಿಲ್ಲವೆಂಬ ವ್ಯಥೆ ನಿಜವಾಗಿಯೂ ನಮಗಿದೆ. ಪರಿಸರ ಅದಕ್ಕಿನ್ನೂ ಪ್ರತಿಕೂಲವೇ ಆಗಿದೆ. ಇದನ್ನೆಲ್ಲಾ ನೀವು ಬಲ್ಲವರಿದ್ದೀರಿ. ಇವನ್ನೆಲ್ಲಾ ಬಿಟ್ಟು ನಾವೂ ಬರೀ ಪೂಜೆ ಪುನಸ್ಕಾರ, ಅಡ್ಡಪಲ್ಲಕ್ಕಿ ಉತ್ಸವ ಮಾಡಿಕೊಂಡಿದ್ದರೆ ಸರಿ ಎನ್ನುತ್ತಿದ್ದಿರೋ ಏನೋ!' – ಎಂದು ಹೇಳಿ ತಾವು ಈ ಸಮಾಜ ಕೈಂಕರ್ಯಕ್ಕೆ ಕೈ ಹಾಕಿದ ಪ್ರಸಂಗವನ್ನು ವಿವರಿಸಿದರು. ಅವರ ನೇರ, ಸರಳ ನುಡಿಗೆ ಮನಸೋತು ನಮಸ್ಕರಿಸಿ, ನನ್ನ ವಿರುದ್ಧ ಕಾಲೇಜಿನಲ್ಲಿ ನಡೆಯುತ್ತಿರುವ ಗಲಾಟೆಯನ್ನು ನಿಲ್ಲಿಸಬೇಕು ಎಂದು ವಿನಂತಿಸಿಕೊಂಡಾಗ –

'ಇವನಿಗೆ ಕೆಲಸ ಕೊಟ್ಟಿದ್ದೇ ಪಾಠಪ್ರವಚನಗಳ ಜೊತೆಗೆ ನೀವು ಹೇಳುವ ಶರಣರ ವಿಚಾರಗಳನ್ನು ನಮ್ಮ ಹುಡುಗರಿಗೆ ತಿಳಿಸಲಿ, ಅವರ ಪ್ರಗತಿಪರ ವಿಚಾರಗಳನ್ನು ಪ್ರಚಾರ ಮಾಡಲಿ ಎಂದು! ಆದರೆ ಅದನ್ನು ಬಿಟ್ಟು ಈತ ಬೇರೆಲ್ಲಾ ಮಾಡುತ್ತಿದ್ದಾನೆ ! ನಾವು

ಈತನ ವಿರುದ್ಧ ಗಲಾಟೆ ಮಾಡಿ ಎಂದು ಯಾರಿಗೂ ಹೇಳಿಲ್ಲ, ಮಾಡಬೇಡಿ ಎಂದೂ ಹೇಳುವುದಿಲ್ಲ!'

— ಎಂದು ನಕ್ಕರು !

ನಿಯೋಗ ಸರಿಯಾಗಿ ಶ್ರೀಗಳವರ ಕೊನೆಯ ಈ ಮಾತನ್ನು ಅರ್ಥಮಾಡಿಕೊಳ್ಳದೆ ತಬ್ಬಿಬ್ಬಾಯಿತು. ಎಲ್ಲರೂ ಮೌನವಹಿಸಿದರು. ಇದನ್ನು ಗಮನಿಸಿದ ಶ್ರೀಗಳವರ ಅಭಯವಾಣಿ ಹೊರಬಂತು —

'ಆಯಿತು, ಹೋಗಿಬನ್ನಿ'

—ಎಂದು ಎಲ್ಲರಿಗೂ ಕಲ್ಲುಸಕ್ಕರೆ ಕೊಟ್ಟು ಆಶೀರ್ವದಿಸಿದರು.

ಕೆಲವು ದಿನಗಳ ಬಳಿಕ —

ಶ್ರೀಗಳವರ ಜನ್ಮದಿನೋತ್ಸವವನ್ನು ವಿಶಿಷ್ಟವಾಗಿ ಆಚರಿಸಬೇಕು ಎಂಬುದರ ಅಂಗವಾಗಿ ವಿದ್ಯಾಪೀಠದ ನೌಕರರನ್ನೆಲ್ಲಾ ಒಂದೆಡೆ ಸೇರಿಸಿ ಚರ್ಚಿಸುವಾಗ, ಯಥಾರೀತಿ ಶ್ರೀ ಬಿ. ಸೋಮಶೇಖರಪ್ಪನವರು, ಶ್ರೀಗಳವರ ಹೆಸರು ಬಳಸಿಕೊಂಡು ಕೆಲವು ಅಧ್ಯಾಪಕರು ಮೈಗಳ್ಳತನ ಮಾಡುತ್ತಾರೆ ಇದು ಸರಿಯಲ್ಲ—ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದನ್ನು ಕೆಲವರು ತಿರುಚಿ ಶ್ರೀಗಳವರಿಗೆ ಮುಟ್ಟಿಸಿದರು. ಇದನ್ನು ಊಹಿಸಿದ ಶ್ರೀಯುತರು ತಾವೇ ನೇರವಾಗಿ ಶ್ರೀಗಳವರ ಬಳಿಗೆ ಹೋಗಿ ನಡೆದುದನ್ನು ವಿವರವಾಗಿ ತಿಳಿಸಿದಮೇಲೆ ಶ್ರೀಗಳವರು — ಹೇಳಿದ ಒಂದು ಮಾತು ನನ್ನ ಕಣ್ಣು ತೆರೆಸಿತು. ಅವರ ವಿರಾಡ್ರೂಪವನ್ನೂ ತೆರೆದು ತೋರಿಸಿತು —

'ವೇದಿಕೆಯ ಮೇಲೆ ಹೊಗಳಿ, ಹಾರ ಹಾಕಿ ಹಿಂದೆ ತೆಗಳುವವರು ನಮ್ಮ ಹಿತೈಷಿಗಳಲ್ಲ, ಸತ್ಯವನ್ನು ಎತ್ತಿಹಿಡಿದು ಮಾತನಾಡುವ ಧೈರ್ಯವನ್ನು ಪ್ರದರ್ಶಿಸುವವರನ್ನು ನಾವು ಮೆಚ್ಚುತ್ತೇವೆ. ತಮಗೆ ತೊಂದರೆಯಾಗಬಹುದು ಎನ್ನುವುದನ್ನು ಲೆಕ್ಕಿಸದೆ ತಿಳಿಸುವವರು ನಿಜಕ್ಕೂ ಹಿತೈಷಿಗಳು. ಆದುದರಿಂದ ನಿನ್ನ ಮೇಲೆ ನನಗೆ ಕೋಪವಿಲ್ಲ. ಬದಲಾಗಿ ಹೆಮ್ಮೆ ಎನಿಸುತ್ತದೆ.'

* * *

ಜೆಎಸ್‌ಎಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ಪ್ರೊ. ಕೆ. ದೇವರಾಜ ಹೆಗಡೆಯವರನ್ನು ತಾವು ನಡೆಸುವ ಕಾಲೇಜಿನ ಪ್ರಾಂಶುಪಾಲರನ್ನಾಗಿ ನೇಮಿಸಿಕೊಳ್ಳಬೇಕೆಂಬ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಅಪೇಕ್ಷೆಯ ಮೇರೆಗೆ, ಶ್ರೀ ಶಿವರಾತ್ರಿ ರಾಜೇಂದ್ರರು "ಆಯ್ತು ಹೋಗಿ ಬಾ. ನೀನು ಧರ್ಮಸ್ಥಳಕ್ಕೂ ಸುತ್ತೂರು ಮಠಕ್ಕೂ ಸೇತುವೆಯಾಗಬೇಕು. ಆ ಮೂಲಕ ನಮ್ಮ ಸಂಬಂಧಗಳು ವೃದ್ಧಿಯಾಗಬೇಕು. ನೆನಪಿರಲಿ" — ಎಂದು ಆಶೀರ್ವದಿಸಿ ಶ್ರೀ ವೀರೇಂದ್ರ ಹೆಗ್ಗಡೆಯವರು ನಡೆಸುತ್ತಿರುವ ಮೂಡಬಿದರಿ ಕಾಲೇಜಿಗೆ ಕಳುಹಿಸಿಕೊಟ್ಟರು.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಅಮೃತ ಮಹೋತ್ಸವದ ಸಮಾರಂಭಕ್ಕೆ ಶ್ರೀ ವೀರೇಂದ್ರ ಹೆಗ್ಗಡೆಯವರು, ಅದಕ್ಕಿಂತ ಮುಂಚಿತವಾಗಿಯೇ ನಿಗದಿಯಾದ – ದೆಹಲಿಯಲ್ಲಿ ನಡೆಯಲಿರುವ ಸಮಾರಂಭಕ್ಕೆ ಬರುತ್ತೇವೆ ಎಂದು ಒಪ್ಪಿಬಿಟ್ಟಿದ್ದರಿಂದ ಈ ಸಮಾರಂಭಕ್ಕೆ ಬರಲಾಗದ ಪರಿಸ್ಥಿತಿಯಲ್ಲಿದ್ದಾಗ ಪ್ರೊ. ದೇವರಾಜ ಹೆಗಡೆಯವರ ಭಕ್ತಿಪೂರ್ವಕ ಒತ್ತಾಯದ ಮೇರೆಗೆ, ದೆಹಲಿಯ ಕಾರ್ಯಕ್ರಮಕ್ಕೆ ಬೇರೊಂದು ವ್ಯವಸ್ಥೆ ಮಾಡಿ, ಪೂಜ್ಯರ ಪಟ್ಟಾಧಿಕಾರದ ಅಮೃತ ಮಹೋತ್ಸವಕ್ಕೆ ಆಗಮಿಸಿ, ಆನಂದತುಂದಿಲರಾಗಿ ಹೀಗೆ ಹೃದಯ ತುಂಬಿ ನುಡಿದರು –

"ನಿಮ್ಮಿಂದ ಪರಮಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದರ್ಶನಲಾಭ ಮತ್ತು ಅವರ ಸಮ್ಮುಖದಲ್ಲೇ ನಡೆದ ಅಮೃತ ಮಹೋತ್ಸವದಲ್ಲಿ ಭಾಗವಹಿಸುವ ಲಾಭ ನನಗೆ ದೊರೆಯಿತು. ಅದೇ ನನ್ನ ಅವರ ಕೊನೆಯ ಭೇಟಿ. ಅಂತಹ ಮಹನೀಯರು ಯುಗಕ್ಕೊಮ್ಮೆ ಹುಟ್ಟಿ ಬರುತ್ತಾರೆ...."

* * *

ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಸ್ಥಾನದ ಬಲದಿಂದ ಅಥವಾ ಜಗದ್ಗುರು ಪೀಠದ ಬಲದಿಂದ ತಾವು ದೊಡ್ಡವರೆನಿಸಿಕೊಳ್ಳಬೇಕೆಂದು ಅವರು ಎಂದೂ ಬಯಸಲಿಲ್ಲ.

ದೇವಸ್ಥಾನದ ಗೋಪುರದ ಕಳಸದ ಮೇಲೆ ಕಾಗೆ ಕುಳಿತರೆ – ಅದಕ್ಕೆ ತನ್ನಲ್ಲಿಲ್ಲದ ಬೆಲೆ, ಔನ್ನತ್ಯ ಬಂದೀತೆ ?

ವ್ಯಕ್ತಿತ್ವದ ಘನತೆಯಿಂದ ಆ ಸ್ಥಾನಕ್ಕೆ ಅಥವಾ ಪೀಠಕ್ಕೆ ದೊಡ್ಡತನ ಲಭಿಸುತ್ತದೆ.

ಒಮ್ಮೆ ಮೈಸೂರಿನ ಒಂದು ಧಾರ್ಮಿಕ ಸಮಾರಂಭಕ್ಕೆ ಒಬ್ಬ ಜಗದ್ಗುರುಗಳನ್ನು ಆಹ್ವಾನಿಸಲಾಗಿತ್ತು. ಸುತ್ತೂರು ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೂ ಆ ಸಮಾರಂಭದಲ್ಲಿ ಭಾಗವಹಿಸಬೇಕಾಗಿತ್ತು.

ಅತಿಥಿಗಳಾಗಿ ಆಗಮಿಸಲಿದ್ದ ಆ ಜಗದ್ಗುರುಗಳು ತಮ್ಮ ಸಿಂಹಾಸನವನ್ನು ತಮ್ಮ ಜೊತೆಯಲ್ಲಿಯೇ ತೆಗೆದುಕೊಂಡು ಬರುತ್ತಿರುವರೆಂದೂ, ಅದು ಎಲ್ಲಕ್ಕಿಂತ ಎತ್ತರವಾಗಿರುತ್ತದೆಂದೂ ಮೈಸೂರಿನ ಭಕ್ತರಿಗೆ ತಿಳಿದುಬಂದಿತು. ಅವರು ಶ್ರೀಗಳವರ ಸನ್ನಿಧಿಗೆ ತರಾತುರಿಯಿಂದ, ಧಾವಂತದಿಂದ ಧಾವಿಸಿ ಬಂದು ಆ ವಿಷಯವನ್ನು ಹೇಳಿದರು. ಸುತ್ತೂರಿನಲ್ಲಿರುವ ಜಗದ್ಗುರು ಸಿಂಹಾಸನವನ್ನೇ ಆ ಸಮಾರಂಭಕ್ಕೆ ತರಿಸಬೇಕೆಂದೂ, ಆ ಜಗದ್ಗುರುಗಳ ಸಿಂಹಾಸನಕ್ಕಿಂತ ಇದು ಎತ್ತರದಲ್ಲಿ ಕಡಿಮೆ ಇರಬಾರದೆಂದೂ ಅಭಿಮಾನಿಗಳು ವಾದಿಸಿದರು ; ಒಂದು ರೀತಿಯಲ್ಲಿ ಪಟ್ಟುಹಿಡಿದರು ! ಶ್ರೀಗಳವರು ಎಲ್ಲವನ್ನೂ ಕೇಳಿ, ಕೊನೆಗೆ ಮುಗುಳ್ನಗುತ್ತಾ –

"ಹೋಗಲಿ ಬಿಡಿ, ಅವರು ನಮ್ಮ ಅತಿಥಿಗಳಾಗಿ ಬರುತ್ತಿದ್ದಾರೆ. ಅವರ ಇಷ್ಟದಂತೆ ಎತ್ತರದ ಪೀಠದಲ್ಲೇ ಕುಳಿತುಕೊಳ್ಳಲಿ. ನಮಗೆ ಆ ಎತ್ತರವೇನೂ ಬೇಡ. ಮಾಮೂಲು ಕುರ್ಚಿಯೇ ಸಾಕು. ಪೀಠದ ಎತ್ತರದ ಮೇಲೆ ನಮ್ಮ ಎತ್ತರವೇನೂ ಇಲ್ಲ. ಅದಕ್ಕೇಕೆ ಇಷ್ಟು ಚಿಂತೆ, ಉದ್ವೇಗ !" – ಎಂದರು !

* * *

ಪ್ರಾದೇಶಿಕ ಅಸಮತೋಲನ ಆಯೋಗದ ಅಧ್ಯಕ್ಷರೂ, ರೆಡ್‌ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷರೂ, ಕರ್ನಾಟಕ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳೂ ಆದ ಡಾ. ಡಿ. ಎಂ. ನಂಜುಂಡಪ್ಪನವರು ಹೇಳುತ್ತಾರೆ –

"ನಾನು ಮೈಸೂರಿನಲ್ಲಿ ಉನ್ನತ ವ್ಯಾಸಂಗಕ್ಕಾಗಿ ಉಚಿತ ವಿದ್ಯಾರ್ಥಿನಿಲಯದಲ್ಲಿ ಅವಕಾಶ ಸಿಕ್ಕಬಹುದೆಂಬ ಆಸೆಯಿಂದ 1948ರಲ್ಲಿ ಪರಮಪೂಜ್ಯ ಶ್ರೀಗಳವರನ್ನು ಅನ್ನ ವಸತಿಗಾಗಿ ಭೇಟಿ ಮಾಡಿದಾಗ, ಈ ಅವಕಾಶ ಬಂದದ್ದು ದೈವಸಂಕಲ್ಪದಿಂದ ಎಂಬುದಾಗಿ ನಾನು ಈಗಲೂ ನಂಬಿದ್ದೇನೆ....

"ಹಳ್ಳಿಯ (ದೊಗ್ಗನಾಳು, ಚಿತ್ರದುರ್ಗ ಜಿಲ್ಲೆ) ಬಡ ಕುಟುಂಬದಲ್ಲಿ ಜನಿಸಿ, ದಾಯಾದಿಮತ್ಸರದ ಸುಳಿಯಲ್ಲಿ ಸಿಕ್ಕು ಬೆಂದಿದ್ದ ನನಗೆ ಉನ್ನತ ವ್ಯಾಸಂಗ ಮುಚ್ಚಿದ ಬಾಗಿಲಾಗಿತ್ತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಆಗಿದ್ದರೂ ನನಗೆ ಬರಬೇಕಾದ ಒಂದು ಚಿಕ್ಕ ಬಹುಮಾನವನ್ನು ಕೊಡದೆ ಅನ್ಯಾಯದಿಂದ ವಂಚಿಸಿದ ಒಂದು ಧಾರ್ಮಿಕ ಸಂಸ್ಥೆಯಿಂದ ನನಗೆ ಜಿಗುಪ್ಸೆ ಉಂಟಾಗಿತ್ತು. ನಂತರ ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ – ಅಂದಿನ ಮೈಸೂರು ರಾಜ್ಯಕ್ಕೇ ಆರನೇ ರ್‍ಯಾಂಕ್ ಗಳಿಸಿ ಅರ್ಥಶಾಸ್ತ್ರದಲ್ಲಿ ಇಡೀ ರಾಜ್ಯಕ್ಕೇ ಅತಿ ಹೆಚ್ಚಿನ ಅಂಕಗಳನ್ನು ಗಳಿಸಿದರೂ – ಹಿರಿಯ ಸಹೋದರ, ಅತ್ತಿಗೆಯ ಮಾತ್ಸರ್ಯದಿಂದ ವಿದ್ಯಾಭ್ಯಾಸವನ್ನು ನಿಲ್ಲಿಸುವಂತೆ ತೀರ್ಮಾನಿಸಲಾಯಿತು. ದೈವೇಚ್ಛೆ ಎಂಬಂತೆ ಈ ತೀರ್ಮಾನಕ್ಕೆ ಬಂದ ಮಾರನೇ ದಿನ ಆಕಸ್ಮಿಕವಾಗಿ ಮೈಸೂರಿನವರೊಬ್ಬರು ನಮ್ಮ ಹಳ್ಳಿಗೆ ಬಂದಿದ್ದು, ನನ್ನ ಪರಿಸ್ಥಿತಿ ತಿಳಿದು, 'ನೀನು ಏಕೆ ಮೈಸೂರಿಗೆ ಹೋಗಿ ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಕಾಣಬಾರದು ? ಅವರ ಉಚಿತ ವಿದ್ಯಾರ್ಥಿನಿಲಯದಲ್ಲಿ ನಿನಗೆ ಅನುಕೂಲ ಮಾಡಿಕೊಡಬಹುದು" – ಎಂದು ಹೇಳಿದರು. ಅಲ್ಲಿಯತನಕ ಶ್ರೀಗಳವರ ಬಗ್ಗೆ ಏನನ್ನೂ ತಿಳಿಯದ ನನಗೆ ಏನು ಮಾಡಬೇಕು ಎಂಬುದು ಹೊಳೆಯಲಿಲ್ಲ. ಕೊನೆಗೆ ಅವರ ಸಲಹೆಯಂತೆ, ಮಿತ್ರರೊಬ್ಬರಿಂದ 5 ರೂ. (ಐದು ರೂಪಾಯಿ) ಸಾಲ ಪಡೆದು ನಮ್ಮ ಹಳ್ಳಿಯಿಂದ ಹೊಳಲ್ಕೆರೆಗೆ ಬಂದು ಅಲ್ಲಿಂದ ಮೈಸೂರಿಗೆ ರಾತ್ರಿ ರೈಲಿನಲ್ಲಿ ಪ್ರಯಾಣ ಬೆಳೆಸಿದೆ. ಮಾರನೇ ದಿನ ಬೆಳಗ್ಗೆ ಮೈಸೂರು ರೈಲ್ವೆ ನಿಲ್ದಾಣ ಮುಟ್ಟಿದ ನಂತರ ಸುಮಾರು

ಹತ್ತೂವರೆ ಹನ್ನೊಂದು ಗಂಟೆಗೆ ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ಸಂದರ್ಶನ ಕೊಡುತ್ತಿದ್ದ ಶ್ರೀಗಳವರನ್ನು ನೋಡಲು ಹೋದೆ. ಅದೊಂದು ಅದೃಷ್ಟದ ದಿನವೆಂದು ಹೇಳಬೇಕು. ನನ್ನ ಭಾಗ್ಯಕ್ಕೆ ಅದು ಸ್ಮರಣೀಯ ದಿನ !

"ಆಗ ನನಗೆ ತಿಳಿದದ್ದು ಸ್ವಾಮೀಜಿಯವರು ವಿದ್ಯಾರ್ಥಿನಿಲಯದ ಸಲುವಾಗಿ ದವಸಧಾನ್ಯ ಸಂಗ್ರಹ ಮಾಡಲು ಪ್ರತಿ ದಿನ ಹಳ್ಳಿಗಳಿಗೆ ಹೋಗುತ್ತಿದ್ದು ಅವರ ಭೇಟಿ ಆಗುವುದು ಬಹಳ ಕಷ್ಟವೆಂದು. ನನ್ನ ಸುದೈವ. ನಾನು ಮೈಸೂರಿಗೆ ಹೋದ ದಿನ ಸ್ವಾಮೀಜಿಯವರ ದರ್ಶನ ಯಾವುದೇ ಅಡೆತಡೆಗಳಿಲ್ಲದೆ ಆಯಿತು. ಅಷ್ಟೇ ಅಲ್ಲ, ಸ್ವಾಮೀಜಿ ಅವರು ಯಾವುದೇ ರೀತಿಯ ಶಿಫಾರಸು ಪತ್ರವನ್ನು ಕೇಳದೇ –

"ನೀನು ರ್‍ಯಾಂಕ್ ಗಳಿಸಿರುವ ವಿದ್ಯಾರ್ಥಿ. ನಿನಗೆ ದೇವರು ಒಳ್ಳೆಯದನ್ನು ಮಾಡುತ್ತಾನೆ. ನಮ್ಮ ವಿದ್ಯಾರ್ಥಿನಿಲಯದಲ್ಲಿ ನಿನಗೆ ಸೀಟು ಕೊಟ್ಟಿದ್ದೇವೆ" – ಎಂದು ನೇರವಾಗಿ ಹೇಳಿಬಿಟ್ಟರು.

ನನಗೆ ಅಷ್ಟು ಸುಲಭವಾಗಿ ಅವರ ದರ್ಶನ ಆಗುತ್ತದೆಂದಾಗಲಿ, ಉಚಿತ ವಿದ್ಯಾರ್ಥಿ ನಿಲಯದಲ್ಲಿ ಸ್ಥಳ ದೊರೆಯುವುದೆಂದಾಗಲಿ, ಉನ್ನತ ವಿದ್ಯಾಭ್ಯಾಸ ಮುಂದುವರಿಯುವು ದೆಂದಾಗಲಿ ವಿಶ್ವಾಸ ಇರಲಿಲ್ಲ. ಅಂತಹ ನಿರಾಶಾದಾಯಕ ಸನ್ನಿವೇಶದಿಂದ ಒಮ್ಮಿಂದೊಮ್ಮೆಲೇ ಎಲ್ಲಾ ಸಂಕಟಗಳು ಮಂಜಿನಂತೆ ಕರಗಿಹೋದುವು....

ಸುತ್ತೂರು ಶ್ರೀಗಳವರು ಪಾಲಿಸುತ್ತಿದ್ದ ವಿಶ್ವಭ್ರಾತೃತ್ವ ಆಧಾರಿತ ಧರ್ಮಸಮನ್ವಯತೆ ನನ್ನ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಆಗ ನನ್ನೊಂದಿಗೆ ಅಂದರೆ 1948 ರಲ್ಲಿ ಉಚಿತ ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಪಡೆದವರಲ್ಲಿ ಅನೇಕ ವಿದ್ಯಾರ್ಥಿಗಳು ಬೇರೆ ಬೇರೆ ಧರ್ಮಕ್ಕೆ ಸೇರಿದವರಿದ್ದರು. ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳು ಅನೇಕರು ಇದ್ದರು. ಅವರೆಲ್ಲರು ನನ್ನ ಹತ್ತಿರದ ಗೆಳೆಯರು. ಹಾಗೆ ನಾನು ಕೆಲವರನ್ನು ಶ್ರೀಗಳವರ ಬಳಿಗೆ ಕರೆದೊಯ್ದು – 'ಇವರು ಬಡವರು, ಇವರಿಗೆ ಉಚಿತ ವಿದ್ಯಾರ್ಥಿನಿಲಯದಲ್ಲಿ ಸೀಟು ಕೊಡಬೇಕು' ಎಂದು ಪ್ರಾರ್ಥಿಸಿಕೊಂಡಾಗ ಅವರು ಸಂತೋಷದಿಂದ ಅವರೆಲ್ಲರಿಗೂ ಸೀಟು ಕೊಟ್ಟಿದ್ದುಂಟು...

"ನನಗೆ ಎಂ.ಎ., ಪರೀಕ್ಷೆಯಲ್ಲಿ ಪ್ರಥಮ ಸ್ಥಾನ, ಪ್ರಥಮ ರ್‍ಯಾಂಕ್ ದೊರೆತದ್ದೂ ಅಲ್ಲದೆ ಬಂಗಾರದ ಪದಕವೂ ಬಂತು. ಘಟಿಕೋತ್ಸವದಲ್ಲಿ ಬಂಗಾರದ ಪದಕ ಪಡೆದೊಡನೆ ಮೊದಲು ಅದನ್ನು ನಾನು ಸ್ವಾಮೀಜಿ ಅವರಿಗೆ ತೋರಿಸಲು ಓಡಿಹೋದೆ. ಅದನ್ನು ನೋಡಿದಾಗ ಸ್ವಾಮೀಜಿ ಅವರಿಗೆ ಆದ ಆನಂದ ಎಷ್ಟಾಗಿತ್ತು ಎಂಬುದನ್ನು ವರ್ಣಿಸಲಾರೆ. ಆ ಸಂದರ್ಭವನ್ನು ನಾನು ಎಂದೆಂದಿಗೂ ಮರೆಯುವುದಿಲ್ಲ.

"ನನ್ನ ಜೀವನದ ಉದ್ದಕ್ಕೂ ಸ್ವಾಮೀಜಿಯವರ ಆಶೀರ್ವಾದ ದೊರೆತಿತ್ತು. ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕನಾಗಿ ಸೇರಿಕೊಂಡಾಗ, ನಂತರ ಭಾರತ ಸರ್ಕಾರದ

ಸಂಶೋಧನಾ ವೇತನ ದೊರೆತಾಗ ಮಹಾರಾಜ ಕಾಲೇಜಿನ ಅಧ್ಯಾಪಕನ ಕೆಲಸಕ್ಕೆ ರಾಜೀನಾಮೆಕೊಟ್ಟು, ಭಾರತ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಮಂತ್ರಾಲಯದಲ್ಲಿ ಯುಪಿಎಸ್‌ಸಿ ಆಯ್ಕೆಯಿಂದ ಸಹಾಯಕ ನಿರ್ದೇಶಕನಾಗಿ ಕೆಲಸಕ್ಕೆ ಸೇರಿಕೊಂಡಾಗ, ಅಲ್ಲಿಂದ ಮುಂದೆ ಭಾರತ ಸರ್ಕಾರದ  ಸಾಮೂಹಿಕ ಅಭಿವೃದ್ಧಿ ಮತ್ತು ಸಹಕಾರಿ ಮಂತ್ರಾಲಯ ದಲ್ಲಿ ಪುನಃ ಯುಪಿಎಸ್‌ಸಿ ಆಯ್ಕೆಯಿಂದ ಉಪನಿರ್ದೇಶಕನಾಗಿ ಬಡ್ತಿ ದೊರೆತು ಉತ್ತರಪ್ರದೇಶದ ಮಸ್ಸೂರಿಗೆ ಹೋದಾಗ, ಅನಂತರ ಮನೆಯ ತಾಪತ್ರಯಗಳನ್ನು ಬಗೆಹರಿಸಲು ಆ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಕರ್ನಾಟಕ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರದ ರೀಡರ್ ಮತ್ತು ಇಲಾಖೆ ಮುಖ್ಯಸ್ಥನಾಗಿ ಹಿಂತಿರುಗಿ ಬಂದಾಗ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅದೇ ಕಾಲಕ್ಕೆ ರೀಡರ್ ಹುದ್ದೆಯನ್ನು ಕೊಟ್ಟಾಗ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ನಾನು ಅಮೆರಿಕದ ಹಾರ್‌ವರ್ಡ್ ವಿಶ್ವವಿದ್ಯಾನಿಲಯಕ್ಕೆ ಅಮೆರಿಕ ಸರ್ಕಾರದ ಫುಲ್‌ಬ್ರೈಟ್ - ಸ್ಮಿತ್‌ಮಂಡ್ ವಿದ್ಯಾರ್ಥಿವೇತನ ಸಿಕ್ಕು ಉನ್ನತ ವ್ಯಾಸಂಗಕ್ಕಾಗಿ ಹೋದಾಗ, ಇಂಗ್ಲೆಂಡ್‌ಗೆ ಸುಮಾರು ಎರಡು ವರ್ಷಗಳ ತನಕ ಮ್ಯಾಂಚೆಸ್ಟರ್ ವಿಶ್ವವಿದ್ಯಾನಿಲಯದ ಆಯ್ಕೆಯಿಂದ ಅಲ್ಲಿಗೆ ಹಾಲ್ಸ್‌ವರ್ತ್ ಸಂದರ್ಶನ ಸಂಶೋಧನಾ ಫೆಲೋ ಆಗಿ  ಹೋದಾಗ – ಹೀಗೆ ಪ್ರತಿ ಸಾರಿಯೂ ನಾನು ಶ್ರೀಗಳವರಿಗೆ ಪತ್ರದ ಮುಖೇನ ಎಲ್ಲಾ ವಿವರಗಳನ್ನು ತಿಳಿಸಿ ಅವರ ಆಶೀರ್ವಾದವನ್ನು ಪಡೆಯುತ್ತಿದ್ದೆ. ಅವರು ಪ್ರತಿಯೊಂದು ಪತ್ರಕ್ಕೂ ನನಗೆ ಉತ್ತರ ಕೊಟ್ಟದ್ದೂ ಅಲ್ಲದೆ, ತಮ್ಮ ಆಶೀರ್ವಾದ ಇದೆ ಎಂದು ತಿಳಿಸುತ್ತಾ ಬಂದಿದ್ದು ಅದರ ಪರಿಣಾಮವಾಗಿ ಜೀವನದಲ್ಲಿ ಪ್ರಗತಿ ಕಾಣಲು ಸಾಧ್ಯವಾಯಿತು ಎಂಬ ಭಾವನೆ  ನನ್ನದು. ಮುಂದೆ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಮೈಸೂರು ರಾಜ್ಯ ಸರ್ಕಾರದ ಆರ್ಥಿಕ ಸಲಹೆಗಾರನಾಗಿ ಸೆಕ್ರೆಟರಿ ರ್‍ಯಾಂಕ್‌ನಲ್ಲಿ ಕೆಲಸಕ್ಕೆ ಬಂದಾಗ ನಾನು ಮೈಸೂರಿಗೆ ಹೋಗಿ ಶ್ರೀಗಳವರ ಆಶೀರ್ವಾದವನ್ನು ಪಡೆದು ಬಂದೆ. ಅನಂತರ ಸರ್ಕಾರದ ಯೋಜನಾ ಕಮೀಷನರ್ ಮತ್ತು ಕಾರ್ಯದರ್ಶಿಯಾಗಿ ಖಾಯಂ ಆದಾಗಲೂ ಸಹ ಅದು ಸ್ವಾಮೀಜಿಯವರ ಉತ್ತೇಜನ ಹಾಗೂ ಆಶೀರ್ವಾದದಿಂದಲೇ ಎಂಬ ಭಾವನೆ. ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಸೇವೆ ಸಲ್ಲಿಸಿದಾಗ ಸ್ವಾಮೀಜಿಯವರು ತಮ್ಮ ವಿದ್ಯಾರ್ಥಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ನ್ಯಾಯಸಮ್ಮತ ಮತ್ತು ಒಳ್ಳೆಯ ಕೆಲಸ ಮಾಡಿದ್ದು ಹೆಮ್ಮೆಯ ವಿಷಯ ಎಂದು ಪ್ರಸ್ತಾಪಿಸಿದ್ದರು....

"ಒಂದು ಘಟನೆ –

"ಈ ಘಟನೆ ನಡೆದದ್ದು ಸುಮಾರು 1948-49ರ ಸಮಯದಲ್ಲಿ. ನಾನಿನ್ನೂ ಆಗ ಶ್ರೀಗಳವರು ನಡೆಸುತ್ತಿದ್ದ ಉಚಿತ ವಿದ್ಯಾರ್ಥಿನಿಲಯದ ವಿದ್ಯಾರ್ಥಿ. ಕೆಂಗಲ್ ಹನುಮಂತಯ್ಯನವರ ಮಂತ್ರಿಮಂಡಲದಲ್ಲಿ ಹೆಚ್. ಸಿದ್ಧವೀರಪ್ಪನವರು ಮಂತ್ರಿಗಳಾದರು.

ಅದೇ ಸಮಯದಲ್ಲಿ ಕೇಂದ್ರ ಸರ್ಕಾರದಲ್ಲಿ ಕೊಂಡಜ್ಜಿ ಬಸಪ್ಪನವರೂ ಉಪಮಂತ್ರಿಗಳಾಗಿದ್ದರು. ಇಬ್ಬರೂ ಚಿತ್ರದುರ್ಗ ಜಿಲ್ಲೆಯವರು. ದಾವಣಗೆರೆಯ ಹತ್ತಿರದ ಹಳ್ಳಿಗಳಿಂದ ಬಂದವರು. ನನ್ನ ಜಿಲ್ಲೆಯವರು. ಅಷ್ಟೇ ಅಲ್ಲ – ನಾನು ಅವರಿಬ್ಬರಿಗೂ ಪರಿಚಿತನಾದವನು. ಒಮ್ಮೆ ಅವರಿಬ್ಬರೂ ಮೈಸೂರಿಗೆ ಬಂದಿದ್ದರು. ಆಗ ನಾನು ಅವರ ಬಗ್ಗೆ ಪ್ರಸ್ತಾಪಿಸಿ ಅವರಿಬ್ಬರೂ ತಮ್ಮ ದರ್ಶನ ಆಶೀರ್ವಾದ ಪಡೆಯಲು ಬರಬೇಕೆಂದಿದ್ದಾರೆಂದು ಶ್ರೀಗಳವರಲ್ಲಿ ಮನವಿ ಮಾಡಿಕೊಂಡೆ. ಶ್ರೀಗಳವರು ಒಪ್ಪಿಕೊಂಡರು. ಈ ಭೇಟಿ ನಡೆದುದು ಚಾಮುಂಡಿ ಬೆಟ್ಟದ ತಪ್ಪಲಲ್ಲಿರುವ ಶ್ರೀ ಗೌರೀಶಂಕರ ಸ್ವಾಮಿಗಳವರ ಮಠದಲ್ಲಿ. ನಾನು ಆ ಸಂದರ್ಭದಲ್ಲಿ ಹಾಜರಿದ್ದು ಇಬ್ಬರು ಧುರೀಣರ ಬಗ್ಗೆ ಕೆಲವು ಮಾತುಗಳನ್ನು ಹೇಳಿದೆ. ಶ್ರೀಗಳವರು ಕೊನೆಯಲ್ಲಿ ಅವರಿಗೆ ಹೇಳಿದ ಮಾತುಗಳು ನನ್ನ ಕಿವಿಯಲ್ಲಿ ಇಂದಿಗೂ ಅನುರಣನಗೊಳ್ಳುತ್ತಿವೆ–

"ನೀವುಗಳು ಮಂತ್ರಿಗಳಾಗಿರುವುದು ನಮಗೆ ತುಂಬಾ ಸಂತೋಷ. ನೀವು ದಕ್ಷತೆಯಿಂದ ಜನರ ಸೇವೆ ಮಾಡಿ ಎಂದು ನಮ್ಮ ಆಶೀರ್ವಾದ. ಜನರ ಸೇವೆ ಮಾಡುವುದು ದೊಡ್ಡ ಅವಕಾಶ. ಅದು ದೇವರು ಕೊಟ್ಟ ವರ."

* * *

ಭಗವಂತನ ವ್ಯಕ್ತಸ್ವರೂಪವೇ ನಿಸರ್ಗ, ಪ್ರಕೃತಿ ಎಂದು ಶ್ರೀಗಳವರ ಭಾವನೆ. ಆದ್ದರಿಂದ ಆಗಾಗ್ಗೆ ಶ್ರೀಗಳವರು ಜನಾರಣ್ಯ, ನಗರ-ಪಟ್ಟಣಗಳಿಂದ ದೂರ ಹೋಗಿ ಪ್ರಕೃತಿಯ ಮಡಿಲಲ್ಲಿ, ಪ್ರಶಾಂತ ವಾತಾವರಣದಲ್ಲಿ, ಇಷ್ಟಾಗೋಷ್ಠಿಯಲ್ಲಿ ಕಾಲಕಳೆಯುವುದೆಂದರೆ ಅವರಿಗೆ ಬಲು ಹಿಗ್ಗು.

ಒಮ್ಮೆ ಶ್ರೀಗಳವರು ಕೆಲವು ಸ್ವಾಮಿಗಳವರ ಜೊತೆಯಲ್ಲಿ ಬಿಳಿಗಿರಿರಂಗನ ಬೆಟ್ಟಕ್ಕೆ ಹೋದರು. ಅಲ್ಲಿ ಪ್ರಶಾಂತ ವಾತಾವರಣದಲ್ಲಿ ಮನದಣಿಯೆ ಪೂಜೆಮಾಡಿ, ಕೆಲಕಾಲ ಸ್ವಾಮಿಗಳವರ ಸತ್ಸಂಗ ಗೋಷ್ಠಿಯಲ್ಲಿ ಕಾಲಕಳೆಯಬೇಕು ಎಂಬ ಹಂಬಲ.

ಅದೇ ಸಂದರ್ಭದಲ್ಲಿ ಯಾವುದೋ ಕಾರಣಕ್ಕಾಗಿ ಮೈಸೂರಿಗೆ ಬಂದಿದ್ದ ಮಾನ್ಯ ಮಂತ್ರಿಗಳಾದ ಶ್ರೀ ಸಿದ್ಧವೀರಪ್ಪನವರನ್ನು ಶ್ರೀಗಳವರು ಬೆಟ್ಟಕ್ಕೆ ತಮ್ಮೊಂದಿಗೆ ಬರುವಂತೆ ಸೂಚಿಸಿದರು. ಸಿದ್ಧವೀರಪ್ಪನವರಿಗೆ ಶ್ರೀಗಳವರ ಬಗ್ಗೆ ಅಪಾರ ಭಕ್ತಿ-ಗೌರವಾದರಗಳು. ಶ್ರೀಗಳವರು ಅವರನ್ನು ಕರೆದುಕೊಂಡು ಬೆಟ್ಟಕ್ಕೆ ಹೋದರು. ಅಲ್ಲಿ ಪೂಜಾನಂತರ ಎಲ್ಲ ಸ್ವಾಮಿಗಳ ಜೊತೆಯಲ್ಲಿ ಜಗದ್ಗುರುಗಳೂ ಚಾಪೆಯ ಮೇಲೆ ಕುಳಿತು ಸಂಭಾಷಣೆಯಲ್ಲಿ ತೊಡಗಿದರು. ಆದರೆ ಸಿದ್ಧವೀರಪ್ಪನವರೇಕೋ ಒಳಗೆ ಬಾರದೆ ಹೊರಗೇ ಕಾಲ ಕಳೆಯುತ್ತಿದ್ದರು. ಅದನ್ನು ಗಮನಿಸಿದ ಶ್ರೀಗಳವರು- "ಏಕೆ ನಮ್ಮನ್ನು ದೂರ ಇಟ್ಟು ಹೊರಗೇ ಉಳಿದಿದ್ದೀರಿ, ಬನ್ನಿ. ಇಲ್ಲೇ ಕುಳಿತುಕೊಳ್ಳಿ" – ಎಂದು ಕರೆದರು.

ಆಗ ವಿಷಯ ಹೊರಗೆ ಬಂತು.

ಸಿದ್ಧವೀರಪ್ಪನವರಿಗೆ ಮಂಡಿನೋವು. ಆದ್ದರಿಂದ ಕೆಳಗೆ ಚಾಪೆಯ ಮೇಲೆ ಕುಳಿತುಕೊಳ್ಳುವುದು ತುಂಬಾ ತ್ರಾಸದಾಯಕ ಹಾಗೂ ಕಷ್ಟಕರ. ಜಗದ್ಗುರುಗಳೇ ಕೆಳಗೆ ಕುಳಿತುಕೊಂಡಿರುವಾಗ ಇವರು ಕುರ್ಚಿಯ ಮೇಲೆ ಹೇಗೆ ಕುಳಿತುಕೊಂಡಾರು ? ಇದನ್ನು ತಿಳಿದೊಡನೆ ಶ್ರೀಗಳವರು ಒಂದು ಕುರ್ಚಿಯನ್ನು ತರಿಸಿ ಅಲ್ಲಿ ಹಾಕಿಸಿದರು. ಶ್ರೀಗಳವರ ಪ್ರೀತಿಪೂರ್ವಕ ಒತ್ತಾಯದಿಂದಾಗಿ ಸಿದ್ಧವೀರಪ್ಪನವರು ಕುರ್ಚಿಯ ಮೇಲೆ ಕುಳಿತುಕೊಳ್ಳಬೇಕಾಯಿತು !

ಕೆಳಗೆ ಚಾಪೆಯ ಮೇಲೆ ಜಗದ್ಗುರುಗಳು !

ಮೇಲೆ ಕುರ್ಚಿಯಲ್ಲಿ ಸಿದ್ಧವೀರಪ್ಪನವರು !

* * *

ಸಜ್ಜನರಿಗೆ ಪರರ ನೋವನ್ನು ಕಂಡು ಮನ ಕರಗುವುದು ಸಹಜ. ಪ್ರಾಣಿಪಶುಪಕ್ಷಿಗಳ ನೋವಿಗೆ ಮನ ಕರಗುವುದೂ ಸಹಜ. ಆದರೆ ಆ ನೋವು ತಮಗೇ ಆದಷ್ಟು ತಲ್ಲಣಗೊಳ್ಳುವುದು ಸಾಧು-ಸಂತರಿಗೆ ಅತ್ಯಂತ ಸಹಜ. ಅವರು ಪರಕಾಯಪ್ರವೇಶ ಮಾಡಿ ಆ ನೋವನ್ನು ಅನುಭವಿಸುತ್ತಾರೆ.

ಶ್ರೀಗಳವರು ಈ ರೀತಿ ನೋವು ಅನುಭವಿಸಿದ ಒಂದು ಅಪರೂಪದ ಘಟನೆಯನ್ನು ಪ್ರತ್ಯಕ್ಷದರ್ಶಿಗಳಾಗಿದ್ದ ಶ್ರೀ ಕುಂದೂರು ಮಠದ ಅಧ್ಯಕ್ಷರಾದ ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳವರು ತಾದಾತ್ಮ್ಯವಾಗಿ ಸ್ಮರಿಸಿಕೊಳ್ಳುತ್ತಾರೆ-

ಸದಾ ಸಂದರ್ಶಕರಿಂದ ಸುತ್ತುವರಿದು ಕ್ಷಣ ವಿಶ್ರಾಂತಿಯೂ ಇಲ್ಲದೆ ಕಾರ್ಯಪ್ರವೃತ್ತರಾಗಿರುವುದನ್ನು ಕಂಡು ಕಂಡೂ ಏನಾದರೂ ಮಾಡಿ ಸಂಜೆ ಸ್ವಲ್ಪ ಹೊತ್ತಾದರೂ ಸಂದರ್ಶಕರಿಂದ ಮುಕ್ತ ಮಾಡಿ ವಾಯುವಿಹಾರಕ್ಕಾಗಿ ನಗರದ ಹೊರವಲಯದಲ್ಲಿ ಸಂಚಾರ ಕೈಗೊಳ್ಳುವಂತೆ ಮಾಡುವ ಪ್ರಯತ್ನದಲ್ಲಿ ಒಮ್ಮೆ ಶ್ರೀಗಳವರನ್ನು ಮಾನಸಗಂಗೋತ್ರಿಯ ಆಚೆ ಇರುವ ಜೆ.ಸಿ.ಇ. ಕಾಲೇಜಿನ ಆವರಣದ ವಿಶಾಲವಾದ ಬಯಲಿಗೆ ಸಂಗಡಿಗ ಸ್ವಾಮಿಗಳು ಕರೆದುಕೊಂಡು ಬಂದರು. ಅಲ್ಲಿ ಕಾರಿನಿಂದ ಇಳಿದು ಆ ಪ್ರಶಾಂತ ಪರಿಸರದ ತಂಗಾಳಿಯಲ್ಲಿ ಸ್ವಲ್ಪಕಾಲ ಸಂಚರಿಸಿದರು. ಅನಂತರ ಆ ಕಾಲೇಜಿನ ಕಾರ್ಯಾಲಯದ ಬಳಿಗೆ ಬಂದರು. ಆ ಕಾರ್ಯಾಲಯದ ಒಳಗಿನಿಂದ ಒಂದು ನಾಯಿಮರಿ ಕುಂಯ್‌ಗುಡುತ್ತ, ಬಾಗಿಲು ಕೆರೆಯುತ್ತಿರುವುದು ಕೇಳಿಸಿತು. ಅದರ ಧ್ವನಿಯಿಂದಲೇ ಅದಿನ್ನೂ ಮರಿ ಎಂದು ಭಾಸವಾಯಿತು. ಆದರೆ ಕಾರ್ಯಾಗಾರದ ಬಾಗಿಲಿಗೆ ಬೀಗ ಹಾಕಿತ್ತು. ಆದರೆ ಒಳಗೆ ನಾಯಿಮರಿ ಇದ್ದುದಾದರೂ ಹೇಗೆ ? ಎಲ್ಲೋ ಅದು

ಒಳಗೆ ಹೋಗಿ, ಯಾವುದೋ ಮೂಲೆಯಲ್ಲಿ ಆ ಪುಟ್ಟ ಮರಿ ಮುದುಡಿಕೊಂಡು ಮಲಗಿಬಿಟ್ಟಿತ್ತೋ ಏನೋ ! ಅದಿರುವುದು ಯಾರ ಗಮನಕ್ಕೂ ಬಾರದೆ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗಿಬಿಟ್ಟಿದ್ದಾರೆ.

ಶ್ರೀಗಳವರು ಬಾಗಿಲವರೆಗೆ ಹೋಗಿ ನೋಡಿದರು. ಬಾಗಿಲಿನ ಅರ್ಧಭಾಗಕ್ಕೆ ಗಾಜು ಹಾಕಿದ್ದುದರಿಂದ ಒಳಗಿದ್ದ ನಾಯಿಮರಿ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಕರುಣಾಕ್ರಂದನಗೈಯುತ್ತಾ ಹೊರಗೆ ಬರಲು ಬಾಗಿಲನ್ನು ಒಂದೇ ಸಮನೆ ಪರಚುತ್ತಿತ್ತು.

"ಪಾಪ ! ಅದು ಎಷ್ಟು ಕಷ್ಟಪಡುತ್ತಿದೆ"

— ಉದ್ಗರಿಸಿದರು ಶ್ರೀಗಳವರು.

"ಇನ್ನು ಬೆಳಗಿನವರೆಗೆ, ಬಾಗಿಲು ತೆರೆಯುವತನಕ ಅದು ಅಲ್ಲೇ ಇರುವುದೇ! ಸ್ವಲ್ಪಹೊತ್ತು ಪರಚಿ ಅದೇ ಸುಮ್ಮನಾಗುತ್ತದೆ ಬಿಡಿ!"

— ಎಂದರು ಒಬ್ಬರು ಸ್ವಾಮಿಗಳು.

"ಛೆ ! ಛೆ ! ಬೆಳಗಿನವರೆಗೂ ಹಾಗೇ ಇರುವುದೇ ? ಈಗಲೇ ಅಷ್ಟು ಒದ್ದಾಡುತ್ತಿದೆ. ಅದರ ಅಮ್ಮನೂ ಎಷ್ಟು ದುಃಖಿಸುತ್ತಿದೆಯೋ......ತನ್ನ ಮರಿಗಾಗಿ ಎಲ್ಲೆಲ್ಲಿ ಹುಡುಕಾಡುತ್ತಿದೆಯೋ.... ಮರಿಯನ್ನು ಈ ಕೂಡಲೇ ಹೊರಗೆ ಬರುವ ಹಾಗೆ ಮಾಡಬೇಕು. ತಾಯಿಯನ್ನು ಕಾಣದೆ ಅದು ಶೋಕಿಸುತ್ತಿದೆ. ಸ್ವಲ್ಪ ದೊಡ್ಡದಾಗಿದ್ದಿದ್ದರೆ ಪರವಾಗಿರಲಿಲ್ಲ. ಏನಾದರೂ ಮಾಡಿ ಅದನ್ನು ಈಗಲೇ ಬಿಡುಗಡೆಗೊಳಿಸಬೇಕು..." — ಎಂದು ಕಾತರ ಕಳವಳದಿಂದ ನುಡಿದರು.

ಅಷ್ಟರಲ್ಲಿ ಶ್ರೀಗಳವರು ಮತ್ತಿತರ ಸ್ವಾಮಿಗಳು ಅಲ್ಲಿರುವುದನ್ನು ಕಂಡು ರಾತ್ರಿಯ ಕಾವಲುಗಾರ ಓಡಿಬಂದ. ಅವನಿಗೆ ಬಾಗಿಲು ತೆರೆಯುವಂತೆ ಹೇಳಿದರು. ಆದರೆ ಅದರ ಬೀಗದ ಕೈ ತನ್ನ ಬಳಿ ಇಲ್ಲವೆಂದೂ, ಆ ವಿಭಾಗದ ಜವಾನನ ಬಳಿ ಇರುವುದಾಗಿಯೂ ತಿಳಿಸಿದ.

"ಸರಿ ಬಿಡಿ, ಬೆಳಗ್ಗೆಯೇ ಅದನ್ನು ತೆಗೆಸಲಿ"

— ಎಂದು ಇತರ ಸ್ವಾಮಿಗಳು ಅಲ್ಲಿಂದ ಹೊರಡಲು ಸಿದ್ಧರಾದರು. ಆದರೆ ಶ್ರೀಗಳವರು ಅಲ್ಲಿಂದ ಕದಲದೆ- "ಎಲ್ಲಿಯಾದರೂ ಉಂಟೆ ? ಅದು ಬೆಳಗಿನವರೆಗೆ ಸಂಕಟಪಡುತ್ತಿರಬೇಕೇ?" — ಎಂದು ಕಾವಲುಗಾರನ ಕಡೆ ತಿರುಗಿ ಆತನ ಮನೆಗೆ ಹೋಗಿ ಬೀಗದ ಕೈಯನ್ನು ತರುವಂತೆ ಹೇಳಿ ಸೈಕಲ್ ಮೇಲೆ ಆತನನ್ನು ಕಳಿಸಿಕೊಟ್ಟರು. ಆತ ಬೀಗದ ಕೈಯನ್ನು ತರುವವರೆಗೂ ಕಾದಿದ್ದು, ಅನಂತರ ಬಾಗಿಲನ್ನು ತೆರೆದು, ಕೂಡಲೇ ಆ ನಾಯಿಮರಿ ಹೊರಗೆ ಓಡಿಬಂದುದನ್ನು ನೋಡಿ ಶ್ರೀಗಳವರ ಮುಖ ಅರಳಿತು.

ಅದು ಅಷ್ಟು ದೂರ ನೆಗೆಯುತ್ತ ನೆಗೆಯುತ್ತ ಪುಟು ಪುಟು ಓಡಿಹೋದುದು, ಸ್ವಲ್ಪ ದೂರ ಹೋಗಿ, ನಿಂತು, ಕತ್ತು ಹೊರಳಿಸಿ ಹಿಂತಿರುಗಿ ನೋಡಿತು. ಏನೆನ್ನಿಸಿತೋ ಅದಕ್ಕೆ, ಕೂಡಲೆ, ಹಿಂತಿರುಗಿ ಕುಪ್ಪಳಿಸುತ್ತ ಚಂಗಚಂಗನೆ ಕುಣಿಯುತ್ತಾ ಕಚ್ಚುವುದರ ಹಾಗೆ ಹಿಂದಕ್ಕೆ ಓಡಿಬಂದುಬಿಟ್ಟಿತು.

ಕಚ್ಚಿಬಿಟ್ಟೀತು ಎಂದು ಎಲ್ಲರೂ ಹಿಂದಕ್ಕೆ ಸರ್‍ರನೆ ಸರಿದು ನಿಂತರು. ಆ ನಾಯಿಮರಿ ಕ್ಷಣ ನಿಂತು, ಹಿಂದೆ ಸರಿದವರತ್ತ ನೋಡಿ, —ಹಿಂದೆ ಸರಿಯದೇ ನಿಂತಲ್ಲೇ ನಿಂತು ತನ್ನತ್ತಲೇ ಮಮತೆಯಿಂದ ನೋಡುತ್ತಿರುವ ಶ್ರೀಗಳವರ ಬಳಿಗೆ ಕ್ಷಣಾರ್ಧದಲ್ಲಿ ಓಡಿಬಂದು ಅವರ ಪಾದಗಳನ್ನು ಮೂಸಿನೋಡಿತು ಬಾಲವನ್ನು ಅಲ್ಲಾಡಿಸುತ್ತ. ಬಾಲವೇ ನಾಯಿಯನ್ನು ಅಲ್ಲಾಡಿಸುತ್ತಿದೆಯೇನೋ ಎನ್ನಿಸಿತು. ಅದು ಕಂತ್ರಿ ನಾಯಿಮರಿ ! ಆದರೆ ಶ್ರೀಗಳವರು ತಟ್ಟನೆ ಬಾಗಿ ಅದರ ನೆತ್ತಿಯ ಮೇಲೆ ತಮ್ಮ ಕೈಯಿರಿಸಿ, ಸವರಿ, ಬೆನ್ನು ಸವರಿ ನಿಂತರು. ಆ ನಾಯಿಮರಿ ಕುಂಯ್‌ಕುಂಯ್‌ಗುಟ್ಟಿ ಜೋರಾಗಿ ಬಾಲ ಅಲ್ಲಾಡಿಸಿ ತಾನೂ ಅದಕ್ಕಿಂತ ಜೋರಾಗಿ ಅಲುಗಾಡಿ, ತಕ್ಷಣ ಅಲ್ಲಿಂದ ಓಡಿ ಓಡಿ ಓಡಿಹೋಯಿತು!

* * *

ಮಳೆ ಸುರಿಸುವಾಗ ಮೋಡ – ಇದು ಸಜ್ಜನನ ಹೊಲ. ಇದು ದುರ್ಜನನ ಹೊಲ. ನಾನು ದುರ್ಜನನ ಹೊಲದ ಮೇಲೆ ಮಳೆ ಸುರಿಸಬಾರದು – ಎಂದು ಎಂದೂ ಆ ಮೋಡ ಅಂದುಕೊಳ್ಳುವುದಿಲ್ಲ. ಅದಕ್ಕೆ ಎಲ್ಲರೂ ಒಂದೇ. ಅದರ ಧರ್ಮ ಮಳೆ ಸುರಿಸುವುದು. ಸುರಿಸುತ್ತದೆ....

ಶ್ರೀಗಳವರಿಂದ ಬೇಕಾದಷ್ಟು ಉಪಕಾರಹೊಂದಿದ ಕೆಲವರು ಕೃತಘ್ನರಾಗಿ ಲಘುವಾಗಿ, ಕಟುವಾಗಿ, ಕೆಟ್ಟದಾಗಿ ಮಾತನಾಡಿದ್ದು ತಮಗೆ ಗೊತ್ತಾದಾಗಲೂ ಶ್ರೀಗಳವರು ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ. 'ಹೋಗಲಿ ಬಿಡಿ' — ಎಂದು ನಕ್ಕು ಸುಮ್ಮನಾಗಿಬಿಡುತ್ತಿದ್ದರು. ಮರೆತೇಬಿಡುತ್ತಿದ್ದರು.

ಒಮ್ಮೆ ಈ ಕುರಿತು ಮುಖಂಡರೊಬ್ಬರು ಹೇಳಿದರು —

"ಸಾವಿರಾರು ಜನ ವಿದ್ಯಾರ್ಥಿಗಳಿಗೆ ನೀವು ಸಹಾಯ ಮಾಡಿದ್ದೀರಿ. ಅವರೆಲ್ಲ ನಿಮಗೆ ಎಷ್ಟು ಕೃತಜ್ಞರಾಗಿರಬೇಕು!"

ಇದಕ್ಕೆ ತಟ್ಟನೆ ಸ್ವಾಮಿಗಳಿಂದ ಬಂದ ಉತ್ತರ —

"ಇಲ್ಲ, ಇಲ್ಲ. ಸಮಾಜದಿಂದ ತಂದು ಸಮಾಜಕ್ಕೆ ನಾವು ಕೊಟ್ಟಿದ್ದೇವೆ. ಅವರು ನನಗೆ ಕೃತಜ್ಞರಾಗಿರಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಅವರು ಸಮಾಜಕ್ಕೆ ಕೃತಜ್ಞರಾಗಿದ್ದು, ತಾವು ಓದಿದುದು ಸಾರ್ಥಕವಾಗುವಂತೆ ಬಾಳಿ, ಸಮಾಜದ ಋಣವನ್ನು ತೀರಿಸಿದರೆ, ಅದೇ ಅವರು ನನಗೆ ತೋರಿಸುವ ಕೃತಜ್ಞತೆ."

* * *

ಶ್ರೀಗಳವರ ನಿಕಟಸಂಪರ್ಕಕ್ಕೆ ಬಂದವರೆಲ್ಲಾ ಸಾಮಾನ್ಯವಾಗಿ ಹೇಳುವ ಒಂದು ಮಾತು–

"ಸ್ವಾಮಿಗಳಿಗೆ ನನ್ನನ್ನು ಕಂಡರೆ ವಿಶೇಷವಾದ ಪ್ರೀತಿ."

ಒಬ್ಬೊಬ್ಬರೂ ಹಾಗೆ ತಿಳಿದುಕೊಳ್ಳುವಂತೆ ಪ್ರೇಮಸುಧೆಯನ್ನು ವರ್ಷಿಸುವುದು ಇಂತಹ ಮಾನವಪ್ರೇಮಿಗೆ ಮಾತ್ರ ಸಾಧ್ಯವಷ್ಟೆ.

— ಇವನ್ನು ಕೆಲವು ಸಂದರ್ಭಗಳಲ್ಲಿ ಹತ್ತಿರದಿಂದ ಕಂಡ ಮತ್ತು ಉಡುಪಿಯ ಪರ್ಯಾಯ ಸಂದರ್ಭದಲ್ಲಿ ಶ್ರೀಗಳವರನ್ನು ಬರಮಾಡಿಕೊಂಡು ಗೌರವವನ್ನು ಸಲ್ಲಿಸಿದ ಶ್ರೀ ಪೇಜಾವರ ಮಠದ ಶ್ರೀಪಾದಂಗಳವರು ಒಮ್ಮೆ ಕೇಳಿದರು —

"ಎಲ್ಲರೂ ನಿಮ್ಮನ್ನು ಪ್ರೀತಿಸುತ್ತಾರೆ. ಬೇರೆ ಬೇರೆ ಮನೋಧರ್ಮದವರೂ, ಧರ್ಮದವರೂ ನಿಮ್ಮನ್ನು ಬಹಳವಾಗಿ ಗೌರವಿಸುತ್ತಾರೆ. ನಿಮ್ಮ ಪ್ರೀತಿಗೆ ತಾವೇ ಪಾತ್ರರಾದೆವೆಂದು ಹೆಮ್ಮೆ ಪಡುತ್ತಾರೆ. ಎಲ್ಲರಿಗಿಂತ ಈ ನಿಮ್ಮ ಬಗೆಯೇ ಬೇರೆ. ಇದು ಹೇಗೆ ಸಾಧ್ಯ?"

ಅದಕ್ಕೆ ಶ್ರೀಗಳವರು ಹೇಳಿದ ಮಾತು ಅವರ ಹೃದಯಕ್ಕೆ ಕನ್ನಡಿ ಹಿಡಿಯುತ್ತದೆ —

"ಇದರಲ್ಲಿ ನಮ್ಮ ವಿಶಿಷ್ಟ ಬಗೆಯೇನೂ ಇಲ್ಲ. ಸ್ವಾಮಿಯಾಗಿ ಎಲ್ಲರನ್ನೂ ಪ್ರೀತಿಸುವುದು ನಮ್ಮ ಕರ್ತವ್ಯ. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ಉಳಿದದ್ದೆಲ್ಲಾ ಅವರ ದೊಡ್ಡತನ. ಸಣ್ಣದನ್ನೇ ದೊಡ್ಡದಾಗಿ ಅವರು ಕಾಣುತ್ತಾರೆ."

□

## ರಾಜೇಂದ್ರ ಶ್ರೀವಾಣಿ

- ಅಧ್ಯಾತ್ಮದಲ್ಲಿ ಹಾಗೂ ಮಾನವತೆಯಲ್ಲಿ ಶ್ರದ್ಧೆಯನ್ನು ತಾಳಿದಾಗ ಮಾತ್ರ ಬದುಕು ಹಸನಾಗುತ್ತದೆ.
- ಆತ್ಮಶ್ರದ್ಧೆಯಿಂದ ಮಾಡಿದ ಕಾರ್ಯ ಬದುಕಿಗೆ ಅದ್ಭುತ ಫಲವನ್ನೀಯುತ್ತದೆ.

# ಭುವನದ ಮಹಾಬೆಳಕು

ಡಾ. ಎಂ. ನಂಜುಂಡಪ್ಪ

**ಮ**ಹಾನ್ ಸಂತರು, ಮಹರ್ಷಿಗಳು, ಋಷಿಮುನಿಗಳು, ವೇದಾಂತಿಗಳು, ತತ್ವಜ್ಞಾನಿಗಳು, ಶರಣರು, ದಾಸವರೇಣ್ಯರು ತಮ್ಮ ಬದುಕನ್ನು ಮಾನವನ ಉದ್ಧಾರಕ್ಕಾಗಿ ಬಳಸಿ ಮಹಾ ಬೆಳಕಾದರು. ಇಂತಹ ಮಹಾನ್ ಸಂತರಲ್ಲಿ ನಮ್ಮ ಲಿಂ. ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳೂ ಒಬ್ಬರು. ಇವರ ಬದುಕನ್ನು ನೆನೆಸಿಕೊಳ್ಳುವುದೇ ರೋಮಾಂಚಕಾರಿ. ಈಗಿನ ನಂಜನಗೂಡು ತಾಲ್ಲೂಕು ಸುತ್ತೂರು ಶ್ರೀಮಠದಲ್ಲಿ ದಿನಾಂಕ 29.8.1916 ರಂದು ಇಹದಲ್ಲಿ ಶಿಶುವಾಗಿ ಕಾಣಿಸಿಕೊಂಡ ಇವರು ತಮ್ಮ ಬದುಕಿನ ಕೊನೆಯ ಉಸಿರಿರುವವರೆಗೂ ಇಲ್ಲದವರ ಬದುಕು ಬೆಳಗಲು ಮಹಾಬೆಳಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡರು, ವಿಶ್ವಪ್ರಿಯರಾದರು. ಈ ಮಹಾನ್ ಚೇತನದ ಬಗ್ಗೆ ಬರೆಯಲು, ಬಣ್ಣಿಸಲು ನಾನು ಬಹಳ ಸಣ್ಣವ. ಆದರೂ ನಾನು ಪೂಜ್ಯರೊಡನೆ ಇದ್ದ ಸಂದರ್ಭಗಳನ್ನು ಮತ್ತು ನಾನು ಕಂಡುಂಡ ನಿಜ ವಿಚಾರಗಳನ್ನು ಕುರಿತು ನನ್ನ ಈ ಲೇಖನದಲ್ಲಿ ವಿವರಿಸಲು ಪ್ರಯತ್ನಿಸಿದ್ದೇನೆ.

**ಶ್ರೀಗಳವರನ್ನು ಕಂಡ ಪ್ರಥಮ ದರ್ಶನ :** ಪೂಜ್ಯರನ್ನು ಪ್ರಥಮವಾಗಿ ನಾನು ಕಂಡ ದೃಶ್ಯವನ್ನು ಎಂದೆಂದೂ ಮರೆಯಲಾರೆ. ಅದೊಂದು ನನ್ನ ಹೃನ್ಮನದಲ್ಲಿ ಅಳಿಯದೆ ಉಳಿದಿದೆ. ನಾನು 1946 ರಲ್ಲಿ ಚಾಮರಾಜನಗರದ ಪುರಸಭೆಯ ಪ್ರೌಢಶಾಲೆಯಲ್ಲಿ ಮೊದಲನೆ ತರಗತಿಯ ವಿದ್ಯಾರ್ಥಿಯಾಗಿದ್ದೆ. ನನ್ನ ವಾಸ ಪೂಜ್ಯರು ಸ್ಥಾಪಿಸಿದ್ದ ಉಚಿತ ಪ್ರಸಾದನಿಲಯದಲ್ಲಿ. ಈ ಪ್ರಸಾದನಿಲಯ ಆಗಿನ ಮುಸಾಫಿರ್‌ಖಾನೆಯ ಬಂಗಲೆಯಲ್ಲಿತ್ತು. ಓದುತ್ತಿದ್ದ ಪ್ರೌಢಶಾಲೆಯ ತರಗತಿಗಳು ಪಕ್ಕದಲ್ಲಿ ಜನನ ಮಂಟಪದಲ್ಲಿ ಜರುಗುತ್ತಲಿದ್ದವು. ಒಂದು ದಿನ ಸಂಜೆ ನಾಲ್ಕರ ಸಮಯದಲ್ಲಿ ಕೊಠಡಿಗಳಲ್ಲಿದ್ದ ವಿದ್ಯಾರ್ಥಿಗಳು ದಬದಬನೆ ಹೊರಬಂದು 'ಬುದ್ಧಿಯವರು ಬಂದಿದ್ದಾರೆ' ಎಂದು ಕೂಗುತ್ತ ಹೊರಗೋಡಿದರು. ನಾನೂ ಕೂಡ ಅವರನ್ನು ಅನುಸರಿಸಿದೆ. ನಿಲಯದ ಹೊರಭಾಗದ ಜಾಗ ವಿಶಾಲವಾಗಿತ್ತು. ಎರಡು ಬಾಗೆ ಮರಗಳು ಸೊಂಪಾಗಿ ಬೆಳೆದು ಹೆಮ್ಮರವಾಗಿ ನೆರಳು ನೀಡಿದ್ದವು. ಎದುರಿಗೆ ಕೃಷ್ಣ ಟಾಕೀಸು, ಪಕ್ಕಕ್ಕೆ ಬಸ್‌ಸ್ಟ್ಯಾಂಡ್, ಇಂತಹ ವಾತಾವರಣದಲ್ಲಿ ಭೀಮಕಾಯದಂತೆ ನಿಂತಿದ್ದ ಷೆವರ್ಲೆ ಕಾರು, ಕಾರಿನ ಹಿಂಬಾಗಿಲು ತೆರೆದಿತ್ತು. ಒಳಗಡೆ ಮೂರು ಜನ ಪೂಜ್ಯರು

ಆಸೀನರಾಗಿದ್ದರು. ಮೊದಲನೆಯವರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರರು, ಎರಡನೆಯವರು ಮೈಸೂರಿನ ಅರಮನೆ ಪಂಚಗವಿ ಮಠಾಧ್ಯಕ್ಷರಾದ ಶ್ರೀ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರು ಮತ್ತು ಮೂರನೆಯವರು ಕ್ಯಾತನಹಳ್ಳಿ ಮಠಾಧ್ಯಕ್ಷರಾದ ಶ್ರೀ ಶಿವಪ್ರಭುಸ್ವಾಮಿಗಳು. ಹುಡುಗರೆಲ್ಲರೂ ಪೊಂತೆ ಪೊಂತೆಯಾಗಿ ಪೂಜ್ಯತ್ರಯರಿಗೆ ಪಾದ ಮುಟ್ಟಿ ನಮಸ್ಕರಿಸಿ ಹೊರಸರಿದು ನಿಲ್ಲುತ್ತಿದ್ದರು. ನಾನು ಕೊನೆಯವನಾಗಿ ನಮಸ್ಕರಿಸಿ ಸುಮ್ಮನೆ ಕಾಯುತ್ತ ನಿಂತಿದ್ದೆ. ರಾಜೇಂದ್ರ ಗುರುಗಳು ನನ್ನತ್ತ ನೋಡಿ ಕೈಸನ್ನೆ ಮಾಡಿ ಕರೆದರು. ನಾನು ಭಯಭೀತಿಯಿಂದ ಹೋಗಿ ಮೂವರಿಗೂ ಅಡ್ಡಬಿದ್ದು ನಿಂತೆ. ನಿಂತಿದ್ದ ನನ್ನಿಂದ ಪೂರ್ವೋತ್ತರಗಳನ್ನೆಲ್ಲ ತಿಳಿದುಕೊಂಡ ಜಗದ್ಗುರುಗಳು 'ಓಹೋ, ನೀನು ವಾಟಾಳು ಮಠದ ಶಿಷ್ಯನೇ? ಸಂತೋಷ. ನಮ್ಮ ಶಿಷ್ಯನೂ ಹೌದು. ಚೆನ್ನಾಗಿ ಓದು, ಒಳ್ಳೆಯವನಾಗಿರು' ಎಂದು ಆಶೀರ್ವದಿಸಿದರು. ಅಷ್ಟರಲ್ಲಿ ಮೂವರು ಸ್ವಾಮಿಗಳೂ ಹೊರಬಂದು ನಿಂತಿದ್ದರು. ನಾನು ಹೊರಡುವ ಮೊದಲು ಈ ಗುರುಗಳಿಗೆ ಮತ್ತೊಮ್ಮೆ ಅಡ್ಡಬಿದ್ದು ಹೋಗೆಂದರು. ಅವರೆಂದರೆ ಗೌರೀಶಂಕರ ಮಹಾಸ್ವಾಮಿಗಳವರು, ಬಾಲಕನಾಗಿದ್ದ ನನಗೆ ಇವರ್ಯಾರ ಪರಿಚಯವೂ ಇರಲಿಲ್ಲ ವೆನ್ನುವುದಕ್ಕಿಂತಲೂ ಅವರನ್ನು ನೋಡಿಯೇ ಇರಲಿಲ್ಲವೆಂಬುದು ಸತ್ಯ. ಹೀಗೆ ಪೂಜ್ಯರ ಪ್ರಥಮ ದರ್ಶನ ಲಭ್ಯವಾದದ್ದು ಚಾಮರಾಜನಗರದಲ್ಲಿ.

**ಮತ್ತೊಮ್ಮೆ ಶ್ರೀಗಳ ದರ್ಶನ ಅದೇ ಚಾಮರಾಜನಗರದಲ್ಲಿ:** ಎರಡನೇ ಮಹಾಯುದ್ಧದ ಸನ್ನಿಹಿತ ವರ್ಷಗಳಲ್ಲಿ ವಿಶ್ವದ ಅನೇಕ ರಾಷ್ಟ್ರಗಳು ಆರ್ಥಿಕ ಮತ್ತು ಇನ್ನಿತರ ದುಃಸ್ಥಿತಿಗೊಳಗಾಗಿದ್ದವು. ಭಾರತವೂ ಕೂಡ ಈ ತೊಡಕಿಗೆ ಸಿಲುಕಿತ್ತು. ಆಹಾರದ ಅಭಾವ ಎಲ್ಲೆಲ್ಲೂ ಮೆರೆದಿತ್ತು. ಸರಕಾರ ಆಹಾರಧಾನ್ಯದ ವಿತರಣೆ ಅನುಕೂಲಕ್ಕಾಗಿ ಪಡಿತರ ಪದ್ಧತಿ ಅಳವಡಿಸಿತ್ತು. ಈ ಸ್ಥಿತಿಯಲ್ಲಿ ಆಹಾರಧಾನ್ಯಗಳು ತೆರೆದ ಮಾರುಕಟ್ಟೆಯಲ್ಲಿ ಸಿಗುತ್ತಿರಲಿಲ್ಲ. ಈ ಕಾರಣ ಸ್ವಾಮೀಜಿಯವರು ತಾವು ತೆರೆದಿದ್ದ ಪ್ರಸಾದನಿಲಯಗಳಿಗೆ ಆಹಾರಧಾನ್ಯ ಒದಗಿಸಲು ಕಷ್ಟಸಾಧ್ಯವಾಗುತ್ತಿತ್ತು. ಪೂಜ್ಯರು ಧೃತಿಗೆಡದೆ ಭಕ್ತರಲ್ಲಿಯೊ, ಮತ್ತೆಲ್ಲಿಯೊ ಆಹಾರಧಾನ್ಯಗಳನ್ನು ಸಂಗ್ರಹಿಸಿ ನಿಲಯಗಳಿಗೆ ಕಳುಹಿಸುತ್ತಿದ್ದರು. ಈ ರೀತಿಯ ಬವಣೆಗೆ ಚಾಮರಾಜನಗರದ ನಿಲಯವೂ ಒಳಗಾಗಿತ್ತು.

ಅದೊಂದು ದಿನ ಬೆಳಗಿನ ಪ್ರಸಾದಕ್ಕೆ ದವಸ, ಧಾನ್ಯ ಇರಲಿಲ್ಲ. ಮ್ಯಾನೇಜರ್ ಕುದೇರಿನ ಎಂ.ಎನ್. ಗುರುಸಿದ್ದಪ್ಪನವರು ಹೇಗೋ ಹತ್ತಿರದ ಊರುಗಳ ಗುರುತಿನವರಿಂದ ಸ್ವಲ್ಪ ಅಕ್ಕಿಯನ್ನು, ರಾಗಿಯನ್ನು ತರಿಸಿ ಅರೆಹೊಟ್ಟೆಯ ಆಹಾರ ಒದಗಿಸಿದ್ದರು. ಎಲ್ಲರೂ ಶಾಲೆಗಳಿಗೆ ಹೋಗಿ ಸಾಯಂಕಾಲ ನಿಲಯಕ್ಕೆ ಬಂದೆವು. ನಿಲಯಪಾಲಕರು ಸ್ವಾಮೀಜಿ ಮೈಸೂರಿನಿಂದ ಧಾನ್ಯ ತರುತ್ತಾರೆಂದೇ ನಂಬಿ ನಿರೀಕ್ಷಣೆಯಲ್ಲಿದ್ದರು. ಸಾಯಂಕಾಲ ಐದು ಗಂಟೆಯಾದರೂ ಸ್ವಾಮೀಜಿ ಬರಲಿಲ್ಲ. ಕೊನೆಗೆ ಹುಡುಗರನ್ನೆಲ್ಲ ಕರೆದು ಒಬ್ಬೊಬ್ಬನಿಗೆ ನಾಲ್ಕು ಆಣೆಯಂತೆ ದುಡ್ಡು ಕೊಟ್ಟು ಸಿಟಿಯಲ್ಲಿ ಏನಾದರೂ ಆಹಾರ ತಿಂದು ಬನ್ನಿರೆಂದು

ಹೇಳಿದರು. ನಾವೆಲ್ಲರೂ ಪೇಟೆಗೆ ಹೋಗಿ ದುಡ್ಡಿಗೆ ತಕ್ಕಂತೆ ಆಹಾರ ತಿಂದು ಬಂದೆವು. ರಾತ್ರಿ ಒಂಬತ್ತು ಗಂಟೆಯಾದರೂ ಸ್ವಾಮೀಜಿ ಬರಲೇ ಇಲ್ಲ. ಹುಡುಗರೆಲ್ಲ ಹಸಿವು ತಾಳಲಾರದೆ ಒಂದಷ್ಟು ನೀರು ಕುಡಿದು ಅನಿವಾರ್ಯವಾಗಿ ನಿದ್ದೆಗೆ ವಶವಾದೆವು.

ಅರ್ಧರಾತ್ರಿ ಸಮಯ, ನಿದ್ರೆಯಲ್ಲಿದ್ದ ನಮ್ಮ ಮುಖಕ್ಕೆಲ್ಲ ನೀರು ಎರಚುತ್ತ ಎಚ್ಚರ ಮಾಡಿ ಮುಖ ತೊಳೆಸಿ ನಮ್ಮ ಊಟದ ತಟ್ಟೆಗಳ ಸಹಿತ ಊಟದ ಹಜಾರಕ್ಕೆ ಕರೆದೊಯ್ದು ಕುಳ್ಳಿರಿಸಿ ಬಿಸಿಬಿಸಿ, ಅತಿ ಬಿಸಿ ಗೋಧಿನುಚ್ಚಿನ ಉಪ್ಪಿಟ್ಟನ್ನು ಬಡಿಸಿದರು. ಸ್ವಾಮೀಜಿಯವರು ನಮ್ಮನ್ನೆಲ್ಲ ಕರುಣಾದೃಷ್ಟಿಯಿಂದ ನೋಡುತ್ತ "ಹಸಿವಾಗಿದೆಯಾ, ನಿಧಾನವಾಗಿ ತಿನ್ನು ಬಿಸಿ ನುಂಗಬೇಡ, ಆರಿಸಿಕೊಂಡು ತಿನ್ನು. ಚೆನ್ನಾಗಿದೆಯಾ. ಬಾರಪ್ಪ ಇಲ್ಲಿ ಇನ್ನೊಂದು ಸ್ವಲ್ಪ ಆ ಹುಡುಗನಿಗೆ ಬಡಿಸು, ಎಲ್ಲಿ ಬೇಗನೆ ಕುಡಿಯುವ ನೀರು ತಂದು ಕೇಳುವವರಿಗೆ ಕೊಡಿ. ಒಂದು ಹುಡುಗ ಕಣ್ಣೀರು ಸುರಿಸುತ್ತಲೇ ತಿನ್ನುತ್ತಿದ್ದ. ಅವನನ್ನು ಸ್ವಾಮೀಜಿ ನೋಡಿದಾಕ್ಷಣ ಅವನ ಹತ್ತಿರ ಕುಳಿತು, ಯಾಕಪ್ಪಾ ಅಳುತ್ತೀಯ! ಇನ್ನೂ ಸ್ವಲ್ಪ ಉಪ್ಪಿಟ್ಟು ಬೇಕೆ ಎಂದು ಸಂತೈಸುತ್ತ ಅವನ ತಲೆ ನೇವರಿಸುತ್ತ ತಾವೇ ಕಷ್ಟದಲ್ಲಿರುವಂತೆ ಲೀನವಾಗಿಬಿಟ್ಟರು. ಅವನನ್ನು ಮತ್ತೆ ಮತ್ತೆ ಏಕೆ ಅಳುತ್ತೀಯೆಂದು ಕೇಳಿದ ಮೇಲೆ ಅವನು ಬಿಕ್ಕುತ್ತಾ "ನಂಗೆ, ನಂ...ಗೆ...ನಿದ್ದೆ" ಎಂದ. ಸ್ವಾಮೀಜಿಯವರು ನಗುತ್ತ ಆಯಿತು ಈಗ ಬಡಿಸಿಕೊಂಡಿರುವಷ್ಟನ್ನು ತಿಂದು ಆಮೇಲೆ ಹೋಗಿ ಚೆನ್ನಾಗಿ ನಿದ್ದೆ ಮಾಡು. ನಾಳೆ ಒಳ್ಳೆ ಊಟ ಬಡಿಸುತ್ತಾರೆ. ಈಗ ಪ್ರಸಾದ ತಟ್ಟೆಯಲ್ಲಿ ಬಿಡಬಾರದೆಂದು ಹೇಳುತ್ತ ಆತುರಾತುರವಾಗಿ ನಿಲಯಪಾಲಕರಿಗೆ ಏನೋ ಹೇಳಿ ಕಾರಿನಲ್ಲಿ ಕುಳಿತು ಮರೆಯಾದರು. ನಂತರ ನಿಲಯಪಾಲಕರು ನಮಗೆಲ್ಲ ತಿಳಿಸಿದರು. "ನೋಡಿ ಮಕ್ಕಳೆ ನಿಮಗೆ ಊಟ ಮಾಡಿಸಲು ಮೈಸೂರಿನಿಂದ ಆಹಾರ ತಂದುಕೊಟ್ಟು ಹೋದರು. ಹೀಗೆ ನಾಲ್ಕಾರು ನಿಲಯಗಳಿಗೆ ನೆನ್ನೆಯಿಂದಲೂ ಈ ರೀತಿ ಆಹಾರಧಾನ್ಯ ಒದಗಿಸುತ್ತಿರುವರಂತೆ. ಈ ಕೆಲಸದಲ್ಲಿ ಅವರು ನೆನ್ನೆಯಿಂದಲೂ ಪೂಜೆ ಮಾಡಿಲ್ಲವಂತೆ. ಇನ್ನು ಪೂಜೆಯಿಲ್ಲದೆ ಪ್ರಸಾದ ಸ್ವೀಕರಿಸುವ ಪ್ರಶ್ನೆಯೇ ಇಲ್ಲ. ಮಹಾತಾಯಿಯಂತೆ ಶ್ರೀಗಳು ಬಂದು ಆಹಾರ ತಯಾರಾಗುವವರೆಗೂ ಇದ್ದು ನಿಮಗೆಲ್ಲ ಈ ಸರಿಹೊತ್ತಿನಲ್ಲಿ ತಿನ್ನಿಸಿ, ಸಂತೈಸಿ, ನಿಮ್ಮ ಮೈದಡವಿ ಅದೇ ಶ್ರೀಪೂಜೆಯೆಂದು ನಂಬಿದವರಾಗಿ, ಹೇಗೆ ಹೋದರು ನೋಡಿದಿರಾ, ಕಾಯಕ ಮಹಾಮೂರ್ತಿಗಳು ಎನ್ನುತ್ತ ಕಣ್ಣಂಚಿನಲ್ಲಿ ತೇವ ತಂದುಕೊಂಡರು. ಹೌದಲ್ಲವೇ, ಯಾವ ತಾಯಿಯು ಸರಿರಾತ್ರಿಯಲ್ಲಿ ಎದ್ದು ಹಸಿದ ಮಗನಿಗೆ ಅಡುಗೆ ಮಾಡಿ ಉಣಬಡಿಸುವುದು, ಸಂತಸಪಡುವುದು ಸುಲಭವೇನಲ್ಲ!

**ಸರಳಜೀವಿಗಳು, ಸಹೃದಯರು:** ಪೂಜ್ಯಪಾದರು ಸರಳಜೀವಿಗಳು, ಸಹೃದಯರು. ಇದಕ್ಕೆ ಅವರು ಬದುಕಿ ಬಾಳಿದ ಜೀವನವೇ ಸಾಕ್ಷಿ. ಇದನ್ನು ಸ್ಪಷ್ಟಪಡಿಸಲು ನಾನು ಕಂಡ ದೃಶ್ಯವೊಂದನ್ನು ವಿವರಿಸುತ್ತೇನೆ.

ಅಂದು ನಾನು ಮೇನ್ ಬಿಲ್ಡಿಂಗ್‌ನ ಮೇನೇಜರ್ ಆಗಿದ್ದೆ. ಕಾರ್ಯನಿಮಿತ್ತ ಸ್ವಾಮೀಜಿಯವರನ್ನು ನೋಡಲು ಹೋಗಿದ್ದೆ. ಅವರ ವಾಸ್ತವ್ಯ ಈಗಿನ ಜೆಎಸ್‌ಎಸ್ ಮಹಾವಿದ್ಯಾಪೀಠವಾಗಿತ್ತು. ಪೂಜ್ಯರು ಒಬ್ಬರೇ ಇದ್ದರು. ಆದರೆ ಹೊಲಿಗೆ ಕಾಯಕದಲ್ಲಿ ನಿರತರಾಗಿದ್ದರು. ಅವರ ಅಂಗಿಯ ಬೆನ್ನಿನ ಭಾಗ ಹರಿದಿತ್ತು. ತಮ್ಮ ಎಡಗಾಲಿನ ಹೆಬ್ಬೆರಳು ಮತ್ತು ಪಕ್ಕದ ಬೆರಳಿನ ಸಂದಿಯಲ್ಲಿ ಅಂಗಿಯ ಹರಿದ ಭಾಗದ ತುದಿಯ ಅಂಚನ್ನು ಹಿಡಿದುಕೊಂಡು ಸೂಜಿಯ ದಾರದಿಂದ ಹೊಲಿದುಕೊಳ್ಳುತ್ತಿದ್ದರು. ನಾನು ಅಡ್ಡಬಿದ್ದು ನಿಬ್ಬೆರಗಿನಿಂದ ಅವರು ಹೊಲಿಯುತ್ತಿದ್ದ ಮಾಟವನ್ನು ನೋಡುತ್ತ ನಿಂತೆ. ಕೊನೆಗೆ ನಾನು ಅಂಗಿಯನ್ನು ಹಿಡಿದುಕೊಂಡರೆ ಹೊಲಿಗೆ ಸುಲಭವಾಗಬಹುದೆಂದು ಭ್ರಮಿಸಿ ಮಾತಿಲ್ಲದೆ ಕೈ ನೀಡಿದೆ. ಅಷ್ಟರಲ್ಲಿ ಬುದ್ಧಿಯವರು 'ಹೇ ದಡ್ಡ, ಮಡಿಯಲ್ಲವೆ, ನೀ ಮುಟ್ಟಬೇಡ' ಎಂದರು. ನಾನು ಮನಸ್ಸಿನಲ್ಲೆ ಪಾದ ಮುಟ್ಟಿ ನಮಿಸಿದೆ. ಅದಕ್ಕೆ ಮೈಲಿಗೆಯಿಲ್ಲ! ಇದೇನು ಅಂಗಿ ಮುಟ್ಟಿದರೆ ಮೈಲಿಗೆಯೆ? ಮನದಲ್ಲಿ ಅಂದುಕೊಂಡೆ. ಅವರನ್ನು ಕೇಳುವ ಧೈರ್ಯವೆಲ್ಲಿತ್ತು! ಆದರೂನು ಅವರ ಈ ದೃಶ್ಯ ಸತ್ಯ ಶುದ್ಧ ಕಾಯಕದ ದ್ಯೋತಕವಾಗಿತ್ತು.

ಸಹೃದಯರು ಎಂಬುದಕ್ಕೆ ಮತ್ತೊಂದು ಉದಾಹರಣೆ, ಪೂಜ್ಯರಿಗೆ ವಿದ್ಯಾರ್ಥಿಗಳೆಂದರೆ ಪಂಚಪ್ರಾಣ. ಭಕ್ತಿಭಂಡಾರಿ ಬಸವಣ್ಣನವರು ಜಂಗಮಪ್ರೇಮಿಯಾದರೆ, ಪೂಜ್ಯರು ವಿದ್ಯಾರ್ಥಿಪ್ರೇಮಿಗಳು. ವಿದ್ಯಾರ್ಥಿಗಳು ಯಾರೇ ಪ್ರಸಾದನಿಲಯಕ್ಕೆ ಸೇರಲು ಬಂದರೆ ಯಾರಿಗೂ ಇಲ್ಲವೆನ್ನುತ್ತಿರಲಿಲ್ಲ. ಆದರೆ ವಿದ್ಯಾರ್ಥಿಗಳನ್ನು ನಿಲಯಕ್ಕೆ ಸೇರಿಸಿಕೊಳ್ಳಲು ಇವರು ಅನುಸರಿಸುತ್ತಿದ್ದ ರೀತಿ ಒಂದು ರೀತಿಯ ಇಕ್ಕಟ್ಟಿನ ಪರಿಸ್ಥಿತಿಯನ್ನು ವಿದ್ಯಾರ್ಥಿಗಳಿಗೆ ಒಡ್ಡಿತ್ತು. ಪೂಜ್ಯರು ಸೇರಲು ಬಂದ ವಿದ್ಯಾರ್ಥಿಗಳನ್ನು 'ಆಗ ಬಾ. ಈಗ ಬಾ. ಹೋಗಿ ಬಾ. ನಾಳೆ ಬಾ' ಎಂದು ಹೇಳುತ್ತ ಕೊನೆಗೆ ಹೇಳಿದಂತೆ ಬಿಡದೆ ಬಂದವರನ್ನು ಹಾಸ್ಟಲಿಗೆ ಸೇರಿಸಿಕೊಳ್ಳುತ್ತಿದ್ದರು. ಈ ರೀತಿಯ ಪರಿಯನ್ನು ನೋಡುತ್ತಿದ್ದ ಆತ್ಮೀಯ ಭಕ್ತರೊಬ್ಬರು ಪ್ರಶ್ನಿಸಿದ್ದುಂಟು: 'ಅಲ್ಲಾ ಬುದ್ಧಿ, ವಿದ್ಯಾರ್ಥಿಗಳನ್ನು ಅಷ್ಟು ಸಾರಿ ಏಕೆ ಸುತ್ತಿಸುತ್ತೀರಿ. ಬಂದ ದಿನವೇ ಕೊಟ್ಟರೆ ತಮಗೂ ಸಮಯ ಉಳಿಯುತ್ತೆ. ಅವರಿಗೂ ಕಷ್ಟ ತಪ್ಪುತ್ತೆ'. ಪೂಜ್ಯರು ಉತ್ತರಿಸಿದ್ದು ಹೀಗೆ: "ನಿಜವಾಗಿಯೂ ಬಡವನಾದವನು ಎಷ್ಟು ಸಾರಿ ಮತ್ತೆ ಬಂದು ನೋಡು ಎಂದು ಹೇಳಿದರೂ ಅವನು ಬಂದೇ ಬರುತ್ತಾನೆ. ಏಕೆಂದರೆ ಅವನಿಗೆ ಪ್ರಸಾದದ ಅವಶ್ಯಕತೆಯಿದೆ. ಸ್ವಲ್ಪ ಅನುಕೂಲವಿರುವ ವಿದ್ಯಾರ್ಥಿ ಮತ್ತೆ ಮತ್ತೆ ಬರಲಾರ. ಹೀಗೆ ಮಾಡುವುದು ಒಬ್ಬ ಬಡ ವಿದ್ಯಾರ್ಥಿಗೆ ಅನುಕೂಲ ಮಾಡಿದಂತಾಗುವುದಿಲ್ಲವೆ!"

ಗುರುವರ್ಯರು ಎಂದೂ ಯಾವ ವಿದ್ಯಾರ್ಥಿಯನ್ನು ನೀನು ಸಂಸ್ಥೆಗೆ ಸಹಾಯ ಮಾಡು ಎಂದು ಕೇಳುತ್ತಿರಲೇ ಇಲ್ಲ. ಒಂದು ದಿನ ಪೂಜ್ಯರನ್ನು ನೋಡಲು ಮಠಕ್ಕೆ ಹೋದೆ. ಕ್ಯಾತನಹಳ್ಳಿ ಪೂಜ್ಯರಾದ ಶ್ರೀ ಶಿವಪ್ರಭುಸ್ವಾಮಿಗಳವರು ಬುದ್ಧಿಯವರು ಕುಳಿತುಕೊಳ್ಳುತ್ತಿದ್ದ ಕೊಠಡಿಯ ಪಕ್ಕದ ಹೊರಾಂಗಣದ ಕೊಠಡಿಯಲ್ಲಿ ಕುಳಿತಿದ್ದರು.

ನಾನು ಕ್ಯಾತನಹಳ್ಳಿ ಬುದ್ಧಿಯವರಿಗೆ ನಮಸ್ಕರಿಸಿ ಪಕ್ಕದಲ್ಲೇ ನಿಂತೆ. ಕ್ಯಾತನಹಳ್ಳಿ ಶ್ರೀಗಳು ಭಕ್ತರೊಬ್ಬರಿಗೆ 'ಕ್ಲಾಸ್' ತೆಗೆದುಕೊಂಡಿದ್ದರು. ಅವರನ್ನು ಪ್ರಶ್ನಿಸುತ್ತಿದ್ದರು. ನೀವು ನಮ್ಮ ಸಂಸ್ಥೆಯ ನಿಲಯದ ವಿದ್ಯಾರ್ಥಿಯಾಗಿದ್ದವರಲ್ಲವೆ. ಸಂತೋಷ. ಈಗೇನು ಬುದ್ಧಿಯವರನ್ನು ನೋಡಲು ಬಂದದ್ದು! ಈಗ ನೀವು ಹೇಳಿದಂತೆ ನಿಮ್ಮ ಮಗನಿಗೆ ಇಂಜಿನಿಯರ್ ಕಾಲೇಜಿನಲ್ಲಿ ಸೀಟು ಕೇಳಲು ಬಂದಿದ್ದೀರಿ. ಅದು ಸರಿಯೇ, ಇಷ್ಟು ವರ್ಷಗಳಾದ ಮೇಲೆ ಮಠಕ್ಕೆ ಬಂದಿದ್ದೀರಲ್ಲ? ನೀವು ಇದ್ದ ಸಂಸ್ಥೆ ನಿಮಗೆ ಇದುವರೆಗೂ ಜ್ಞಾಪಕವೇ ಬರಲಿಲ್ಲವೆ. ನೀವು ನಮ್ಮ ಸಂಸ್ಥೆಯಿಂದ ಪದವಿ ಪಡೆದು ಉದ್ಯೋಗದಲ್ಲಿದ್ದು, ಸುಖಸಂಸಾರಿಗಳಾಗಿದ್ದೀರಿ. ಮಗನಿಗೆ ಸೀಟು ಬಯಸುತ್ತೀರಿ. ನಿಮ್ಮಂತಹ ಸಹಸ್ರ ಸಹಸ್ರ ಜನ ಸಂಸ್ಥೆಯಿಂದ ಅನುಕೂಲ ಪಡೆದಿದ್ದೀರಿ. ನೀವು ಸಂಸ್ಥೆಗೆ ಅನುಕೂಲ ಮಾಡಬೇಡವೆ? ಹೋಗಲಿ ಬಿಡಿ. ಸುಮ್ಮನೆ ನಿಮ್ಮನ್ನು ಕೇಳಿದೆ ಅಷ್ಟೆ. ಬುದ್ಧಿಯವರು ಒಳಗಿದ್ದಾರೆ. ಹೋಗಿ ನೋಡಿ. ಅವರು ಯಾರಿಗೂ ಇಲ್ಲವೆನ್ನುವುದಿಲ್ಲ. ಅಂತೆಯೇ ಅವರು ಬುದ್ಧಿಯವರನ್ನು ಹೋಗಿ ನೋಡಿ ತಮ್ಮ ಕೆಲಸ ಪೂರೈಸಿಕೊಂಡರು. ಇದೆಲ್ಲವನ್ನು ಕೇಳುತ್ತ ನಿಂತಿದ್ದ ನಾನು ನನಗೆ ನಾನೇ ಪ್ರಶ್ನಿಸಿಕೊಂಡೆ. ಹೌದಲ್ಲವೆ? ನಾನೇನು ಮಾಡಿದ್ದೇನೆ? ಮಾಡಲೇಬೇಕೆಂದು ದೃಢನಿಶ್ಚಯ ಮಾಡುತ್ತ ಬುದ್ಧಿಯವರನ್ನೂ ನೋಡದೆ ಹಾಗೆಯೇ ನಿಲಯದತ್ತ ಹೆಜ್ಜೆ ಹಾಕಿದೆ. ನಿಲಯದಲ್ಲಿ ಬೆಳಗಿನ ಊಟದ ವ್ಯವಸ್ಥೆ ನಡೆದಿತ್ತು. ನಿಲಯಪಾಲಕನಾಗಿದ್ದ ನಾನು ಯಾವುದೊ ತುರ್ತು ಕೆಲಸಕ್ಕಾಗಿ ಬುದ್ಧಿಯವರನ್ನು ನೋಡಲು ಹೋಗಿದ್ದು ಅವರನ್ನು ನೋಡದೆ ಹಾಗೆಯೇ ಹಿಂತಿರುಗಿದ್ದೆ.

**ಸ್ವಾತಂತ್ರ್ಯವೀರರನ್ನು ಸೃಷ್ಟಿಸಿದ ಮಹಾನ್ ಸಂತರು:** ಪೂಜ್ಯಪಾದರು ಪ್ರಸಾದನಿಲಯಗಳಲ್ಲಿದ್ದ ಯುವಕರನ್ನು ರಾಷ್ಟ್ರಾಭಿಮಾನಿಗಳಾಗಿ ಬೆಳೆಸುವ ವಾತಾವರಣವನ್ನು ಸೃಷ್ಟಿಸಿದರು. 1942ನೇ "ಕ್ವಿಟ್ ಇಂಡಿಯಾ ಮೂವ್‌ಮೆಂಟ್' ಚಳವಳಿಯಲ್ಲಿ ಹಾಗೂ ಮೈಸೂರಿನಲ್ಲಿ ಜರುಗಿದ ಚಳವಳಿಗಳಲ್ಲಿ ನಿಲಯದ ವಿದ್ಯಾರ್ಥಿಗಳು ಭಾಗಿಗಳಾಗಿದ್ದರು. ಹೆಸರಾಂತರಾಗಿಬೊಮ್ಮನಹಳ್ಳಿ ಬಿ.ಪಿ. ನಾಗರಾಜಮೂರ್ತಿಯವರು, ದೇವನೂರಿನ ಡಿ.ಎಂ. ಸಿದ್ದಯ್ಯನವರು, ಹೆಜ್ಜಿಗೆ ಲಿಂಗಣ್ಣನವರು, ಕಿನಕಹಳ್ಳಿ ಶಾಂತಮೂರ್ತಿಯವರು ಇನ್ನೂ ಮುಂತಾದ ಯುವ ವಿದ್ಯಾರ್ಥಿಗಳು ಈ ಚಳವಳಿಗಳಲ್ಲಿ ಭಾಗವಹಿಸಿದ್ದರು. ಸಾವಿರಾರು ಕಾಲೇಜು ವಿದ್ಯಾರ್ಥಿಗಳು ತಮ್ಮ ತರಗತಿಗಳನ್ನು ತ್ಯಜಿಸಿ ಸ್ವಾತಂತ್ರ್ಯ ಚಳವಳಿಯಲ್ಲಿ ಸಿಂಹದಮರಿಗಳಂತೆ ಘರ್ಜಿಸಿದ್ದರು. ಪೂಜ್ಯರು ಇಂತಹ ವಿದ್ಯಾರ್ಥಿಗಳನ್ನು ಕಂಡು ಹಿರಿಹಿರಿ ಹಿಗ್ಗುತ್ತಿದ್ದರು. ಒಂದೊಮ್ಮೆ 1962 ರಲ್ಲಿ ಚೀನಾದೊಡನೆ ಸಮರ ಪ್ರಾಪ್ತಿಯಾಗಿ ರಾಷ್ಟ್ರದ ಆರ್ಥಿಕ ಮುನ್ನಡೆಗೆ ಧಕ್ಕೆ ಬಂದಿತ್ತು. ಇಂತಹ ಸಮಯದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಾರ್ವಜನಿಕ ಸಭೆ ಕರೆದು ಸಹಾಯ ಕೇಳಿದ್ದರು. ಇಂತಹ ಸಂದರ್ಭದಲ್ಲಿ ಪೂಜ್ಯಪಾದರು ತಮ್ಮಲ್ಲಿದ್ದ ಯಾರೋ ಭಕ್ತರು ಆ ದಿನ ತಾನೇ ಅರ್ಪಿಸಿದ್ದ ಚಿನ್ನದ ಉಂಗುರವನ್ನು ದಾನವಾಗಿ ನೀಡಿ, ಸಭಿಕರು, ಭಕ್ತರು ಬೆರಗಾಗುವಂತೆ ಮಾಡಿದ್ದರು.

ಇಷ್ಟಲ್ಲದೆ ನಿಲಯದ ವಿದ್ಯಾರ್ಥಿಗಳು ಓದಿನಲ್ಲಾಗಲಿ, ಚರ್ಚಾಸ್ಪರ್ಧೆಗಳಲ್ಲಾಗಲಿ, ನಾಟಕಗಳಲ್ಲಾಗಲಿ, ಕ್ರೀಡೆಗಳಲ್ಲಾಗಲಿ ಭಾಗವಹಿಸಿ ಬಹುಮಾನ ಪಡೆದವರನ್ನು ಅಂದು ವಿಶ್ವವಿದ್ಯಾನಿಲಯ ಪ್ರತಿ ವರ್ಷವೂ ನಡೆಸುತ್ತಿದ್ದ ಘಟಿಕೋತ್ಸವದ ದಿನ ನಿಲಯದಲ್ಲೂ ಆ ದಿನವನ್ನು ಆಚರಿಸಿ ತಮ್ಮಲ್ಲಿದ್ದ ರ‍್ಯಾಂಕ್ ವಿಜೇತರಿಗೆ, ಇತರರಿಗೆ ಬಹುಮಾನಗಳನ್ನಿತ್ತು ಅವರನ್ನು ತಮ್ಮ ಅಭಯದ ನುಡಿಗಳಿಂದ ಪ್ರೋತ್ಸಾಹಿಸುತ್ತಿದ್ದರು.

ಹಬ್ಬದ ದಿನಗಳಂದು ಪ್ರತಿ ನಿಲಯದಲ್ಲೂ ವಿಶೇಷ ಔತಣವನ್ನು ಏರ್ಪಡಿಸಲಾಗುತ್ತಿತ್ತು. ಸ್ವಾಮೀಜಿಯವರೆ ಸಿಹಿತಿಂಡಿಗಳನ್ನು ಹೆಚ್ಚಾಗಿ ತಯಾರಿಸುವಂತೆ ಹೇಳಿ ತಾವೇ ವಿದ್ಯಾರ್ಥಿಗಳಿಗೆ ಬಡಿಸಿ ಆನಂದತುಂದಿಲರಾಗುತ್ತಿದ್ದರು. ಯಾರು ಹೆಚ್ಚಿಗೆ ಸಿಹಿ ತಿಂಡಿ ತಿನ್ನುವರೋ ಅವರಿಗೂ ಕೂಡ ಬಹುಮಾನ ಮೀಸಲಾಗಿತ್ತು.

ಅಂದು ಸುತ್ತೂರು ಹಾಸ್ಟಲಿನ ವಾಣಿವಿಲಾಸ ರಸ್ತೆಯಲ್ಲಿರುವ ವಿದ್ಯಾರ್ಥಿಗಳು ಭಾನುವಾರದ ಹುರುಳಿ ಸಾರಿನ ರುಚಿಯನ್ನು ಮರೆಯುತ್ತಿರಲಿಲ್ಲ. ಆ ಸಾರಿನ ಘಮಘಮ ರಸ್ತೆಯಲ್ಲಿ ಹೋಗುವವರ ಮೂಗಿಗೆ ಬಡಿಯುತ್ತಿತ್ತು. ಈಗಲೂ ಅದೇ ಹುರುಳಿಕಟ್ಟಿನ ಸಾರು ಸುತ್ತೂರು ಶ್ರೀಮಠದಲ್ಲಿ ಅತ್ಯಂತ ರುಚಿಕಟ್ಟಿನ ಪದಾರ್ಥವಾಗಿ ಹೆಸರು ಪಡೆದಿದೆ.

ಸ್ವಾಮೀಜಿಯವರು ತಮ್ಮ ನಿವಾಸಕ್ಕೆ ಬರುತ್ತಿದ್ದ ಭಕ್ತರಿಗೆ ನೀಡುತ್ತಿದ್ದ ಉಪಚಾರವಂತೂ ಹೇಳತೀರದು. ಒಂದು ಸಾರಿ ಅವರ ನಿವಾಸದಲ್ಲಿ ಊಟ ಮಾಡಿದ ಅಥವಾ ತಿಂಡಿ ತಿಂದವರಿಗೆ ಅದನ್ನು ಮರೆಯಲು ಸಾಧ್ಯವಾಗುತ್ತಲೇ ಇರಲಿಲ್ಲ. ಇದಕ್ಕೆ ಕಾರಣವೆಂದರೆ ರುಚಿರುಚಿಯಾಗಿ ಅಡುಗೆ ಮಾಡುತ್ತಿದ್ದ ವಾಟಾಳಿನ ಪಾಕಶಾಸ್ತ್ರಜ್ಞ ಶಿವಯ್ಯ ಉದಾಹರಿಸುವುದಾದರೆ ಆಗಾಗ್ಗೆ ಬುದ್ಧಿಯವರನ್ನು ನೋಡಲು ಬರುತ್ತಿದ್ದ ವಿದ್ವಾನ್ ಬಿ. ಶಿವಮೂರ್ತಿಶಾಸ್ತ್ರಿಗಳು ಒಂದು ಬಾರಿ ನಾನು ಬುದ್ಧಿಯವರು ವಾಸವಾಗಿದ್ದ ಎಂ.ಡಿ. ಶಿವನಂಜಪ್ಪನವರ ಪಕ್ಕದ ಮನೆ ಅಥವಾ ಈಗಿನ ಸಿದ್ದಪ್ಪ ಸರ್ಕಲ್ ಹತ್ತಿರವಿರುವ ಜೆಎಸ್‌ಎಸ್ ಪ್ರೌಢಶಾಲೆಯ ಎದುರು ಮನೆಯಲ್ಲಿದ್ದಾಗ, ಅವರನ್ನು ನೋಡಲು ಹೋದೆ. ನಾನು ಆಗ ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿ. ನಾನು ವಾಸ್ತವ್ಯವಿದ್ದ ನಿಲಯ ಮೇನ್ ಬಿಲ್ಡಿಂಗ್. ಇಲ್ಲಿ ವಾಸವಾಗಿದ್ದ ಪ್ರತಿಯೊಬ್ಬ ವಿದ್ಯಾರ್ಥಿಯು ತಿಂಗಳಿಗೆ ಎರಡು ರೂಪಾಯಿ ಲೈಟ್ ಛಾರ್ಜು ಕೊಡಬೇಕಿತ್ತು. ಲೈಟ್ ಛಾರ್ಜು ಕೊಡಲು ನನ್ನಲ್ಲಿ ಹಣವಿರಲಿಲ್ಲ. ಅದನ್ನು ಕೊಡದಿದ್ದರೆ ಪ್ರಸಾದ ನಿಲ್ಲಿಸಲಾಗುತ್ತಿತ್ತು. ಈ ಕಾರಣ ನಾನು ಬುದ್ಧಿಯವರಿಗೆ ಅಡ್ಡಬಿದ್ದು ವಿಷಯವನ್ನು ತಿಳಿಸುವಷ್ಟರಲ್ಲಿಯೇ ವಿದ್ವಾನ್ ಬಿ. ಶಿವಮೂರ್ತಿಶಾಸ್ತ್ರಿಗಳ ಆಗಮನವಾಯಿತು. ಬುದ್ಧಿಯವರು ನಗುಮೊಗದಿಂದ ಅವರನ್ನು ಬರಮಾಡಿಕೊಂಡರು. ಕುಶಲ ವಿಚಾರಿಸಿದರು. ತಕ್ಷಣವೇ ಸನಿಹದಲ್ಲಿ ನಿಂತಿದ್ದ ನನ್ನನ್ನು ಕುರಿತು ಸ್ವಾಮೀಜಿಯವರು ಅಡುಗೆ ಶಿವಣ್ಣನಿಗೆ ಶಿವಮೂರ್ತಿಶಾಸ್ತ್ರಿಗಳು ಬಂದಿದ್ದಾರೆಂದು ತಿಳಿಸು ಎಂದು ಕಳುಹಿಸಿದರು. ಮತ್ತೆ ನನ್ನನ್ನು ಕರೆಯಿಸಿ ಜೇಬಿನಿಂದ ಒಂದಷ್ಟು ಐದು, ಹತ್ತರ ನೋಟುಗಳು ಮತ್ತು

ಚಿಲ್ಲರೆಯನ್ನು ಕೊಟ್ಟು ಶಿವಯ್ಯನನ್ನು ಕೇಳಿ ಏನೇನು ಸಾಮಾನು ಬೇಕು ಅದನ್ನು ತಂದುಕೊಡು ಮತ್ತು ನೀನು ಶಾಸ್ತ್ರಿಗಳು ಬೆಂಗಳೂರಿಗೆ ಹಿಂತಿರುಗುವವರೆಗೆ ಕಾಲೇಜಿಗೂ ಹೋಗದೆ ಇಲ್ಲಿಯೇ ಇರು ಎಂದು ಅಪ್ಪಣೆ ಕೊಡಿಸಿದರು. ಶಾಸ್ತ್ರಿಗಳು ಬೆಂಗಳೂರಿಗೆ ಹೊರಟ ದಿನ ನಾನೂ ನಿಲಯಕ್ಕೆ ಹೋಗಲು ಕೇಳಿ ಉಳಿದಿದ್ದ ಚಿಲ್ಲರೆ ಹಣವನ್ನು ವಾಪಸ್ಸು ಕೊಡಲು ಹೋದೆ. ನೀನೇ ಇಟ್ಟುಕೊ ಎಂದರು. ಆ ವರ್ಷವೆಲ್ಲ ಲೈಟ್ ಫೀಯನ್ನು ಆ ಹಣದಲ್ಲಿಯೇ ಪಾವತಿಸಿದೆ ಮತ್ತು ಉಳಿದದ್ದನ್ನು ಬಿ.ಎ. ಪರೀಕ್ಷೆ ಪಬ್ಲಿಕ್ ಶುಲ್ಕಕ್ಕೆ ಬಳಸಿಕೊಂಡೆ.

**ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಬೇಕಾಗಿದ್ದವರು:** ಜಗದ್ಗುರುಗಳು ಎಲ್ಲಾ ಜಾತಿಯವರಿಗೂ ತಮ್ಮ ನಿಲಯದಲ್ಲಿ ಆಶ್ರಯ ನೀಡುತ್ತಿದ್ದರು. ಕೋ. ಚನ್ನಬಸಪ್ಪನವರು ಒಬ್ಬ ಮುಸ್ಲಿಂ ವಿದ್ಯಾರ್ಥಿಯನ್ನು ಪೂಜ್ಯರ ಪ್ರಸಾದನಿಲಯಕ್ಕೆ ಸೇರಿಸಿದ್ದರು. ಸುತ್ತೂರು ಪ್ರಸಾದನಿಲಯಗಳೆಂದರೆ ಮಾನವೀಯತೆಯೆ ಮೈವೆತ್ತಿ ನಿಂತಿದ್ದ ತಾಣಗಳಾಗಿದ್ದುವೆಂದರೆ ಅತಿಶಯೋಕ್ತಿಯಲ್ಲ.

ಒಮ್ಮೆ 1980ರಲ್ಲಿ ನಾನು ಪೋಸ್ಟ್‌ಡಾಕ್ಟರಲ್ ವರ್ಕ್‌ಗೆ ಹೈದರಾಬಾದಿನ ಎ.ಎಸ್.ಆರ್.ಸಿ.ಯಲ್ಲಿ ಒಂದು ತಿಂಗಳ ಕಾಲವಿದ್ದು, ರೈಲಿನಲ್ಲಿ ಮೈಸೂರಿಗೆ ಬರುತ್ತಿದ್ದೆ. ಸಿಕಂದರಾಬಾದ್‌ನಲ್ಲಿ ಪ್ರಯಾಣಿಕರೊಬ್ಬರು ನಾನು ಕುಳಿತಿದ್ದ ಡಬ್ಬಿಗೆ ಬಂದು ನನ್ನ ಪಕ್ಕದಲ್ಲಿಯೇ ಕುಳಿತುಕೊಂಡರು. ಪ್ರಾಸಂಗಿಕವಾಗಿ ಉಭಯಕುಶಲೋಪರಿಯ ನಂತರ ಪರಸ್ಪರ ಪರಿಚಯವಾಯಿತು. ಅವರು ನನ್ನ ಹಾಗೂ ಜಗದ್ಗುರುಗಳ ಸಂಬಂಧವನ್ನು ಕೇಳಿ ಅಪಾರವಾದ ಆನಂದಕ್ಕೊಳಗಾದುದಲ್ಲದೆ, ನಾನೂ ಕೂಡ ಪೂಜ್ಯರ ಕೃಪೆಗೆ ಒಳಗಾಗಿದ್ದೆ. ನಾನು ಹುಟ್ಟಿನಲ್ಲಿ ಬ್ರಾಹ್ಮಣ. ಬಡತನದ ಬೇಗೆಯಲ್ಲಿದ್ದವನು. ಹೇಗೋ ಮೈಸೂರಿಗೆ ಬಂದು ವಾರಾನ್ನದ ಮೂಲಕ ವಿದ್ಯಾಭ್ಯಾಸ ಪಡೆಯುತ್ತಿದ್ದೆ. ಒಂದೊಂದು ದಿನ ಊಟವಿಲ್ಲದೆ ಉಪವಾಸವಿರುತ್ತಿದ್ದೆ. ಹೇಗಾದರೂ ಈ ಉಪವಾಸದ ಬವಣೆಯಿಂದ ಮುಕ್ತನಾಗಲು ನನ್ನ ಅಧ್ಯಯನಕ್ಕೆ ಹೆಚ್ಚಿನ ಸಮಯ ಬಳಸಿಕೊಳ್ಳಲು ನನಗೆ ಎರಡು ಹೊತ್ತು ಪ್ರಸಾದ ನೀಡುವವರ ಅವಶ್ಯಕತೆ ಇತ್ತು. ಅಂದು ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಮೈಸೂರಿನಲ್ಲಿರುವ ವಿದ್ಯಾರ್ಥಿನಿಲಯಗಳು ಹೇಗೆ ಬಡ ವಿದ್ಯಾರ್ಥಿಗಳಿಗೆ ಆಶ್ರಯ ನೀಡುತ್ತಿವೆ ಎಂಬುದನ್ನು ತಿಳಿದಿದ್ದೆ. ಜಗದ್ಗುರುಗಳು ದಯಾಮಯಿಗಳು. ಯಾರೇ ವಿದ್ಯಾರ್ಥಿಯಾಗಲಿ ಅವರಿಗೆ ಸಹಾಯ ಮಾಡುತ್ತಾರೆಂಬ ಸುದ್ದಿಯನ್ನು ತಿಳಿದಿದ್ದೆ. ಈ ಕಾರಣ ನಾನು ಬುದ್ಧಿಯವರನ್ನು ಕಂಡು ನನ್ನ ಕಷ್ಟಗಳನ್ನು ಹೇಳಿಕೊಂಡೆ. ನಾನು ತಮ್ಮ ನಿಲಯದಲ್ಲಿದ್ದುಕೊಂಡು ಪ್ರಸಾದದ ಸೌಲಭ್ಯ ಪಡೆಯಲು ಸಾಧ್ಯವಿಲ್ಲ. ಕಾರಣ ನಮ್ಮ ತಾಯಿಯವರು ಸಂಪ್ರದಾಯಸ್ಥರು. ಅವರಿಗೆ ಬೇರೆ ಧರ್ಮದ ಹಾಸ್ಟಲ್‌ನಲ್ಲಿ ಸೇರುವುದು ಇಷ್ಟವಿಲ್ಲ. ನಾನು ನನ್ನ ತಂದೆಯನ್ನು ಚಿಕ್ಕಂದಿನಲ್ಲೇ ಕಳೆದುಕೊಂಡೆ. ನನ್ನ ತಾಯಿಯವರೆ ಹೇಗೋ ನನ್ನನ್ನು ಸಾಕಿ ಇಲ್ಲಿಯವರೆಗೆ ವಿದ್ಯಾರ್ಜನೆಗೆ ಅವಕಾಶ ನೀಡಿ ಬಹಳ ಕಷ್ಟದಲ್ಲಿದ್ದಾರೆ.

ಆದರೆ ನಮ್ಮ ತಾಯಿಯವರನ್ನು ಯಾವ ಕಾರಣಕ್ಕೂ ನೋಯಿಸಲಾರೆ. ಆದರೂನು ನನಗೆ ತಮ್ಮ ಸಹಾಯ ಬೇಕಿದೆ. ನನಗೆ ಪಡಿಯನ್ನು ಕೊಡಿಸಿಕೊಟ್ಟರೆ ಸಾಕು. ಅದರಿಂದ ಅಡುಗೆ ಮಾಡಿಕೊಂಡು ನನ್ನ ಓದಿಗೆ ಹೆಚ್ಚಿನ ಸಮಯ ಬಳಸಿಕೊಳ್ಳುತ್ತೇನೆಂದು ಪೂಜ್ಯರಲ್ಲಿ ಅರಿಕೆ ಮಾಡಿಕೊಂಡೆ. ಅವರು ಈ ಬಡವನನ್ನು ಅನುಗ್ರಹಿಸಿದರು. ಇಂದು ನಾನು ಹೈದರಾಬಾದಿನಲ್ಲಿ ಕ್ಲಾಸ್ ಒನ್ ಆಫೀಸರ್ ಆಗಿದ್ದೇನೆ. ಒಂದು ವೇಳೆ ಜಗದ್ಗುರುಗಳು ನನಗೆ ಸಹಾಯ ನೀಡದಿದ್ದರೆ ನನ್ನ ಉನ್ನತಿಯನ್ನು ಹೀಗೆ ಕಂಡುಕೊಳ್ಳಲು ಸಾಧ್ಯವಾಗುತ್ತಿರ ಲಿಲ್ಲ. ನಾನು ಎಂದೂ ಅವರ ದಿವ್ಯಪಾದಗಳನ್ನು ನೆನಪಿಸಿಕೊಳ್ಳುತ್ತಲೇ ಇರುತ್ತೇನೆ. ನನ್ನವಳಿಗೆ, ಮಕ್ಕಳಿಗೆ, ಬಂಧುಗಳಿಗೆ ಈ ವಿಷಯವನ್ನು ತಿಳಿಸಿ ಸಂತೋಷಪಡುತ್ತಿರುತ್ತೇನೆ. ಬಡ ಬ್ರಾಹ್ಮಣನ ಕುಟುಂಬದವನಾಗಿದ್ದ ನಾನು ಇಂದು ಉನ್ನತಾಧಿಕಾರಿಯಾಗಿ ಕೈತುಂಬ ಸಂಬಳ ಪಡೆಯುತ್ತಿದ್ದೇನೆ. ನೆಮ್ಮದಿಯ ಬಾಳು ನನ್ನದಾಗಿದೆ. ಮೈಸೂರಿಗೆ ಹೋದಾಗಲೆಲ್ಲ ಗುರುಗಳ ದರ್ಶನವನ್ನು ಪಡೆದೇ ಬರುತ್ತಿರುತ್ತೇನೆ. ನಿಜಕ್ಕೂ ನನ್ನ ಪುಣ್ಯಕ್ಕೆ ಎಣೆಯಿಲ್ಲ. ದಯೆಯಿಟ್ಟು ಶ್ರೀಪಾದಕ್ಕೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸಿ, ಕೃಷ್ಣಮೂರ್ತಿ ಸಿಕ್ಕಿದ್ದನೆಂದು ತಿಳಿಸಿರೆಂದು ಹೇಳುತ್ತ ತಾವು ಇಳಿಯಬೇಕಿದ್ದ ಸ್ಟೇಷನ್ನಿನಲ್ಲಿ ಇಳಿದು ಹೊರನಡೆದು ಮರೆಯಾದರು. ಪೂಜ್ಯರ ದಿವ್ಯ ನೆನಪು ಭಕ್ತರ ಹೃನ್ಮನದಲ್ಲಿ ಹೇಗೆ ಮನೆಮಾಡಿಕೊಂಡಿದೆ, ಅವರ ಇರವಿನ ವ್ಯಾಪ್ತಿಯಲ್ಲಿ ಎಲ್ಲೆಲ್ಲೂ ಎಲ್ಲೆ ಮೀರಿ ಹರಡಿಕೊಂಡಿದೆ. 'ನಾನು ಪುಣ್ಯವಂತನೆ, ಈಗಲೂ ಎಂದೆಂದೂ ಅವರ ಆಶ್ರಯದಲ್ಲಿದ್ದೀನಲ್ಲ'. ಇದಕ್ಕಿಂತ ಮತ್ತೇನು ಬೇಕೆಂದು ಸಂತಸಗೊಂಡೆ. ಮೈಸೂರಿಗೆ ಬಂದ ನಂತರ ಜಗದ್ಗುರುಗಳಿಗೆ ವಿಷಯವನ್ನು ಮುಟ್ಟಿಸಿದೆ. ಅವರು ಕೇಳಿ ನಗುವಿನೊಡನೆ 'ಅವನು ಸಿಕ್ಕಿದ್ದನಾ, ಸಂತೋಷ. ಚೆನ್ನಾಗಿದ್ದಾನಲ್ಲ' ಎನ್ನುತ್ತಾ ಅಪಾರ ಸಂತೋಷದಲ್ಲಿ ಲೀನವಾದರು.

ಹೀಗೆ ಪೂಜ್ಯರಲ್ಲಿ ಎಲ್ಲರನ್ನು ಒಂದೇ ದೃಷ್ಟಿಯಲ್ಲಿ ನೋಡುವ ಆಧ್ಯಾತ್ಮಿಕ ನೋಟವಿತ್ತು.

ನನಗೆ ವೈಯಕ್ತಿಕವಾಗಿ ಜಗದ್ಗುರುಗಳು ತಾಯಿ, ತಂದೆ, ಬಂಧು, ಬಳಗ ಎಲ್ಲವೂ ಆಗಿದ್ದರು. ಇಂದು ನಾನೊಬ್ಬ ಉಪಯುಕ್ತ ವ್ಯಕ್ತಿಯಾಗಿ, ಕಿಂಚಿತ್ತಾದರೂ ಸಮಾಜಕ್ಕೆ ಉಪಕಾರಿಯಾಗಿರುವ ಅರ್ಹತೆಯನ್ನು ಅವರೇ ದಯಪಾಲಿಸಿದ್ದು. ದಿಟ, ನನಗೆ ಜನ್ಮ ನೀಡಿದ ತಾಯಿ ತಂದೆಯರು ಇಹದಿಂದ ಮರೆಯಾದ ದಿನಾಂಕಗಳು ನೆನಪಿನಲ್ಲುಳಿದಿಲ್ಲ. ಆದರೆ ಪೂಜ್ಯರು ಈ ಜಗತ್ತಿಗೆ ಬೆಳಕಾಗಿ ಉದಯಿಸಿದ ದಿನ 29.1.1916 ಮತ್ತು ಬಯಲಾದ ದಿನ 6.12.1986 – ಇವು ಎಂದೆಂದೂ ಮರೆಯುವುದಿಲ್ಲ. ಪುಣ್ಯಾತ್ಮರು ಮಹಾನ್ ಸಂತರಾಗಿ ಎಲ್ಲರಿಗೂ ಬೇಕಾಗಿದ್ದವರು ಇಹದಿಂದ ಮರೆಯಾದರೂ ಅನಂತ ಕೋಟಿ ಭಕ್ತರ ಹೃದಯದಲ್ಲಿ ರಾರಾಜಿಸುತ್ತಿದ್ದಾರೆ. ಅವರು ಈಗಲೂ ಇದ್ದಾರೆ. ಅವರಿಲ್ಲ ಎನ್ನುವುದು ಸಟೆಯಾಗುತ್ತದೆ.

ಜಗದ್ಗುರುಗಳು ಅಣ್ಣನವರಂತೆ 'ನನಗಾಗಿ ಎಂದೊಡೆ ನಿನ್ನಾಣೆ ಶಿವರಾತ್ರೀಶ್ವರ' ಎಂಬಂತೆ ಬಾಳಿದರು.

ಕಣ್ಣಗಳು ತುಂಬಿದ ಬಳಿಕ ನೋಡಲಿಲ್ಲ
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನವು ತುಂಬಿದ ಬಳಿಕ ನೆನೆಯಲಿಲ್ಲ
ಮಹಂತ ಕೂಡಲ ಸಂಗಮದೇವ
ಎಂಬಂತೆ ಬಯಲಾದರು

ಅವರು ಈಗಲೂ ಎಲ್ಲೆಲ್ಲೂ ಇದ್ದಾರೆಂಬುದನ್ನು ನಮ್ಮ ಈಗಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಪವಾಡಸದೃಶ ರೀತಿಯಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕನಸುಗಳನ್ನು ನೂರ್ಮಡಿಯಾಗಿ ನನಸಾಗಿಸುತ್ತಿದ್ದಾರೆ. ಇವರ ಶ್ರೀಪಾದಕ್ಕೆ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

□

## ರಾಜೇಂದ್ರ ಶ್ರೀವಾಣಿ

- ಸಮಾಜದ ಅಭ್ಯುದಯಕ್ಕೆ ಯಾರು ಪ್ರಾಮಾಣಿಕವಾಗಿ ಶ್ರಮಿಸುತ್ತಾರೋ ಅವರನ್ನು ಯಾವುದೇ ಕಾರಣಕ್ಕೂ ಸಮಾಜ ಕಡೆಗಣಿಸುವುದಿಲ್ಲ.
- ಪ್ರಯತ್ನ ಸಮರ್ಪಕವಾಗಿದ್ದಾಗ ಮಾತ್ರ ಫಲಿತಾಂಶವೂ ಸಮರ್ಪಕವಾಗಿರುತ್ತದೆ.
- ದುಃಖಿಸಬೇಡಿ ಶಿವನಿಚ್ಛೆಯಿದ್ದರೆ ನಿಮ್ಮ ಬಯಕೆ ಈಡೇರುತ್ತದೆ
- ನಾವು ಎಲ್ಲೇ ಇದ್ದರೂ ನಮ್ಮ ಸಂಸ್ಕೃತಿಯನ್ನು ಮರೆಯಬಾರದು, ನಮ್ಮ ಮಕ್ಕಳಿಗೂ ಅದನ್ನು ಕಲಿಸಬೇಕು.
- ಮಠಗಳು ಅರಿವು, ಆಚಾರಗಳನ್ನು ಬಿತ್ತಿ ಬೆಳೆಸುವ ಆಧ್ಯಾತ್ಮಿಕ ಕೇಂದ್ರಗಳಾಗಬೇಕು.

# ಧರ್ಮಸೂಕ್ಷ್ಮಜ್ಞರು

ಎಚ್. ಗಂಗಾಧರನ್

**ಜ**ಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ನಾನು ನಾಲ್ಕೈದು ದಶಕಗಳ ಕಾಲ ತುಂಬ ಸಮೀಪವರ್ತಿಯಾಗಿದ್ದವನು. ಅದು ನನ್ನ ಬದುಕಿನ ಭಾಗ್ಯ. ಅವರ ಅಪೂರ್ವ ವ್ಯಕ್ತಿತ್ವಕ್ಕೆ ಸಂಪೂರ್ಣ ಶರಣಾಗಿದ್ದವನು. ಹಾಗಿದ್ದರೂ ಅವರ ವಿರಾಟ್ ವ್ಯಕ್ತಿತ್ವದ ಒಂದೆರಡು ಮುಖಗಳನ್ನು ಅರಿಯುವ ಶಕ್ತಿಯಷ್ಟೇ ನನಗಿದ್ದುದು ಎಂದು ತುಂಬ ನಮ್ರತೆಯಿಂದ ಹೇಳಬಯಸುತ್ತೇನೆ. ನಾನು ಕಂಡ ಈ ಒಂದೆರಡು ಮುಖಗಳನ್ನು ಒಂದೆರಡು ಘಟನೆಗಳನ್ನು ಆಧರಿಸಿ ಚಿತ್ರಿಸಬಯಸುತ್ತೇನೆ.

ಶ್ರೀಗಳವರ ವ್ಯಕ್ತಿತ್ವದ ಬಹುಮುಖ್ಯವಾದ ಮತ್ತು ಸಾವಿರಾರು ಜನರ ಅನುಭವಕ್ಕೆ ಬಂದಂತಹ ಮುಖವೆಂದರೆ ಅವರ ಅಂತಃಕರಣ! ಅವರ ಹೃದಯದಲ್ಲಿ ತುಂಬಿದ್ದುದೇನೆಂದರೆ ಈ ಅಂತಃಕರಣದ ಜೀವರಸ. ಯಾರನ್ನೂ ನೋಯಿಸದ ಮತ್ತು ಎಲ್ಲರಿಗೂ ಪ್ರಿಯವಾದುದನ್ನೇ ಮಾಡಬಯಸಿದ ಅಪೂರ್ವ ಅಂತಃಕರಣ.

ಅವರ ಬಿಡುವಿಲ್ಲದ ದಿನಚರಿಯಲ್ಲಿ ಅವರಿಗೆ ಸಮಯಪಾಲನೆ ಮಾಡುವುದೇ ಒಂದು ದೊಡ್ಡ ಸಮಸ್ಯೆಯಾಗಿತ್ತು. ಅಂದರೆ ಅವರು ಸಮಯಕ್ಕೆ ಸರಿಯಾಗಿ ಸಿದ್ಧವೇ ಇರುತ್ತಿದ್ದರೂ ಹೊರಡಬೇಕೆಂದಾಗ ಹೊರಡಲು ಅಥವಾ ಹಾಗೆ ಹೋಗಿ ತಲುಪಿದ ಸ್ಥಳದಿಂದ ಕಾಲಕ್ಕೆ ಸರಿಯಾಗಿ ವಾಪಸು ಬರಲು ಅನೇಕ ಸಂದರ್ಭಗಳಲ್ಲಿ ಆಗುತ್ತಿರಲಿಲ್ಲ. ಇದಕ್ಕೆ ಕಾರಣ ಅವರು ಎಲ್ಲಿಗೇ ಹೋಗಲಿ, ಅವರನ್ನು ಸುತ್ತುವರಿಯುತ್ತಿದ್ದ ಭಕ್ತರು ಮತ್ತು ಅಭಿಮಾನಿಗಳು! ಅವರ ಕಷ್ಟಸುಖಗಳನ್ನು ವಿಚಾರಿಸದೆ ಅವರ ಕ್ಷೇಮವನ್ನು ಬಯಸದೆ ಶ್ರೀಗಳವರು ಹೊರಡುವವರೇ ಅಲ್ಲ. ಹಾಗೆ ಮಾಡಿದುದೇಯಾದರೆ ಅವರೆಲ್ಲಿ ನೊಂದು ಕೊಳ್ಳುತ್ತಾರೋ ಎಂಬ ಧರ್ಮಸೂಕ್ಷ್ಮ ಅವರದು!

ಹೀಗೆ ಒಮ್ಮೆ ಬೆಂಗಳೂರಿನಲ್ಲಿ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿಯಾದ ಮೇಲೆ ನೂರಾರು ಜನ ಭಕ್ತರು ಮತ್ತು ಅಭಿಮಾನಿಗಳು ಅವರಿಗೆ ಮುತ್ತಿಗೆ ಹಾಕಿದರು ಎಂದರೇ ಸರಿ! ಆದರೆ ಅದೇ ಸಂಜೆ ಮೈಸೂರಿನಲ್ಲಿ ಬಹು ಮುಖ್ಯವಾದ ಮತ್ತೊಂದು ಕಾರ್ಯಕ್ರಮವೂ ಇತ್ತು. ಹಾಗೆಂದು ಶ್ರೀಗಳವರು ದರ್ಶನಾರ್ಥಿಗಳನ್ನು ನಿರಾಸೆಗೊಳಿಸು ವವರಲ್ಲ! ಇದರ ಪರಿಣಾಮ ಬೆಂಗಳೂರಿನಲ್ಲಿ ಸುಮಾರು ಒಂದು ಗಂಟೆಯ ವಿಳಂಬವಾಯಿತು. ಶ್ರೀಗಳವರು

ಕಾರಿನಲ್ಲಿ ಕುಳಿತುಕೊಳ್ಳುವಾಗ ಚಾಲಕ ಬಸವಯ್ಯನಿಗೆ ಆದಷ್ಟು ಜಾಗ್ರತೆ ಮೈಸೂರನ್ನು ತಲುಪುವ ಅಗತ್ಯವನ್ನು ಹೇಗೊ ತಿಳಿಸಿದ್ದರು. ಬಸವಯ್ಯನೂ ಅಷ್ಟೆ, ಶ್ರೀಗಳವರ ಇಂಗಿತವನ್ನು ಅಷ್ಟೇ ಸೂಕ್ಷ್ಮವಾಗಿ ಅರಿತುಕೊಳ್ಳುವ ಜಾಣ್ಮೆಯ ವ್ಯಕ್ತಿ. ಬೆಂಗಳೂರಿನ ಹೊರವಲಯವನ್ನು ಕಾರು ದಾಟಿದ್ದೇ ತಡ. ಬಸವಯ್ಯ ಕಾರನ್ನು ವೇಗವಾಗಿ ಓಡಿಸತೊಡಗಿದ. ಬಹುಶಃ ಕಾರು ನೂರು ಕಿ.ಮೀ.ಗೂ ಮೀರಿದ ವೇಗದಲ್ಲಿ ಓಡುತ್ತಿದ್ದಿರಬೇಕು! ಶ್ರೀಗಳವರ ಜೊತೆಗೆ ಕಾರಿನಲ್ಲಿ ಕ್ಯಾತನಹಳ್ಳಿ ಶ್ರೀಗಳವರು, ಇಂಜಿನಿಯರ್ ಪರಶಿವಮೂರ್ತಿಯವರು ಮತ್ತು ನಾನು, ಬಸವಯ್ಯನೂ ಸೇರಿ ಐದು ಜನ. ಕಾರು ಓಡುವ ವೇಗವನ್ನು ಗಮನಿಸಿದ ಕ್ಯಾತನಹಳ್ಳಿ ಶ್ರೀಗಳು ಮತ್ತು ಪರಶಿವಮೂರ್ತಿಯವರು ನಿಜಕ್ಕೂ ಆತಂಕಗೊಂಡರು. ಚಾಲಕ ಬಸವಯ್ಯ ನಿನಗೇನೋ ಆಗಿದೆ ಎಂಬಂತೆ ಅವನನ್ನು ಎರಡು ಮೂರು ಬಾರಿ ಎಚ್ಚರಿಸಿದರು. ಆದರೂ ಬಸವಯ್ಯ ಕಾರಿನ ವೇಗವನ್ನು ಕಡಿಮೆ ಮಾಡಲಿಲ್ಲ. ಈ ನಡುವೆ ಶ್ರೀಗಳವರು ಮಾತ್ರ ವೇಗದ ಪರಿವೆಯಿಲ್ಲದವರಂತೆ ಕುಳಿತಿದ್ದರು! ನಾನೂ ಸಹ ಏನೊಂದೂ ಮಾತನಾಡಿದವನಲ್ಲ. ಕೊನೆಗೆ ಕ್ಯಾತನಹಳ್ಳಿ ಶ್ರೀಗಳವರು ತಾಳ್ಮೆಯನ್ನು ಕಳೆದುಕೊಂಡು ಕೋಪದಿಂದಲೇ ಬಸವಯ್ಯನಿಗೆ ಕೊನೆಯ ಎಚ್ಚರಿಕೆ ಎಂಬಂತೆ, ಏನಯ್ಯಾ ನಿನಗೆ ಬುದ್ಧಿಗಿದ್ದಿ ಸರಿಯಾಗಿದೆಯೊ ಏನು? ನಿಧಾನಕ್ಕೆ ಹೋಗು ಎಂದರು. ಅಷ್ಟರಲ್ಲಿ ಬಸವಯ್ಯನೂ ಎಚ್ಚರಿಕೆಯ ಮಾತುಗಳನ್ನು ಕೇಳಿ ಕೇಳಿ ತಾಳ್ಮೆ ಕಳೆದುಕೊಂಡಿದ್ದನೆನಿಸುತ್ತದೆ. ಕಾರನ್ನು ಓಡಿಸುತ್ತಲೇ ಹಿಂದಿರುಗಿ ಕ್ಯಾತನಹಳ್ಳಿ ಶ್ರೀಗಳನ್ನು ಮತ್ತು ಪರಶಿವಮೂರ್ತಿಯವರನ್ನು ನೋಡಿ ತನ್ನ ಅಸಹನೆಯನ್ನು ವ್ಯಕ್ತಪಡಿಸಿದ. ಅವನ ಮನಸ್ಸಿಗೆ ನೋವೇ ಆಗಿರಬೇಕು.

ಇದನ್ನೆಲ್ಲಾ ಗಮನಿಸುತ್ತಿದ್ದ ಶ್ರೀಗಳವರು ಈಗ ಸುಮ್ಮನಿರಲು ಸಾಧ್ಯವೆ! ತಮ್ಮ ಆಣತಿಯ ಮೇರೆಗೇ ಬಸವಯ್ಯ ಕಾರನ್ನು ವೇಗವಾಗಿ ನಡೆಸುತ್ತಿದ್ದಾನೆಂದು ಬಲ್ಲ ಅವರು ಈಗ ಏನಾದರೊಂದನ್ನು ಹೇಳಬೇಕು. ಹಾಗೆ ಹೇಳದಿದ್ದರೆ ಎಚ್ಚರಿಕೆ ನೀಡುವವರು ಸುಮ್ಮನಿರುವುದಿಲ್ಲ. ಜೊತೆಗೆ ಬಸವಯ್ಯನೂ ನೊಂದುಕೊಳ್ಳಬಹುದು! ಸಾಮಾನ್ಯರಾದ ನಮ್ಮಂಥವರು ಇಂತಹ ಸಂದರ್ಭದಲ್ಲಿ ಏನು ಮಾಡುತ್ತಿದ್ದೆವು ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು. ಬಸವಯ್ಯನಿಗೆ ವೇಗವಾಗಿ ಹೋಗುವಂತೆ ನಾವೇ ಹೇಳಿದ್ದೇವೆ ಎಂದೊ ಅಥವಾ ಎಚ್ಚರಿಸುವವರಿಗೆ ಆತಂಕಪಡುವಂಥದ್ದು ಏನೂ ಆಗುವುದಿಲ್ಲವೆಂದು ಹೇಳಿ ಸುಮ್ಮನಾಗುತ್ತಿದ್ದೆವು. ಆದರೆ ಶ್ರೀಗಳವರು ಏನು ಹೇಳಿದರು ಗೊತ್ತೆ? ಕ್ಯಾತನಹಳ್ಳಿ ಶ್ರೀಗಳವರನ್ನು ಮತ್ತು ಪರಶಿವಮೂರ್ತಿಯವರನ್ನು ನೋಡಿ ನಗುತ್ತ ನಮ್ಮ ಗುರುಗಳು ದೊಡ್ಡವರು, ಜಗದ್ಗುರುಗಳು, ಇದು ಜಗದ್ಗುರುಗಳ ಕಾರು ಎಂದು ಏನೇನೋ ಹೇಳುತ್ತೀರಿ! ಹಾಗಿರುವಾಗ ಜಗದ್ಗುರುಗಳ ಕಾರು ಜೋರಾಗಿ ಹೋಗಬೇಕಲ್ಲದೆ ನಿಧಾನವಾಗಿ ಹೋದರೆ ಸರಿಯಾ? ಎಂದು ಹಾಸ್ಯ ಮಾಡಿದರು. ಹಾಗೆ ಶ್ರೀಗಳವರು ಹೇಳಿ ನಗುತ್ತಿರುವಾಗ ನಾನು ಬಸವಯ್ಯನನ್ನೇ ನೋಡುತ್ತಿದ್ದೆ. ಅಷ್ಟರಲ್ಲೆ ಎಚ್ಚರಿಕೆಯ ಮಾತುಗಳನ್ನು ಕೇಳಿ ಕೇಳಿ ಗಂಟಿಕ್ಕಿದ್ದ

ಅವನ ಮುಖವೀಗ ಸಡಿಲವಾಗಿ ನಸುನಗುತ್ತಿತ್ತು. ಕ್ಯಾತನಹಳ್ಳಿ ಶ್ರೀಗಳು ಮತ್ತು ಪರಶಿವಮೂರ್ತಿಯವರಿಗೆ ವಿಷಯವೇನೆಂದು ಸ್ಪಷ್ಟವಾಗಿತ್ತು. ಅನಂತರ ಅವರಿಬ್ಬರೂ ಮೈಸೂರು ಸೇರುವ ತನಕ ಬಾಯಿ ಬಿಡಲಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಸಮಯಕ್ಕೆ ಸರಿಯಾಗಿ ಮೈಸೂರನ್ನು ತಲುಪಿಯೇಬಿಟ್ಟೆವು. ಇಂತಹ ಹಲವು ಸಂದರ್ಭಗಳಲ್ಲಿ ಶ್ರೀಗಳವರು ಪ್ರತಿಕ್ರಿಯಿಸುತ್ತಿದ್ದುದನ್ನು ನೆನೆದರೆ ಅವರ ಮಾತಿನ ರೀತಿ, ಸಮಯಪ್ರಜ್ಞೆ, ಹಾಸ್ಯಪ್ರವೃತ್ತಿ ಅವರಿಗೇ ಮೀಸಲು! ಅವರ ಮಾತುಗಳು ಯಾವಾಗಲೂ ನೊಂದವರಿಗೂ ಸಾಂತ್ವನ, ನೋಯಿಸಿದವರಿಗೂ ಸಾಂತ್ವನ ನೀಡುತ್ತಿದ್ದವು ಎಂದರೆ ಆಶ್ಚರ್ಯವಿಲ್ಲ.

ಈಗ ನಾನು ಹೇಳುವ ಘಟನೆಯನ್ನು ಕುರಿತು ನೀವು ನಂಬಬಹುದು ಅಥವಾ ನಂಬದಿರಬಹುದು. ಆದರೆ ಇದು ಶ್ರೀಗಳವರ ಜೊತೆಗಿದ್ದ ನನ್ನ ಅನುಭವಕ್ಕೆ ಬರುವುದರ ಜೊತೆಗೆ ಈಗಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ, ಕುಂದೂರು ಮಠಾಧ್ಯಕ್ಷರಾದ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳವರ, ಇಂಜಿನಿಯರ್ ಪರಶಿವ ಮೂರ್ತಿಯವರ ಮತ್ತು ಊಟಿಯ ಚಂದ್ರಶೇಖರ್ ಮುಂತಾದವರ ಅನುಭವಕ್ಕೂ ಬಂದ ಸಂಗತಿ. 1986ರಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಅಮೆರಿಕ, ಇಂಗ್ಲೆಂಡ್ ಮುಂತಾದ ದೇಶಗಳಿಗೆ ಭೇಟಿಕೊಟ್ಟ ವಿಷಯ ಗೊತ್ತಿರುವುದೆ. ಅವರ ಈ ಭೇಟಿಯ ಉದ್ದೇಶ ವಿದೇಶಗಳಲ್ಲಿರುವ ಅವರ ಭಕ್ತರ ಮತ್ತು ಅನುಯಾಯಿಗಳ ಬಹಳ ದಿನಗಳ ಕೋರಿಕೆಯನ್ನು ಮನ್ನಿಸುವುದೇ ಆಗಿತ್ತು. ಆದರೆ ಅವರ ಜೊತೆಗೆ ಹೋಗಿದ್ದ ನಾವು ಸಾಧ್ಯವಾದರೆ ಅಮೆರಿಕದಲ್ಲೋ ಅಥವಾ ಇಂಗ್ಲೆಂಡ್‌ನಲ್ಲೋ ಒಬ್ಬ ಒಳ್ಳೆಯ ವೈದ್ಯರಿಂದ ಶ್ರೀಗಳವರ ಆರೋಗ್ಯ ತಪಾಸಣೆ ಮಾಡಿಸಬೇಕೆಂದಿದ್ದೆವು. ಕಳೆದ ವರ್ಷ ಅಂದರೆ 1985ರ ಆರಂಭದಿಂದಲೂ ಅವರ ದೈಹಿಕ ಆರೋಗ್ಯ ಅಷ್ಟು ಸಮರ್ಪಕವಾಗಿರಲಿಲ್ಲ. ದೀನದಲಿತರ ಸೇವೆ, ಸಮಾಜಸೇವೆಯೆಂದು ಅವರು ಹಮ್ಮಿಕೊಂಡು ಹೊತ್ತಿದ್ದ ಬೃಹತ್ ಜವಾಬ್ದಾರಿ ಅವರನ್ನು ದೈಹಿಕವಾಗಿ ವಿಪರೀತ ದಣಿಸಿತ್ತೆಂದರೂ ಸರಿಯೆ. ಹಾಗೆ ಅವರು ವಿದೇಶ ಯಾತ್ರೆ ಕೈಗೊಂಡ ಸಮಯದಲ್ಲಿ ಅದೆಷ್ಟು ಕೃಶರಾಗಿದ್ದರೆಂದರೆ ನಾಲ್ಕಾರು ಮೆಟ್ಟಿಲುಗಳನ್ನು ಹತ್ತಲು ಅವರಿಗೆ ಬೇರೊಬ್ಬರ ನೆರವು ಬೇಕಿತ್ತು. ಅವರಿಗೆ ವೃದ್ಧಾಪ್ಯ ಬಂದಿತ್ತು ಎಂಬ ವಿಷಯ ಅಲ್ಲವೇ ಅಲ್ಲ. ಆಗಷ್ಟೇ ಅವರು ತಮ್ಮ 70ನೆಯ ವರ್ಷಕ್ಕೆ ಕಾಲಿಟ್ಟಿದ್ದರು. ಆದರೆ ಅವರು ಬಾಲ್ಯದಿಂದಲೂ ತಮ್ಮ ದೇಹವನ್ನು "ಉಪಕಾರಃ ಪರೋಧರ್ಮಃ ಪರಾರ್ಥ ಕರ್ಮ ನೈಪುಣಂ" ಎಂಬ ನುಡಿಯಂತೆ ದುಡಿಸಿದ ರೀತಿ ಅವರ ದೈಹಿಕ ಆರೋಗ್ಯ ಇಳಿಮುಖವಾಗಲು ಕಾರಣವಾಯಿತೇನೋ! ಇದೇನೇ ಇರಲಿ. ಶ್ರೀಗಳವರು ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಅವರ ಬದುಕಿನ ಕೊನೆಯವರೆಗೂ ಚುರುಕು ಚಟುವಟಿಕೆಗಳಿಂದ ಇದ್ದವರು.

ಬೊಂಬಾಯಿಯಲ್ಲಿ ವಿಮಾನವನ್ನು ಹತ್ತುವಾಗಲೇ ನಮಗೆ ಒಂದು ರೀತಿಯ ಅವ್ಯಕ್ತ ಆತಂಕ, ಕಳವಳ ಕಾಡತೊಡಗಿತು. ಸುಮಾರು ಒಂದು ತಿಂಗಳಿಗೂ ಹೆಚ್ಚು ಕಾಲ

ವಿದೇಶದಲ್ಲಿರಬೇಕು. ಶ್ರೀಗಳವರ ಆರೋಗ್ಯ ನೋಡಿದರೆ ಹೀಗಿದೆ. ಏನೋ ಎಂತೋ ಎಂಬ ದುಗುಡ ನಮ್ಮನ್ನು ಆವರಿಸಿತೆಂದರೂ ಸರಿಯೆ. ಅವರ ಮಾತುಕತೆಗಳು ಮಾತ್ರ ದೇಹದ ವ್ಯಾಧಿಗಳಿಗೆ ಸಂಬಂಧಪಟ್ಟವುಗಳೇ ಅಲ್ಲವೇನೊ ಎಂಬಂತೆ ತೃಪ್ತಿಕರ. ಹೀಗೆ ನಾವು ನ್ಯೂಯಾರ್ಕ್ ನಗರವನ್ನು ತಲುಪಿದೆವು. ದೀರ್ಘ ಪ್ರಯಾಣದ ಆಯಾಸದ ಪರಿಣಾಮವೇನೊ, ಶ್ರೀಗಳವರು ದೈಹಿಕವಾಗಿ ಮತ್ತಷ್ಟು ಬಳಲಿದ್ದರು. ಇಷ್ಟಾದರೂ ಅವರ ಸ್ನಾನ, ಪೂಜೆ ಇತ್ಯಾದಿಗಳಲ್ಲಿ ಏನೊಂದೂ ವ್ಯತ್ಯಯವಾಗಲಿ, ಕೊರತೆಯಾಗಲಿ ಉಂಟಾಗಕೂಡದು! ಇಂತಹ ಸ್ಥಿತಿಯಲ್ಲೂ ಅವರು ಕುಳಿತು ಮೂರು ಗಂಟೆಗಳ ಕಾಲ ಲಿಂಗಾರ್ಚನೆಯನ್ನು ಮಾಡಲೇಬೇಕು.

ಅಂದು ನ್ಯೂಯಾರ್ಕ್ ನಗರದಲ್ಲಿ ಶ್ರೀಗಳವರು ತಮ್ಮ ಬೆಳಗಿನ ಸ್ನಾನ ಮುಗಿಸಿದಾಗ ಹೇಗಿದ್ದರೆಂದರೆ ಅವರು ಸರಿಯಾಗಿ ನಿಲ್ಲಲೂ ಅಶಕ್ತರಿದ್ದರು. ಇಂದಿನ ಶ್ರೀಗಳವರಾದ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಯವರೇ ಅವರ ಸಮೀಪವಿರಬೇಕು. ಅವರ ಅಗತ್ಯಗಳನ್ನು ಅಕ್ಕಪಕ್ಕವಿದ್ದೇ ಪೂರೈಸಬೇಕು. ಒಮ್ಮೆ ಅವರು ಸ್ನಾನ ಮಾಡಿದ ಬಳಿಕ ಅವರ ಮೈಯನ್ನು ನಾವೇ ಒರೆಸಿ ಪೂಜೆಗೆ ಕರೆದೊಯ್ಯುವಾಗ 'ಬಿದ್ದುಹೋಗೋ ಈ body ದೇಹಕ್ಕೆ ಏನೆಲ್ಲ ಉಪಚಾರ! ಎಂದು ಏನೊ ಎಂತೊ! ಇದಕ್ಕೆ ಇಷ್ಟೆಲ್ಲ ಪ್ರಾಮುಖ್ಯತೆ! ಅದಿರಲಿ... ಇದರಿಂದಾಗಿ (ದೇಹದಿಂದಾಗಿ) ನನಗೆಷ್ಟು ತೊಂದರೆ!' ಎಂದು ಅವರು ನುಡಿದಾಗ ಹೀಗೆ ನುಡಿದವರು ದೇಹಧಾರಿ ಶಿವರಾತ್ರಿ ರಾಜೇಂದ್ರರೊ ಅಥವಾ ಬೇರೆಯವರೊ ಎಂಬುದು ನಮಗಂತೂ ಹೊಳೆಯಲಿಲ್ಲ. ಅದಕ್ಕೆ ನಾನು, ತಾವು ಈ ದೇಹಧಾರಿಗಳಾದ್ದರಿಂದಲೇ ತಾನೆ ಬುದ್ಧೀ, ನಮ್ಮಂಥ ಸಹಸ್ರಾರು ದೇಹಧಾರಿಗಳು ಬದುಕಿ ಉಸಿರಾಡಲು ಅವಕಾಶ ವಾದುದು ಎಂದಾಗ ಅವರು ಸುಮ್ಮನೆ ನೋಡುತ್ತಿದ್ದರು. ಹೀಗೆ ಅಂದು ಅವರ ಬೆಳಗಿನ ಪೂಜೆ ಪ್ರಸಾದಗಳ ಬಳಿಕ ಬರತೊಡಗಿದ ದರ್ಶನಾರ್ಥಿಗಳೊಂದಿಗೆ ಒಂದೆರಡು ಗಂಟೆಗಳು ಕಳೆದಿರಬಹುದು. ಆಗ ಇದ್ದಕ್ಕಿದ್ದಂತೆ ಶ್ರೀಗಳವರು, ಸ್ವಾಮಿ ರಾಮಾ ಅವರ ಆಶ್ರಮಕ್ಕೆ ಈ ದಿನವೇ ಹೋಗೋಣವೆಂದು ಮತ್ತು ಇಲ್ಲಿಂದ ಅವರು ಇರುವ ಪೆನ್ಸಿಲ್‌ವೇನಿಯಾ ಎಷ್ಟು ದೂರವಿದೆ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಲು ನಮಗೆ ಹೇಳಿದರು. ಆದರೆ ನಾವು ಇದಕ್ಕೆ ಒಪ್ಪೆವು. ಏಕೆಂದರೆ ಶ್ರೀಗಳವರು ಒಂದೆರಡು ದಿನಗಳವರೆಗಾದರೂ ನ್ಯೂಯರ್ಕ್‌ನಲ್ಲಿ ವಿಶ್ರಾಂತಿ ತೆಗೆದುಕೊಳ್ಳಲಿ ಎಂಬುದು ನಮ್ಮ ಆಶಯ. ಈ ಸಲಹೆಗೆ ಅವರು ಒಪ್ಪಲೇ ಇಲ್ಲ! ಈ ದಿನವೇ ಅಲ್ಲಿಗೆ ಹೋಗೋಣವೆಂದು ತೀರ್ಮಾನ ಹೇಳಿಯೇ ಬಿಟ್ಟರು. ಹೀಗಿರುವಾಗ ಅವರ ಇಚ್ಛೆಗೆ ವಿರುದ್ಧವಾಗಿ ನಡೆಯಲು ನಮಗೆ ಸಾಧ್ಯವೆ?

ನಂತರ ಪ್ರಯಾಣದ ವಿವರಗಳನ್ನು ಪಡೆದೆವು. ನ್ಯೂಯಾರ್ಕ್‌ನಿಂದ ಪೆನ್ಸಿಲ್‌ವೇನಿಯಾ ಸುಮಾರು ನಾಲ್ಕು ನೂರು ಕಿ.ಮೀ. ದೂರ. ಆದರೆ ಇಲ್ಲಿ ಮುಖ್ಯವಾದ ವಿಷಯವೆಂದರೆ ಸ್ವಾಮಿ ರಾಮಾ ಅವರನ್ನು ನೇರವಾಗಿ ಹೋಗಿ ನೋಡುವಂತಿಲ್ಲ. ಒಂದೆರಡು ತಿಂಗಳು

ಮುಂಚೆಯೇ ಅವರ ಸಮಯವನ್ನು ಕಾದಿರಿಸುವ ಪದ್ಧತಿ. ಹಾಗಿಲ್ಲದೆ ಅವರನ್ನು ನೋಡಲು ಸಾಧ್ಯವೇ ಇಲ್ಲವೆಂದು ಅವರ ಕಾರ್ಯದರ್ಶಿ ಹೇಳಿದರೂ ಅವರನ್ನು ನೋಡಲು ಬರುವವರು ಯಾರೆಂದು ತಿಳಿಸಿದ ಮೇಲೆ ಆಯಿತು ಬನ್ನಿ ನೋಡೋಣ ಎಂದರು. ಅವರ ಸೂಚನೆಯ ಮೇರೆಗೆ ನಾವು ಸಂಜೆ ಐದು ಗಂಟೆಗೆ ಪೆನ್ಸಿಲ್‌ವೇನಿಯಾದಲ್ಲಿರಬೇಕು. ಇಷ್ಟಾದರೂ ನಮಗೆ ಸ್ವಾಮಿ ರಾಮಾ ಅವರ ಸಂದರ್ಶನ ಸಾಧ್ಯವೇ ಎಂಬ ಅನುಮಾನ! ಆದರೆ ಶ್ರೀಗಳು ಮಾತ್ರ ಹಾಗಲ್ಲ. ಅವರ ಮುಖದಲ್ಲಿ ವಿಶಿಷ್ಟ ಭರವಸೆ ಮೂಡಿತ್ತು. ಒಂದು ಆಧ್ಯಾತ್ಮ ಚೇತನ ಮತ್ತೊಂದು ಅಂಥದೇ ಚೇತನವನ್ನು ಎದುರು ಕಾಣುವ ತವಕ ಅವರ ಮಾತುಮಾತಿನಲ್ಲಿಯೂ ವ್ಯಕ್ತವಾಗುತ್ತಿತ್ತು. ಆದರೆ ಮಾರ್ಗಮಧ್ಯದಲ್ಲಿ ಅರ್ಧ ಗಂಟೆ ವಿಳಂಬವಾಗುವ ಘಟನೆಯೊಂದು ಬೇರೆ ನಡೆಯಬೇಕೆ! ಕೆಲವರು ಅಮೆರಿಕದ ಮಹಿಳೆಯರು ಅಲ್ಲಿ ಒಂದು ಕಡೆ ದೇವೀ ಆರಾಧನೆಯ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು. ಆ ಸ್ಥಳಕ್ಕೆ ಸಮೀಪದಲ್ಲಿಯೇ ಕೆಲವು ನಿಮಿಷಗಳವರೆಗೆ ನಮ್ಮ ಕಾರು ನಿಲ್ಲಬೇಕಾಗಿ ಬಂದಿತು. ಅಷ್ಟರಲ್ಲಾಗಲೆ ಇಂತಹ ಒಬ್ಬರು ಸ್ವಾಮಿಗಳು ಭಾರತದಿಂದ ಅಮೆರಿಕಕ್ಕೆ ಬಂದಿದ್ದಾರೆಂಬ ವಿಷಯವನ್ನು ಪತ್ರಿಕೆಗಳ ಮೂಲಕ ತಿಳಿದಿದ್ದ ಅಲ್ಲಿನ ಮಹಿಳೆಯರು ಆ ಸ್ವಾಮಿಗಳು ಇವರೇ ಎಂದು ತಿಳಿದು ನಮ್ಮ ಕಾರು ನಿಂತಿದ್ದಲ್ಲಿಗೆ ಬಂದುದು ಆಶ್ಚರ್ಯವೆ! ಬಳಿಕ ಶ್ರೀಗಳವರು ಅಲ್ಲಿನ ಪೂಜಾ ಸ್ಥಳಕ್ಕೆ ಹೋಗಲೇಬೇಕಾಯಿತು. ಅಲ್ಲಿನವರೊಂದಿಗೆ ಅರ್ಧ ಗಂಟೆ ಕಳೆಯಲೇಬೇಕಾಯಿತು. ಈ ನಡುವೆ ನಮಗಂತೂ ವಿಳಂಬವಾಗುತ್ತಿದೆಯಲ್ಲಾ ಎಂಬ ಕಾತರ.

ಹೀಗೆ ನಾವು ಸ್ವಾಮಿ ರಾಮಾ ಅವರ ಆಶ್ರಮವನ್ನು ತಲುಪಿದಾಗ ಸಂಜೆ ಐದೂವರೆ ಗಂಟೆ. ಆದರೆ ಅಲ್ಲಿ ನಮ್ಮನ್ನು ದಂಗುಬಡಿಸಿದ ವಿಷಯವೆಂದರೆ, ಸ್ವಾಮಿ ರಾಮಾ ಅವರೇ ಶ್ರೀಗಳವರ ಆಗಮನವನ್ನು ನಿರೀಕ್ಷಿಸುತ್ತ ಅವರನ್ನು ಸಮೀಪಿಸಿದುದಷ್ಟೆ. ನಮ್ಮ ಕಣ್ಣಮುಂದೆ ಒಂದು ಅಘಟಿತ ಘಟನೆ ಜರುಗಿತು! ಸ್ವಾಮಿ ರಾಮಾ ಅವರು ಶ್ರೀಗಳವರನ್ನು ಅದೆಷ್ಟೋ ವರ್ಷಗಳಿಂದ ಬಲ್ಲವರಂತೆ ತಮ್ಮ ಆಧ್ಯಾತ್ಮ ಅಕ್ಕರೆಯಿಂದ ಬಾಚಿ ತಬ್ಬಿಕೊಂಡರೆಂದರೆ ಸರಿ! ಕ್ಷಣಾರ್ಧದಲ್ಲಿ ಯಾರ ಮಧ್ಯಸ್ಥಿಕೆಯೂ ಇಲ್ಲದೆ ಹಳೆಯ ಗೆಳೆಯರಂತೆ ಈರ್ವರೂ ಒಂದಾದ ದೃಶ್ಯವನ್ನು ಕಂಡ ನಮಗೆ ಕಣ್ಣುಗಳು ತೇವವಾಗಿದ್ದವು. ಹೀಗೆ ಅವರಿಬ್ಬರೂ ಕೈ ಕೈ ಹಿಡಿದುಕೊಂಡು ಒಳಹೋದರೆ ನಾವು ಮೌನವಾಗಿ ಅವರನ್ನು ಹಿಂಬಾಲಿಸಿದೆವು.

ಮುಂದಿನ ನಾಲ್ಕೈದು ನಿಮಿಷಗಳಲ್ಲಿ ಶ್ರೀಗಳೀರ್ವರೂ ಅಕ್ಕಪಕ್ಕ ಕುಳಿತುಕೊಂಡರು. ನಾವುಗಳೂ ಸಹ ಅಲ್ಲೇ ಸಮೀಪವೇ ಕುಳಿತೆವು. ಆಗ ನನಗೆ ನಮ್ಮ ಶ್ರೀಗಳವರು ಸ್ವಾಮಿ ರಾಮಾ ಅವರನ್ನು ಏನು ಕೇಳುತ್ತಾರೆ ಎಂಬ ಕುತೂಹಲ. ಆದರೆ ಅವರು ಏನು ಕೇಳಬಹುದೆಂಬ ನಮ್ಮೆಲ್ಲ ನಿರೀಕ್ಷೆಯನ್ನು ಸುಳ್ಳು ಮಾಡುತ್ತ "I want Moksha... will you kindly guide me?" (ನನಗೆ ಮೋಕ್ಷ ಬೇಕು. ದಯಮಾಡಿ ಮಾರ್ಗದರ್ಶನ ನೀಡಿ) ಎಂದು ನುಡಿದು ನಮ್ಮೆಲ್ಲರನ್ನು ದಿಗ್ಭ್ರಮೆಗೊಳಿಸಿದರು. ಅದಕ್ಕೆ ಸ್ವಾಮಿ ರಾಮಾ ಅವರು,

"You want Moksha... so soon! You have a lot of work before you to do which you have to complete" (ಈಗಲೇ ನೀವು ಮೋಕ್ಷವನ್ನು ಬಯಸುತ್ತೀರಲ್ಲ, ನೀವು ಮಾಡಬೇಕಾದದ್ದು ಬಹಳವಿದೆ) ಎಂದರು. ಅದಕ್ಕೆ ಶ್ರೀಗಳವರು "I am tired and exhausted. This body and the spirit that lives in it need rest." (ನಾನು ಈಗ ಆಯಾಸಗೊಂಡಿದ್ದೇನೆ. ಶಕ್ತಿಗುಂದಿದೆ. ಈ ದೇಹಕ್ಕೆ ಇನ್ನು ವಿಶ್ರಾಂತಿ ಬೇಕು) ಎಂದರು. ಆಗ ತುಂಬ ಮುಕ್ತವಾಗಿ ನಕ್ಕ ಸ್ವಾಮಿ ರಾಮಾ ಅವರು ಒಂದೆರಡು ಕ್ಷಣಗಳವರೆಗೆ ಮೌನವಾಗಿದ್ದು, ನಂತರ "All right. You will know when you need my help. You just remember me! I will establish contact with you" (ಆಗಲಿ ನಿಮಗೆ ನನ್ನ ಅಗತ್ಯ ಯಾವಾಗ ಬೇಕಾಗುತ್ತದೆಂದು ನಿಮಗೇ ಹೊಳೆಯುತ್ತದೆ, ಆಗ ನೆನಪಿಸಿಕೊಳ್ಳಿ. ನಿಮ್ಮೊಂದಿಗೆ ನಾನು ಸಂಪರ್ಕಿಸುತ್ತೇನೆ) ಎಂದರು. ಇಷ್ಟು ಮಾತುಗಳನ್ನು ಕೇಳಲಷ್ಟೇ ನಮಗೆ ಅವಕಾಶವಾದುದು. ನಂತರ ಶ್ರೀಗಳೀರ್ವರೂ ಸ್ವಲ್ಪ ಸಮಯ ಏಕಾಂತದಲ್ಲಿದ್ದರು. ಆಗ ಅವರೀರ್ವರ ನಡುವೆ ಏನು ನಡೆಯಿತೆಂದು ಅವರಿಗಷ್ಟೇ ಗೊತ್ತು.

ಆ ರಾತ್ರಿ ಶ್ರೀಗಳವರು ಅಲ್ಲಿಯೇ ಸ್ನಾನ, ಪೂಜೆಗಳನ್ನು ಮಾಡಿ ಪ್ರಸಾದವೆಂದು ಹಣ್ಣು ಹಾಲನ್ನು ಸ್ವೀಕರಿಸಿದರು. ಇದಕ್ಕೆ ಸ್ವಾಮಿ ರಾಮಾ ಅವರೇ ಮುಂದೆ ನಿಂತು ವ್ಯವಸ್ಥೆ ಮಾಡಿಸಿದರು. ಬಳಿಕ ಅಲ್ಲಿಂದ ಹೊರಟು ರಾತ್ರಿ ಒಂದು ಗಂಟೆಯ ವೇಳೆಗೆ ಮತ್ತೆ ನ್ಯೂಯಾರ್ಕ್ ನಗರವನ್ನು ತಲುಪಿದೆವು. ಆದರೆ ಬೆಳಗಾದ ಮೇಲೆ ಎದ್ದು ನೋಡಿದರೆ ನಾವು ನಂಬಲಾಗದ ದೈಹಿಕ ಬದಲಾವಣೆಯೊಂದನ್ನು ಶ್ರೀಗಳವರಲ್ಲಿ ನಾವು ಕಂಡೆವು. ಈಗ ಅವರು ಯಾರ ಸಹಾಯವೂ ಇಲ್ಲದೇ ಸರಾಗವಾಗಿಯೇ ಓಡಾಡತೊಡಗಿದುದು ಮಾತ್ರವಲ್ಲ, ನಾಲ್ಕೈದು ಮೆಟ್ಟಿಲುಗಳನ್ನು ಸಹಾಯದಿಂದ ಏರುವ ಕಡೆ ಸುಲಭವಾಗಿ ಹತ್ತತೊಡಗಿದರು. ಈ ಬದಲಾವಣೆಗೆ ಕಾರಣವೇನೆಂದು ನಮಗಂತೂ ಗೋಚರಿಸಲಿಲ್ಲ. ಅನಂತರ ಅವರು ಲಿಂಗೈಕ್ಯವಾಗುವ ತನಕವೂ ಅವರ ದೈಹಿಕ ಚಟುವಟಿಕೆ ಬಹುಮಟ್ಟಿಗೆ ಹೀಗೇ ಇತ್ತು. ಇನ್ನು ಬೌದ್ಧಿಕವಾಗಿಯಂತೂ ಅವರಲ್ಲಿ ನಾವು ಯಾವುದೇ ಬದಲಾವಣೆಯನ್ನು ಕಂಡವರಲ್ಲ.

ಸುಮಾರು ಒಂದು ತಿಂಗಳವರೆಗೂ ಶ್ರೀಗಳವರ ಅಮೆರಿಕ ಪ್ರವಾಸ ಮುಂದುವರಿಯಿತು. ಸ್ವಾಮಿ ರಾಮಾ ಅವರ ಭೇಟಿ ನಂತರ ಶ್ರೀಗಳವರಲ್ಲಿ ಯಾವ ಶಕ್ತಿಯ ಸಂಚಯವಾಯಿತೊ ಅದು ಅವರನ್ನು ಹೋದ ಕಡೆಯಲ್ಲೆಲ್ಲ ಉತ್ಸಾಹದಿಂದಲೇ ಇರುವಂತೆ ಮಾಡಿತು. ಹಾಗಾಗಿ ಅವರನ್ನು ಅಲ್ಲಿ ವೈದ್ಯರ ಪರೀಕ್ಷೆಗೆ ಒಳಪಡಿಸುವ ಪ್ರಮೇಯವೇ ಉಂಟಾಗಲಿಲ್ಲ. ಆದರೆ ಇಂತಹ ಒಂದು ಸಂದರ್ಭ ಅಮೆರಿಕದಿಂದ ಇಂಗ್ಲೆಂಡ್‌ಗೆ ಬಂದಾಗ ಅಲ್ಲಿ ಅದಾಗಿಯೇ ಸೃಷ್ಟಿಯಾಯಿತು. ನಾವು ಯಾರೂ ಇದಕ್ಕೆ ಆಲೋಚನೆ ಮಾಡಿದವರಲ್ಲ. ಲಂಡನ್ ನಗರದಲ್ಲಿ ಶ್ರೀಗಳವರು ತಮ್ಮ ಶಿಷ್ಯರಲ್ಲೊಬ್ಬರಾದ ಡಾ. ಶಿವಮೂರ್ತಿ ಎಂಬುವರ ಮನೆಯಲ್ಲಿ ವಾಸ್ತವ್ಯ ಮಾಡಿದರು. ಶಿವಮೂರ್ತಿಯವರು ಸ್ವತಃ ವೈದ್ಯರೇ ಆದರೂ

ಅದೇಕೊ ಅವರು ಶ್ರೀಗಳವರನ್ನು ನೋಡಿದ ಬಳಿಕ ತಮ್ಮ ಮಿತ್ರರೊಬ್ಬರಿಗೆ ತೋರಿಸಬೇಕು ಎಂದು ತಮ್ಮಲ್ಲಿಯೇ ತೀರ್ಮಾನ ಮಾಡಿಕೊಂಡು ಆ ವಿಷಯವಾಗಿ ನಮ್ಮೊಂದಿಗೆ ಪ್ರಸ್ತಾಪ ಮಾಡಿದರು. ಅದಕ್ಕೆ ನಾವು ಆಗಬಹುದು, ಅದಕ್ಕೇನಂತೆ ಎಂದು ಒಪ್ಪಿದೆವು. ಶಿವಮೂರ್ತಿಯವರ ಆ ವೈದ್ಯಮಿತ್ರರೂ ಭಾರತೀಯರೆ. ಅವರ ಹೆಸರು ಡಾ. ಸಿಂಗ್ ಎಂದು. ಸೈನ್ಯದಲ್ಲಿ ಹೆಸರಾಂತ ಸೇವೆ ಸಲ್ಲಿಸಿ ಆಗಷ್ಟೇ ನಿವೃತ್ತರಾಗಿದ್ದವರು. ಶಿವಮೂರ್ತಿಯವರು ಅವರನ್ನು ಕೇಳಿಕೊಂಡುದೇ ತಡ ಅವರು ಬಹಳ ಸಂತೋಷದಿಂದಲೇ ಒಪ್ಪಿ ಬಂದರು. ಶ್ರೀಗಳವರೊಂದಿಗೆ ಸ್ವಲ್ಪ ಹೊತ್ತು ಔಪಚಾರಿಕವಾಗಿ ಮಾತನಾಡಿದರು. ಹೀಗೆ ನಡೆದ ಕೆಲವು ನಿಮಿಷಗಳ ಮಾತುಕತೆಗಳ ಬಳಿಕ ಡಾ. ಸಿಂಗ್ ಅವರು ಶ್ರೀಗಳವರಿಗೆ ಎಷ್ಟು ಹತ್ತಿರವಾದರೆಂದರೆ, ಆ ನಂತರದ ಅವರ ಮಾತುಕತೆಗಳು ಅದೆಷ್ಟೋ ವರ್ಷಗಳ ದೀರ್ಘ ಒಡನಾಟದಿಂದ ಮೂಡಿಬಂದವು ಎಂಬಷ್ಟು ಆತ್ಮೀಯವಾದವು. ಅನಂತರ ಒಂದೆರಡು ದಿನಗಳವರೆಗೆ ಡಾ. ಸಿಂಗ್ ಅವರು ಶ್ರೀಗಳವರನ್ನು ತಮ್ಮ ಹಲವು ಬಗೆಯ ಪರೀಕ್ಷೆಗಳಿಗೆ ಒಳಪಡಿಸಿದರು.

ಹೀಗೆ ಶ್ರೀಗಳವರನ್ನು ಪರೀಕ್ಷೆ ಮಾಡಲು ಆರಂಭಿಸಿದ ಡಾ. ಸಿಂಗ್ ಅವರಿಗೆ ಅದೇನೋ ಉತ್ಸಾಹ. ಪರೀಕ್ಷೆ ಆರಂಭವಾಯಿತು. ಡಾ. ಸಿಂಗ್ ಅವರು ಒಂದಾದ ಮೇಲೊಂದರಂತೆ ತಮ್ಮ ಪರೀಕ್ಷೆಗಳನ್ನು ಮುಂದುವರಿಸಿಯೇ ಮುಂದುವರಿಸಿದರು. ಆದರೆ ಆರಂಭದಲ್ಲಿದ್ದ ಅವರ ಮುಖದ ಮೇಲಿನ ಗೆಲುವು ಅಂದು ತಮ್ಮ ಅಭಿಪ್ರಾಯಗಳನ್ನು ತಿಳಿಸುವ ದಿನ ಮಾಯವಾಗಿ ಅಲ್ಲಿ ಪ್ರಶ್ನೆ ಮತ್ತು ಆಶ್ಚರ್ಯ ಸೂಚಕಗಳೆರಡೂ ಮೂಡಿದ್ದುವೆನ್ನಬೇಕು. ಏಕೆಂದರೆ ಅಷ್ಟು ದೀರ್ಘ ಪರೀಕ್ಷೆಯ ನಂತರೂ ಅವರು ಯಾವ ಒಂದು ತೀರ್ಮಾನಕ್ಕೂ ಬರಲು ಆಗಿರಲಿಲ್ಲ. ಈ ನಡುವೆ ಎರಡು ದಿನಗಳವರೆಗೆ ಅವರು ಏನೊಂದೂ ಮಾತನಾಡದಿದ್ದುದರಿಂದ ನಮ್ಮ ಕುತೂಹಲಭರಿತ ಚಿಂತೆಯನ್ನು ಹೇಳತೀರದು. ಈ ವೈದ್ಯರು ಏನು ಹೇಳುತ್ತಾರೊ ಎಂಬ ನಿರೀಕ್ಷೆ ನಮ್ಮನ್ನು ಆ ದಿನಗಳಿಡೀ ಬಹಳವಾಗಿ ಕಾಡಿತೆನ್ನಬೇಕು.

ಅಂದು ಶ್ರೀಗಳವರು ತಮ್ಮ ಆಸನದಲ್ಲಿ ಬಂದು ಕುಳಿತರು. ಎದುರಿಗೆ ಡಾ. ಸಿಂಗ್ ಅವರೂ ಕುಳಿತುಕೊಂಡರು. ನಾವೂ ಸಹ ಅಕ್ಕಪಕ್ಕ ಕುಳಿತಿದ್ದೆವು. ಇನ್ನೇನು ವೈದ್ಯರು ತಮ್ಮ ಅಭಿಪ್ರಾಯವನ್ನು ತಿಳಿಸುವುದು ತಾನೆ ಎಂದು ನಾವು ಕೇಳಿಯೇಬಿಡಬೇಕು. ಅಷ್ಟಕ್ಕೆ ಸರಿಯಾಗಿ ಡಾ. ಸಿಂಗ್ ತಮ್ಮ ಮಾತನ್ನು ಆರಂಭಿಸಿದ್ದರು. ಅವರು ಹೇಳಿದುದೇನೆಂದರೆ:

I am one of the well known physicians here. And you have seen that I examined the Swamiji for over two days. Well, I am not convinced as to how the Swamiji is still alive inspite of the fact that not a single vital organ of his body is functioning normally! For the first time

in my life I am encountering a case of this nature! It is a wonder ! I should say it is something against natural laws that govern human body!" (ನಾನು ಇಲ್ಲಿ ಒಬ್ಬ ಹೆಸರಾಂತ ವೈದ್ಯ. ನೀವೇ ನೋಡಿದಿರಿ ನಾನು ಸ್ವಾಮೀಜಿಯವರನ್ನು ಈ ಎರಡು ದಿನಗಳು ತಪಾಸಣೆ ಮಾಡಿದೆ. ಆದರೆ ಈಗ ನನ್ನನ್ನು ನಾನೇ ನಂಬಲಾಗುತ್ತಿಲ್ಲ. ಅಂದರೆ ಇವರ ದೇಹದ ಯಾವುದೇ ಒಂದು ಪ್ರಮುಖ ಅಂಗವೂ ಸಾಮಾನ್ಯ ಸುಸ್ಥಿತಿಯಲ್ಲಿ ಕೆಲಸ ಮಾಡುತ್ತಿಲ್ಲವಾದರೂ ಇವರು ಜೀವಂತವಾಗಿದ್ದಾರೆ. ಇದೊಂದು ಆಶ್ಚರ್ಯ! ಈ ರೀತಿಯ ವ್ಯಕ್ತಿಯೊಬ್ಬರನ್ನು ನಾನು ಭೇಟಿ ಮಾಡಿದ್ದು ನನ್ನ ಜೀವನದಲ್ಲಿ ಇದೇ ಮೊದಲು!) ಎಂದು ಶ್ರೀಗಳವರ ಎದುರಿಗೇ ಮುಕ್ತವಾಗಿ ಹೇಳುತ್ತಿದ್ದಾಗ ನಾವು ಅವರ ಅಭಿಪ್ರಾಯಕ್ಕೆ ಬೆರಗಾಗಿ ಅವರನ್ನೇ ನೋಡುತ್ತಿದ್ದರೆ ಶ್ರೀಗಳವರು ಈ ಮಾತುಗಳಿಂದ ಏನೊಂದೂ ವಿಚಲಿತರಾಗದೆ ಸುಮ್ಮನೆ ನಸುನಗುತ್ತಿದ್ದರು.

□

## ರಾಜೇಂದ್ರ ಶ್ರೀವಾಣಿ

- ಧರ್ಮ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳು.
- ಧರ್ಮವೇ ದೇಶದ ಆತ್ಮ.
- ಧರ್ಮಜಾಗೃತಿಯೊಂದೇ ಸರ್ವರನ್ನೂ ಸಂರಕ್ಷಿಸುವ ಮಾರ್ಗ.
- ನಮ್ಮ ರಾಷ್ಟ್ರದ ಜೀವವೇ ಧರ್ಮ, ಧರ್ಮ ಉಳಿದರೆ ದೇಶ ಉಳಿಯುತ್ತದೆ.
- ರಾಜಕೀಯಕ್ಕೆ ಆಧ್ಯಾತ್ಮಿಕ ಸಂಸ್ಕಾರವನ್ನು ಕೊಡಬೇಕು. ಧರ್ಮದಲ್ಲಿ ರಾಜಕೀಯ ಇರಬಾರದು, ಆದರೆ ರಾಜಕೀಯಕ್ಕೆ ಧರ್ಮ ಬೇಕು.
- ಭಕ್ತಿ ಎಂಬುದು ಒಂದು ಸದ್ಭಾವನೆ. ಭಕ್ತಿಯು ಸುಜ್ಞಾನಕ್ಕೆ, ಸತ್ಕ್ರಿಯೆಗೆ ಹಾದಿ. ಭಕ್ತಿಯು ನಮ್ಮಲ್ಲಿ ಸಮರ್ಪಣೆಯ ಭಾವವನ್ನುಂಟು ಮಾಡುತ್ತದೆ.
- ಪರಮಾತ್ಮನಿಗೆ ಬೇಕಾಗಿರುವುದು ಭಾಷೆಯಲ್ಲ, ಹೆಸರಲ್ಲ. ಅವನಿಗೆ ಬೇಕಾಗಿರುವುದು ಹೃದಯದ ಭಾಷೆ. ಅದುವೇ ಭಕ್ತಿ.
- ಮನಸ್ಸು, ಕಣ್ಣು, ಕಿವಿ, ನಾಲಗೆಗಳನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಸದಾ ಭಗವಂತನ ನಾಮಸ್ಮರಣೆ, ಧ್ಯಾನ ಮಾಡುತ್ತಿರಬೇಕು.

# ಅನ್ನದ ಋಣದ ನೆನಪು

**ಶಾಂತರಾಮ ನಾಯಕ ಹಿಚಕಡ**

"ಮರೆವು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೆ?" ಎಂಬುದು ವಚನಕಾರರ ನುಡಿ. ಘನವಾದುದನ್ನು ಮರೆತಾಗ, ಆ ಘನವಾದ ನೆನಪು ಅದನ್ನು ಎಚ್ಚರಿಸಿದಾಗ ಆ ಘನದ ಅರಿವಾಗಿ ಆಗುವ ಸಂತೋಷಕ್ಕೆ ಪಾರವೇ ಇಲ್ಲ. ನನ್ನ ಬದುಕಿನ ಅಂತಹ ಘನವಾದುದು ನೆನಪಾಗಿದೆ. ಆ ನೆನಪು ಇನ್ನೂ ಹಸಿರಾಗಿಯೇ ಇದೆ.

ನಾನು ನನ್ನೂರಿನ ಮೊದಲ ಪದವೀಧರನೆಂಬ (1961) ಹೆಮ್ಮೆ, ಸಂತೋಷ ನನಗಿದೆ. ಆದರೆ ಅದು ಸಾಧ್ಯವಾದುದು ಶ್ರೀ ಶಿವರಾತ್ರೀಶ್ವರ ಸುತ್ತೂರು ಮಠದ ಅನ್ನದ ಋಣದಿಂದ ಹಾಗೂ ಸುತ್ತೂರು ಶ್ರೀಮಠದ ಹಿಂದಿನ ಪೀಠಾಧೀಶ್ವರರಾದ ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಮಹಾಸ್ವಾಮಿಗಳ ಕರುಣೆಯಿಂದ ಎಂದು ಹೇಳಿಕೊಳ್ಳಲು ನನಗೆ ತುಂಬಾ ಅಭಿಮಾನ ವೆನಿಸುತ್ತದೆ. ಕೃತಜ್ಞತೆಯಿಂದ ಮನ ಬಾಗುತ್ತದೆ.

ಮೈಸೂರು, ಸುತ್ತೂರು ಮಠ ಎಂದೊಡನೆ ನನ್ನ ನೆನಪು ಐದು ದಶಕಗಳ ಹಿಂದೆ ಸರಿಯಿತು. ಮನಸ್ಸು ಸುಂದರ ನೆನಪುಗಳ ಚಿತ್ರಶಾಲೆಯಾಯಿತು.

ಭಾರತದ ಸ್ವಾತಂತ್ರ್ಯಸಂಗ್ರಾಮದಲ್ಲಿ ಎರಡನೆಯ ಬಾರ್ಡೋಲಿಯೆಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಪ್ರಸಿದ್ಧವಾಗಿದೆ. ಆ ಅಂಕೋಲ ತಾಲ್ಲೂಕಿನ ಗಂಗಾವತಿ ನದಿ ತೀರದ ನಲವತ್ತು ಹಳ್ಳಿಗಳು ಶರಬಂಧಿ ಹಳ್ಳಿಗಳೆಂದು ಚರಿತ್ರೆಯಲ್ಲಿ ದಾಖಲಾಗಿದೆ. ಅಂತಹ ಹಳ್ಳಿಗಳಲ್ಲಿ ಒಂದಾದ 'ಹಿಚಕಡ' ನನ್ನೂರು. ಸ್ವಾತಂತ್ರ್ಯ ಹೋರಾಟದ ಜಾಗೃತ ಊರು. ಈ ನನ್ನೂರಿಗೂ ಸುತ್ತೂರು ಮಠಕ್ಕೂ 400 ಕಿ.ಮೀ.ಗಳಿಗಿಂತ ಹೆಚ್ಚು ಅಂತರ. ಎಲ್ಲಿಂದ, ಎಲ್ಲಿಗೆ, ಎಲ್ಲಿಯ ಸಂಬಂಧ! ಆದರೆ ಅನ್ನದ ಋಣಾನುಬಂಧ ಆ ಸಂಬಂಧವನ್ನು ಬೆಸೆದಿತ್ತು. ದೂರದ ಅಂಕೋಲೆಯನ್ನು ಮೈಸೂರಿಗೆ ಹತ್ತಿರಗೊಳಿಸಿತ್ತು.

ನನ್ನ ತಾಲ್ಲೂಕಿನ ನೆರೆಯ ತಾಲ್ಲೂಕಿನಲ್ಲಿ ಕಾಲೇಜಿದ್ದರೂ, ಅಲ್ಲಿಗೆ ಹೋಗಿ ಕಾಲೇಜು ಶಿಕ್ಷಣ ಪಡೆಯುವ ಆರ್ಥಿಕ ಅನುಕೂಲವಿರಲಿಲ್ಲ. ಆದರೂ ಕಾಲೇಜು ಶಿಕ್ಷಣ ಪಡೆಯಬೇಕೆಂಬ ಹಂಬಲ ಪ್ರಬಲವಾಗಿತ್ತು. ಈ ಮೊದಲೆ ಮೈಸೂರು ಕಾಲೇಜಿನಲ್ಲಿ ಓದುತ್ತಿದ್ದ ಪ್ರಸಿದ್ಧ ವಿಮರ್ಶಕರಾದ ಪ್ರೊ. ಜಿ.ಎಚ್. ನಾಯಕರ ಪ್ರಭಾವದಿಂದ ಮೈಸೂರಲ್ಲೇ ಕಾಲೇಜು

ಓದಬೇಕೆಂಬ ಕನಸು ಕಂಡಿದ್ದೆ. ಶಿಕ್ಷಣಪ್ರೇಮಿ, ಬಡವರ ಬಂಧು, ಕರುಣಾಳು ಸ.ಪ. ಗಾಂವಕರರು ನಮ್ಮಲ್ಲಿಯ ಹತ್ತಾರು ವಿದ್ಯಾರ್ಥಿಗಳಿಗೆ ಮೈಸೂರಿನಲ್ಲಿ ಕಲಿಯುವ ಅವಕಾಶವನ್ನು ಕಲ್ಪಿಸಿದರು. ಸುತ್ತೂರು ಶ್ರೀಮಠದ ಶ್ರೀ ರಾಜೇಂದ್ರ ಸ್ವಾಮೀಜಿಯವರ ಔದಾರ್ಯ ಹಾಗೂ ಕರುಣೆಯಿಂದ ನಮಗೆ ಸುತ್ತೂರು ಮಠದ ವಿದ್ಯಾರ್ಥಿನಿಲಯದಲ್ಲಿ ಊಟದ ವ್ಯವಸ್ಥೆ ಆಯಿತು.

ಸ್ವಾಮೀಜಿಗಳೆಂಬುವರ ಸಂಪರ್ಕ ಬಂದದ್ದು ಇದೇ ಮೊದಲು. ನಮ್ಮಲ್ಲಿ ಸ್ವಾಮೀಜಿಗಳ ಪರಂಪರೆ ಇರಲಿಲ್ಲ. ಮೊದಲ ದರ್ಶನದಲ್ಲೇ ಶ್ರೀ ರಾಜೇಂದ್ರ ಸ್ವಾಮೀಜಿಗಳಿಂದ ಆಕರ್ಷಿತನಾಗಿದ್ದೆ. ಅವರ ಅಪೂರ್ವ ತೇಜಸ್ಸು, ಪ್ರೀತಿಯ ಮಂದಹಾಸ, ಭರವಸೆಯ ಕಣ್ಣುಗಳ ನೋಟ ನನ್ನನ್ನು ಸೆರೆಹಿಡಿದಿತ್ತು. ಬಾಗದ ತಲೆ ಬಾಗಿತ್ತು. ನತಮಸ್ತಕನಾಗಿ ಮೇಲೆದ್ದೆ.

ಮೈಸೂರಿನ ವಿದ್ಯಾರ್ಥಿನಿಲಯಗಳಲ್ಲಿ ಸಾಮಾನ್ಯವಾಗಿ ಚರ್ಚಾ ಸ್ಪರ್ಧೆಗಳು ಏರ್ಪಡುತ್ತಿದ್ದವು. ಕಾಲೇಜಿನ ಎರಡನೇ ಟರ್ಮಿನಲ್ಲಿ ಚರ್ಚಾಸ್ಪರ್ಧೆಗಳ ಸುಗ್ಗಿಯೋ ಸುಗ್ಗಿ. ಸುತ್ತೂರು ಮಠದ ವಿದ್ಯಾರ್ಥಿನಿಲಯದ ಪರವಾಗಿ ನಾನು ಹಾಗೂ ನನ್ನ ಹಳೆಯ ಗೆಳೆಯ ಶ್ರೀ ಜಿ.ವಿ. ನಾಯಕರು ಚರ್ಚಾಸ್ಪರ್ಧೆಗೆ ಆಯ್ಕೆಯಾಗಿದ್ದೆವು. ನಾವು ಉತ್ತರ ಕನ್ನಡ ಜಿಲ್ಲೆಯವರು. ಮಾತಿನಲ್ಲಿ ಸ್ವಲ್ಪ ನಿಪುಣರೆನಿಸಿಕೊಂಡಿದ್ದೆವು. ಗೆಳೆಯ ಜಿ.ವಿ. ನಾಯಕರಂತೂ ಅದ್ಭುತ ಚರ್ಚಾಪಟುಗಳಾಗಿದ್ದರು. ಮುಂದೆ ಅವರು ಪ್ರಸಿದ್ಧ ನ್ಯಾಯವಾದಿಗಳಾಗಿ, ನ್ಯಾಯಾಧೀಶರಾಗಿ ಈಗ ನಮ್ಮನ್ನು ಅಗಲಿದ್ದಾರೆ. ನಾವಿಬ್ಬರೂ ವಿದ್ಯಾರ್ಥಿನಿಲಯದ ಪರವಾಗಿ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದಿದ್ದೆವು. ವಿದ್ಯಾರ್ಥಿನಿಲಯಕ್ಕೆ ಅನೇಕ ಪರ್ಯಾಯಫಲಕಗಳನ್ನು ಗೆದ್ದು ತಂದಿದ್ದೆವು. ಚರ್ಚಾಸ್ಪರ್ಧೆಯಲ್ಲಿ ಸುತ್ತೂರು ವಿದ್ಯಾರ್ಥಿನಿಲಯ ಮೇಲುಗೈ ಸಾಧಿಸಿತ್ತು. ಚರ್ಚಾಸ್ಪರ್ಧೆಯ ಯಶಸ್ಸಿನಿಂದಾಗಿ ನಾವು ಶ್ರೀ ರಾಜೇಂದ್ರ ಸ್ವಾಮೀಜಿಯವರ ಗಮನ ಸೆಳೆದಿದ್ದೆವು. ಸ್ವಾಮೀಜಿಯವರಿಗೆ ಇದರಿಂದ ತುಂಬಾ ಸಂತೋಷವಾಗಿತ್ತು. ನಾವು ಚರ್ಚಾಸ್ಪರ್ಧೆಯಲ್ಲಿ ಗೆದ್ದುಬಂದಾಗೆಲ್ಲ ನಮ್ಮನ್ನು ಕರೆಯಿಸಿ ಪ್ರೋತ್ಸಾಹಿಸುತ್ತಿದ್ದರು. ಅವರ ಪ್ರೀತಿ, ಅಭಿಮಾನದ ನೋಟ ನಮಗೆ ಹಿತಾನುಭವವನ್ನು ನೀಡುತ್ತಿತ್ತು. ಚರ್ಚಾಸ್ಪರ್ಧೆಗೆ ಹೋಗಿ ಬರಲು ನಮಗೆ ವಾಹನ ವ್ಯವಸ್ಥೆ ಮಾಡಿದ್ದರು. ಊಟದ ಅವಧಿ ಮುಗಿದರೂ ನಮಗಾಗಿ ಊಟವನ್ನು ಕಾದಿಡುವ ವ್ಯವಸ್ಥೆ ಮಾಡಿದ್ದರು. ರಾಗಿಮುದ್ದೆ ಸೇರದ ನಮಗೆ ಮುದ್ದೆಯ ಬದಲಾಗಿ ಸಾಕಷ್ಟು ಅನ್ನ ನೀಡುವಂತೆ ಸೂಚನೆ ನೀಡಿದ್ದರು.

ಪೂಜ್ಯ ಸ್ವಾಮೀಜಿಯವರ ವಿಶೇಷ ಮೆಚ್ಚುಗೆಗೆ ಪಾತ್ರರಾದ ನಾವು ನಮ್ಮಷ್ಟಕ್ಕೆ ಉತ್ಸಾಹದಿಂದ ಬೀಗಿಹೋಗಿದ್ದೆವು. ಒಂದು ಬಗೆಯ ಬಿಂಕ ನಮ್ಮನ್ನಾವರಿಸಿತ್ತು. ಮೈಸೂರು ಕಡೆಯವರ ಸಂಪ್ರದಾಯದಂತೆ ಅಡ್ಡಬಿದ್ದು ನಮಸ್ಕರಿಸುವ ಪದ್ಧತಿ ನಮಗೆ ರೂಢಿಯಿರಲಿಲ್ಲ. ಆದರೂ ನಾವು ಕಷ್ಟಪಟ್ಟು ಸ್ವಾಮೀಜಿಯವರಿಗೆ ಅಡ್ಡಬಿದ್ದು ನಮಸ್ಕಾರ ಮಾಡುತ್ತಿದ್ದೆವು. ಒಮ್ಮೆಯಂತೂ ನಾನು ಅಡ್ಡಬಿದ್ದು ನಮಸ್ಕರಿಸಿ ಮೇಲೇಳುತ್ತಿರುವಾಗ ನನ್ನ ಕನ್ನಡಕ ಜಾರಿ ಬಿದ್ದು ಒಡೆದುಹೋಗಿತ್ತು. ಅಡ್ಡಬಿದ್ದು ನಮಸ್ಕಾರ ಮಾಡುವ ನಮ್ಮ ಕಷ್ಟವನ್ನು ನೋಡಿ

ಪ್ರಾಜ್ಞರಾದ ಸ್ವಾಮೀಜಿಯವರು ನಮ್ಮ ಮನದ ಇಂಗಿತವನ್ನು ಅರಿತು ಆ ರೀತಿ ನಮಸ್ಕಾರ ಮಾಡುವ ಪದ್ಧತಿಯಿಂದ ನಮಗೆ ವಿನಾಯಿತಿ ನೀಡಿದರು. "ನೀವು ನಿಮ್ಮ ಪದ್ಧತಿಯಂತೆ ನಮಸ್ಕಾರ ಮಾಡಿ, ಗೌರವ ನೀಡಿ" ಎಂದು ಆದೇಶಿಸಿದರು. ಸ್ವಾಮೀಜಿಯವರ ಆ ಮಾತು ಕೇಳಿ ನಾವು ಚಕಿತರಾದೆವು. ನಿತ್ಯ ನೂರಾರು ಜನರು ಅಡ್ಡಬಿದ್ದು ನಮಸ್ಕರಿಸುತ್ತಿರುವ ದೃಶ್ಯ ನಮ್ಮ ಕಣ್ಣಿಗೆ ಕಟ್ಟಿತು. ತಮ್ಮ ಸಂಪ್ರದಾಯ ರೂಢಿಗಳನ್ನು ಒತ್ತಾಯದಿಂದ ಅನ್ಯರ ಮೇಲೆ ಹೇರದಿರುವ ಸ್ವಾಮೀಜಿಯವರ ಔದಾರ್ಯ ಕಂಡು ಅವರ ಮೇಲಿನ ಗೌರವ ನೂರ್ಮಡಿ ಹೆಚ್ಚಾಯಿತು. ದೊಡ್ಡವರೆಂದಿಗೂ ದೊಡ್ಡವರೇ! ಘನ ಘನವೇ! ಎನ್ನುವುದಕ್ಕೆ ಶ್ರೀ ರಾಜೇಂದ್ರ ಸ್ವಾಮೀಜಿಗಳು ಜೀವಂತ ಉದಾಹರಣೆಯಾಗಿದ್ದರು. "ಪೀಠದ ಎತ್ತರದ ಮೇಲೆ ನಮ್ಮ ಎತ್ತರವೇನೂ ಹೆಚ್ಚುವುದಿಲ್ಲ" ಎಂಬ ಸ್ವಾಮೀಜಿಯವರ ವಿನಯವಂತಿಕೆಯ ದೊಡ್ಡತನದ ಮಾತು ಅವರ ಘನತೆಯನ್ನು ಎತ್ತಿ ತೋರಿಸುತ್ತದೆ. ಅವರ ಈ ಬಗೆಯ ಮಾನವೀಯ ಸ್ಪರ್ಶದ ನಡೆನುಡಿಗಳಿಂದಾಗಿ ಜಗದ್ಗುರುಗಳೆಂಬ ಕೀರ್ತಿಗೆ ಅವರು ಪಾತ್ರರಾಗಿದ್ದರು ಎಂದು ಅನಿಸಿತು. "ಸ್ವಾಮಿಯಾಗಿ ಎಲ್ಲರನ್ನು ಪ್ರೀತಿಸುವುದು ನಮ್ಮ ಕರ್ತವ್ಯ"ವೆಂದು ಸಂದೇಶ ನೀಡಿ ನಮ್ಮಂತಹವರನ್ನು ಪ್ರೀತಿಸಿ ಅನ್ನವನ್ನು ನೀಡಿ ಆಶೀರ್ವಾದ ಮಾಡಿರುವರು. ಪೂಜ್ಯ ಶ್ರೀ ರಾಜೇಂದ್ರ ಸ್ವಾಮೀಜಿಯವರ ಭವ್ಯ ವ್ಯಕ್ತಿತ್ವದ ಮಹಿಮೆಯಿಂದ ಅವರ ಪ್ರಭಾವದ ತೆಕ್ಕೆಯ ಬೀಸು ನನ್ನನ್ನು ಆಗಲೇ ಸೆಳೆದುಕೊಂಡಿತ್ತು.

ನಾನು ಎರಡು ಸಲ ವಿದ್ಯಾರ್ಥಿನಿಲಯದ ಹೀರೋ ಆದೆ. ಆ ನೆನಪು ಇಂದಿಗೂ ನನ್ನನ್ನು ರಸರೋಮಾಂಚನಗೊಳಿಸುತ್ತದೆ. ಪ್ರತಿವರ್ಷವೂ ಸುತ್ತೂರು ಶ್ರೀ ಶಿವರಾತ್ರೀಶ್ವರ ಜಯಂತಿ ಉತ್ಸವವನ್ನು ತುಂಬಾ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆ ಉತ್ಸವದ ಸಂದರ್ಭದಲ್ಲಿ ನಾನು ಶ್ರೀ ಶಿವರಾತ್ರೀಶ್ವರರ ಕುರಿತು ಬೇಂದ್ರೆಯವರ "ಇಳಿದು ಬಾ ತಾಯಿ" (ಗಂಗಾವತರಣ) ಕವನದ ಧಾಟಿಯಲ್ಲಿ "ಇಳಿದು ಬಾ ಶಿವರಾತ್ರೀಶ್ವರ"! ಎಂಬ ಕವನ ಬರೆದು ಸಮಾರಂಭದಲ್ಲಿ ಹಾಡಿದೆನು. ನನ್ನ ಆ ಹಾಡು ಸಭಿಕರ ಮೇಲೆ ತುಂಬಾ ಪ್ರಭಾವ ಬೀರಿತು. ಎಲ್ಲರಿಗೂ ಮೆಚ್ಚುಗೆಯಾಯಿತು. ಸ್ವಾಮೀಜಿಯವರು ನಾನು ಹಾಡಿದ ಕವನವನ್ನು ತೆಗೆದುಕೊಂಡರು. ಅವರ ಮೆಚ್ಚುಗೆಯ ಪ್ರೀತಿಯ ಕಣ್ಣುಗಳ ನೋಟ ನನ್ನನ್ನು ಆನಂದದಲ್ಲಿ ಮೀಯಿಸಿತ್ತು. ಎಲ್ಲರ ನೋಟ ನನ್ನ ಕಡೆಗೆ ಇತ್ತು. ನಿಜಕ್ಕೂ ಆ ದಿನ ನಾನು ಹೀರೋ ಆಗಿಬಿಟ್ಟೆ. ಬಹುಶಃ ಇದು ನಾನು ಬರೆದ ಮೊದಲ ಕವನವಾಗಿತ್ತು. ಆ ಕವನವನ್ನು ಕಳೆದುಕೊಂಡಿದ್ದೇನೆ. ಆದರೆ ಹೀರೋ ಆದ ಆ ಸಂಭ್ರಮದ ಕ್ಷಣದ ನೆನಪನ್ನು ಮಾತ್ರ ಕಳೆದುಕೊಂಡಿಲ್ಲ.

ನಾಲ್ಕು ದಿನಗಳ ನಂತರ ಶ್ರೀ ರಾಜೇಂದ್ರ ಸ್ವಾಮೀಜಿಯವರು ನನ್ನನ್ನು ತಮ್ಮ ಸನ್ನಿಧಿಗೆ ಕರೆಯಿಸಿಕೊಂಡರು. ನಾನು ಬರೆದ ಕವನದ ನಾಲ್ಕೈದು ಮುದ್ರಿತ ಬಿಡಿ ಪ್ರತಿಗಳನ್ನು ಕೊಟ್ಟರು. ನನ್ನ ಕವನವು ಸುವರ್ಣಾಕ್ಷರಗಳಲ್ಲಿ ಅಂದವಾಗಿ ಮುದ್ರಣಗೊಂಡಿತ್ತು. ಇದನ್ನು ನಾನು ನಿರೀಕ್ಷಿಸಿರಲಿಲ್ಲ. ಆ ಮುದ್ರಿಸಿದ ಬಿಡಿ ಪ್ರತಿಗಳ ಜೊತೆಗೆ ಸ್ವಾಮೀಜಿಯವರು ನನಗೆ

ಪ್ರೀತಿಯಿಂದ ಹಣ್ಣುಗಳನ್ನು ನೀಡಿ ಆಶೀರ್ವದಿಸಿದರು. ನನ್ನ ಬದುಕಿನ ಸಂಭ್ರಮದ ಕ್ಷಣಗಳಲ್ಲಿ ಅದೊಂದಾಗಿತ್ತು. ಆ ಸಂತೋಷದ ಮಹಾಪೂರದಲ್ಲಿ ಕೊಚ್ಚಿಹೋಗಿ "ಮನೆಯ ಮುರಿದು ಈಡಾಡಿದನು ವಿದುರ" ಎಂಬಂತಾಗಿತ್ತು ನನ್ನ ಸ್ಥಿತಿ.

ಜಾನಪದ ವಿದ್ವಾಂಸರೂ, ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರೂ ಆದ ಶ್ರೀ ಜೀ.ಶಂ. ಪರಮಶಿವಯ್ಯನವರು ಸುತ್ತೂರು ಮಠದ ವಿದ್ಯಾರ್ಥಿನಿಲಯದಲ್ಲಿ ನಾನಿರುವಾಗಲೆ ಇದ್ದರು. ಅವರು ನನಗಿಂತ ಸ್ವಲ್ಪ ಹಿರಿಯರು. ನಾನು ಕವನ ಬರೆದು ಮೆಚ್ಚುಗೆಗೆ ಪಾತ್ರವಾದುದನ್ನು ನೋಡಿ ಅವರೂ ಕೂಡ ಒಂದು ಕವನ ಬರೆದು ಓದಿದರು. ಅವರ ಕವನ ಸಾದಾ ಕಾಗದದಲ್ಲಿ ತಪ್ಪು ಅಕ್ಷರಗಳಲ್ಲಿ ಮುದ್ರಿತವಾಗಿತ್ತು. ಈ ಘಟನೆಯಿಂದ ಜೀ.ಶಂ. ಪರಮಶಿವಯ್ಯನವರಿಗೆ ಸ್ವಲ್ಪ ಮುಜುಗರವಾದುದುಂಟು. ಮುಂದೆ ನನಗಿಂತ ಎಷ್ಟೋ ಪಟ್ಟು ಹೆಚ್ಚಾಗಿ ಅವರು ಪ್ರಸಿದ್ಧಿಯನ್ನು, ಪಾಂಡಿತ್ಯವನ್ನು ಪಡೆದರು. ಆ ಮಾತು ಬೇರೆ.

ಹಿರಿಯ ಸ್ವಾತಂತ್ರ್ಯಯೋಧರೂ, ಕೇಂದ್ರ ಸರಕಾರದ ಸಚಿವರಾದ ಮಾನ್ಯ ಶ್ರೀ ರಂಗನಾಥ ದಿವಾಕರರು ನಮ್ಮ ವಿದ್ಯಾರ್ಥಿನಿಲಯಕ್ಕೆ ಬರುವವರಿದ್ದರು. ಆ ಕಾರ್ಯಕ್ರಮ ನನಗೆ ಗೊತ್ತಿರಲಿಲ್ಲ. ಆ ಕಾರ್ಯಕ್ರಮದ ದಿನ ಎಂದಿನಂತೆ ಸಂಜೆ ಏಳು ಗಂಟೆಗೆ ಊಟಕ್ಕೆ ಬಂದೆನು. ವಿದ್ಯಾರ್ಥಿನಿಲಯದ ಬಾಗಿಲಲ್ಲಿ ನನಗಾಗಿ ಕಾಯುತ್ತಿದ್ದರು. ನಾನು ಬಂದೊಡನೆ ವಿದ್ಯಾರ್ಥಿನಿಲಯದ ಹಾಗೂ ಮಠದ ಮೇಲ್ವಿಚಾರಕರಾದ ಶ್ರೀ ಬಸವಣ್ಣನವರು ಸ್ವಾಮೀಜಿಯವರು ತಕ್ಷಣ ತಮ್ಮನ್ನು ಕಾಣಲು ತಿಳಿಸಿದ್ದಾರೆ ಎಂದರು. ನಾನು ಸ್ವಾಮೀಜಿಯವರನ್ನು ಕಂಡೆ. ಮಾನ್ಯ ಸಚಿವರಾದ ರಂಗನಾಥ ದಿವಾಕರರು ಬರುತ್ತಾರೆ, ನೀನು ಆ ಸಭೆಯಲ್ಲಿ ಮಾತನಾಡಬೇಕೆಂದು ತಿಳಿಸಿದರು.

ಮಾನ್ಯ ದಿವಾಕರರು ಆಗಮಿಸಿದ ಅಂದಿನ ಸಭೆಯಲ್ಲಿ ನಾನು ದಿಟ್ಟತನದಿಂದ ಪುಟ್ಟ ಭಾಷಣ ಮಾಡಿ ದಿವಾಕರರಿಗೆ ನನ್ನ ಪರಿಚಯವನ್ನು ಮಾಡಿಕೊಟ್ಟೆನು. ನಾನು ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನ ಹಿಚಕಡ ಊರಿನವನು ಎಂದಾಗ ದಿವಾಕರರಿಗೆ ಆಶ್ಚರ್ಯವಾಯಿತು. ಶರಬಂಧಿ ಡಿಕ್ಟೇಟರ್ ಎಂದು ಖ್ಯಾತರಾದ ಹಿರಿಯ ಸ್ವಾತಂತ್ರ್ಯಯೋಧ ಬಾಸಗೋಡ ರಾಮನಾಯಕರನ್ನು ಹೆಸರಿಸಿ ಅವರು ನನ್ನ ದೊಡ್ಡಪ್ಪನವರು ಎಂದು ಹೇಳಿದಾಗ ದಿವಾಕರರು ಇನ್ನಷ್ಟು ಕುತೂಹಲಗೊಂಡರು. ಈ ಸುತ್ತೂರು ಶ್ರೀಮಠದ ಅನ್ನದಾಸೋಹದ ಕೀರ್ತಿ ಇಲ್ಲಿಂದ ದೂರದ ಅಂಕೋಲೆಯ ಹಿಚಕಡ ಊರಿನವರೆಗೆ ತಲುಪಿ ಸ್ವಾಮೀಜಿಯವರ ಔದಾರ್ಯ ಹಾಗೂ ಕರುಣೆಯಿಂದ ನಾನು ಕಾಲೇಜಿನ ಶಿಕ್ಷಣ ಪಡೆಯಲು ಸಾಧ್ಯವಾಯಿತು ಎಂದು ಭಾವಪರವಶವಾಗಿ ಹೇಳಿದಾಗ ಇಡೇ ಸಭೆ ಕರತಾಡನ ಮಾಡಿ ಸ್ವಾಗತಿಸಿ ಮೆಚ್ಚುಗೆ ವ್ಯಕ್ತಪಡಿಸಿತು. ಮಾನ್ಯ ದಿವಾಕರರು ಕಣ್ಣುಬಿಟ್ಟು ನನ್ನನ್ನೇ ನೋಡುತ್ತಿದ್ದರು. ನಮ್ಮ ಪೂಜ್ಯ ಸ್ವಾಮೀಜಿಗಳಂತೂ ಸಂತೋಷದ ಸ್ಪ್ರಿಂಗಿನ ಮೇಲೆ ಕೂತಂತೆ ಒಳಗಿಂದೊಳಗೆ ಸಂಭ್ರಮಿಸುತ್ತಿದ್ದರು. ಮಾನ್ಯ ದಿವಾಕರರು ನನ್ನನ್ನು ಹತ್ತಿರ ಕರೆದು ಮೈದಡವಿದರು. ನನ್ನ

ದೊಡ್ಡಪ್ಪ ಬಾಸಗೋಡ ರಾಮನಾಯಕರ ಬಗ್ಗೆ ಕೇಳಿದರು. ಅವರು ತಮ್ಮ ಭಾಷಣದಲ್ಲಿ ಅಂಕೋಲೆಯ ಸ್ವಾತಂತ್ರ್ಯ ಹೋರಾಟದ ಕತೆಯನ್ನು, ಅಲ್ಲಿಯ ಜನರ ಅಪೂರ್ವ ತ್ಯಾಗ ಹಾಗೂ ಸಾಹಸಗಳನ್ನು, ಕರಬಂಧಿಯ ಸಮಯಕ್ಕೆ ಜನರು ಅನುಭವಿಸಿದ ಕಷ್ಟ, ತಾಪತ್ರಯಗಳನ್ನು ಮನೋಜ್ಞವಾಗಿ ವಿವರಿಸಿದರು. ಅಂಕೋಲೆಯ ಸ್ವಾತಂತ್ರ್ಯಸಂಗ್ರಾಮದ ಕತೆಯನ್ನು ಕೇಳಿ ಸಭಿಕರು ತಲೆದೂಗಿದರು. ಎಲ್ಲರ ದೃಷ್ಟಿ ನನ್ನ ಕಡೆಗೆ ಹರಿಯಿತು. ಇನ್ನೊಮ್ಮೆ ನಾನು ಹೀರೋ ಆದೆನು.

ಮಾನ್ಯ ದಿವಾಕರರು ಹಾಗೂ ಕರಮರಕರರು ಅಂಕೋಲಾ ತಾಲ್ಲೂಕಿನ ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವ ವಹಿಸಿ ಚಳವಳಿಗೆ ಮಾರ್ಗದರ್ಶನ ಮಾಡಿದರು. ತಾಲ್ಲೂಕಿನ ಎಲ್ಲ ಹಳ್ಳಿಗಳ ಕುಟುಂಬಗಳ ಪರಿಚಯ ಅವರಿಗಿತ್ತು. ಹಳ್ಳಿಗಳಲ್ಲಿ ಪ್ರತಿಯೊಂದು ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಜನರು ಸಂಗ್ರಾಮದಲ್ಲಿ ಭಾಗವಹಿಸಿ ಶಿಕ್ಷೆ ಅನುಭವಿಸಿರುವರು. ನನ್ನ ತಂದೆಯವರು ಕೂಡ ಸ್ವಾತಂತ್ರ್ಯಯೋಧರಾಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಅಲ್ಲಿಯ ಜನ ಒಂದು ತಲೆಮಾರಿನವರೆಗೆ ಶಿಕ್ಷಣದಿಂದ ವಂಚಿತರಾಗಿದ್ದರು. ಈ ಎಲ್ಲ ಕಥೆಯನ್ನು ಮಾನ್ಯ ರಂಗನಾಥ ದಿವಾಕರರು "ತಮ್ಮ ಕರನಿರಾಕರಣೆಯ ವೀರಕಥೆ"ಯಲ್ಲಿ ಬರೆದಿರುವರು.

ಶ್ರೀ ರಾಜೇಂದ್ರ ಸ್ವಾಮೀಜಿಯವರ ವ್ಯಕ್ತಿತ್ವದ ಘನತೆ ಹಾಗೂ ಮಹಿಮೆ ಅಸಾಧಾರಣವಾದುದಾಗಿತ್ತು. ಒಂದು ರವಿವಾರ ವಿದ್ಯಾರ್ಥಿನಿಲಯದಲ್ಲಿ ರಾತ್ರಿ ಊಟ ಮಾಡಿದ ನಂತರ ಅರಮನೆಯ ದೀಪಗಳ ಸೊಗಸನ್ನು ಇನ್ನೊಮ್ಮೆ ಸಮೀಪದಿಂದ ನೋಡುವ ಮನಸ್ಸಾಯಿತು. ವಿದ್ಯಾರ್ಥಿನಿಲಯ ನಡೆಯುತ್ತಿದ್ದ ಕರವಟ್ಟಿಯಿಂದ ಅರಮನೆ ಅತಿ ಸಮೀಪವಿತ್ತು. ಅರಮನೆಯ ಮಹಾದ್ವಾರವನ್ನು ದಾಟಿದಾಗ ನನ್ನ ಮುಂದುಗಡೆ ಸ್ವಲ್ಪ ದೂರದಲ್ಲಿ ನಾಲ್ಕು ಜನರು ಅಲ್ಲಿಯ ಕಾವಲುಗಾರನೊಡನೆ ಏನೋ ಮಾತನಾಡಿಕೊಂಡು ಅರಮನೆಯ ಸಮೀಪ ಸಾಗುತ್ತಿದ್ದರು. ನಾನು ಅವರನ್ನೇ ಅನುಸರಿಸಿದೆ. ಕಾವಲುಗಾರ ಓಡೋಡಿ ಬಂದು ನನ್ನನ್ನು ತಡೆದನು. ಆ ದಾರಿಯಲ್ಲಿ ಹೋಗಕೂಡದು ಎಂದನು. ಆಗ ನಾನು ಅವರನ್ನು ಹೋಗಲು ಏಕೆ ಬಿಟ್ಟೆ ಎಂದು ಕೇಳಿದೆ. ಆ ಕಾವಲುಗಾರ ಅಷ್ಟಕ್ಕೆ ಕೋಪಗೊಂಡು ನನ್ನನ್ನೇ ನೀನು ಪ್ರಶ್ನಿಸುತ್ತೀಯಾ ಎಂದು ಗದರಿಸಿ ಅರಮನೆಯ ಬಲ್ಬುಗಳನ್ನು ಕಳವು ಮಾಡಲು ಬಂದಿರುವೆಯಾ ಎಂದು ಝಾಡಿಸಿ ನನ್ನ ಕೈಹಿಡಿದು ಎಳೆದುಕೊಂಡು ಸ್ವಲ್ಪ ದೂರದಲ್ಲಿದ್ದ ಪೊಲೀಸ್ ಅಧಿಕಾರಿಯ ಮುಂದೆ ನಿಲ್ಲಿಸಿದನು. ನಾನು ಭಯದಿಂದ ನಡುಗಿದೆ. ಆ ದೀಪಗಳ ಬೆಳಕಿನಲ್ಲಿಯೂ ಕತ್ತಲೆಯ ಅನುಭವವಾಯಿತು. ನಾನು ಅಳುತ್ತ ನಡೆದುದನ್ನು ಹೇಳಿದೆ. ತಪ್ಪಾಯ್ತು ಎಂದೆ. ಆ ಅಧಿಕಾರಿ ಕೂಡ ಸ್ವಲ್ಪ ಬಿಗುಮಾನದಿಂದಲೆ ಇದ್ದ. ನಾನು ಸುತ್ತೂರು ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಎಂದು ನನ್ನ ಬಗಲ ಚೀಲದಲ್ಲಿದ್ದ ಊಟದ ತಾಟನ್ನು ತೋರಿಸಿದೆ. ಸುತ್ತೂರು ಮಠದ ಹೆಸರು ಹೇಳಿದ ಕೂಡಲೆ ಆ ಪೊಲೀಸ್

ಅಧಿಕಾರಿಯ ಮನಸ್ಸು ಮೆತ್ತಗಾಯಿತು. ಬಿಗುಮಾನ ಸಡಿಲವಾಯಿತು. ಯಾಕೆಂದರೆ ಅವನು ಕೂಡ ಸುತ್ತೂರು ವಿದ್ಯಾರ್ಥಿನಿಲಯದ ವಿದ್ಯಾರ್ಥಿಯೇ ಆಗಿದ್ದ. ಶ್ರೀ ರಾಜೇಂದ್ರ ಸ್ವಾಮೀಜಿಯವರ ಬಗ್ಗೆ ಅಪಾರ ಗೌರವವನ್ನು ಹೊಂದಿದವನಾಗಿದ್ದನು. ಅವರು ಮನುಷ್ಯರಲ್ಲಪ್ಪ, ಸಾಕ್ಷಾತ್ ದೇವರು ಎಂದನು. ನೀನು ಯಾವ ಊರಿನವನು ಎಂದು ಕೇಳಿದನು. ನಾನು ಕಾರವಾರ ಜಿಲ್ಲೆಯ ಅಂಕೋಲ ತಾಲ್ಲೂಕಿನ ಒಂದು ಹಳ್ಳಿಯವನು ಎಂದು ಹೇಳಿದಾಗ ಆ ಮಹಾಸ್ವಾಮಿಗಳ ಕೀರ್ತಿ ಎಲ್ಲಿಂದೆಲ್ಲಿಗೆ ಹಬ್ಬಿರುವುದಲ್ಲಾ ಎಂದು ನನ್ನ ಮೇಲೆ ಕನಿಕರ ತಾಳಿ, ಆ ಕಾವಲುಗಾರನಿಗೆ ಬೈದು ನನಗೆ ಶಿಕ್ಷೆ ನೀಡುವ ಬದಲು ತಾನೇ ನನ್ನನ್ನು ಅರಮನೆಯ ಅತಿ ಸಮೀಪದ ಜಾಗಕ್ಕೆ ಕರೆದುಕೊಂಡು ಹೋಗಿ ಅರಮನೆಯ ದೀಪಗಳ ಸೊಬಗನ್ನು ತೋರಿಸಿ ಪ್ರೀತಿಯಿಂದ ಬೀಳ್ಕೊಟ್ಟನು. ಇದಲ್ಲವೆ ಶ್ರೀ ರಾಜೇಂದ್ರ ಸ್ವಾಮೀಜಿಯವರ ನಾಮಮಹಿಮೆ ಎನಿಸಿತು! ನನ್ನನ್ನು ತಡೆದ ಕಾವಲುಗಾರ ಮಾತ್ರ ಮುಖ ಗಂಟುಹಾಕಿಕೊಂಡು ಮಿಕಿಮಿಕಿ ನೋಡುತ್ತ ನಿಂತಿದ್ದನು.

ಇಂದು ಶ್ರೀ ಶಿವರಾತ್ರೀಶ್ವರ ಸುತ್ತೂರು ಮಠದ ಕೀರ್ತಿ ನಾಡಿನ, ದೇಶದ ಗಡಿದಾಟಿ ವಿದೇಶಗಳಲ್ಲಿ ಖ್ಯಾತವಾಗಿದೆ. ಲಕ್ಷಗಟ್ಟಲೆ ಬಡ ವಿದ್ಯಾರ್ಥಿಗಳಿಗೆ ನಿರಂತರವಾಗಿ ಅನ್ನದಾಸೋಹದ ಪುಣ್ಯಕಾರ್ಯದಲ್ಲಿ ತೊಡಗಿಕೊಂಡಿರುವುದಲ್ಲದೆ, ಶಿಕ್ಷಣ ಕ್ಷೇತ್ರದಲ್ಲೂ ತನ್ನದೇ ಛಾಪೊತ್ತಿ ವಿಶಿಷ್ಟ ಸಾಧನೆಗೈದು ಜನಮನ್ನಣೆ ಪಡೆದಿರುವುದು ವಿಶೇಷ ಸಂಗತಿಯಾಗಿದೆ. ಸುತ್ತೂರು ಶ್ರೀಪೀಠವು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆಗೆ ಹೆಸರುವಾಸಿಯಾಗಿದೆ.

ಶ್ರೀಮಠದ ಸಕಲ ಸಿದ್ಧಿ ಸಾಧನೆಗಳಿಗೆ, ಕೀರ್ತಿ, ಪ್ರತಿಷ್ಠೆಗೆ ಅಭೂತಪೂರ್ವ ಪ್ರಗತಿಗೆ ಹುಟ್ಟು ಸನ್ಯಾಸಿ, ಸುತ್ತೂರು ಸುರಧೇನು ಎಂದು ಖ್ಯಾತರಾದ ಶ್ರೀ ಶಿವರಾತ್ರೀಶ್ವರ ರಾಜೇಂದ್ರ ಸ್ವಾಮೀಜಿಯವರು ಹಾಕಿದ ಭದ್ರ ಬುನಾದಿಯೇ ಕಾರಣ ಎಂಬುದು ಸರ್ವವಿದಿತ ವಾದುದಾಗಿದೆ. ಅವರೊಬ್ಬ ಕಾರಣಪುರುಷರಾಗಿದ್ದರು.

"ಜನಸೇವೆ ಮಾಡುವುದು ದೊಡ್ಡ ಅವಕಾಶ. ಅದು ದೇವರು ಕೊಟ್ಟ ವರ" ಎಂದು ಪರಿಭಾವಿಸಿ ಲೋಕಕಲ್ಯಾಣದ ಪುಣ್ಯಕಾರ್ಯದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಅದೇ ಜಪ, ತಪವಾಗಿ ಮಾನವಕಲ್ಯಾಣವೇ ಬದುಕಿನ ಗುರಿಯಾಗಿ, ಒಂದು ಇತಿಹಾಸವೇ ಆಗಿ ಬಾಳಿ ಬದುಕಿದ ಕಾಯಕ ತಪಸ್ವಿ ಶ್ರೀ ರಾಜೇಂದ್ರ ಸ್ವಾಮೀಜಿಯವರು ಒಬ್ಬ ವಿಭೂತಿಪುರುಷರಾಗಿದ್ದರು.

"ಲೋಕದಂತೆ ಬಾರರು ಲೋಕದಂತೆ ಇರರು... ನಿಮ್ಮ ಶರಣರು" ಎಂಬ ನುಡಿಗೆ ರೂಪಕವಾಗಿದ್ದರು.

ನಾನು ಬಿ.ಎ. ಪರೀಕ್ಷೆ ಮುಗಿಸಿ ಊರಿಗೆ ಹೊರಡುವ ಮೊದಲು ಶ್ರೀ ರಾಜೇಂದ್ರ ಸ್ವಾಮೀಜಿಯವರನ್ನು ಭೇಟಿಯಾಗಿದ್ದೆನು. ಎಂ.ಎ. ಓದಲು ಪುನಃ ಮೈಸೂರಿಗೆ ಬರುವಂತೆ

ತಿಳಿಸಿದ್ದರು. ನನಗೂ ಮೈಸೂರಿಗೆ ಬರುವ ತೀವ್ರ ಹಂಬಲವಿತ್ತು. ಆದರೆ ಕೌಟುಂಬಿಕ ಸಮಸ್ಯೆಯಿಂದಾಗಿ ನನಗೆ ಬರಲು ಸಾಧ್ಯವಾಗಿಲ್ಲ. ಮತ್ತೆ ಸ್ವಾಮೀಜಿ ಭೇಟಿಯಾಗಲಿಲ್ಲ. ನನ್ನ ಈವರೆಗಿನ ಬದುಕಿನಲ್ಲಿ ನನ್ನ ವಿಶೇಷ ಗೌರವಕ್ಕೆ, ಅಭಿಮಾನಕ್ಕೆ ಪಾತ್ರರಾದ ಮೊದಲ ಸ್ವಾಮೀಜಿಯವರು ಇವರೇ. ಕೊನೆಯವರೂ ಇವರೇ ಆಗಿದ್ದಾರೆ.

ಇಂದು ಶ್ರೀ ರಾಜೇಂದ್ರ ಸ್ವಾಮೀಜಿಯವರು ಭೌತಿಕವಾಗಿ ಇಲ್ಲವೆಂದೆನಿಸಿದರೂ, ಪಾರಮಾರ್ಥಿಕವಾಗಿ ಚೈತನ್ಯಶೀಲರಾಗಿ ನಮ್ಮ ನಡುವೆ ಇದ್ದಾರೆ. ಅವರು ಹೊತ್ತಿಸಿದ ಆಧ್ಯಾತ್ಮಿಕ ಬೆಳಕು ಇಡೀ ಸುತ್ತೂರು ಸಂಸ್ಥಾನವನ್ನು ಬೆಳಗುತ್ತಲಿದೆ. ಈಗ ಅವರ ದಿವ್ಯ ನೆನಪಿನ ಭೇಟಿ ಮಾತ್ರ ಸಾಧ್ಯವಾಗಿದೆ. ಈ ದಿವ್ಯ ನೆನಪನ್ನು ದಾಖಲಿಸಲು ಕಾರಣರಾದವರು ನನ್ನ ಆತ್ಮೀಯ ಸ್ನೇಹಿತರೂ ಹಾಗೂ ಶ್ರೀ ರಾಜೇಂದ್ರ ಸ್ವಾಮೀಜಿಯವರಿಗೆ ಪ್ರೀತಿಪಾತ್ರರೂ, ಅವರ ಶಿಕ್ಷಣ ಸಂಸ್ಥೆಯಲ್ಲಿ ಶ್ರದ್ಧೆಯ ಸೇವೆ ಸಲ್ಲಿಸಿದ ಪ್ರೊ. ಎ.ಎಸ್. ಜಯರಾಂ ಅವರು.

ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದಲ್ಲಿ ನಾಲ್ಕು ವರ್ಷಗಳ (1957-61) ಅನ್ನದ ಋಣ ಹಾಗೂ ಶ್ರೀ ರಾಜೇಂದ್ರ ಸ್ವಾಮೀಜಿಯವರು ತೋರಿಸಿದ ಪ್ರೀತಿ, ಕರುಣೆ, ಅನುಕಂಪಗಳ ಋಣ ನನ್ನ ಮೇಲಿದೆ. ಈ ಋಣದ ನೆನಪಾದಾಗ ನಾನು ಪುಳಕಗೊಳ್ಳುತ್ತೇನೆ. ನನ್ನ ವ್ಯಕ್ತಿತ್ವವನ್ನು ರೂಪಿಸಿದ ಬಹು ಮಹತ್ವದ ಕಾಲವದು. ಈ ಋಣವನ್ನು ತೀರಿಸುವುದು ಸಾಧ್ಯವಿಲ್ಲ. ಋಣ ತೀರಿಸುವುದಕ್ಕಲ್ಲ ಇರುವುದು, ಕೃತಜ್ಞತೆಯಿಂದ ನೆನಪಿಸಿಕೊಳ್ಳುವುದಕ್ಕೆ ಎಂದು ನನ್ನ ಭಾವನೆ.

"ಸಮಾಜದಿಂದ ತಂದು ಸಮಾಜಕ್ಕೆ ನಾನು ಕೊಟ್ಟಿರುತ್ತೇನೆ. ಅವರು ನನಗೆ ಕೃತಜ್ಞರಾಗಿರಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಸಮಾಜಕ್ಕೆ ಕೃತಜ್ಞರಾಗಿದ್ದು, ತಾವು ಓದಿದುದು ಸಾರ್ಥಕವಾಗುವಂತೆ ಬಾಳಿ, ಸಮಾಜದ ಋಣವನ್ನು ತೀರಿಸಿದರೆ ಅದೇ ಅವರು ನಮಗೆ ತೋರಿಸುವ ಕೃತಜ್ಞತೆ".

ಸ್ವಾಮೀಜಿಯವರು ಈ ದಿವ್ಯ ಸಂದೇಶಕ್ಕನುಸಾರವಾಗಿ ನಾನು ನನ್ನ ಪರಿಸರದಲ್ಲೇ ಉಳಿದು ತಕ್ಕಮಟ್ಟಿಗೆ ನನ್ನ ಮಿತಿಯಲ್ಲಿ ಸಮಾಜದ ಋಣವನ್ನು ತೀರಿಸುವ ಕೆಲಸವನ್ನು ಮಾಡಿದ್ದೇನೆ ಎಂಬ ಆತ್ಮತೃಪ್ತಿ ಇದೆ. ಇದೇ ನಾನು ಸ್ವಾಮೀಜಿಯವರಿಗೆ ಅಪ್ರತ್ಯಕ್ಷವಾಗಿ ಸಲ್ಲಿಸಿದ ಕೃತಜ್ಞತೆ, ಆ ಅನ್ನದ ಋಣದ ಪ್ರತಿಫಲ ಎಂದು ವಿನಮ್ರವಾಗಿ ಭಾವಿಸಿದ್ದೇನೆ.

ಈ ಅನ್ನದ ಋಣದ ನೆನಪಿನ ಸುಗಂಧ ನನ್ನೊಳಗೆ ನನ್ನ ಉಸಿರಿರುವವರೆಗೂ ಸದಾ ಗಮಗಮಿಸುತ್ತಿರುತ್ತದೆ ಎಂಬುದು ನನ್ನ ದೃಢ ವಿಶ್ವಾಸ.

□

# ಶಿಕ್ಷಣರಂಗದ ಕ್ರಾಂತಿಕಾರಿ ಸಂತ

**ಜಿ.ಎಸ್. ರಾಘವಿ**

**ಮೈ**ಸೂರು ಜಿಲ್ಲೆಯ ಕಪಿಲಾ ನದಿಯ ದಂಡೆಯ ಮೇಲಿರುವ ಸುತ್ತೂರಿನ ಶ್ರೀ ವೀರಸಿಂಹಾಸನ ಮಠ ಒಂದು ಸಾವಿರ ವರ್ಷದಷ್ಟು ಭವ್ಯ ಐತಿಹಾಸಿಕ, ಧಾರ್ಮಿಕ ಪರಂಪರೆಯನ್ನುಳ್ಳ ಪ್ರಾಚೀನ ಕ್ಷೇತ್ರ. ಈ ಪೀಠದ ಗುರುಪರಂಪರೆಯ ಎಲ್ಲ ಶಿವಯೋಗಿಗಳು ಜ್ಞಾನದಾನ, ಅನ್ನದಾಸೋಹದ ಮೂಲಕ ಕಾಯಕ ತತ್ವದ ಹಿರಿಮೆಯನ್ನು ಸಾರಿದ್ದಾರೆ.

ಈ ಮಠದ ಇಪ್ಪತ್ತೂರನೇ ಪೀಠಾಧಿಪತಿಗಳಾದ ಶ್ರೀಮನ್ಮಹಾರಾಜ ರಾಜಗುರುತಿಲಕ ಜಗದ್ಗುರುಗಳಾದ ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಾಧನೆಯಂತೂ ಅಭೂತಪೂರ್ವವಾದುದು. ಇವರ ಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಪವಾಡಸದೃಶ ಅಪೂರ್ವ ಕ್ರಾಂತಿಯಾಯಿತೆನ್ನಬಹುದು. ಶ್ರೀಗಳವರ ನೇತೃತ್ವದಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಜಾತಿಮತಭೇದವಿಲ್ಲದೆ ಶಿಕ್ಷಣಸಂಸ್ಥೆಗಳ ಹಾಗೂ ಪ್ರಸಾದನಿಲಯಗಳ ಬಾಗಿಲು ತೆರೆಯಿತು. ಅವರು ಅಂದು ನೆಟ್ಟ ಸಸಿ ಇಂದು ಹೆಮ್ಮರವಾಗಿ ದಷ್ಟಪುಷ್ಟವಾಗಿ ಬೆಳೆದು ನಿಂತಿದೆ. ಸಮಾಜದ ಬಡಮಕ್ಕಳಿಗೆ ಕಾಮಧೇನುವಾದ ಪೂಜ್ಯ ಶ್ರೀಗಳವರು ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ, ಬೆಂಗಳೂರು, ಊಟಿಯಲ್ಲಿ ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ತಂತ್ರಜ್ಞಾನ, ವೈದ್ಯಕೀಯ ಹೀಗೆ ಹಲವಾರು ವಿದ್ಯಾ ಸಂಸ್ಥೆಗಳನ್ನು, ಉಚಿತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅದ್ವಿತೀಯ ಜ್ಞಾನಾನ್ನದಾಸೋಹದ ತಪಸ್ಸು ಚಿರಸ್ಮರಣೀಯವಾದ ಸಂಗತಿಯಾಗಿದೆ. ಆ ಕಾಯಕತಪಸ್ವಿಯ ಆಶೋತ್ತರಗಳನ್ನು, ಸಾಧನೆಗಳನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವವರು ಈಗಿನ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು.

ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಈ ಪರಂಪರೆಯ 24ನೆಯ ಜಗದ್ಗುರುಗಳಾಗಿ 1986ರಲ್ಲಿ ಅಧಿಕಾರ ಸ್ವೀಕರಿಸಿದ ನಂತರ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯಕ್ಷೇತ್ರ ಇನ್ನಷ್ಟು ವ್ಯಾಪಕವಾಗಿ, ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲದೆ, ತಮಿಳುನಾಡು ಹಾಗೂ ಉತ್ತರಪ್ರದೇಶಗಳಿಗೂ ವಿಸ್ತರಿಸಿದೆ. ಪೂಜ್ಯರು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಹಲವಾರು

ಸಂಘಸಂಸ್ಥೆಗಳು, ಆರೋಗ್ಯ, ಸಾಹಿತ್ಯ, ಸಂಗೀತ, ಸಂಸ್ಕೃತಿ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸುತ್ತಿವೆ.

ಜೆಎಸ್ಎಸ್ ಮಹಾವಿದ್ಯಾಪೀಠದ ಆಶ್ರಯದಲ್ಲಿ ಇಂದು ಸುಮಾರು 350ಕ್ಕೂ ಹೆಚ್ಚು ಶಿಕ್ಷಣಸಂಸ್ಥೆಗಳು ಶಿಶುವಿಹಾರದಿಂದ ಇಂಜಿನಿಯರಿಂಗ್, ಮೆಡಿಕಲ್, ಸ್ನಾತಕೋತ್ತರ ಶಿಕ್ಷಣದವರೆಗೆ ಕರ್ನಾಟಕ, ತಮಿಳುನಾಡು ಹಾಗೂ ಉತ್ತರಪ್ರದೇಶ ರಾಜ್ಯಗಳಲ್ಲಿ ಸೇವಾ ನಿರತವಾಗಿದ್ದು, 1,00,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಜ್ಞಾನಾರ್ಜನೆ ಮಾಡುತ್ತಿದ್ದಾರೆ. 15–20 ಸಾವಿರ ಸಿಬ್ಬಂದಿವರ್ಗದವರು ಈ ಬೃಹತ್ ಸಂಸ್ಥೆಯಡಿ ಆಶ್ರಯ ಪಡೆದಿದ್ದಾರೆ.

ಸುತ್ತೂರಿನ ಒಂದು ಭವ್ಯವಾದ ಕಟ್ಟಡದಲ್ಲಿ 1ರಿಂದ 10ನೆಯ ತರಗತಿಯವರೆಗೆ 4500ಕ್ಕೂ ಮಿಕ್ಕು ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯೆ, ಅಶನ, ವಸತಿಗಳನ್ನು ನೀಡಿ ಅವರುಗಳನ್ನು ರಾಷ್ಟ್ರದ ಮುಂದಿನ ಸತ್ಪ್ರಜೆಗಳನ್ನಾಗಿ ರೂಪಿಸಲಾಗುತ್ತಿದೆ.

ಈಗ ಶ್ರೀಕ್ಷೇತ್ರದಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಜೊತೆಗೆ, ಇತ್ತೀಚೆಗೆ ಈಶಾನ್ಯ ರಾಜ್ಯಗಳಿಂದ ಬಂದಿರುವ ನೂರಾರು ಮಕ್ಕಳಿಗೆ ಉಚಿತ ಊಟ, ವಸತಿಯನ್ನಿತ್ತು ಶಿಕ್ಷಣ ಸೌಲಭ್ಯವನ್ನೂ ನೀಡಲಾಗಿದೆ. ಮೈಸೂರು, ಚಾಮರಾಜನಗರ, ಬೆಂಗಳೂರು, ಹಾಸನ, ಮಂಡ್ಯ, ಉತ್ತರ ಕರ್ನಾಟಕದ ಬಿಜಾಪುರ, ತಮಿಳುನಾಡಿನ ತಾಳವಾಡಿ ಹಾಗೂ ಇತರ ಕಡೆಗಳಿಂದ ಬಂದಿರುವ ಬಡ ಕುಟುಂಬದ ವಿದ್ಯಾರ್ಥಿಗಳು ಸುತ್ತೂರಿನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದಾರೆ.

**ತಂದೆತಾಯಿಗಳ ಕಿರು ಪರಿಚಯ**

ಮಠದ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಸಹಾಯ ನೀಡುತ್ತಿದ್ದವರು ಶ್ರೀ ಮಲ್ಲಿಕಾರ್ಜುನದೇವರು. ಮಠದ ಉಸ್ತುವಾರಿಯನ್ನು ನೋಡಿಕೊಳ್ಳುವ ಸಂಪೂರ್ಣ ಹೊಣೆ ಇವರದಾಗಿತ್ತು. ಅಲ್ಲದೆ, ಪೂಜ್ಯ ಸ್ವಾಮಿಗಳ ಲೋಕಾನುಕಂಪೆಯ ಕಾರ್ಯನಿರ್ವಾಹಕ ಕ್ರಿಯಾಶಕ್ತಿಯಾಗಿದ್ದರು. ಸುತ್ತಮುತ್ತಲಿನ ಜನರ ಕಷ್ಟಕಾರ್ಪಣ್ಯಗಳಲ್ಲಿ ಭಾಗಿಯಾಗಿ ಅವರಿಗೆ ಮಾರ್ಗದರ್ಶನ ನೀಡುತ್ತಿದ್ದರು. ನೊಂದವರಿಗೆ ಇವರ ಸಹಾಯಹಸ್ತ ಸದಾ ಸಿದ್ಧವಾಗಿರುತ್ತಿತ್ತು. ಸುತ್ತಮುತ್ತಲ ಹಳ್ಳಿಗಳ ನ್ಯಾಯತೀರ್ಮಾನದಿಂದ ಹಿಡಿದು ಜನರ ಕಾಯಿಲೆಗಳಿಗೆ ಔಷಧಿ ಕೊಡುವುದರವರೆಗೂ ಅವರ ಕಾರ್ಯವ್ಯಾಪ್ತಿ ಬೆಳೆದಿತ್ತು. ಇವರಿಗೆ ಅನುರೂಪರಾದ ಧರ್ಮಪತ್ನಿ ಶಂಕರಮ್ಮನವರು (ಮರಮ್ಮಣ್ಣಿ).

ಶಾಲಿವಾಹನ ಶಕ 1838ನೇ ನಳನಾಮ ಸಂವತ್ಸರದ ಭಾದ್ರಪದ ಶುದ್ಧ ಪಾಡ್ಯದ ಸುಮುಹೂರ್ತದಲ್ಲಿ ಮರಮ್ಮಣ್ಣಿಯವರಿಗೆ ಒಂದು ಮಗು ಜನಿಸಿತು. ಶಿಶುವಿಗೆ 'ಶಿವರಾತ್ರಿ ರಾಜೇಂದ್ರ' ಎಂದು ನಾಮಕರಣ ಮಾಡಲು ಸ್ವತಃ ಶ್ರೀ ಶಿವರಾತ್ರೀಶ್ವರರೇ ಆದೇಶ ನೀಡಿದರು. ಮಗುವಿಗೆ ಐದು ವರ್ಷಗಳು ತುಂಬಿತು. ಪೂರ್ವನಿರ್ಧಾರದಂತೆ

ತಂದೆತಾಯಿಗಳು ಮಗುವನ್ನು ಕರೆದುಕೊಂಡು ಶ್ರೀಮಠಕ್ಕೆ ಹೋದರು. ಮಗುವನ್ನು ಶ್ರೀಗಳವರ ಪಾದಗಳ ಬಳಿ ಅರ್ಪಿಸಿದರು. ಅಂದಿನಿಂದ ಮಗುವಿನ ಹೊಣೆ ಸ್ವತಃ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರದೇ ಆಯಿತು.

ಹೀಗೆ ಶಿವರಾತ್ರಿ ರಾಜೇಂದ್ರನ ಪ್ರಾಥಮಿಕ ಪಾಠ ಶಿಕ್ಷಣ, ಮಠದಲ್ಲಿಯೇ ನಡೆದು ಕೆಲ ವರ್ಷಗಳಲ್ಲಿಯೇ ಕೊನೆಯ ಹಂತವನ್ನು ಮುಟ್ಟಿತು. ಎಂಟು ವರ್ಷ ತುಂಬಿದ ಬಾಲಕನಿಗೆ ಶಿವದೀಕ್ಷೆ ನೀಡಿ ಸ್ವಾಮಿಗಳಲ್ಲಿ ಆತನನ್ನು ಇಷ್ಟಲಿಂಗ ಪೂಜೆಯಲ್ಲಿ ತೊಡಗಿಸಿದರು.

ದಿನಾಂಕ 24.2.1928ರಂದು ಶ್ರೀ ಶಿವರಾತ್ರಿ ರಾಜೇಂದ್ರರ ಜಗದ್ಗುರು ಪೀಠದ ಪಟ್ಟಾಭಿಷೇಕ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಆಧುನಿಕ ಜೀವನದಲ್ಲಿ ಕೇವಲ ಸಂಸ್ಕೃತ ವಿದ್ಯಾಭ್ಯಾಸವಷ್ಟೇ ಸಾಲದು, ಆಧುನಿಕ ಶಿಕ್ಷಣವೂ ಬೇಕೆಂದು ಅದಾಗಲೇ ಮನಗಂಡ ಅವರು ಸಂಸ್ಕೃತದ ಜೊತೆಗೆ ಇಂಗ್ಲಿಷ್ ಭಾಷೆಯನ್ನೂ ಕಲಿತರು. ಆಧುನಿಕ ಪ್ರಜ್ಞೆಯನ್ನು ರೂಪಿಸಿಕೊಂಡರು. ಇದೇ ಮುಂದೆ ಅವರು ಮಾಡಿದ ಸಾಧನೆಗೆ ತಳಹದಿಯಾಯಿತು.

ಮೈಸೂರಿನ ಶೈಕ್ಷಣಿಕ ಇತಿಹಾಸದಲ್ಲಿ ಅದೊಂದು ಮಹತ್ತರವಾದ ದಿನ. ಬಹುಶ ಮುಂದೆ ಇತಿಹಾಸವನ್ನೇ ನಿರ್ಮಿಸುವ ಶೈಕ್ಷಣಿಕ ಸಾಧನೆಗೆ ನಾಂದಿಯಾದ ಐತಿಹಾಸಿಕ ದಿನ. 19.9.1941ರಂದು ಸುತ್ತೂರು ಮಠದ ಆಶ್ರಯದಲ್ಲಿ ಉಚಿತ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಆಗ್ಗೆ ಅರಮನೆಯ ಹುಜೂರ್ ಸೆಕ್ರೆಟರಿಗಳಾಗಿದ್ದ ಶ್ರೀ ಕೆ. ಗುರುದತ್ ಅವರ ಅಧ್ಯಕ್ಷತೆಯಲ್ಲಿ ಆ ವಿದ್ಯಾರ್ಥಿನಿಲಯದ ಉದ್ಘಾಟನೆ ನೆರವೇರಿತು. ಮೊದಲ ತಂಡದಲ್ಲಿ 10–12 ಜನ ವಿದ್ಯಾರ್ಥಿಗಳಿದ್ದರು. ಉದ್ಘಾಟನಾ ಸಮಾರಂಭಕ್ಕೆ ಬಂದಿದ್ದವರಿಗೆಲ್ಲ ಪಾಯಸದ ಸಿಹಿ ಊಟ ನೀಡುವ ಮೂಲಕ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಅಂದಿನ ಪರಿಸ್ಥಿತಿಯಲ್ಲಿ ಅದನ್ನು ನಿರ್ವಹಿಸುವುದು ಸುಲಭವಾದ ಕೆಲಸವೇನೂ ಆಗಿರಲಿಲ್ಲ. ತಮ್ಮ ನಿರಂತರ ದುಡಿಮೆಯನ್ನೂ ಅವರು ಅದಕ್ಕೆ ಧಾರೆಯೆರೆದರು. ಟಿ. ನರಸೀಪುರ, ಚಾಮರಾಜನಗರ, ನಂಜನಗೂಡು ಮೊದಲಾದ ಕಡೆಗಳಲ್ಲಿ ಇದೇ ರೀತಿಯಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿದರು.

ಮೈಸೂರಿನಲ್ಲಿ ಸುತ್ತೂರು ಮಠದ ಹಾಸ್ಟೆಲ್ ಪ್ರಸಿದ್ಧವಾದ ಮೇಲಂತೂ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಮೊದಲಾದ ಕಡೆಗಳಿಂದ ವಿದ್ಯಾರ್ಥಿಗಳೆಲ್ಲ ಮೈಸೂರಿಗೇ ಹೆಚ್ಚಾಗಿ ಬರತೊಡಗಿದರು.

**ರಾಜಗುರುತಿಲಕ**

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಲೋಕಹಿತಕಾರ್ಯಗಳು ಮತ್ತು ಅವರ ಕರ್ತವ್ಯ ಶಕ್ತಿ ಮಹಾರಾಜರನ್ನು ಆಕರ್ಷಿಸಿದುವು. ಅರಮನೆಗೆ ಅವರನ್ನು ಹೆಚ್ಚು

ಕರೆಸಿಕೊಳ್ಳತೊಡಗಿದರು. ಅವರನ್ನು ಗುರುಗಳೆಂದು ಗೌರವಿಸಿ ಅವರಿಗೆ 'ರಾಜಗುರುತಿಲಕ' ಎಂಬ ಪ್ರಶಸ್ತಿಯನ್ನು ನೀಡಿದರು.

**ಮಹಾವಿದ್ಯಾಪೀಠ ಸ್ಥಾಪನೆ**

ಮೈಸ್ರರು ನಗರದಲ್ಲಿದ್ದ ಶ್ರೀ ಮಠಕ್ಕೆ ಸೇರಿದ ಕೆಲವು ಸ್ಥಳೀಯ ಕಟ್ಟಡಗಳನ್ನೇ ರಿಪೇರಿ ಮಾಡಿಸಿಕೊಂಡು ಶ್ರೀಗಳವರು ತಮ್ಮ ಕಾರ್ಯಾಲಯದ ಕೇಂದ್ರವನ್ನಾಗಿ ಮಾಡಿಕೊಂಡರು. ತಮ್ಮ ವಾಸ್ತವ್ಯವನ್ನು ಅಲ್ಲಿಗೇ ಬದಲಾಯಿಸಿಕೊಂಡರು. ಮೊಟ್ಟಮೊದಲನೆಯ ಜೆಎಸ್‌ಎಸ್ ಪ್ರೌಢಶಾಲೆಯ ನೆಲೆಯೂ ಅದೇ ಆಯಿತು. ಅಲ್ಲಿಂದ ಕ್ರಮೇಣ ಅದು ಬೆಳೆಯತೊಡಗಿ ಇಂದು ನೂರಾರು ಭವ್ಯ ಕಟ್ಟಡಗಳು ತಲೆಯೆತ್ತಿ ನಿಂತಿವೆ. ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಕಾಲೇಜುಗಳು ಅಲ್ಲಿ ನಡೆಯುತ್ತಿವೆ. ಇತ್ತೀಚೆಗೆ ಆ ಸಂಕೀರ್ಣವು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಮಾನವೀಯ ಅನುಕಂಪೆಯ ಸಾಕಾರವೆಂಬಂತೆ ಅಲ್ಲಿ ಜೆಎಸ್‌ಎಸ್ ಆಸ್ಪತ್ರೆ ಕೆಲಸ ಮಾಡುತ್ತಿದೆ. ಅಲ್ಲಿ ಹೊರರೋಗಿಗಳ ವಿಭಾಗದ ನೂತನ ಕಟ್ಟಡ ನಿರ್ಮಾಣವಾಗಿದೆ. ಹಿಂದೆ ಬನ್ನಿಮಂಟಪದ ಬಳಿ ಲಭಿಸಿದ ವಿಶಾಲವಾದ ಜಾಗದಲ್ಲಿ ವಿದ್ಯಾರ್ಥಿನಿಲಯ ನಡೆಯುತ್ತಿದ್ದು ಇಂದು ಅದು ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಬೃಹತ್ ಕಟ್ಟಡವಾಗಿ ಆಧುನಿಕ ವೈದ್ಯಕೀಯ ಶಿಕ್ಷಣದ ಅಪೂರ್ವ ಕೇಂದ್ರವಾಗಿದೆ.

1954 ರಲ್ಲಿ ಸ್ಥಾಪಿತವಾದ 'ಚಾಮರಾಜೇಶ್ವರ ಎಜುಕೇಷನ್ ಸೊಸೈಟಿ' ಎಂಬ ಸಂಸ್ಥೆ ಪದವಿಪೂರ್ವ (ಇಂಟರ್ ಮೀಡಿಯೇಟ್) ಕಾಲೇಜನ್ನು ನಡೆಸುತ್ತಿತ್ತು. ಮೈಸೂರಿನ ಸರಸ್ವಪುರಂ ಬಡಾವಣೆಯಲ್ಲಿ 1962ರಲ್ಲಿ ವಿದ್ಯಾರ್ಥಿನಿಯರಿಗಾಗಿ ಒಂದು ಪ್ರೌಢಶಾಲೆ ಪ್ರಾರಂಭವಾಯಿತು.

1963 ಇನ್ನೊಂದು ದೃಷ್ಟಿಯಿಂದ ಬಹಳ ಪ್ರಮುಖವಾದ ವರ್ಷ. ಇದುವರೆಗೆ ವಿದ್ಯಾರ್ಥಿನಿಲಯಗಳನ್ನೂ, ಸಾಮಾನ್ಯ ಶಾಲೆಗಳನ್ನೂ ಪ್ರಾರಂಭಿಸುತ್ತಿದ್ದ ಸ್ವಾಮಿಗಳ ದೃಷ್ಟಿ ತಾಂತ್ರಿಕ ವಿದ್ಯಾಭ್ಯಾಸದ ಕಡೆಗೆ ಹೊರಳಿತು. ಅದರಲ್ಲಿಯೂ ಎಂಜಿನಿಯರಿಂಗ್ ಶಿಕ್ಷಣಕ್ಕೆ ಆಗ ತುಂಬಾ ಬೇಡಿಕೆಯಿದ್ದು, ಅನೇಕರಿಗೆ ಅವಕಾಶ ಸಿಕ್ಕದೆ ನಿರಾಶರಾಗುತ್ತಿದ್ದುದನ್ನು ಗಮನಿಸಿ ಗುರುಗಳು ಎಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ತೀರ್ಮಾನಿಸಿದರು. 1963ರಲ್ಲಿ ಜೆಎಸ್‌ಎಸ್ ಮಠದಲ್ಲಿಯೇ ಮೊದಲ ತರಗತಿಗಳು ಪ್ರಾರಂಭವಾಗಿ ಅನಂತರ ಮಾನಸಗಂಗೋತ್ರಿಯ ಪಶ್ಚಿಮ ಭಾಗದಲ್ಲಿ ಈ ಮೊದಲೇ ಪಡೆದಿದ್ದ 62 ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ಅದು ಕಾರ್ಯಾರಂಭ ಮಾಡಿತ್ತು. ಜೆಎಸ್‌ಎಸ್ ವಿದ್ಯಾಸಂಸ್ಥೆಯ ಬೆಳವಣಿಗೆಯಲ್ಲಿ ಮೊದಲಿನಿಂದಲೂ ವಿಶೇಷ ನೆರವನ್ನೀಯುತ್ತಾ ಶ್ರೀಮಠಕ್ಕೆ ಬೆಂಬಲವಾಗಿ ನಿಂತಿದ್ದ ಮೈಸೂರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಹೆಸರನ್ನು ಆ ಕಾಲೇಜಿಗೆ ಇಡಲಾಯಿತು. ಶ್ರೀ ಜಯಚಾಮರಾಜೇಂದ್ರ

ಕಾಲೇಜ್ ಆಫ್ ಎಂಜಿನಿಯರಿಂಗ್ (ಎಸ್.ಜೆ.ಸಿ.ಇ.) ಎಂಬ ಹೆಸರಿನ ಈ ಸಂಸ್ಥೆ, ಇಂದು ನಾಡಿನ ಅಗ್ರಗಣ್ಯ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದಾಗಿದೆ.

1964ರಲ್ಲಿ ಮೈಸೂರಿನಲ್ಲಿ ಒಂದು ಪ್ರಥಮ ದರ್ಜೆ ಕಾಲೇಜನ್ನು (ವಿಜ್ಞಾನದ ವಿಷಯವೂ ಸೇರಿದಂತೆ) ಪ್ರಾರಂಭಿಸಿದರು. ಆನೆಕರೋಟಿಯ ವಿಸ್ತಾರವಾದ ಜಾಗದಲ್ಲಿ ಪ್ರೌಢಶಾಲೆ ಮತ್ತು ವಿದ್ಯಾರ್ಥಿನಿಲಯಗಳು ನಡೆಯುತ್ತಿದ್ದುವು. ಅದೇ ಸ್ಥಳದಲ್ಲಿ ಈ ಕಾಲೇಜು ಪ್ರಾರಂಭವಾಯಿತು. ಕೆಲವೇ ವರ್ಷಗಳಲ್ಲಿ ಅದು ಕಲೆ, ವಾಣಿಜ್ಯ, ವಿಜ್ಞಾನ, ವ್ಯವಹಾರ ನಿರ್ವಹಣಾ ವಿಭಾಗಗಳನ್ನೂ ಒಳಗೊಂಡು ಸಾವಿರಾರು ವಿದ್ಯಾರ್ಥಿಗಳಿಂದ ಕೂಡಿ ವಿಸ್ತಾರವಾಗಿ ಬೆಳೆಯಿತು. ಅದಕ್ಕೆ ತಕ್ಕ ಹಾಗೆ ದೊಡ್ಡ ದೊಡ್ಡ ಕಟ್ಟಡಗಳೂ ಅಲ್ಲಿ ತಲೆಯೆತ್ತಿದುವು.

ಈ ಎಲ್ಲ ಸಂಸ್ಥೆಗಳನ್ನೂ ಒಗ್ಗೂಡಿಸುವ ಕೇಂದ್ರಸಂಸ್ಥೆ ಅಸ್ತಿತ್ವಕ್ಕೆ ಬಂದು ಅದಕ್ಕೆ “ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ” ಎಂಬ ಅರ್ಥವತ್ತಾದ ಹೆಸರನ್ನು ಇಡಲಾಯಿತು. 1954ರಲ್ಲಿ ಸ್ಥಾಪಿತವಾದ “ಜೆಎಸ್‌ಎಸ್ ಮಹಾವಿದ್ಯಾಪೀಠ” ಈಗಾಗಲೇ ಬೃಹತ್ಪ್ರಮಾಣದಲ್ಲಿ ಬೆಳೆದಿದ್ದರೂ ಸಾರ್ಥಕ ಹೆಜ್ಜೆಗಳಿಡುತ್ತ ವರ್ಷೇ ವರ್ಷೇ ಇನ್ನೂ ಹೆಚ್ಚು ಸಂಸ್ಥೆಗಳನ್ನು ಪ್ರಾರಂಭಿಸುತ್ತ ಮುನ್ನಡೆಯತೊಡಗಿದೆ.

ಮೈಸೂರಿನಲ್ಲಾಗಲೀ ಅಥವಾ ಅಕ್ಕಪಕ್ಕದ ಜಿಲ್ಲೆಗಳಲ್ಲಾಗಲೀ ಫಾರ್ಮಸಿ ಕಾಲೇಜು ಇಲ್ಲದೆ ಇರುವುದನ್ನು ಗಮನಿಸಿದ ಸ್ವಾಮಿಗಳು 1973 ರಲ್ಲಿ ಒಂದು ಫಾರ್ಮಸಿ ಕಾಲೇಜನ್ನು ಮೈಸೂರಿನಲ್ಲಿಯೇ ಸ್ಥಾಪಿಸಿದರು. ಅದು ಈ ಭಾಗದ ವಿದ್ಯಾರ್ಥಿಗಳನ್ನಷ್ಟೇ ಅಲ್ಲದೆ ಹೊರನಾಡುಗಳಿಂದಲೂ ವಿದ್ಯಾರ್ಥಿಗಳನ್ನು ಆಕರ್ಷಿಸುವ ಮಟ್ಟದಲ್ಲಿ ಬೆಳೆಯಿತು. 1980 ರಲ್ಲಿ ಇಂಥದೇ ಒಂದು ಜೆಎಸ್‌ಎಸ್ ಫಾರ್ಮಸಿ ಕಾಲೇಜನ್ನು ಉದಕಮಂಡಲದಲ್ಲಿ (ಊಟಿ) ಆ ಭಾಗದ ಜನತೆಯ ಅನುಕೂಲಕ್ಕಾಗಿ ಪ್ರಾರಂಭಿಸಿದರು. ನಿಸರ್ಗಸಂಪತ್ತಿನ ಸುಂದರ ತಾಣವಾದ ಅಲ್ಲಿ 1954ರಷ್ಟು ಹಿಂದೆಯೇ ಜಗದ್ಗುರುಗಳವರು ಒಂದು ಜಾಗವನ್ನು ಪಡೆದು ವೀರಶೈವ ಆಶ್ರಮವನ್ನು ಸ್ಥಾಪಿಸಿದ್ದರು. ಅದೇ ಅಲ್ಲಿನ ಫಾರ್ಮಸಿ ಕಾಲೇಜಿಗೆ ಆಶ್ರಯವಾಯಿತು. ಪ್ರಾಥಮಿಕಶಾಲೆ ಮತ್ತು ಪ್ರೌಢಶಾಲೆಗಳಿಗೆ ದೈಹಿಕ ಶಿಕ್ಷಕರ ಅಗತ್ಯವನ್ನು ಮನಗಂಡು 1981ರಲ್ಲಿ ಮನಗಂಡು ಮೈಸೂರಿನಲ್ಲಿ ದೈಹಿಕ ಶಿಕ್ಷಕರ ಕಾಲೇಜನ್ನು ಪ್ರಾರಂಭಿಸಿದರು.

**ಶರಣತತ್ವ ಪ್ರಚಾರ ಸಮಿತಿ**

ಜನಸಾಮಾನ್ಯರ ಜೀವನದ ಬಗೆಗೂ ಸ್ವಾಮೀಜಿಯವರ ಕಳಕಳಿ ಅಪಾರವಾಗಿತ್ತು. ಹಳ್ಳಿಗರ ಬಡತನದ ಜೊತೆಗೆ ಅವರ ಅಜ್ಞಾನ, ಅವಿದ್ಯೆ, ದುಃಖ, ದೌರ್ಬಲ್ಯಗಳನ್ನು ಕಂಡು ಅವರ ಮನಸ್ಸು ಮರುಗಿತು. ಅವರಲ್ಲಿ ಧರ್ಮದ ಬೆಳಕನ್ನು ಬೀರಿ ಅವರನ್ನು

ಸನ್ಮಾರ್ಗದ ಕಡೆಗೆ ತಿರುಗಿಸುವ ಕಳಕಳಿಯಿಂದ ಅದಕ್ಕೆ ಸಹಾಯಕವಾಗುವ ಕಾರ್ಯಕ್ರಮಗಳನ್ನು ಕೈಗೊಳ್ಳುವಂತಹ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾದರು. ಅದರ ಫಲವೇ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ. ಇದರಲ್ಲಿ ಹತ್ತು ಲಕ್ಷ ರೂಪಾಯಿಗಳ ಪುದುವಟ್ಟನ್ನಿಟ್ಟು ಅದರಿಂದ ಬರುವ ಬಡ್ಡಿಯಿಂದ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳು ನಿರಂತರವಾಗಿ ನಡೆಸಲು ಅನುಕೂಲ ಮಾಡಿಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಧಾರ್ಮಿಕ ಪ್ರಚಾರದಂಥ ರಚನಾತ್ಮಕ ಕಾರ್ಯಗಳಿಗೆ ಇದರಲ್ಲಿ ಹೆಚ್ಚು ಒತ್ತನ್ನು ನೀಡಲಾಗಿದೆ. ಗ್ರಂಥ ಪ್ರಕಟಣೆ, ಬಹುಮಾನ ಯೋಜನೆ, ವಿಚಾರಗೋಷ್ಠಿ ಮೊದಲಾದ ಕಾರ್ಯಕ್ರಮಗಳೂ ಇದರಲ್ಲಿ ಸೇರುತ್ತವೆ. ಇದರ ಜೊತೆಗೆ 'ಜೆಎಸ್‌ಎಸ್ ಸಂಗೀತ ಸಭಾ' ಸ್ಥಾಪನೆಯೂ ಆಯಿತು.

**ಆರೋಗ್ಯಧಾಮ**

1974ರಲ್ಲಿ ಮೈಸೂರಿನಲ್ಲಿ 'ಆರೋಗ್ಯಧಾಮ' ಎಂಬ ಒಂದು ಕೇಂದ್ರವನ್ನು ರಾಜೇಂದ್ರ ಶ್ರೀಗಳವರು ಸ್ಥಾಪಿಸಿದರು. ಜೆಎಸ್‌ಎಸ್ ಸಂಸ್ಥೆಯ ಎಲ್ಲ ಉದ್ಯೋಗಿಗಳಿಗೂ ಮತ್ತು ಸಾರ್ವಜನಿಕರಿಗೂ ಅದರಿಂದ ಅನುಕೂಲವಾಯಿತು. 1984ರಲ್ಲಿ ಮೆಡಿಕಲ್ ಕಾಲೇಜು ಪ್ರಾರಂಭವಾಯಿತು. ಅತ್ಯಾಧುನಿಕ ಉಪಕರಣಗಳಿಂದ ಕೂಡಿದ್ದು ವಿದ್ಯಾರ್ಥಿಗಳ ಪ್ರಾಯೋಗಿಕ ಅಧ್ಯಯನಕ್ಕೆ ಅನುಕೂಲವಾಗುವಂತೆ ಸಲಕರಣೆಗಳನ್ನು ಪೂರೈಸಲಾಯಿತು.

ಬಳಿಕ ಸ್ವಾಮೀಜಿಯವರು ತಮ್ಮದೇ ಆದ ಬೃಹತ್ ಪ್ರಮಾಣದ ಆಸ್ಪತ್ರೆಯೊಂದನ್ನು ಶೀಘ್ರವಾಗಿ ನಿರ್ಮಿಸಲು ನಿರ್ಧರಿಸಿದರು. ಬನ್ನಿಮಂಟಪದಲ್ಲಿ ಮೆಡಿಕಲ್ ಕಾಲೇಜು ಕಟ್ಟಡ ಭವ್ಯವಾಗಿ ಎದ್ದುನಿಂತಿತ್ತು. ಇಲ್ಲಿ ಆನೆಕರೋಟಿಯಲ್ಲಿ ಸುಮಾರು 1,500 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ಸಿದ್ಧವಾಗತೊಡಗಿತು. ಉತ್ತಮ ಅಧ್ಯಾಪಕರನ್ನೂ, ಪ್ರಿನ್ಸಿಪಾಲರನ್ನೂ ಮೆಡಿಕಲ್ ಕಾಲೇಜಿಗೆ ನೇಮಿಸಿದಂತೆ, ಆಸ್ಪತ್ರೆಯ ಎಲ್ಲ ವಿಭಾಗಗಳಿಗೂ ಪರಿಣತರಾದ ವೈದ್ಯರುಗಳನ್ನು ಮನವೊಲಿಸಿ ಕರೆದುಕೊಂಡು ಬಂದರು. ರಾಜೇಂದ್ರ ಶ್ರೀಗಳವರ ಉತ್ತರಾಧಿಕಾರಿಗಳೂ ಇಂದಿನ ಜಗದ್ಗುರುಗಳೂ ಆದ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಮರ್ಥ ನೇತೃತ್ವದಲ್ಲಿ ಕನಸುಗಳು ಇನ್ನೂ ಬೃಹತ್ತಾಗಿ ಬೆಳೆಯುತ್ತಿವೆ; ಬಹುಮುಖವಾಗಿ ವ್ಯಾಪಿಸುತ್ತಿವೆ. ಹೊರರೋಗಿಗಳ ಚಿಕಿತ್ಸಾ ಕಟ್ಟಡ ಬೃಹತ್ತಾಗಿ ಬೆಳೆದು ತಲೆಯೆತ್ತಿ ನಿಂತಿರುವುದೇ ಅದಕ್ಕೆ ಸಾಕ್ಷಿ.

ನಿರಂತರವಾದ ಕಾಯಕದ ಶ್ರಮದ ಒತ್ತಡವನ್ನು ರಾಜೇಂದ್ರ ಶ್ರೀಗಳವರ ದೇಹ ತಡೆಯಲಾರದೆ ಹೋಯಿತು. ಆಶ್ಚರ್ಯವೆಂದರೆ ಇದಾವುದನ್ನೂ ಲೆಕ್ಕಿಸದ ಅವರ ಮನೋಸ್ಥೈರ್ಯ ಮತ್ತು ಸಂಕಲ್ಪಶಕ್ತಿ. ಅವರನ್ನು ನೋಡಿಕೊಳ್ಳುತ್ತಿದ್ದ ವೈದ್ಯರು ಏನೇ ಹೇಳಿದರೂ, ಕಿವಿಗೆ ಹಾಕಿಕೊಳ್ಳದೆ ತಮ್ಮ ಕೆಲಸಕಾರ್ಯಗಳಲ್ಲಿ ಎಂದಿನಂತೆ

ತೊಡಗಿರುತ್ತಿದ್ದರು. ದೈಹಿಕ ತೊಂದರೆಗಳೆಲ್ಲವನ್ನೂ ಮೆಟ್ಟಿನಿಂತ ಅವರ ಕ್ರಿಯಾನಿಷ್ಠೆಯನ್ನು ಕಂಡು ಕೆಲವು ವೇಳೆ ವೈದ್ಯರೇ ಅಚ್ಚರಿಗೊಳ್ಳುತ್ತಿದ್ದರು. ಒಮ್ಮೆ ಲಘು ಹೃದಯಾಘಾತವಾದಾಗ ವೈದ್ಯರೂ, ಶ್ರೀಗಳವರ ಕೆಲವು ನಿಕಟವರ್ತಿಗಳಾದ ಸ್ವಾಮಿಗಳೂ ಅವರನ್ನು ಒತ್ತಾಯಪೂರ್ವಕವಾಗಿ ಕೆಲಕಾಲ ವಿಶ್ರಾಂತ್ರಿಯಲ್ಲಿಟ್ಟಿದ್ದರು. ಆದರೆ ಕೆಲವು ದಿನಗಳಲ್ಲಿಯೇ ಮತ್ತೆ ಎಂದಿನಂತೆ ಕೆಲಸದಲ್ಲಿ ಮಗ್ನರಾಗಿದ್ದರು. ಮುಂದೆ ಅವರು ವಿದೇಶಪ್ರಯಾಣ. ಲಂಡನ್, ಅಮೆರಿಕ ಹೀಗೆ ಅವರ ಪ್ರವಾಸ ಸಾಗಿತ್ತು. ನ್ಯೂಯಾರ್ಕ್‌ನಲ್ಲಿ ಜಗದ್ಗುರುಗಳವರ ದೈಹಿಕ ಸ್ಥಿತಿಯನ್ನು ಗಮನಿಸಿದ ಭಕ್ತರು ಅವರ ಆರೋಗ್ಯದ ತಪಾಸಣೆಗೆ ವ್ಯವಸ್ಥೆ ಮಾಡಿದರು. ಅವರನ್ನು ಪರೀಕ್ಷಿಸಿದ ತಜ್ಞರು ಅಚ್ಚರಿಯಿಂದ ಹುಬ್ಬೇರಿಸಿದರು, ಅದಕ್ಕಿಂತ ಹೆಚ್ಚಾಗಿ ಆತಂಕಕ್ಕೊಳಗಾದರು. ಹಲವಾರು ತೊಂದರೆಗಳಿಂದ ಕೂಡಿದ ಶ್ರೀಗಳವರ ಶರೀರ ಸ್ಥಿತಿ ಅಪಾಯದ ಅಂಚಿನಲ್ಲಿರುವುದನ್ನು ಕಂಡುಕೊಂಡರು. ದೈಹಿಕ ಆರೋಗ್ಯವನ್ನೂ ಮೆಟ್ಟಿನಿಂತು ಕೇವಲ ಸಂಕಲ್ಪಶಕ್ತಿಯಿಂದಲೇ ಅವರು ನಡೆದಾಡುತ್ತಿದ್ದಂತೆ ತೋರುತ್ತಿತ್ತು. ಅದನ್ನು ವೈದ್ಯರು ಭಕ್ತರ ಬಳಿ ವ್ಯಕ್ತಪಡಿಸಿ ಅವರನ್ನು ಶೀಘ್ರವಾಗಿ ಭಾರತಕ್ಕೆ ಕರೆದೊಯ್ಯುವಂತೆ ಸೂಚಿಸಿದರು. ಇದಾವುದನ್ನೂ ಗಮನಿಸದ ಶ್ರೀಗಳು ತಮ್ಮ ನಿಗದಿತ ದೈನಂದಿನ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದರು. ಮೊದಲೇ ಏರ್ಪಾಡಾಗಿದ್ದಂತೆ ಅನೇಕ ಕಡೆಗಳಲ್ಲಿ ಧಾರ್ಮಿಕ ಪ್ರವಚನಗಳನ್ನು ನೀಡಿದರು.

ವಿದೇಶದಿಂದ ಹಿಂದಿರುಗಿದ ಜಗದ್ಗುರುಗಳವರ ಆರೋಗ್ಯ ದಿನದಿನಕ್ಕೆ ಕ್ಷೀಣಿಸ ತೊಡಗಿತ್ತು. ದಿನಾಂಕ 6.12.86ರ ಮುಂಜಾನೆ ಶ್ರೀಗಳು ಇಹಲೋಕವನ್ನು ತ್ಯಜಿಸಿದರು. ಬಯಲೇ ಮೂರ್ತಿಗೊಂಡು ಆಲಯವಾದಂತೆ, ಬಯಲಿನಿಂದ ಭವ್ಯವಾದ ಶೈಕ್ಷಣಿಕ ಜಗತ್ತನ್ನು ನಿರ್ಮಿಸಿದ ಆಧ್ಯಾತ್ಮಿಕ ಮಹಾಶಿಲ್ಪಿ ಥಟ್ಟನೆ ಮರೆಯಾದರು. ಅದು ತನ್ನನ್ನು ತಾನೇ ತೇಯ್ದುಕೊಂಡು ಸುಗಂಧದ ಕಂಪನ್ನೂ, ತಂಪನ್ನೂ ಹರಡಿದ ಮಹಾಶಕ್ತಿ. ಅದು ತನ್ನನ್ನು ಸುಟ್ಟುಕೊಂಡು ಬೆಳಕನ್ನು ಬೀರಿದ ಜ್ಞಾನಶಕ್ತಿ. ಅದು ತನ್ನನ್ನು ಅಳಿದುಕೊಂಡು ಸುತ್ತಲೂ ಸಿಹಿಯನ್ನು ಹರಡಿದ ಮಂಗಳಶಕ್ತಿ. ಸಮಷ್ಟಿಹಿತಕ್ಕಾಗಿ, ಸಾಮಾಜಿಕ ಒಳಿತಿಗಾಗಿ, ಲೌಕಿಕವನ್ನು ಕಟ್ಟಿಕೊಂಡು ಅದರಲ್ಲೇ ಮುಳುಗಿದಂತೆ ತೋರುತ್ತಿದ್ದರೂ ಅಂತರಂಗದಲ್ಲಿ ಅದರಾಚೆಗೆ ನಿಂತು ಗುಪ್ತಸಾಧಕರಾಗಿ ಬೆಳೆದ ಅವರ ಕಾಯಕಯೋಗದ ರಹಸ್ಯ, ಅಭೂತಪೂರ್ವ ಸಾಧನೆಗಳು ಹತ್ತಿರದಿಂದ ಬಲ್ಲವರಿಗಷ್ಟೇ ಗೊತ್ತು.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಮಠಮಂದಿರಗಳು ಶಾಂತಿ–ನೆಮ್ಮದಿಯ ತಾಣಗಳು**

ಮಠ–ಮಂದಿರಗಳು ಶಾಂತಿ–ನೆಮ್ಮದಿಯ ತಾಣಗಳು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 10ರಂದು ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಬೇಬಿಬೆಟ್ಟದ ಶ್ರೀ ರಾಮಯೋಗೀಶ್ವರ ಮಠದ ಶ್ರೀ ಮರಿದೇವರು ಶಿವಯೋಗಿ ಸ್ವಾಮಿಗಳವರ 15ನೇ ವರ್ಷದ ಹಾಗೂ ಶ್ರೀ ಸದಾಶಿವ ಸ್ವಾಮಿಗಳವರ 5ನೇ ವರ್ಷದ ಪುಣ್ಯಸ್ಮರಣೆ, ಗದ್ದುಗೆ ಲೋಕಾರ್ಪಣೆ ಮತ್ತು ಬಸವ ಜಯಂತಿಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ನಿತ್ಯ ಬದುಕಿನ ಜಂಜಾಟದಿಂದ ಮುಕ್ತರಾಗಬೇಕಾದರೆ ಮಠ–ಮಂದಿರಗಳಿಗೆ ಭೇಟಿ ನೀಡಬೇಕು. ಭಗವಂತನ ಸಾನ್ನಿಧ್ಯದಲ್ಲಿ ಮನಸ್ಸಿಗೆ ಶಾಂತಿ ಲಭಿಸುತ್ತದೆ. ಧರ್ಮ ಸಾತ್ವಿಕತೆ, ಪ್ರೀತಿ, ವಿಶ್ವಾಸ ಹಾಗೂ ಸದಾ ನೆಮ್ಮದಿಯನ್ನು ನೀಡುತ್ತದೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ರಾಜ್ಯದ ಶೈಕ್ಷಣಿಕ ಪ್ರಗತಿಗೆ ಮಠಮಾನ್ಯಗಳ ಪಾತ್ರ ಮಹತ್ವದ್ದಾಗಿದೆ. ಹೊಟ್ಟೆಯ ಹಸಿವು ನೀಗಿಸಿದರೆ ನೆತ್ತಿಯ ಹಸಿವನ್ನು ಹೋಗಲಾಡಿಸಬಹುದೆಂದು ನೂರಾರು ವರ್ಷಗಳ ಹಿಂದೆಯೇ ಮಠಗಳು ತೋರಿಸಿಕೊಟ್ಟಿವೆ ಎಂದು ತಿಳಿಸಿದರು.

ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಮೈಸೂರು ಅರಸರಿಗೂ ಬೇಬಿಬೆಟ್ಟಕ್ಕೂ ಅವಿನಾಭಾವ ಸಂಬಂಧವಿದೆ. ನಮ್ಮ ಪೂರ್ವಿಕರು ದ್ವಾರಕದಿಂದ ಯದುಗಿರಿಗೆ ಆಗಮಿಸಿ ಅಲ್ಲಿಂದ ಮೈಸೂರಿಗೆ ಬಂದು ನೆಲೆಸಿದರು. ವೀರಶೈವ ಪರಂಪರೆ ಮತ್ತು ಅರಮನೆಯ ಪರಂಪರೆಗೆ ನಿಕಟವಾದ ಬಾಂಧವ್ಯವಿದೆ ಎಂದು ಹೇಳಿದರು.

ಕನಕಪುರ, ಬೇಬಿಬೆಟ್ಟ, ಕಲ್ಲುಮಠ, ಕರಡಿಗವಿಮಠದ ಶ್ರೀಗಳು, ಶ್ರೀಮತಿ ಸುನೀತಾ ಪುಟ್ಟಣ್ಣಯ್ಯ, ಶ್ರೀ ನಿರಂಜನ ಬಾಬು, ಡಾ. ಇಂದ್ರೇಶ್, ಶ್ರೀ ಕೆಂಪೂಗೌಡ ಮೊದಲಾದವರುಗಳು ಉಪಸ್ಥಿತರಿದ್ದರು.

**ಅಧ್ಯಾತ್ಮದಿಂದ ಸದಾ ಸಕಾರಾತ್ಮಕ ಪರಿಣಾಮ**

ಅಧ್ಯಾತ್ಮ ಮನುಷ್ಯ ಜೀವನದ ಮೇಲೆ ಸದಾ ಸಕಾರಾತ್ಮಕ ಪರಿಣಾಮವನ್ನೇ ಬೀರುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 6ರಂದು ಮೈಸೂರು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ 2023–24ರ 'ಸಕಾರಾತ್ಮಕ ಬದಲಾವಣೆಯ ವರ್ಷ' ಕಾರ್ಯಯೋಜನೆಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಧ್ಯಾನ, ಯೋಗ, ಜಪ, ತಪಗಳು ಮನುಷ್ಯನ ಜೀವನದಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಅವುಗಳ ನಿತ್ಯ ಪಾಲನೆಯಿಂದ ಉತ್ತಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂದು ಹೇಳಿದರು.

ಅಬು ಪರ್ವತದ ಆಡಳಿತಾಧಿಕಾರಿಗಳ ಸೇವಾವರ್ಗದ ಅಧ್ಯಕ್ಷರಾದ ರಾಜಯೋಗಿನಿ ಬ್ರಹ್ಮಕುಮಾರಿ ಆಶಾಜಿಯವರು ಜೀವನವು ಸಂತೋಷದಿಂದ ಕೂಡಿರಬೇಕಾದರೆ ಸಕಾರಾತ್ಮಕ ಚಿಂತನೆ ಬಹಳ ಮುಖ್ಯ. ಉತ್ತಮ ಆರೋಗ್ಯ ಹೊಂದಿ ಒಳ್ಳೆಯ ಪ್ರಗತಿಯನ್ನ ಸಾಧಿಸಬಹುದು. ಕೇವಲ ವಿಚಾರಗಳು ಓಡಾಡಿದರೆ ಸಾಲದು, ಮನುಷ್ಯ ದೈಹಿಕವಾಗಿಯೂ ಚಲಿಸಬೇಕು ಇದು ಆರೋಗ್ಯಕ್ಕೆ ಸಹಕಾರಿ ಎಂದು ತಿಳಿಸಿದರು.

ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಶ್ರೀ ಪಿ. ರವಿಕುಮಾರ್ ಗಣಿಗ, ಶ್ರೀ ಸಿ.ಎಸ್. ರಮೇಶ್‌ವರು ಉಪಸ್ಥಿತರಿದ್ದರು. ಡಾ. ಶಿಲ್ಪಾ ಹೆಗಡೆ ಪ್ರಾರ್ಥಿಸಿದರು. ಶ್ರೀ ರಾಮಚಂದ್ರರಾವ್ ಸ್ವಾಗತಿಸಿದರು. ಡಾ. ಶಿಲ್ಪ ಅವರೇಬೀಳ್ ಅನಿಸಿಕೆ ವ್ಯಕ್ತಪಡಿಸಿದರು. ಶ್ರೀ ಕೃಷ್ಣಮೂರ್ತಿ ವಂದಿಸಿದರು. ಶ್ರೀ ರಂಗನಾಥ್ ಕಾರ್ಯಕ್ರಮ ನಿರೂಪಿಸಿದರು.

**ವೇದಗಳ ಕಾಲದಲ್ಲಿ ಧರ್ಮ ಮತ್ತು ಕಾನೂನಿಗೆ ಅಂತರವಿರಲಿಲ್ಲ**

ವೇದಗಳ ಕಾಲದಲ್ಲಿ ಧರ್ಮ ಮತ್ತು ಕಾನೂನಿನ ನಡುವೆ ಹೆಚ್ಚು ಅಂತರವಿರಲಿಲ್ಲ, ಧರ್ಮ ಎಂಬ ಶಬ್ದದೊಳಗಡೆಯೇ ನ್ಯಾಯ, ಕಾನೂನು, ಸಂಹಿತೆ ಎಲ್ಲವೂ ಅಡಕವಾಗಿದ್ದವು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 13ರಂದು ಮೈಸೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ವಕೀಲರ 10ನೇ ಸಮ್ಮೇಳನದ ಸಮಾರೋಪದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಪ್ರಜೆಗಳು ಕಾನೂನುಗಳನ್ನು ಪಾಲಿಸಿದಾಗ ಮಾತ್ರ ನೈತಿಕ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಪ್ರಾಚೀನ ಕಾಲದಲ್ಲೇ ನ್ಯಾಯಾಧೀಶರು ಮತ್ತು ವಕೀಲರುಗಳು ಹೇಗಿರಬೇಕೆಂಬುದನ್ನು ಉಲ್ಲೇಖಿಸಲಾಗಿದೆ. ಸತ್ಯ, ಸಾಕ್ಷಿ, ಕಾಲ, ಸಂದರ್ಭಗಳನ್ನು ನ್ಯಾಯಜ್ಞನು ಸದಾ ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲಾ ಅನುಮಾನಗಳಿಂದ ನ್ಯಾಯವನ್ನು ಸಂಶೋಧಿಸಬೇಕೆಂದು ತಿಳಿಸಲಾಗಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಸಂವಿಧಾನದ ಆಶಯಗಳು ಈಡೇರುವಲ್ಲಿ ವಕೀಲರುಗಳ ಪಾತ್ರ ಹಿರಿದಾದುದು. ಪ್ರಜಾಪ್ರಭುತ್ವದ ಆಧಾರ ಸ್ಥಂಭವಾದ ನ್ಯಾಯಾಂಗ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ರಾಷ್ಟ್ರೀಯ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು ಕರ್ತವ್ಯ ನಿರ್ವಹಿಸುವ ಮೂಲಕ ಸ್ವಾತಂತ್ರ್ಯದ ಉದ್ದೇಶ ಸಾಧಿಸಬೇಕು ಎಂದು ತಿಳಿಸಿದರು.

ಹಿಮಾಚಲ ಪ್ರದೇಶದ ನಿವೃತ್ತ ಗೌ. ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ಎಲ್. ನಾರಾಯಣಸ್ವಾಮಿಯವರು 10ನೇ ಸಮಾವೇಶದ ವೆಲ್‌ಫೇರ್ ಸ್ಟ್ಯಾಂಪ್ಸ್ ಬಿಡುಗಡೆಗೊಳಿಸಿದರು. ಉಪಲೋಕಾಯುಕ್ತರಾದ ಗೌ.ನ್ಯಾ. ಶ್ರೀ ಕೆ.ಎನ್. ಫಣೀಂದ್ರ, ಶಾಸಕರು ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಶ್ರೀ ಎ.ಎಸ್. ಪೊನ್ನಣ್ಣ, ಜಿಲ್ಲಾ ಮುಖ್ಯ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಜಿ.ಎಸ್. ಸಂಗ್ರೇಷಿ, ವಿಧಾನಪರಿಷತ್ ಸದಸ್ಯರಾದ ಶ್ರೀ ಎಸ್.ಎಲ್. ಭೋಜೆಗೌಡ, ಬಾರ್ ಕೌನ್ಸಿಲ್‌ನ ಅಧ್ಯಕ್ಷರಾದ ಶ್ರೀ ಎಚ್.ಎಲ್. ವಿಶಾಲ ರಘು, ಜಿಲ್ಲಾಧಿಕಾರಿಗಳಾದ ಶ್ರೀ ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತರಾದ ಶ್ರೀ ರಮೇಶ್ ಬಾನೋತ್ ಮೊದಲಾದವರುಗಳು ಉಪಸ್ಥಿತರಿದ್ದರು.

**ಸುಸಂಸ್ಕೃತ ಸಮಾಜ ನಿರ್ಮಾಣದ ಅಗತ್ಯ**

ಪ್ರಸ್ತುತ ದಿನಮಾನದ ಸಂದರ್ಭಗಳನ್ನು ಗಮನಿಸಿದರೆ ಸುಸಂಸ್ಕೃತ ಸಮಾಜ ನಿರ್ಮಾಣದ ಅಗತ್ಯ ತುಂಬಾ ಇದೆ ಎಂದು ಜಿಲ್ಲಾಧಿಕಾರಿಗಳಾದ ಡಾ. ಕೆ.ವಿ. ರಾಜೇಂದ್ರರವರು ಆಗಸ್ಟ್ 17ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಚಂಚಲ ಮನಸುಗಳೇ ಹೆಚ್ಚಾಗಿರುವ ಇಂದಿನ ಸಮಾಜದಲ್ಲಿ ಸಂಸ್ಕಾರಯುಕ್ತ ಜೀವನ ಸಾಗಿಸುವುದನ್ನು ಹೇಳಿಕೊಡಬೇಕು. ಅದಕ್ಕೆ ಪ್ರಶಸ್ತವಾದ ಕಾಲವೆಂದರೆ ಶ್ರಾವಣ ಮಾಸ. ಗುರುವಿನ ಬೆಂಬಲದೊಂದಿಗೆ ಸುಭದ್ರವಾದ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕು. ಸಂಸ್ಕಾರ ಮರೆತಿರುವ ಯುವಜನತೆಗೆ ಸದ್ವಿಚಾರಗಳ ಹಾದಿಯನ್ನು ತೋರಬೇಕು. ಅಂತಹ ಕೆಲಸವನ್ನು ಸುತ್ತೂರು ಶ್ರೀಮಠ ಮಾಡುತ್ತಿರುವುದು ಶ್ಲಾಘನೀಯ. ಒಳ್ಳೆಯ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಭವ್ಯ ಭಾರತದ ನಿರ್ಮಾಣದತ್ತ ಹೆಜ್ಜೆ ಇಡಬೇಕು ಎಂದು ಹೇಳಿದರು.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಪಿ.ಕೆ.ಎಂ. ಪ್ರಶಾಂತ್‌ರವರು ಶ್ರಾವಣ ಮಾಸದಲ್ಲಿ ಸಾಲು ಸಾಲು ಹಬ್ಬಗಳು

ಬರುತ್ತವೆ. ಈ ಮಾಸದಲ್ಲಿ ಕೈಗೊಳ್ಳುವ ಪೂಜೆ ಪುನಸ್ಕಾರಗಳಿಗೆ ಪ್ರಾಕೃತಿಕ ಹಿನ್ನೆಲೆ ಇದೆ. ಭಗವಂತ ಭಕ್ತರ ಮನಸ್ಸಿನ ಇಚ್ಛೆಗಳನ್ನು ಈಡೇರಿಸುತ್ತಾನೆ ಎಂಬ ನಂಬಿಕೆ ಭಾರತೀಯರಲ್ಲಿದೆ. ಅಧೋಗತಿಗೆ ತಲುಪಿರುವ ಜನರನ್ನ ಸನ್ಮಾರ್ಗದತ್ತ ಕೊಂಡೊಯ್ಯುವ ಕೆಲಸಗಳನ್ನು ಮಠಮಾನ್ಯಗಳು ಪುರಾತನ ಕಾಲದಿಂದಲೂ ಮಾಡುತ್ತ ಬಂದಿವೆ ಎಂದರು.

ಮರಿಯಾಲ ಶ್ರೀ ಮುರುಘರಾಜೇಂದ್ರ ಮಠದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳು ಭಗವಚ್ಚಿಂತನೆಯನ್ನು ಮಾಡಲು ಶ್ರಾವಣ ಮಾಸ ಸುಸಂದರ್ಭ. ಅಂತರಂಗದಲ್ಲಿ ಭಗವಂತನ ದರ್ಶನ ಮಾಡಿಸಿದವರು ಶರಣರು. ಮಾನವ ಜನ್ಮ ಸಾರ್ಥಕವಾಗಬೇಕಾದರೆ ಶರಣರ ಸಂದೇಶ, ವಿಚಾರಗಳನ್ನು ಆರ್ಜಿಸಬೇಕು ಎಂದು ತಿಳಿಸಿದರು.

ಡಾ. ಕೆ. ಅನಂತರಾಮುರವರು ಶ್ರಾವಣಕ್ಕೂ–ಶ್ರವಣಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾಸದಲ್ಲಿ ಸದ್ವಿಚಾರಗಳ ಚಿಂತನೆ ಮಾಡಿದರೆ ಸಾಲದು, ಬದುಕಿಗೆ ಅವುಗಳನ್ನು ಅಳವಡಿಸಿಕೊಳ್ಳಬೇಕು. ಸುಸಂಸ್ಕೃತರಾಗಿ ಬೆಳೆಯಲು ಇಂತಹ ಸತ್ಸಂಗಗಳು, ಪ್ರವಚನಗಳು ನಡೆಯುತ್ತಲೇ ಇರಬೇಕು. ಶರೀರವೆಂಬುದು ಎತ್ತಿನ ಬಂಡಿಯಂತೆ, ಈ ಬಂಡಿಗೆ ಆಸೆ–ಆಮಿಷಗಳೆಂಬ ಸರಕು ತುಂಬಲಾಗಿದೆ. ಸದ್ವಿಚಾರದ ಸಂಗತಿಗಳು ಬಂಡಿಯ ಚಕ್ರದ ಕೀಲುಗಳಿದ್ದಂತೆ. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖವನ್ನು ಪಡಬೇಕಾಗಿದೆ. ಬದುಕು ಉತ್ತಮ ಮೌಲ್ಯಗಳಿಂದ ರೂಪಗೊಳ್ಳಬೇಕು ಎಂದು ಹೇಳಿದರು.

ಶ್ರಾವಣ ಮಾಸದ ಪ್ರಯುಕ್ತ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಪ್ರವಚನ ನಡೆಯಲಿದೆ. ಮೈಸೂರು ಶ್ರೀ ಸುತ್ತೂರು ಮಠದ ಸಿಬ್ಬಂದಿವರ್ಗದವರು ಕಾರ್ಯಕ್ರಮದ ಸೇವಾರ್ಥ ನೆರವೇರಿಸಿದರು. ವಿದ್ವಾನ್ ಕೃ. ರಾಮಚಂದ್ರರವರು ವಾಚನ ಮಾಡಿದರು. ಜೆಎಸ್ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಶ್ರೀ ಎಸ್. ನಂದೀಶ್ ಸ್ವಾಗತಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ವಂದಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಮಾತಿಗಿಂತ ಬದುಕು ಆದರ್ಶವಾಗಬೇಕು**

ಬದುಕು ಇನ್ನೊಬ್ಬರಿಗೆ ಆದರ್ಶವಾಗಬೇಕೆ ಹೊರತು ಮಾತಲ್ಲ ಎಂಬ ಸಂದೇಶವನ್ನು ಜಗತ್ತಿಗೆ ನೀಡಿದವರು ಬಸವಣ್ಣನವರು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 17ರಂದು ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಮತ್ತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ 'ಬಸವ ಜಯಂತಿ ಮತ್ತು ಶೂನ್ಯ ಸಂಪಾದನೆಗಳು' ಕುರಿತ ವಿಚಾರಸಂಕಿರಣ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ

ತಿಳಿಸಿದರು. ಬಸವಣ್ಣನವರು ಬದುಕನ್ನೇ ಪ್ರಯೋಗಶಾಲೆಯಾಗಿ ಮಾಡಿಕೊಂಡಿದ್ದರು. ಜಗತ್ತನ್ನು ಸುಧಾರಿಸುವವರು ಮೊದಲು ಅವರನ್ನು ಸುಧಾರಿಸಿಕೊಳ್ಳಬೇಕು. ತನ್ನ ಬದುಕು ಉತ್ತಮವಾಗಿದ್ದರೆ ಮಾತ್ರ ಇನ್ನೊಬ್ಬರ ಬದುಕಿಗೆ ಮಾರ್ಗದರ್ಶಕನಾಗಿರಲು ಸಾಧ್ಯ. ಎಲ್ಲದರ ಜೊತೆಗೆ ಹೊಂದಾಣಿಕೆ ಮಾಡಿಕೊಂಡು, ಸರಿದೂಗಿಸಿಕೊಂಡು ಒಟ್ಟಿಗೆ ಹೋಗುವ ವ್ಯಕ್ತಿತ್ವ ಬಸವಣ್ಣನವರದ್ದು, ತನಗೆ ಕಂಡದ್ದನ್ನು ಕಂಡಹಾಗೆ ದಿಟ್ಟತನದಿಂದ ಅಭಿವ್ಯಕ್ತಗೊಳಿಸುವ ವ್ಯಕ್ತಿತ್ವ ಅಲ್ಲಮಪ್ರಭುಗಳದು. ಇವರಿಬ್ಬರ ವ್ಯಕ್ತಿತ್ವದ ಸಂಯೋಜನೆಯಿಂದಲೇ ಅನುಭವ ಮಂಟಪ ಸ್ಥಾಪಿತವಾಯಿತು ಎಂದು ಹೇಳಿದರು.

ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿಗಳಾದ ಪ್ರೊ. ಎ. ಮುರಿಗೆಪ್ಪ, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ ಮಾತನಾಡಿದರು. ಪ್ರೊ. ವಿಜಯಕುಮಾರಿ ಎಸ್. ಕರಿಕಲ್ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಚಂದ್ರಶೇಖರಯ್ಯನವರು ಸ್ವಾಗತಿಸಿದರು. ಡಾ. ಎನ್. ಯೋಗೇಶ್ ಕಾರ್ಯಕ್ರಮ ನಿರೂಪಿಸಿದರು.

**ಮಾನವೀಯ ಮೌಲ್ಯಗಳನ್ನು ಒಳಗೊಂಡ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು**

ವೃತ್ತಿ ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಒಳಗೊಂಡ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಮಹಾನಿರೀಕ್ಷಕರಾದ ಶ್ರೀ ಸಂದೀಪ್ ಪಾಟೀಲ್‌ರವರು ಆಗಸ್ಟ್ 16ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಹಾಗೂ ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡುತ್ತ ತಿಳಿಸಿದರು. ಇಂದಿನ ಮನುಷ್ಯನ ಜೀವನ ಒತ್ತಡದಿಂದ ಕೂಡಿದೆ. ಇದರಿಂದ ಹೊರಬರಲು ಇಂತಹ ಕಾರ್ಯಕ್ರಮಗಳು ಅವಶ್ಯಕ. ನಾವು ಜೀವನದಲ್ಲಿ ಮಾಡುವ ಒಳ್ಳೆಯ ಕೆಲಸಗಳಿಂದ ನಮಗೆ ಒಳ್ಳೆಯದಾಗುತ್ತದೆ. ಶ್ರೀಮಠವು ಶ್ರಾವಣ ಮಾಸ ಪ್ರವಚನದಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿರುವುದು ಶ್ಲಾಘನೀಯವಾಗಿದೆ. ಈ ನಿಟ್ಟಿನಲ್ಲಿ ಮಠವು ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಿಗೆ ಸಂಸ್ಕೃತಿ, ಸಂಸ್ಕಾರ ನೀಡಿ ಒಳ್ಳೆಯ ಚಾರಿತ್ರ್ಯವುಳ್ಳವರನ್ನಾಗಿಸುವ ಮೂಲಕ ಸಮಾಜಕ್ಕೆ ಅತ್ಯುತ್ತಮ ಕೊಡುಗೆ ನೀಡುತ್ತಿದೆ ಎಂದು ಹೇಳಿದರು.

ಮಳವಳ್ಳಿ ತಾಲ್ಲೂಕಿನ ಕುಂದೂರುಬೆಟ್ಟದ ಶ್ರೀ ರಸಸಿದ್ಧೇಶ್ವರ ಮಠದ ಶ್ರೀ ನಂಜುಂಡ ಸ್ವಾಮಿಗಳವರು ಹನ್ನೆರಡನೆ ಶತಮಾನದಲ್ಲಿ ಬಸವಣ್ಣ, ಅಲ್ಲಮಪ್ರಭುಗಳು ಮೊದಲಾದ ಶರಣರು ಅನುಭವಮಂಟಪದಲ್ಲಿ ನಡೆಸುತ್ತಿದ್ದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಪ್ರಸ್ತುತ ದಿನಗಳಲ್ಲಿ ಶ್ರೀಮಠವು ಇಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿರುವುದು ನಮ್ಮ ಭಾಗ್ಯವೇ ಸರಿ ಎಂದರು.

ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಸೀಮಾ ಲಾಟ್ಕರ್‌ರವರು ಸುತ್ತೂರು ಮಠವು ಆಧ್ಯಾತ್ಮಿಕ ಕೇಂದ್ರವಾಗಿದ್ದು, ಪುಣ್ಯಕ್ಷೇತ್ರಕ್ಕೆ ಆಗಮಿಸುವವರಿಗೆ ಶಾಂತಿ ಮತ್ತು ನೆಮ್ಮದಿ ಸಿಗುತ್ತದೆ. ಶ್ರಾವಣ ಮಾಸವು ಅತ್ಯಂತ ಶ್ರೇಷ್ಠ ಮತ್ತು ಪವಿತ್ರ ಮಾಸವಾಗಿದೆ. ಈ ದಿನಗಳಲ್ಲಿ ಪ್ರವಚನಗಳನ್ನು ಆಲಿಸುವುದರಿಂದ ನಮಗೆ ಜ್ಞಾನಾಭಿವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿ ಕಾವ್ಯವನ್ನು ಆಧರಿಸಿದ ಪ್ರವಚನವನ್ನು ಜೆಎಸ್‌ಎಸ್ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಹೆಚ್.ಬಿ. ದೇವಣ್ಣನವರು ನಡೆಸಿಕೊಟ್ಟರು. ನಿವೃತ್ತ ಶಿಕ್ಷಕರಾದ ಶ್ರೀ ಡಿ.ಎಸ್. ಸಿದ್ಧಲಿಂಗಸ್ವಾಮಿಯವರು ಕಾವ್ಯವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರು, ಸಿಬ್ಬಂದಿವರ್ಗ, ಗುರುಕುಲದ ಸಾಧಕರು ಹಾಗೂ ಸುತ್ತಮುತ್ತಲ ಗ್ರಾಮಗಳ ಶ್ರೋತೃಗಳು ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀ ಎಸ್. ಚಂದ್ರಮೌಳೇಶ್ವರ ಸ್ವಾಗತಿಸಿದರು. ಶ್ರೀ ಅಂದಯ್ಯ ಶಿರೂರಮಠ ವಂದಿಸಿ, ನಿರೂಪಿಸಿದರು.

## ರಾಜೇಂದ್ರ ಶ್ರೀವಾಣಿ

- ಶಿಕ್ಷಣವೇ ಸಮಸ್ತ ಪ್ರಗತಿಯ ಬೀಜ, ಅದೇ ತಾಯಿಬೇರು.
- ವಿದ್ಯಾರ್ಥಿಗಳು ದೇಶದ ಮುಂದಿನ ಭವಿಷ್ಯದ ನಿರ್ಮಾತೃಗಳು.
- ಗ್ರಾಮಾಂತರ ಪ್ರದೇಶದಲ್ಲಿರುವ ಪ್ರತಿಯೊಬ್ಬರೂ ವಿದ್ಯಾವಂತರಾಗುವುದು ದೇಶದ ಉನ್ನತಿಯ ತಳಹದಿ.
- ಆದರ್ಶ ವಿದ್ಯಾರ್ಥಿಯು ತನ್ನ ವಿದ್ಯಾಸಂಸ್ಥೆಗೆ, ತನ್ನ ತಂದೆ–ತಾಯಿಗಳಿಗೆ, ತನ್ನ ದೇಶಕ್ಕೆ ಒಂದು ದೊಡ್ಡ ಆಸ್ತಿ.
- ಯಾವುದೇ ಕಾಯಕವಾಗಲಿ, ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡಿದರೆ ಫಲ ಖಂಡಿತ ಲಭಿಸುತ್ತದೆ.
- ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನಿಸಿದ ಕೂಡಲೇ ಮಾಡಬೇಕು, ನಾಳೆ ನೋಡೋಣ ಎಂದು ಮುಂದೆ ಹಾಕಬಾರದು.

# ಪ್ರಸಾದ



## ಕೃತಿ-ಸ್ವೀಕೃತಿ

**ಸತ್ಸಂಗದ ಸವಿಜೇನು**
ಡಾ. ಆರ್.ಬಿ. ಚಿಲುಮಿ
ಪ್ರ.: ಎಸ್‌ಎಲ್‌ಎನ್ ಪಬ್ಲಿಕೇಷನ್
ಬನಶಂಕರಿ 2ನೇ ಹಂತ, ಬೆಂಗಳೂರು
ಪು: 284, ಬೆಲೆ: 300/–

**ಧೀಮಂತ ಶ್ರೀ ಬಿ.ಡಿ. ಪಾಟೀಲ**
ಡಾ. ಮಲ್ಲಿಕಾರ್ಜುನ ಪಾಟೀಲ
ಪ್ರ. ಲೀಲಾ ಪಾಟೀಲ ಪ್ರಕಾಶನ
ಭಾರತಿನಗರ, ಧಾರವಾಡ
ಪು: 84, ಬೆಲೆ: 150/–

**ಮನಿ ಸೀಕ್ರೆಟ್ಸ್**
**ಸಮಗ್ರ ಹಣಕಾಸು ಹೂಡಿಕೆ ಮಾರ್ಗದರ್ಶಿ**
ಶ್ರೀ ಶರತ್ ಎಂ.ಎಸ್.
ಪ್ರ. ಬಹುರೂಪಿ, ಕುಮಾರ ಪಾರ್ಕ್
ಬೆಂಗಳೂರು
ಪು: 224. ಬೆಲೆ: 300/–

**ಬದುಕು ಬವಣೆ (ಕವನ ಸಂಕಲನ)**
ಡಾ. ರುದ್ರಣ್ಣ ಚಿಲುಮಿ
ಪ್ರ. ನಿವೇದಿತ ಪ್ರಕಾಶನ
ಬನಶಂಕರಿ 2ನೇ ಹಂತ, ಬೆಂಳೂರು
ಪು: 284. ಬೆಲೆ: 300/–

**ನನ್ನ ಬದುಕಿನ ಮುನ್ನುಡಿ (ಕವನಗಳು)**
ಶ್ರೀಮತಿ ಭಾರತಿ ಮದಭಾವಿ
ಪ್ರ. ಭಾರತಿ ಮದಭಾವಿ
ವಿದ್ಯಾನಗರ, ಗೋಕಾಕ
ಪು: 64, ಬೆಲೆ: 120/–

**ಬಸವಶಿವಸುಮ (ಪೂಜ್ಯ ಶ್ರೀ ಶಿವಾನಂದ ಗುರೂಜಿ ಅಭಿನಂದನಾ ಗ್ರಂಥ)**
ಪ್ರ.ಸಂ.: ಡಾ. ಪ್ರಹ್ಲಾದ ಆಗಸನಕಟ್ಟೆ
ಗೌ.ಸಂ.: ಶರಣ ಪ್ರೊ. ಸಿದ್ದಣ್ಣ
ಲಂಗೋಟಿ ಮತ್ತು
ಶರಣ ಪ್ರೊ. ಲಿಂಗಣ್ಣ ಸತ್ಯಂಪೇಟೆ
ಪ್ರ. ಪೂಜ್ಯ ಶ್ರೀ ಶಿವಾನಂದ ಗುರೂಜಿ
ಅಭಿನಂದನಾ ಸಮಿತಿ, ದಾವಣಗೆರೆ
ಪು: 400, ಬೆಲೆ: 200/–


**ವಚನ ಸಂಪದ ಪಾರಾಯಣ**
ಸಂ. ಶ್ರೀ ಹಂಸಯೋಗಿ
(ಶಿವಾನಂದ ಗುರೂಜಿ)
ಪ್ರ. ಅರುಣೋದಯ ಸುಗ್ರಂಥ ಮಾಲೆ
ಶ್ರೀ ಬಸವೇಶ್ವರ ತಪೋವನ ಟ್ರಸ್ಟ್ (ರಿ.)
ಶ್ರೀ ಬಸವೇಶ್ವರ ನಗರ
ದಾವಣಗೆರೆ
ಪು: 144, ಬೆಲೆ: 200/–

**ಲಾಕ್‌ಡೌನ್ – ಹನಿಗವನಗಳು**
ಶ್ರೀ ಸಂಜಯ ಜಿ. ಕುರಣೆ
ಪ್ರ. ಕುರಣೆ ಪ್ರಕಾಶನ
ಕೃಷ್ಣ ಕಿತ್ತೂರ
ಕಾಗವಾಡ ತಾಲ್ಲೂಕು
ಬೆಳಗಾವಿ ಜಿಲ್ಲೆ
ಪು: 72, ಬೆಲೆ: 70/–

**ಹಿಂಬದಿ ಪುಟದ ಚಿತ್ರ**

ಅಂದಿನ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್‌ರವರು
ಶ್ರೀಮಠಕ್ಕೆ ಭೇಟಿ ನೀಡಿದ್ದ ಸಂದರ್ಭ

## ಮಕ್ಕಳೊಡನೆ ಪರಮಪೂಜ್ಯರು





Registered with the Registrar of Newspapers in India Under No. 50622 / 1986
'Prasada' Monthly, Vol. 38 Issue No. 8, August 2023



ISSN 2583-7648

ಬಿಡಿ ಪ್ರತಿ : ರೂ.10/-

e-mail: prasadamagazine@gmail.com * www.jssonline.org